ಮಂಗಳವಾರ, ಜುಲೈ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 192 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಆರೋಗ್ಯದ ಪ್ರಮುಖ ಮೂರು ಆಧಾರ ಸ್ತಂಭಗಳಾದ ನಿದ್ರೆ, ವ್ಯಾಯಾಮ ಮತ್ತು ಆಹಾರ ಪದ್ಧತಿಯನ್ನು ಹಳಿ ತಪ್ಪಿಸುವಲ್ಲಿ ಸ್ಕ್ರೀನ್ ವ್ಯಸನ ಮುಖ್ಯ ಕಾರಣ.



ಮುಂಗಾರು ವೈಭವ
ಜಲಧಾರೆಗಳ ವಯ್ಯಾರ...
ಶ್ರೀಲಂಕಾ: ಇದೇ 20ರಂದು ಹೊಸ ಅಧ್ಯಕ್ಷರ ಆಯ್ಕೆ 10
'ಕಳಂಕಿತ ಅಧಿಕಾರಿಗಳ ನೇಮಕ ಸಲ್ಲ' 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,395	16,216	₹ 52,550 (ಬೆಂಗಳೂರು)	₹58,300 (ಬೆಂಗಳೂರು)	79.45

ಗುಡ್ಡ ಕುಸಿತ, ಸಂಚಾರ ಬಂದ್ • ಹೊಳೆಗೆ ಕಾರು ಉರುಳಿ ಇಬ್ಬರು ನಾಪತ್ತೆ

ತಗ್ಗದ ಮಳೆ, ತಪ್ಪದ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮಲೆನಾಡು, ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಸೋಮವಾರವೂ ಮಳೆ ಮುಂದುವರಿದಿದ್ದರೆ, ಕರಾವಳಿ ಜಿಲ್ಲೆಗಳಲ್ಲಿ ತುಸು ಕಡಿಮೆಯಾಗಿದೆ. ಆದರೆ, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗುಡ್ಡ ಕುಸಿದಿದ್ದು, ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿದ ಮಾರುತಿ ಕಾರು ಚಿಕ್ಕಮಗಳೂರು ಜಿಲ್ಲೆಯ ಗೌರಿ ಹೊಳೆಗೆ ಉರುಳಿ ಚಾಲಕ ಸೇರಿ ಇಬ್ಬರು ನಾಪತ್ತೆ ಆಗಿದ್ದಾರೆ. ಮಳೆಯಿಂದಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ 24 ಮನೆಗಳು ಭಾಗಶಃ ಕುಸಿದಿದ್ದರೆ, ಗಡಿ ಜಿಲ್ಲೆ ಬೀದರ್‌ನಲ್ಲಿ 12 ಮನೆಗಳು ಕುಸಿದಿವೆ.

ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಕಲ್ಮಕ್ಕಿ ಬಳಿ ನೀರೋಡಿ ಹೊಳೆಗೆ ಅಡ್ಡಲಾಗಿ ಕಟ್ಟಲಾಗಿರುವ ಸೇತುವೆಯ ಮೇಲ್ಭಾಗ ಸಂಪೂರ್ಣ ಕೊಚ್ಚಿ ಹೋಗಿದೆ. ಸೇತುವೆಯು ಕುಸಿಯುವ ಭೀತಿ ಎದುರಾಗಿದ್ದು, ರಸ್ತೆ ಸಂಪರ್ಕ ಕಡಿದುಹೋಗಿದೆ. ಬಂಟ್ವಾಳ ತಾಲ್ಲೂಕಿನ ಸೂರಿಕುಮೇರು ಬಳಿಯೂ ಗುಡ್ಡ ಕುಸಿದಿದ್ದು, ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರೆನೂರು ಮತ್ತು ಸದಾಶಿವಗಡ ಬಳಿ ಗುಡ್ಡ ಕುಸಿದಿದೆ. ಇದರಿಂದಾಗಿ ಸದಾಶಿವಗಡ-ಬೆಳಗಾವಿ ಸಂಪರ್ಕ ಕಡಿತವಾಗಿದೆ. ಇತ್ತ, ಹಾಸನ ಜಿಲ್ಲೆಯಲ್ಲಿ ದ್ವಾರಸಮುದ್ರ ಕೆರೆಯು ಕೋಡಿ ಬಿದ್ದಿದ್ದು, ಕೊಣನೂರು–ರಾಮನಾಥಪುರ ನಡುವಿನ ಸಂಪರ್ಕ ಬಂದ್ ಆಗಿತ್ತು. ಸಕಲೇಶಪುರ ತಾಲ್ಲೂಕು ದೋಣಿಗಲ್ ಬಳಿ ಸೋಮವಾರವೂ ಹೆದ್ದಾರಿ ಬದಿ ಭೂಕುಸಿತವಾಗಿದ್ದು, ಸಂಚಾರ ಸ್ಥಗಿತವಾಗಿದೆ.

ಕೆಆರ್‌ಎಸ್ ಜಲಾಶಯದಿಂದ ನದಿಗೆ ನೀರು ಬಿಡುಗಡೆ ಮಾಡಲಾಗುತ್ತಿದ್ದು, ಅಣೆಕಟ್ಟೆಯ ಗೇಟ್‌ಗಳಿಗೆ ಅಳವಡಿಸಲಾಗಿರುವ ಆಕರ್ಷಕ ದೀಪಾಲಂಕಾರ ಕಣ್ಮನ ಸೆಳೆಯುತ್ತಿದೆ ಪ್ರಜಾವಾಣಿ ಚಿತ್ರ: ಅನೂಪ್ ರಾಘ್ ಟಿ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ಇಂದು–ನಾಳೆ ಸಿ.ಎಂ ಪ್ರವಾಸ

ಬೆಂಗಳೂರು: ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ಹಾನಿಗೊಳಗಾದ ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ–ಕನ್ನಡ ಜಿಲ್ಲೆಗಳಿಗೆ ಮಂಗಳವಾರ ಮತ್ತು ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿ ನೀಡಿ, ಪರಿಶೀಲನೆ ನಡೆಸಲಿದ್ದಾರೆ.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ಮಲೆನಾಡು, ಕೊಡಗು, ಕರಾವಳಿ ಭಾಗದಲ್ಲಿ ಕಳೆದ 10 ದಿನಗಳಿಂದ ವ್ಯಾಪಕವಾಗಿ ಮಳೆಯಾಗುತ್ತಿದೆ. ಈಗಾಗಲೇ ಸಂಬಂಧಿಸಿದ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಸಂವಾದ ಮತ್ತು ದೂರವಾಣಿ ಮೂಲಕ ಮಾತನಾಡಿದ್ದು, ಮಳೆಯಿಂದ ಹಾನಿಗೆ ಒಳಗಾಗಿರುವ ಪ್ರದೇಶಗಳಿಗೆ ಭೇಟಿ ನೀಡುತ್ತೇನೆ' ಎಂದರು.

4ನೇ ಪುಟ ನೋಡಿ

ನ್ಯಾಯಾಂಗ ನಿಂದನೆ: ಮಲ್ಯಗೆ 4 ತಿಂಗಳು ಸಜೆ

ನವದೆಹಲಿ (ಪಿಟಿಐ): ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೋಮವಾರ ಉದ್ಯಮಿ ವಿಜಯ್ ಮಲ್ಯಗೆ ನಾಲ್ಕು ತಿಂಗಳು ಸಜೆ ಹಾಗೂ ₹ 2 ಸಾವಿರ ದಂಡವನ್ನು ವಿಧಿಸಿ ಆದೇಶಿಸಿತು. 10

ಒಳ ಪುಟ
ಜೆಇಇ ಮೇನ್ಸ್ ಪರೀಕ್ಷೆ: 14 ಅಭ್ಯರ್ಥಿಗಳಿಗೆ ಪೂರ್ಣ ಅಂಕ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಎಐಎಡಿಎಂಕೆಯಲ್ಲಿ ಮತ್ತೆ ಬಿರುಕು: ಕಚೇರಿಯಲ್ಲಿ ದಾಂದಲೆ, ಬೀಗ

ಪಳನಿಗೆ ಮಣೆ, ಪನ್ನೀರ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ವಿರೋಧ ಪಕ್ಷ ಎಐಎಡಿಎಂಕೆಯಲ್ಲಿ ಮತ್ತೊಂದು ಸುತ್ತಿನ ಕ್ಷೋಭೆ ಆರಂಭಗೊಂಡಿದೆ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರನ್ನು ಮಧ್ಯಂತರ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದ ಅತ್ಯಂತ ಪ್ರಭಾವಿ ಸಮಿತಿಯಾದ 'ಜನರಲ್ ಕೌನ್ಸಿಲ್' (ಜಿ.ಸಿ) ಸೋಮವಾರ ನೇಮಿಸಿದೆ. ಅವರ ಪ್ರಮುಖ ಪ್ರತಿಸ್ಪರ್ಧಿ ಒ.ಪನ್ನೀರಸೆಲ್ವಂ ಅವರನ್ನು ಪಕ್ಷದ ಖಜಾಂಚಿ ಹುದ್ದೆ ಮತ್ತು ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ.

ಪಳನಿಸ್ವಾಮಿ

ಪನ್ನೀರಸೆಲ್ವಂ

ಜನರಲ್ ಕೌನ್ಸಿಲ್ ಸಭೆಗೆ ಮುನ್ನ ಮತ್ತು ನಂತರ ಹಲವು ವಿದ್ಯಮಾನಗಳು ನಡೆದಿವೆ. ಸಭೆ ನಡೆಸಬಾರದು ಎಂದು ಕೋರಿ ಪನ್ನೀರಸೆಲ್ವಂ ಅವರು ಸಲ್ಲಿಸಿದ್ದ ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ವಜಾ ಮಾಡಿದ ಕೆಲವೇ ನಿಮಿಷಗಳಲ್ಲಿ ಸಭೆ ನಡೆಯಿತು. ಪನ್ನೀರಸೆಲ್ವಂ ಅವರ ಉಚ್ಚಾಟನೆಯಿಂದ ಆಕ್ರೋಶಗೊಂಡ ಅವರ ಬೆಂಬಲಿಗರು, ಎಐಎಡಿಎಂಕೆ ಕೇಂದ್ರ ಕಚೇರಿಗೆ ಬಲವಂತವಾಗಿ ನುಗ್ಗಲು ಯತ್ನಿಸಿದರು. ಇದರಿಂದಾಗಿ ಪಳನಿಸ್ವಾಮಿ ಮತ್ತು ಪನ್ನೀರಸೆಲ್ವಂ ಬೆಂಬಲಿಗರ ನಡುವೆ ಘರ್ಷಣೆ ನಡೆಯಿತು.

10ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 10

ಆರು ವರ್ಷಗಳಲ್ಲಿ 32 ಪ್ರಕರಣಗಳು ವರದಿ: ಆ್ಯಕ್ಷನ್ ಏಡ್ ಸಂಸ್ಥೆಯಿಂದ ಅಧ್ಯಯನ

ಮೀನುಗಳ ಸಾವು: ಕೊಳಚೆ ನೀರಿನದ್ದೇ ಸಿಂಹಪಾಲು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೆರೆಗಳನ್ನು ಸೇರುತ್ತಿರುವ ಕೊಳಚೆ ನೀರು ಮೀನಿನ ಸಂತತಿಗೆ ವಿಷವಾಗಿ ಕಾಡುತ್ತಿದೆ. ಕೆರೆಗಳಲ್ಲಿ ಮೀನುಗಳ ಸಾವಿಗೆ ಕೊಳಚೆ ನೀರಿನ ಪಾಲು ಶೇ 51ರಷ್ಟಿದೆ!

ಆ್ಯಕ್ಷನ್ ಏಡ್ ಸಂಸ್ಥೆ ನಡೆಸಿರುವ ಅಧ್ಯಯನದಿಂದ ಈ ಅಂಶ ಬಹಿರಂಗವಾಗಿದೆ. ನಗರದಲ್ಲಿ 2017ರಿಂದ ಈವರೆಗೆ 32 ಬಾರಿ ಕೆರೆಗಳಲ್ಲಿ ಮೀನುಗಳ ಮಾರಣಹೋಮ ನಡೆದಿದೆ. ಈ ಮಾರಣ ಹೋಮಕ್ಕೆ ಕಾರಣಗಳನ್ನು ಪತ್ತೆಹಚ್ಚಲು ಆ್ಯಕ್ಷನ್‌ಏಡ್ ಸಂಸ್ಥೆ ಪ್ರಯತ್ನಿಸಿದೆ.

ಮೀನುಗಳ ಮಾರಣಹೋಮದ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಆಧರಿಸಿ ಅಧ್ಯಯನವನ್ನು ಈ ಸಂಸ್ಥೆ ನಡೆಸಿದೆ. ಆರು ವರ್ಷಗಳಲ್ಲಿ ವರದಿಯಾಗಿರುವ ಮೀನುಗಳ ಸಾಮೂಹಿಕ ಸಾವಿನಲ್ಲಿ ಶೇ 51ರಷ್ಟು ಪ್ರಕರಣಗಳು ಕೊಳಚೆ ನೀರು ಕೆರೆ ಸೇರುತ್ತಿರುವುದರಿಂದಲೇ ಆಗಿದೆ.

ವಿಷಕಾರಿ ಮತ್ತು ರಾಸಾಯನಿಕ ಮಿಶ್ರಿತ ನೀರು ಕೆರೆ ಸೇರಿದ್ದರಿಂದ ಶೇ 23ರಷ್ಟು, ಕೈಗಾರಿಕೆಗಳ ತ್ಯಾಜ್ಯ ಕೆರೆ ಸೇರುವುದರಿಂದ ಶೇ 12ರಷ್ಟು, ಕೃಷಿಗೆ ಬಳಸಿದ ಔಷಧ ಮತ್ತು ರಸಗೊಬ್ಬರದ ಕೆರೆ ಸೇರಿದ್ದರಿಂದಲೂ ಶೇ 2ರಷ್ಟು ಪ್ರಕರಣಗಳು ಸಂಭವಿಸಿವೆ ಎಂದು ಸಂಸ್ಥೆ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ.

ಮಾರಣಹೋಮದ ವಿವರ (ವರ್ಷ, ಪ್ರಕರಣಗಳ ಸಂಖ್ಯೆ)



ನಾಲ್ಕು ಕೆರೆಗಳಲ್ಲೇ ಹೆಚ್ಚು ಪ್ರಕರಣ

ಮೀನುಗಳ ಮಾರಣಹೋಮ ಪ್ರಕರಣಗಳು ನಾಲ್ಕು ಕೆರೆಗಳಲ್ಲೇ ಹೆಚ್ಚಾಗಿ ಸಂಭವಿಸಿವೆ. ಹಲಸೂರು ಕೆರೆ, ಮಡಿವಾಳ ಕೆರೆ, ಬೆಳ್ಳಂದೂರು ಕೆರೆ ಮತ್ತು ಕೊಮ್ಮಘಟ್ಟ ಕೆರೆಯಲ್ಲಿ ಒಂದು ಬಾರಿಗಿಂತ ಹೆಚ್ಚು ಸಲ ಮೀನುಗಳ ಸಾಮೂಹಿಕ ಸಾವಿನ ಪ್ರಕರಣಗಳು ಸಂಭವಿಸಿವೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಹಲಸೂರು ಕೆರೆಯಲ್ಲಿ ಮೂರು ಬಾರಿ ಕೊಮ್ಮಘಟ್ಟ, ಮಡಿವಾಳ ಮತ್ತು ಬೆಳ್ಳಂದೂರು ಕೆರೆಯಲ್ಲಿ ತಲಾ ಎರಡು ಬಾರಿ ಮೀನುಗಳ ಸಾವಿನ ಪ್ರಕರಣಗಳು ವರದಿಯಾಗಿವೆ.

ಕೊಳಚೆ ನೀರು ಕೆರೆ ಸೇರುವ ಕಾರಣದಿಂದಲೇ ಹೆಚ್ಚಿನ ಅನಾಹುತಗಳು ಸಂಭವಿಸಿರುವುದನ್ನು ಈ ಅಧ್ಯಯನ ತಂಡ ಗುರುತಿಸಿದೆ.

ಕೆಎಸ್‌ಪಿಸಿಬಿ ಗಮನಕ್ಕೇ ಬಂದಿಲ್ಲ!

ಕೆರೆಗಳಲ್ಲಿ ಮೀನುಗಳ ಸಾಮೂಹಿಕ ಸಾವಿನ ಪ್ರಕರಣಗಳು ಕರ್ನಾಟಕ ಮಾಲಿನ್ಯ ನಿಯಂತ್ರಣಾ ಮಂಡಳಿಯ(ಕೆಎಸ್‌ಪಿಸಿಬಿ) ಗಮನಕ್ಕೆ ಬಂದಿಲ್ಲ!

‘ಈ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ ಮಾಹಿತಿ ಕೋರಿದಾಗ ಬೊಮ್ಮನಹಳ್ಳಿ ಪ್ರಾದೇಶಿಕ ಕಚೇರಿಯಿಂದ ಮಾತ್ರ ಉತ್ತರ ಬಂದಿದೆ. 2017ರಿಂದ 2022ರ ತನಕ ಮೀನುಗಳ ಸಾವಿನ ಬಗ್ಗೆ ಯಾವುದೇ ಪ್ರಕರಣ ವರದಿಯಾಗಿಲ್ಲ ಎಂದು ತಿಳಿಸಿದೆ. ಆದರೆ, ವಾಸ್ತವದಲ್ಲಿ ಏಳು ಪ್ರಕರಣಗಳು ವರದಿಯಾಗಿವೆ. 2017ರಲ್ಲಿ ದೊಡ್ಡಕಲ್ಲಸಂದ್ರ ಮತ್ತು ಸುಬ್ರಹ್ಮಣ್ಯಪುರ ಕೆರೆಗಳಲ್ಲಿ ಮೀನುಗಳು ಸತ್ತಿವೆ. 2018ರಲ್ಲಿ ಪುಟ್ಟೇನಹಳ್ಳಿ ಮತ್ತು ಮಡಿವಾಳ ಕೆರೆಗಳಲ್ಲಿ, 2019ರಲ್ಲಿ ಮಡಿವಾಳ ಮತ್ತು ಹರಳೂರು ಕೆರೆ, 2022ರಲ್ಲಿ ಕೊತ್ತನೂರು ಮತ್ತು ಯಲಚೇನಹಳ್ಳಿ ಕೆರೆಗಳಲ್ಲಿ ಮೀನುಗಳು ಸತ್ತಿವೆ’ ಎಂದು ವರದಿ ಹೇಳಿದೆ.

ಶಿಫಾರಸುಗಳು

- ನಗರ ಪ್ರದೇಶದ ಎಲ್ಲಾ ಕರೆಗಳ ಮೇಲ್ವಿಚಾರಣೆಯನ್ನು ಕೆಎಸ್‌ಪಿಸಿಬಿ ಮಾಡಬೇಕು.
- ಕೆರೆಗಳಲ್ಲಿ ಮೀನುಗಳ ಸತ್ತರೆ ಆ ಪ್ರಕಣಗಳ ಬಗ್ಗೆ ಕೆಎಸ್‌ಪಿಸಿಬಿ ತನಿಖೆ ನಡೆಸಬೇಕು, ಸಾವಿಗೆ ಕಾರಣ ಆದವರ ವಿರುದ್ಧ ಕ್ರಮ ಜರುಗಿಸಬೇಕು.
- ಮೇ ತಿಂಗಳಿನಲ್ಲೇ ಹೆಚ್ಚು ಪ್ರಕರಣಗಳು ವರದಿಯಾಗುತ್ತಿದ್ದು, ನೀರಿನ ಗುಣಮಟ್ಟ ಪರೀಕ್ಷೆಗೆ ಕೆಎಸ್‌ಪಿಸಿಬಿ ಮುಂದಾಗಬೇಕು.
- ಕೆರೆಗಳಿಗೆ ಕೊಳಚೆ ನೀರು ಸೇರುವುದನ್ನು ಬಿಬಿಎಂಪಿ ಸಂಪೂರ್ಣವಾಗಿ ತಡೆಗಟ್ಟಬೇಕು.
- ರಾಜಕಾಲುವೆಯಿಂದ ಕೆರೆಗಳಿಗೆ ಹರಿಯುವ ನೀರಿನಲ್ಲಿ ತ್ಯಾಜ್ಯ ಸೇರದಂತೆ ಜಾಲರಿಗಳನ್ನು ಅಳವಡಿಸಬೇಕು.

ಸುದ್ದಿ 2 ನಿಮಿಷ

‘ಒಂಟಿಕೊಪ್ಪಲ್ ಪಂಚಾಂಗದಲ್ಲಿ ಸಿದ್ದರಾಮೋತ್ಸವ ಸೇರಿಸಲಿ’

ಚಾಮರಾಜನಗರ: ‘ಬಿಳಿಗಿರಿರಂಗನ ರಥೋತ್ಸವ, ಶ್ರೀರಾಮ ನವಮಿ ರಥೋತ್ಸವ, ಮೇಲುಕೋಟೆ ರಥೋತ್ಸವ ಎಂದೆಲ್ಲ ಕೇಳಿದ್ದೆವು. ಇನ್ನು ಮೇಲೆ ಒಂಟಿಕೊಪ್ಪಲ್ ಪಂಚಾಂಗದಲ್ಲಿ ಸಿದ್ದರಾಮೋತ್ಸವ ಎಂಬುದನ್ನು ಸೇರಿಸಬೇಕು’ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಸೋಮವಾರ ವ್ಯಂಗ್ಯವಾಡಿದರು.

ನಗರದಲ್ಲಿ ಸುದ್ದಿಗಾರ-ರೊಂದಿಗೆ ಮಾತನಾಡಿದ ಅವರು ‘ಸಿದ್ದರಾಮಯ್ಯ ಅವರಿಗೆ ಎಷ್ಟು ಶಕ್ತಿ ಇದೆ ಎಂಬುದನ್ನು ಪ್ರದರ್ಶನ ಮಾಡಲು ಅವರ ಜಾತಿಯವರು ದಾವಣಗೆರೆಯಲ್ಲಿ ಐದು ಲಕ್ಷ ಜನರನ್ನು ಸೇರಿಸಿ ದೊಡ್ಡ ಕಾರ್ಯಕ್ರಮ ಮಾಡಲು ಬಯಸಿದ್ದರು. ಆದರೆ, ಅದಕ್ಕೆ ಪಕ್ಷದಲ್ಲಿ ವಿರೋಧ ಬಂತು. ನಂತರ ಪಕ್ಷದಿಂದಲೇ ಕಾರ್ಯಕ್ರಮ ಮಾಡಬೇಕೆಂದು ದೊಡ್ಡ ಸಮಿತಿ ರಚಿಸಿದ್ದಾರೆ. ಮಾಡಲಿ. ಏನೇನು ಆಟ ಆಡಬೇಕೋ ಆಡಲಿ. ಎಲ್ಲವನ್ನೂ ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ’ ಎಂದರು.

‘ಮೋದಿ ಜನಾದೇಶದ ಮೇಲೆ ಅಧಿಕಾರಕ್ಕೆ ಬಂದಿದ್ದಾರೆಯೇ ಹೊರತು, ಸಿದ್ದರಾಮಯ್ಯ ಅವರನ್ನು ಕೇಳಿಕೊಂಡು ಬಂದಿಲ್ಲ. ಪ್ರಚಾರಕ್ಕಾಗಿ ಮೈ ಪರಚಿಕೊಂಡು ಕಿರುಚಾಡುತ್ತಿರುವ ಅವರು ತಮ್ಮ ಸ್ಥಿತಿಯನ್ನು ಅರ್ಥಮಾಡಿಕೊಂಡು ಮಾತನಾಡಬೇಕು. 36 ಸಾವಿರ ಮತಗಳಿಂದ ಸೋತಾಯಿತು. 17 ಸಚಿವರು ಸೋತಿದ್ದಾಯಿತು. 28 ಲೋಕಸಭಾ ಕ್ಷೇತ್ರಗಳಲ್ಲಿ ಒಂದನ್ನು ಮಾತ್ರ ಗೆದ್ದಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ ಏನೇನೋ ಹೇಳಬಾರದು’ ಎಂದರು.

ನಾಲ್ಕು ಜೀವಗಳಿಗೆ ಆಸರೆಯಾದ ಬಾಲಕಿ ಅಂಗಾಂಗ

ಧಾರವಾಡ: ಮಿದುಳು ನಿಷ್ಕ್ರಿಯಗೊಂಡ ಬಾಲಕಿಯ ಅಂಗಾಂಗಳು ನಾಲ್ಕು ಜನರಿಗೆ ಜೀವದಾನ ಮಾಡಿವೆ. ಇದಕ್ಕಾಗಿ ಝೀರೊ ಟ್ರಾಫಿಕ್ ಮೂಲಕ ಇಲ್ಲಿನ ಎಸ್‌ಡಿಎಂ ಆಸ್ಪತ್ರೆಯಿಂದ ಸೋಮವಾರ ಸಂಜೆ ಅಂಗಾಂಗಗಳನ್ನು ಸಾಗಿಸಲಾಯಿತು.

17 ವರ್ಷದ ಬಾಲಕಿ ಇಲ್ಲಿನ ಎಸ್‌ಡಿಎಂ ಆಸ್ಪತ್ರೆಯಲ್ಲಿ ಕಳೆದ ಕೆಲ ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದ ಅವರ ಮಿದುಳು ಸೋಮವಾರ ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ಘೋಷಿಸಿದರು. ಹೀಗಾಗಿ ಆಕೆಯ ಹೃದಯ, ಯಕೃತ್, ಮೂತ್ರಪಿಂಡಗಳನ್ನು ದಾನ ಮಾಡಲು ಪಾಲಕರು ಒಪ್ಪಿಗೆ ಸೂಚಿಸಿದ್ದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಹೃದಯವನ್ನು ಬೆಳಗಾವಿಯ ಕೆಎಲ್‌ಇ ಆಸ್ಪತ್ರೆಯಲ್ಲಿ ಹೃದ್ರೋಗದ ಚಿಕಿತ್ಸೆ ಪಡೆಯುತ್ತಿರುವ ಯುವಕನಿಗೆ ನೀಡಲು ಇಲ್ಲಿಂದ ಆಂಬುಲೆನ್ಸ್ ಮೂಲಕ ಸಾಯಂಕಾಲ 4.30ರ ಸುಮಾರಿಗೆ ಕೊಂಡೊಯ್ಯಲಾಯಿತು. ಹಾಗೆಯೇ ಬೆಂಗಳೂರಿನ ಅಪೊಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವ್ಯಕ್ತಿಗೆ ಯಕೃತ್ ಕಸಿ ಮಾಡಲಾಗುತ್ತಿದ್ದು, ಅದಕ್ಕಾಗಿ ಹುಬ್ಬಳ್ಳಿ ವಿಮಾನ ನಿಲ್ದಾಣವರೆಗೆ ಝೀರೊ ಟ್ರಾಫಿಕ್ ಮೂಲಕ ಆಂಬುಲೆನ್ಸ್‌ಗಳು ತೆರಳಿದವು. ಎರಡು ಮೂತ್ರ-ಪಿಂಡಗಳಲ್ಲಿ ಒಂದು ಎಸ್‌ಡಿಎಂ ಆಸ್ಪತ್ರೆ ಹಾಗೂ ಇನ್ನೊಂದನ್ನು ಹುಬ್ಬಳ್ಳಿಯ ತತ್ವದರ್ಶಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವ್ಯಕ್ತಿಗೆ ಕಸಿ ಮಾಡಲಾಗಿದೆ.

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

NOTICE INVITING TENDERS

Sealed Tenders are invited from eligible agency for providing House Keeping and General cleaning works at THE KARNATAKA STATE CRICKET ASSOCIATION, M. Chinnaswamy Stadium, Cubbon Road, Bangalore – 560 001.

TIME PERIOD : September 2022 to August 2023
EARNEST MONEY : 2% of Quoted Amount
COST OF TENDER DOCUMENT : Rs.10,000/- + GST (Rs.11,800/-)
PROPOSED DATE OF ADVERTISEMENT / NIT AND ISSUE OF TENDER DOCUMENT : 12-07-2022
LAST DATE FOR COLLECTING THE TENDER : 22-07-2022 (Up to 5:00 PM)
LAST DATE FOR SUBMISSION OF TENDER : 25-07-2022 (on or before 5:00PM) To be dropped in the Tender Box placed in KSCA Office
COMPONENTS OF TENDER :
- General Rules & Instructions to Tender
- Eligibility Criteria for Short listing
- General Conditions of Contract
- Details of the Area
- Scope of Works
- Eligibility Form : Schedule A
- Financial Bid: Schedule B

Hon. Secretary - KSCA

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಡಬ್ಲ್ಯುಆರ್‌ಸಿಎನ್‌ಬಿಎನ್‌ಸಿಎಸ್‌ಟಿ_10_2022 ಗೆ ತಿದ್ದುಪಡಿ ಸಂ. 1

ಮೇಲೆ ತಿಳಿಸಿದ ಟೆಂಡರ್ ಪ್ರಕಟಣೆಯಲ್ಲಿ, ಮುಕ್ತಾಯದ ದಿನಾಂಕವನ್ನು 08–07–2022ರ ಬದಲಿಗೆ 25–07–2022 ಎಂದು ಓದಿಕೊಳ್ಳುವುದು. ಇತರ ಎಲ್ಲಾ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಉಪ ಮುಖ್ಯ ಇಂಜಿನಿಯರ್ / ಉಗ್ರಾಣ / ನಿರ್ಮಾಣ ಬೆಂಗಳೂರು ದಂಡು

ಪಿಯುಬಿ/220/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23

S.W.Railways SWRRLY SWRRLY

2 ವರ್ಷ ಬಳಿಕ ತಿರುಮಲ ಬ್ರಹ್ಮೋತ್ಸವ

ಹೈದರಬಾದ್: ಕೋವಿಡ್‌ನಿಂದಾಗಿ ಎರಡು ವರ್ಷಗಳ ಬಳಿಕ ಶ್ರೀವಾರಿ ವಾರ್ಷಿಕ ಬ್ರಹ್ಮೋತ್ಸವ ನಡೆಸಲು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ನಿರ್ಧರಿಸಿದೆ.

9 ದಿನಗಳ ಉತ್ಸವ ಸೆ. 27ರಿಂದ ಅ.5ರವರೆಗೆ ನಡೆಯಲಿದೆ ಎಂದು ಸೋಮವಾರ ಟಿಟಿಡಿ ಅಧ್ಯಕ್ಷ ವೈ.ವಿ. ಸುಬ್ಬಾರೆಡ್ಡಿ ತಿಳಿಸಿದರು.

ಕಿಶೋರ್ ವಿಕಾಸ್ ಸುರಾಳ್ಕರ್ ಕೆಪಿಎಸ್‌ಸಿ ಕಾರ್ಯದರ್ಶಿ

ಬೆಂಗಳೂರು: ಹತ್ತು ಐಎಎಸ್ ಅಧಿ-ಕಾರಿಗಳನ್ನು ವರ್ಗಾವಣೆಗೊಳಿಸಿ ಸೋಮವಾರ ಆದೇಶ ಹೊರಡಿಸಿದ್ದು, ಕೊಪ್ಪಳ ಜಿಲ್ಲಾಧಿಕಾರಿಯಾಗಿರುವ ಕಿಶೋರ್ ವಿಕಾಸ್ ಸುರಾಳ್ಕರ್ ಅವರನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದ-ರ್ಶಿಯನ್ನಾಗಿ ನೇಮಿಸಲಾಗಿದೆ.

ಬೆಳಗಾವಿ ಪ್ರಾದೇಶಿಕ ಆಯುಕ್ತ-ರಾಗಿದ್ದ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರನ್ನು ಬೆಂಗಳೂರು ಪ್ರಾದೇಶಿಕ ಆಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ಹುದ್ದೆ ನಿರೀಕ್ಷೆಯಲ್ಲಿದ್ದ ಕ್ಯಾಪ್ಟನ್ ಡಾ. ರಾಜೇಂದ್ರ ಕೆ. ಅವರನ್ನು ಸಹಕಾರ ಸಂಘಗಳ ರಿಜಿಸ್ಟ್ರಾರ್ ಮತ್ತು ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಶಿವಾನಂದ ಕಾಪಸಿ ಅವರನ್ನು ದಾವಣಗೆರೆ ಜಿಲ್ಲಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ದಾವಣಗೆರೆ ಜಿಲ್ಲಾಧಿಕಾರಿ-ಯಾಗಿದ್ದ ಮಹಾಂತೇಶ ಬೀಳಗಿ ಅವರಿಗೆ ಹುದ್ದೆ ತೋರಿಸಿಲ್ಲ.

ಗದಗ ಜಿಲ್ಲಾಧಿಕಾರಿ ಸುಂದರೇಶ್ ಬಾಬು ಎಂ. ಅವರನ್ನು ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿ ಹೊನ್ನಾಂಬ ಅವರನ್ನು ಗದಗ ಜಿಲ್ಲಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಆರ್. ಲತಾ ಅವರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಹುದ್ದೆಗೆ ವರ್ಗಾಯಿಸಿದ್ದು, ಆ ಹುದ್ದೆಯಲ್ಲಿದ್ದ ಕೆ. ಶ್ರೀನಿವಾಸ್ ಅವರಿಗೆ ಸ್ಥಳ ತೋರಿಸಿಲ್ಲ.

ಕೃಷ್ಣಾ ಮೇಲ್ದಂಡೆ ಯೋಜನೆಯ ಸ್ಥಳಾಂತರ, ಪುನರ್ವಸತಿ ಮತ್ತು ಭೂಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕಿ ಸ್ನೇಹಲ್ ಲೋಖಂಡೆ ಅವರನ್ನು ಉನ್ನತ ಶಿಕ್ಷಣ ಇಲಾಖೆ ಉಪ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಕೆಎಎಸ್ ವರ್ಗಾವಣೆ: ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಪ್ರಧಾನ ವ್ಯವಸ್ಥಾಪಕರಾಗಿರುವ ಶಾಂತಾ ಎಲ್. ಹುಲ್ಮನಿ ಅವರನ್ನು ಮಂಡ್ಯ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಿದ್ದು, ಜಿಲ್ಲಾ ಪಂಚಾಯಿತಿಯ ಸಿ.ಇಒ ಹುದ್ದೆಯ ಹೆಚ್ಚುವರಿ ಪ್ರಭಾರವನ್ನೂ ನೀಡಲಾಗಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, (‘ಕಕ್ಷಿದಾರ’) ಈ ಕೆಳಕಂಡ “ಷೆಡ್ಯೂಲ್” ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ “ಷೆಡ್ಯೂಲ್ ಸ್ವತ್ತು” ಎಂದು ಕರೆಯಲ್ಪಡುವ, ಸದರಿ ಮಾಲೀಕರಾದ ಮಣಿಪಾಲ್ ರೆಸಾರ್ಟ್ಸ್ ಕಂಪನಿ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯ್ದೆ, 1956 ರ ಅನ್ವಯ ಸ್ಥಾಪನೆಯಾಗಿರುವ ಕಂಪನಿ, ಇದರ ನೋಂದಾಯಿತ ಕಛೇರಿ ನಂ.65, ಸಿಂಗಸಂದ್ರ, ಬೇಗೂರು, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು–560068 (‘ಮಾಲೀಕರು’) ಇವರೊಡನೆ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟ ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಸದರಿ ಷೆಡ್ಯೂಲ್ ಸ್ವತ್ತಿನ ಏಕಮೇವ ಮತ್ತು ನಿರುಪಾಧಿಕ ಮಾಲೀಕರೆಂದು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು (ಸಂಸ್ಥೆ ಅಥವಾ ಇತರೆ) ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಕ್ಲೇಮ್‌ಗಳನ್ನು ಅಥವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಅದರ ಯಾವುದೇ ಭಾಗ ಅಥವಾ ಅಂಶದ ಸಂಬಂಧದಲ್ಲಿ ಮಾರಟ, ಮಾಲೀಕತ್ವ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತಿ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ಒಪ್ಪಂದ, ಅಂತಿಮ ಇಚ್ಛಾಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವನಾಗಿ, ಪಾಲು, ಹಂಚಿಕೆ, ಧರಣಾಧಿಕಾರ, ಜಪ್ತಿ, ಪಾಲುದಾರಿಕೆ, ಹಕ್ಕಿನ ವ್ಯವಸ್ಥೆ, ಯಾವುದೇ ನ್ಯಾಯಾಂಗ/ಕರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಮೀಸಲಾತಿ, ಗುತ್ತಿಗೆ/ಒಪ್ಪಂದ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ಮಾರಾಟ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ 15 (ಹದಿನೈದು) ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮ್‌ಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಅಧಿಕಾರ ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ಮಾರಾಟ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತಿನ ವಿವರ)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು–2 ಹೋಬಳಿ, ಸಿಂಗಸಂದ್ರ ಗ್ರಾಮಕ್ಕೆ ಸೇರಿದ ಸ್ಥಿರಾಸ್ತಿ ಸ್ವತ್ತಿನ ಬಿಬಿಎಂಪಿ ಖಾತ ನಂ.406/391/379/65/116 (ಸಿಂಗಸಂದ್ರ ಗ್ರಾಮದಲ್ಲಿ ರಚಿಸಿರುವ ಸರ್ವೆ ನಂ.65 ಮತ್ತು 116/2) ಇದರ ವಿಸ್ತೀರ್ಣ 04 ಎಕರೆ 10 ಗುಂಟೆಗಳ ಜೊತೆಗೆ ಕಟ್ಟಡವನ್ನು ನಿರ್ಮಾಣ ಹೊಂದಿರುವ ಮತ್ತು ಚೆಕ್ಕುಬಂದಿ :

ಪೂರ್ವಕ್ಕೆ : ಸರ್ವೆ ನಂ.116 ರ ಉಳಿದ ಭಾಗದ ಭೂಮಿ;
ಪಶ್ಚಿಮಕ್ಕೆ : ಸರ್ವೆ ನಂ.65 ರ ಉಳಿದ ಭಾಗದ ಭೂಮಿ;
ಉತ್ತರಕ್ಕೆ : ಮಣಿಪಾಲ್ ಕೌಂಟಿ ರಸ್ತೆ ಸಮೀಪದಲ್ಲಿರುವ ರಸ್ತೆ; ಮತ್ತು
ದಕ್ಷಿಣಕ್ಕೆ : ಬಸಾಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ.62 ರ ಭೂಮಿ.

ದಿನಾಂಕ: 12.07.2022
ಸ್ಥಳ : ಬೆಂಗಳೂರು

ಸಹಿ/–
ಶ್ರೀನಿವಾಸ್ ಬಿ.ಆರ್. ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
206 & 207, 2ನೇ ಮಹಡಿ, ಹೆಚ್‌ಎಂ ಜಿನೆವ ಹೌಸ್,
14, ಕನ್ನಿಗ್‌ಹ್ಯಾಂ ರಸ್ತೆ, ಬೆಂಗಳೂರು – 560052, ದೂ. ಸಂ. +91–80–6836–1111

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗ, ಬೆಂಗಳೂರು.

ಸಂಖ್ಯೆ: ಕರಾಸಾ/ಕಾನಿಅ/ಬೆಂ/ಕಿಅ/220/2022–23 ದಿನಾಂಕ: 11–07–2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ: 02/2022–23

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಕ್ಕೆ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತರು ಸದರಿ ಟೆಂಡರಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್: https://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ (ರೂ.ಗಳಲ್ಲಿ)
Construction of Putani Park in Shantinagar Employees Quarters Premises, Bengaluru. (Call-2)	12.44	31,100.00

ಕಾಲಾವಧಿ (ಮಳೆಗಾಲ ಸೇರಿ) : 02 ತಿಂಗಳು

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: http://www.eproc.karnataka.gov.in ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ವಾಸಾಸಂಇ/ವಾ.ಪ್ರ/1294/ಅಡ್ವರ್ಟೋ/2022–23

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮಕ್ಕಳ ರಕ್ಷಣಾ ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, 3ನೇ ಮಹಡಿ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560001 ಇ–ಮೇಲ್: icps.kar@gmail.com

ಸಂಖ್ಯೆ: ಮರನಿ/ಆಡಳಿತ–5/ಮಾ.ಸಂ.ಸೇ–26/2021–22 ದಿನಾಂಕ: 07/07/2022

ಟೆಂಡರ್ ಪ್ರಕಟಣೆ

“ಮಕ್ಕಳ ರಕ್ಷಣಾ ನಿರ್ದೇಶನಾಲಯ” ಬೆಂಗಳೂರು ಇಲ್ಲಿಗೆ ಮಂಜೂರಾಗಿರುವ ಹುದ್ದೆಗಳಿಗೆ ಮಾನವ ಸಂಪನ್ಮೂಲ ಸೇವೆಯನ್ನು ಬಾಹ್ಯಮೂಲದ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (ಕೆಟಿಪಿಪಿ) 1999 ನಿಯಮಗಳು 2000ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ್ನು ದಿನಾಂಕ: 07–07–2022ರಿಂದ ದಿನಾಂಕ: 21–07–2022ರ ಸಂಜೆ 4.00 ಗಂಟೆಯವರೆಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರನ್ನು ಕಛೇರಿ ವೇಳೆಯಲ್ಲಿ ಮೇಲಿನ ವಿಳಾಸದಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080–22867382/383)

ಸಹಿ/– ನಿರ್ದೇಶಕರು, ಮಕ್ಕಳ ರಕ್ಷಣಾ ನಿದೇಶನಾಲಯ ಹಾಗೂ ಸದಸ್ಯ ಕಾರ್ಯದರ್ಶಿಗಳು ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ, ಬೆಂಗಳೂರು

DIPR/CP/1282/GREENFMC/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದ ಬಸವನಗುಡಿಯ ಉತ್ತರಾದಿ ಮಠದ ಆವರಣದಲ್ಲಿ ಆಷಾಢ ಮಾಸದ ಪ್ರಥಮ ಏಕಾದಶಿ ಅಂಗವಾಗಿ ಸತ್ಯಾತ್ಮತೀರ್ಥ ಸ್ವಾಮೀಜಿ ಅವರು ಭಕ್ತರಿಗೆ ತಪ್ತ ಮುದ್ರಾಧಾರಣೆ ಮಾಡಿದರು

ಐಐಎಸ್‌ಸಿ ದಾಳಿ: ಆರೋಪಿಗಳ ಜೀವಾವಧಿ ಕಾಯಂ

ನವದೆಹಲಿ (ಪಿಟಿಐ): ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಮೇಲೆ 2005ರಲ್ಲಿ ನಡೆದ ಭಯೋತ್ಪಾದನಾ ದಾಳಿಗೆ ಸಂಬಂಧಿಸಿದಂತೆ ನಾಲ್ವರು ಅಪರಾಧಿಗಳಿಗೆ ನೀಡಲಾಗಿದ್ದ ಜೀವಾವಧಿ ಶಿಕ್ಷೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿ ಹಿಡಿದಿದೆ.

ಕರ್ನಾಟಕ ಹೈಕೋರ್ಟ್ 2016ರಲ್ಲಿ ತಮಗೆ ಜೀವಾವಧಿ ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ ನಾಲ್ವರು ಆರೋಪಿಗಳಾದ ಮೊಹಮ್ಮದ್ ಇರ್ಫಾನ್, ನಿಜಾಮುದ್ದೀನ್, ಮೊಹಮ್ಮದ್ ಇರ್ಫಾನ್ ಮತ್ತು ನೂರುಲ್ಲಾ ಖಾನ್ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಈ ನಾಲ್ವರು ಸಾರ್ವಜನಿಕರು ಮತ್ತು ಸಾರ್ವಜನಿಕ ಆಸ್ತಿಗೆ ಅಪಾಯ ತರುವ ನಿಟ್ಟಿನಲ್ಲಿ ಪಿತೂರಿ ನಡೆಸಿದ್ದು, ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟ ನ್ಯಾಯಮೂರ್ತಿ ಯು.ಯು.ಲಲಿತ್, ಹೇಮಂತ್ ಗುಪ್ತ, ಎಸ್.ರವೀಂದ್ರ ಭಟ್ ಅವರಿದ್ದ ಪೀಠ, ಅರ್ಜಿಯನ್ನು ವಜಾಮಾಡಿತು.

2005ರ ಡಿಸೆಂಬರ್ 28ರಂದು ಸಂಜೆ 7 ಗಂಟೆ ಸುಮಾರಿಗೆ ಐಐಎಸ್‌ಸಿ ಕ್ಯಾಂಪಸ್‌ಗೆ ನುಗ್ಗಿದ್ದ ಇಬ್ಬರು ಬಂದೂಕುಧಾರಿಗಳು ಗುಂಡು ಹಾರಿಸಿದ್ದರಿಂದ ದೆಹಲಿ ಐಐಟಿ ಪ್ರೊಫೆಸರ್ ಒಬ್ಬರು ಮೃತಪಟ್ಟಿದ್ದರು.

ನಗರದಲ್ಲಿ ಇಂದು

ಕನ್ನಡ ಸಾಹಿತ್ಯ ಸಂಸ್ಕೃತಿ ಹಾಗೂ ಸಂಶೋಧನೆ ಮರು ಚಿಂತನೆ: ಉದ್ಘಾಟನೆ: ನಲ್ಲೂರು ಪ್ರಸಾದ್, ಅತಿಥಿಗಳು: ಕೆ.ಆರ್.ನಿರ್ಮಲ್‌ಕುಮಾರ್, ಪ್ರೊ.ಎಸ್.ಎಸ್.ವಿಜಯ, ಎಂ.ಕೃಷ್ಣದಾಸ್ ಅಧ್ಯಕ್ಷತೆ: ಬಿ.ಸಿ.ಶಿವಲಿಂಗೇಗೌಡ, ಗೋಷ್ಠಿಗಳಲ್ಲಿ ಭಾಗವಹಿಸುವವರು– ರೆಹಮತ್ ತರೀಕೆರೆ, ಎಂ.ಎಸ್. ಆಶಾದೇವಿ, ತಮಿಳ್ ಸೆಲ್ವಿ, ಎಂ.ಸುಮಿತ್ರಾ, ಆಯೋಜನೆ: ಭಾರತ್ ವಿದ್ಯಾ ಸಂಸ್ಥೆ(ಬಿಇಎಸ್) ಕಾಲೇಜಿನ ಆಂತರಿಕ ಗುಣಮಟ್ಟದ ಭರವಸೆ ಕೋಶ ಮತ್ತು ಕನ್ನಡ ವಿಭಾಗ, ಸ್ಥಳ: ಬಿಇಎಸ್ ಕಾಲೇಜಿನ ವಿಚಾರಸಂಕಿರಣ ಸಭಾಂಗಣ, 16ನೇ ಮುಖ್ಯರಸ್ತೆ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 10

ಆಲೂರು ವೆಂಕಟರಾಯರ ಜನ್ಮ ದಿನಾಚರಣೆ ಮತ್ತು ಫ.ಗು.ಹಳಕಟ್ಟಿ ಅವರ ಸ್ಮರಣೆ: ಉದ್ಘಾಟನೆ: ಮಹೇಶ ಜೋಶಿ, ಉಪನ್ಯಾಸ ಶ್ರೀನಿವಾಸ ವಾಡಪ್ಪಿ ಮತ್ತು ಅರವಿಂದ ಜತ್ತಿ, ಅತಿಥಿಗಳು: ವೂಡೇ ಪಿ.ಕೃಷ್ಣ, ಸಿ.ಸೋಮಶೇಖರ್, ಆಯೋಜನೆ: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಗಾಂಧಿ ಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ಬಂಜಾರ ಸಾಂಸ್ಕೃತಿಕ ಕಲೋತ್ಸವ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ: ಉದ್ಘಾಟನೆ– ಸಚಿವ ಪ್ರಭು ಚವ್ಹಾಣ, ಭಾಗವಹಿಸುವವರು: ಬಾಲಶಿವಯೋಗಿ ಸೋಮಲಿಂಗಸ್ವಾಮೀಜಿ, ಬಳಿರಾಮ ಮಹಾರಾಜರು, ಸಿದ್ಧಲಿಂಗ ಸ್ವಾಮೀಜಿ ಚಿತ್ತರಗಿ, ಕುಮಾರ ಮಹಾರಾಜರು, ಅಧ್ಯಕ್ಷತೆ: ಸಚಿವ ಮುರುಗೇಶ ಆರ್. ನಿರಾಣಿ, ಸ್ಮರಣ ಸಂಚಿಕೆ ಬಿಡುಗಡೆ: ಸಚಿವ ವಿ.ಸುನಿಲ್‌ಕುಮಾರ್, ಆಯೋಜನೆ: ಭಾರತೀಯ ಬಂಜಾರ ಸಂಘಟನಾ ಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಬೆಳಿಗ್ಗೆ 10.30

ನಬಾರ್ಡ್ 41ನೇ ಸಂಸ್ಥಾಪನಾ ದಿನ ಮತ್ತು ವಸ್ತುಪ್ರದರ್ಶನ: ಉದ್ಘಾಟನೆ: ಅಧ್ಯಕ್ಷತೆ– ಕೃಷಿ ಸಚಿವ ಬಿ.ಸಿ. ಪಾಟೀಲ, ಭಾಗವಹಿಸುವವರು: ಆರ್‌ಬಿಐ ಪ್ರಾದೇಶಿಕ ನಿರ್ದೇಶಕ ಆರ್. ಗುರುಮೂರ್ತಿ, ರಾಜೇಂದ್ರ ಪ್ರಸಾದ್, ಸ್ಥಳ: ನಬಾರ್ಡ್ ಟವರ್, ಕೆ.ಜಿ.ರಸ್ತೆ, ಮಧ್ಯಾಹ್ನ 2.30

ಭಜನೆ, ಪ್ರವಚನ, ಹರಿನಾಮ ಸಂಕೀರ್ತನೆ: ರಾಜಾಜಿನಗರದ ರುಕ್ಮಿಣಿ ಮಹಿಳಾ ಸಂಘ, ಸಂಜೆ 6ರಿಂದ 7

ಚಾಮರಾಜಪೇಟೆ ಬಂದ್ ಇಂದು: ಬಿಗಿ ಭದ್ರತೆ

ಬೆಂಗಳೂರು: ಈದ್ಗಾ ಮೈದಾನವನ್ನು ಆಟದ ಮೈದಾನವನ್ನಾಗಿಯೇ ಉಳಿ-ಸಿಕೊಳ್ಳಬೇಕು ಎಂದು ಆಗ್ರಹಿಸಿ ಚಾಮರಾಜಪೇಟೆ ನಾಗರಿಕರ ಒಕ್ಕೂಟ ವೇದಿಕೆ ಜುಲೈ 12ರಂದು ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ ‘ಚಾಮರಾಜಪೇಟೆ ಬಂದ್’ ನಡೆಸಲಿದೆ.

‘ಈದ್ಗಾ ಮೈದಾನಕ್ಕೆ ಜಯಚಾಮ-ರಾಜೇಂದ್ರ ಒಡೆಯರ್ ಅವರ ಹೆಸರಿಡಬೇಕು. ಮೈದಾನ ಬಿಬಿಎಂಪಿ ಸ್ವತ್ತಾಗಿ ಉಳಿಯಬೇಕು. ಎಲ್ಲ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಅವಕಾಶ ನೀಡಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆ. ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರದಾದ್ಯಂತ ಹೋಟೆಲ್, ಗಾರ್ಮೆಂಟ್ಸ್ ಹಾಗೂ ಶಾಲೆಗಳ ಆಡಳಿತ ಮಂಡಳಿಗಳೂ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿವೆ. ಎಲ್ಲರೂ ಸ್ವಯಂ ಪ್ರೇರಿತರಾಗಿ ಚಟುವಟಿಕೆಗಳನ್ನು ಬಂದ್ ಮಾಡಲಿದ್ದಾರೆ’ ಎಂದು ವೇದಿಕೆ ಅಧ್ಯಕ್ಷ ರಾಮೇಗೌಡ ತಿಳಿಸಿದರು.

ಡಿಸಿಪಿ, ನಾಲ್ವರು ಎಸಿಪಿ ನೇತೃತ್ವದಲ್ಲಿ ಭದ್ರತೆ: ಬಂದ್ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಅಭಿಯಂತರರು, ಕೆರೆಗಳು ರವರ ಕಛೇರಿ, 3ನೇ ಮಹಡಿ, ಆನೆಕ್ಸ್–2, ಮುಖ್ಯ ಕಛೇರಿ ಆವರಣ, ಎನ್.ಆರ್. ಚೌಕ, ಬೆಂಗಳೂರು – 560 002

ಸಾರ್ವಜನಿಕ ಪ್ರಕಟಣೆ

ಸಂಖ್ಯೆ:ಮುಅ/ಕೆರೆಗಳು/ಪಿಆರ್/227/2022–23 ದಿನಾಂಕ: 11.07.2022

“ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಕ್ರಿಯಾ ಯೋಜನೆ” ಯಡಿಯಲ್ಲಿ ಈ ಕೆಳಕಂಡ ಕೆರೆಗಳ ಸಮಗ್ರ ಅಭಿವೃದ್ಧಿ ಮತ್ತು ಪುನಶ್ಚೇತನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆಸಕ್ತರು, ಸ್ಥಳಿಯ ಸಂಘ ಸಂಸ್ಥೆಗಳು ಮತ್ತು ಸದರಿ ಕೆರೆಗಳ ಸುತ್ತಮುತ್ತಲಿನ ಸಾರ್ವಜನಿಕರಿಂದ ಸಲಹೆಗಳನ್ನು ಪಡೆದು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ದಿನಾಂಕ 13.07.2022ರಂದು ಬೆಳಿಗ್ಗೆ 10:00 ರಿಂದ ಸಂಜೆ 5:00 ಗಂಟೆಯವರೆಗೆ ವಲಯವಾರು ಕಾರ್ಯಾಗಾರವನ್ನು ಪಾಲಿಕೆಯ ಮಲ್ಲೇಶ್ವರಂನ 16ನೇ ಅಡ್ಡರಸ್ತೆ, ಚೌಡಯ್ಯ ಮೆಮೋರಿಯಲ್ ಹಾಲ್‌ನ ಹತ್ತಿರ, ಐ.ಪಿ.ಪಿ. ಸಭಾಂಗಣದ ಮೊದಲನೇ ಮಹಡಿಯಲ್ಲಿ ಹಮ್ಮಿಕೊಂಡಿದ್ದು, ಆಸಕ್ತರು ಸದರಿ ಕೆರೆಗಳಿಗೆ ಸಂಬಂಧಿಸಿದಂತೆ ಕೆಳಗೆ ನೀಡಿದ ದಿನಾಂಕದಂದು ನಿಗದಿಪಡಿಸಿದ ವೇಳಾಪಟ್ಟಿಯಂತೆ ಹಾಜಾರಾಗಿ ಕಾರ್ಯಾಗಾರವನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ. ಅಥವಾ ಸಲಹೆಗಳನ್ನು ದಿನಾಂಕ : 14.07.2022 ರ ಸಂಜೆ 5:00 ಗಂಟೆಯೊಳಗೆ ನೇರವಾಗಿ ಇ–ಮೇಲ್ cebbmplakes@gmail.com ಗೆ ಸಲ್ಲಿಸಬಹುದಾಗಿದೆ.

ಕ್ರ. ಸಂ.	ವಲಯ	ವಿಧಾನಸಭಾ ಕ್ಷೇತ್ರ	ಕೆರೆಯ ಹೆಸರು	ದಿನಾಂಕ: 13. 07.2022ರಂದು ಸಲಹೆ ಸೂಚನೆಗಳನ್ನು ಪಡೆಯಲು ಕಾರ್ಯಾಗಾರಕ್ಕೆ ನಿಗದಿಪಡಿಸಿದ ಸಮಯ
1	ಯಲಹಂಕ	ಯಲಹಂಕ	ವೆಂಕಟೇಶಪುರ ಕೆರೆ	ಬೆಳಿಗ್ಗೆ 10.00 ರಿಂದ 11.30ರವರೆಗೆ
		ಬ್ಯಾಟರಾಯನಪುರ	ಸಿಂಗಾಪುರ ಕೆರೆ	
		ಬ್ಯಾಟರಾಯನಪುರ	ಶಿವನಹಳ್ಳಿ ಕೆರೆ	
2	ದಾಸರಹಳ್ಳಿ	ದಾಸರಹಳ್ಳಿ	ಲಕ್ಷ್ಮೀಪುರ ಕೆರೆ	ಬೆಳಿಗ್ಗೆ 11.30 ರಿಂದ 12.30ರವರೆಗೆ
			ಕರಿಹೊಬನಹಳ್ಳಿ ಕೆರೆ (ನರಸಪ್ಪನಹಳ್ಳಿ ಕೆರೆ)	
3	ರಾಜರಾಜೇಶ್ವರಿ ನಗರ	ಯಶವಂತಪುರ	ದುಬಾಸಿಪಾಳ್ಯ ಕೆರೆ	ಮಧ್ಯಾಹ್ನ 12.30 ರಿಂದ 1.30ರವರೆಗೆ
		ಯಶವಂತಪುರ	ಗಾಂಧಿನಗರ ಹೊಸ ಕೆರೆ	
		ಯಶವಂತಪುರ	ಲಿಂಗದೇರನಹಳ್ಳಿ–13 ಕೆರೆ	
4	ಬೊಮ್ಮನಹಳ್ಳಿ	ಬೆಂಗಳೂರು ದಕ್ಷಿಣ	ಸ್ವರಣಕುಂಟೆ ಗುಡ್ಡೆ ಕೆರೆ	ಮಧ್ಯಾಹ್ನ 2.30 ರಿಂದ 3.00ರವರೆಗೆ
		ಬೊಮ್ಮನಹಳ್ಳಿ	ಗಾರ್‍ವೆಬಾವಿಪಾಳ್ಯ ಕೆರೆ	
5	ಪೂರ್ವ	ಸರ್ವಜ್ಞನಗರ	ಕಾಚರಕನಹಳ್ಳಿ ಕೆರೆ	ಮಧ್ಯಾಹ್ನ 3.30 ರಿಂದ 3.45ರವರೆಗೆ
6	ಮಹದೇವಪುರ	ಮಹದೇವಪುರ	ಗುಂಜೂರು ಕಾರ್ಮೆಲರಾಮ್ ಕೆರೆ	ಮಧ್ಯಾಹ್ನ 3.45 ರಿಂದ 5.00ರವರೆಗೆ
		ಮಹದೇವಪುರ	ಗುಂಜೂರು ಮಾವಿನ ಕೆರೆ	
		ಕೆ. ಆರ್. ಪುರಂ	ಬಿ. ನಾರಾಯಣಪುರ ಕೆರೆ	

ಸಹಿ/– ಮುಖ್ಯ ಅಭಿಯಂತರರು (ಕೆರೆಗಳು)

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ. ಕೋಲಾರ
ಡೇರಿ ಆವರಣ, ಪಿ.ಬಿ.ನಂ 63, ಎನ್ ಹೆಚ್–4, ಹುತ್ತೂರು ಅಂಚೆ, ಕೋಲಾರ–563102
[Ph.No 08152-282310,7760964517, E-mail: komulpurchase@yahoo.com]

ಕ್ರಸಂ: ಕೋಹಾಒ: ಖರೀದಿ: ಇ–ಟೆಂಡರ್: 3248 : 2022–23 ದಿನಾಂಕ: 08.07.2022

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಖರೀದಿಗೆ ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಿದ್ದು ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು www.eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ.ಸಂ	ಸಾಮಗ್ರಿ / ಸಲಕರಣೆ / ಯಂತ್ರೋಪಕರಣ ವಿವರ	ಪರಿಮಾಣ
01	ಕೋಲಾರ ಡೇರಿಯ ಉತ್ಪನ್ನ ವಿಭಾಗದಲ್ಲಿ ತುಪ್ಪವನ್ನು ಪ್ಯಾಕ್ ಮಾಡಲು 5 ವಿವಿಧ ನಮೂನೆಯ ಪೆಟ್‌ಜಾರ್‌ಗಳನ್ನು ವಾರ್ಷಿಕ ಗುತ್ತಿಗೆ ದರಗಳಂತೆ ಸರಬರಾಜು ಮಾಡಲು ಎ) 200 ಮಿ.ಲಿ ಪೆಟ್ ಜಾರ್ ಬಿ) 500 ಮಿ.ಲಿ ಪೆಟ್ ಜಾರ್ ಸಿ) 1000 ಮಿ.ಲಿ ಪೆಟ್ ಜಾರ್ ಡಿ) 5000 ಮಿ.ಲಿ ಪೆಟ್ ಜಾರ್	1,70,000 ಸಂಖ್ಯೆ 1,00,000 ಸಂಖ್ಯೆ 40,000 ಸಂಖ್ಯೆ 30,000 ಸಂಖ್ಯೆ
02	ಕೋಲಾರ ಡೇರಿಯಲ್ಲಿ ಸಂಸ್ಕರಿಸಿದ ಚೀಸ್ ಉತ್ಪಾದನೆಗಾಗಿ ಎಮಲ್ಸಿಫೈಯರ್ ಜೋಹಾ ಲವಣವನ್ನು ವಾರ್ಷಿಕ ಗುತ್ತಿಗೆ ದರಗಳಂತೆ ಸರಬರಾಜು ಮಾಡಲು ಎ) ಜೋಹಾ – C-Spl ಬಿ) ಜೋಹಾ – PZ-7 ಸಿ) ಜೋಹಾ – T-Neu ಡಿ) ಜೋಹಾ – S9	2,000 ಕೆ.ಜಿ 2,000 ಕೆ.ಜಿ 2,000 ಕೆ.ಜಿ 500 ಕೆ.ಜಿ
03	ಕೋಲಾರ ಡೇರಿಯಲ್ಲಿ ಮೊಸರು ಉತ್ಪಾದನೆಗೆ ಅವಶ್ಯವಿರುವ ಫ್ರೀಜ್‌ಡ್ರೈಡ್ ಡಿವಿಎಸ್ ಕಲ್ಚರ್‌ರನ್ನು ದ್ವೈವಾರ್ಷಿಕ ಗುತ್ತಿಗೆ ದರಗಳಲ್ಲಿ ಪೂರೈಕೆ	6000 ಸ್ಯಾಚೆಟ್‌ಗಳು
04	ಕೋಲಾರ ಡೇರಿಯ ಶೈತೀಕರಣ ಘಟಕದಲ್ಲಿರುವ ಖಅಂಅಂ ವ್ಯವಸ್ಥೆಗೆ ಡೇಟಾ ಲಾಗಿಂಗ್ ನಿಯಂತ್ರಣ ಅಳವಡಿಕೆ ಹಾಗೂ ಮೊಸರು ಶೈತೀಕರಣಕ್ಕೆ Blast Cold Room ನ ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭ	01 ಸಂಖ್ಯೆ

ಟೆಂಡರ್ ಶುರುವಾಗುವ ದಿನಾಂಕ: 11.07.2022 ರಿಂದ 10.08.2022 5.30 ಗಂಟೆಯವರಿಗೆ ● ಟೆಂಡರ್ ಅಪ್‌ಲೋಡ್ ಮಾಡಲು ಕಡೆಯ ದಿನಾಂಕ: 10.08.2022 ರ ಸಂಜೆ 5.30 ಗಂಟೆಯವರೆಗೆ ● ಟೆಂಡರ್ ತಾಂತ್ರಿಕ ಭಾಗ–1ನ್ನು ತೆರೆಯುವ ದಿನಾಂಕ: 12.08.2022 ರಂದು ಬೆಳಗ್ಗೆ 11.00 ಗಂಟೆ ನಂತರ

ಸಹಿ/– ವ್ಯ.ನಿ.,ಕೋಮುಲ್

₹200 ಕೋಟಿ ಅನುದಾನದಲ್ಲಿ ಬಾಕಿ ಕಾಮಗಾರಿಗೇ ಹೆಚ್ಚು ವ್ಯಯ • ಅಭಿವೃದ್ಧಿಗೊಂಡ ಕೆರೆಗಳಲ್ಲೇ ಮತ್ತೆ ಕೆಲಸ • ಹೊಸ ಕೆರೆಗಳ ಆಯ್ಕೆಯಲ್ಲಿ ಗೊಂದಲ

21 ಕೆರೆಗಳ ಅಭಿವೃದ್ಧಿಗೆ ‘ಅಮೃತ’ ಸಿಂಚನ

• ಆರ್. ಮಂಜುನಾಥ್

ಬೆಂಗಳೂರು: ‘ಅಮೃತ್ ನಗರೋತ್ಥಾನ’ ಯೋಜನೆ ಅನುದಾನದಲ್ಲಿ ಬಿಬಿಎಂಪಿ ವ್ಯಾಪ್ತಿಯ 21 ಕೆರೆಗಳಿಗೆ ಪುನಶ್ಚೇತನದ ಭಾಗ್ಯ ಸಿಗಲಿದೆ. ಜೊತೆಗೆ ಈ ಹಿಂದೆ ಅಭಿವೃದ್ಧಿ ಕಂಡಿದ್ದು, ಬಾಕಿ ಉಳಿದಿರುವ ಕೆರೆಗಳ ಕಾಮಗಾರಿಗೂ ಹಣ ವೆಚ್ಚವಾಗಲಿದೆ. ಒಟ್ಟಾರೆ ₹200 ಕೋಟಿ ಪ್ರಥಮ ಹಂತದಲ್ಲೇ ವ್ಯಯವಾಗಲಿದೆ.

ಸಮಗ್ರ ಅಭಿವೃದ್ಧಿಗೆ ಬಹುತೇಕ ಕಡಿಮೆ ವ್ಯಾಪ್ತಿಯ ಕೆರೆಗಳನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಸಮಗ್ರ ಅಭಿವೃದ್ಧಿಗೆ ₹97.3 ಕೋಟಿ ವ್ಯಯ ಮಾಡಲು ಯೋಜನಾ ಪಟ್ಟಿ ತಯಾರಿಸಲಾಗಿದೆ. ಇನ್ನುಳಿದಂತೆ 47 ಕಾಮಗಾರಿಗಳಿಗೆ ಬಹುತೇಕ ₹103 ಕೋಟಿ ಹಣ ವೆಚ್ಚ ಮಾಡಲಾಗುತ್ತಿದೆ. ಕೆಲವು ಕಡೆ ಸಮಗ್ರ ಅಭಿವೃದ್ಧಿ ಮತ್ತು ಕೆಲವು ಕಡೆ ಅಭಿವೃದ್ಧಿ ಕಾಮಗಾರಿ ಎಂದು ಪಟ್ಟಿಯಲ್ಲಿ ಕಾಮಗಾರಿಗಳು ಪುನರಾವರ್ತನೆಯಾಗಿವೆ. ಎಷ್ಟು ಹೊಸ ಕೆರೆಗಳ ಪುನಶ್ಚೇತನ ಆಗುತ್ತದೆ ಎಂಬ ಗೊಂದಲವಿದೆ. ಹೀಗಾಗಿ, ಅಭಿವೃದ್ಧಿಯಾಗಿರುವ ಕೆರೆಗಳಿಗೇ ಮತ್ತಷ್ಟು ಹಣ ವ್ಯಯ ಮಾಡಲು ಮುಂದಾಗಿರುವುದು ಪರಿಸರ ಆಸಕ್ತರ ಆಕ್ರೋಶಕ್ಕೆ ಕಾರಣವಾಗಿದೆ.

ಕೆಲವು ವರ್ಷಗಳ ಹಿಂದಷ್ಟೇ ಅಭಿವೃದ್ಧಿಯಾಗಿರುವ ಕೆರೆಗಳಲ್ಲಿಯೇ ಮತ್ತಷ್ಟು ಕಾಮಗಾರಿಗಳಿಗೆ ಕೋಟ್ಯಂತರ ವೆಚ್ಚ ಮಾಡಲಾಗುತ್ತಿದೆ. ಒಂದು ಕೆರೆ ಅಭಿವೃದ್ಧಿಯಾದರೆ 3ರಿಂದ 5 ವರ್ಷ ನಿರ್ವಹಣೆ ವೆಚ್ಚವೂ ಆ ಯೋಜನೆಯಲ್ಲಿ ಸೇರಿರುತ್ತದೆ. ಇಷ್ಟಾದರೂ ಅಂತಹ ಕೆರೆಗಳಿಗೆ ಅಭಿವೃದ್ಧಿ ಅಥವಾ ಬಾಕಿ ಕಾಮಗಾರಿ ಎಂದು ವೆಚ್ಚ ಮಾಡುತ್ತಿರುವುದು ಅಸಮಾಧಾನ ತರಿಸಿದೆ.

ಬಿಬಿಎಂಪಿ ಪ್ರಕಾರ, ನಗರದಲ್ಲಿ 210 ಕೆರೆಗಳಿವೆ. ಹಿಂದೆ 79 ಕೆರೆಗಳು ಹಾಗೂ 39 ಕೆರೆಗಳು ಸಮಗ್ರ ಅಭಿವೃದ್ಧಿ ಕಂಡಿವೆ. ಇನ್ನು ಇದೀಗ 21 ಕೆರೆಗಳು ನಗರೋತ್ಥಾನ ಅನುದಾನದಿಂದ ಪುನಶ್ಚೇತನವಾಗಲಿವೆ. ಅಂದರೆ ಒಟ್ಟಾರೆ, 139 ಕೆರೆಗಳು ಅಭಿವೃದ್ಧಿಯಾದಂತೆ. ಈ ಸಂಖ್ಯೆಗೆ ಸಂಪೂರ್ಣ ಒತ್ತುವರಿಯಾಗಿದ್ದು, ಬಳಕೆಗೆ ಯೋಗ್ಯವಲ್ಲದ 19 ಕೆರೆಗಳೂ ಸೇರಿಕೊಳ್ಳುತ್ತವೆ.

‘ಬಿಬಿಎಂಪಿ ಕೇಂದ್ರ ಭಾಗಕ್ಕಿಂತ ಹೊರ ಭಾಗದಲ್ಲಿರುವ ಕೆರೆಗಳಲ್ಲೇ ‘ಅಮೃತ್ ನಗರೋತ್ಥಾನ ಯೋಜನೆ’ ಅನುದಾನವನ್ನು ವೆಚ್ಚಮಾಡಲು ಯೋಜನೆ ಮಾಡಲಾಗಿದೆ. ಅಭಿವೃದ್ಧಿಯನ್ನೇ ಕಾಣದ ಇನ್ನೂ 81 ಕೆರೆಗಳು ಬಿಬಿಎಂಪಿ ವ್ಯಾಪ್ತಿಯಲ್ಲೇ ಇವೆ. ಆದರೆ ಅವುಗಳನ್ನು ಕನಿಷ್ಠ ನೀರು ಸಂಗ್ರಹಕ್ಕೆ ಯೋಗ್ಯವನ್ನಾಗಿ ಮಾಡದೆ, ಅಭಿವೃದ್ಧಿ ಮಾಡಿರುವ ಕೆರೆಗಳಿಗೇ ಕೋಟ್ಯಂತರ ವೆಚ್ಚ ಮಾಡುತ್ತಿರುವುದು ಸರಿಯಲ್ಲ’ ಎಂದು ಫ್ರೆಂಡ್ಸ್ ಆಫ್ ಲೇಕ್ಸ್‌ನ ರಾಮ್‌ಪ್ರಸಾದ್ ದೂರಿದರು.

‘₹80 ಕೋಟಿ ವೆಚ್ಚದಲ್ಲಿ ಮಲ್ಲತಹಳ್ಳಿ ಕೆರೆ ಅಭಿವೃದ್ಧಿ ಮಾಡಿ ಅಲ್ಲಿ ರೈಲು ಬಿಡುವ ಯೋಜನೆಗೆ ಈಗಾಗಲೇ ಮುಖ್ಯಮಂತ್ರಿಯವರೂ ಚಾಲನೆ ನೀಡಿದ್ದಾರೆ. ಅದೇ ಕೆರೆಗೆ ಮತ್ತೆ ₹15 ಕೋಟಿಯನ್ನು ಈ ಅನುದಾನದಲ್ಲೂ ನೀಡಲಾಗುತ್ತಿದೆ. ಇದರ ಅಗತ್ಯವೇ ಇಲ್ಲ. ನಗರದಲ್ಲಿ ಹಲವು ಕೆರೆಗಳು ಸಾಯುವ ಸ್ಥಿತಿಯಲ್ಲಿವೆ. ಅವುಗಳನ್ನು ಉಳಿಸಿಕೊಳ್ಳುವತ್ತ ನಾವು ಯೋಜಿಸಬೇಕಿದೆ’ ಎಂದರು.

‘ಕೆರೆಗಳ ಕಾಮಗಾರಿಗಳಲ್ಲಿ ಬಹುತೇಕ ಎಲ್ಲದರಲ್ಲೂ ಪಾದಚಾರಿ ಮಾರ್ಗ ಅಭಿವೃದ್ಧಿ ಎಂದೇ ಇದೆ. ಅಂದರೆ ಈ ಮೊದಲಿನ ಅಭಿವೃದ್ಧಿ ಕಾಮಗಾರಿಗಳಲ್ಲಿ ಇದ್ದ ಕಾಮಗಾರಿಯೇ ಇದಾಗಿದೆ. ಈಗ ಅದೇ ಮಾರ್ಗಕ್ಕೆ ವೈಜ್ಞಾನಿಕವಾಗಿ ಅಗತ್ಯವಿಲ್ಲದ ಕಲ್ಲುಗಳ ಹಾಸನ್ನು ಹಾಕಲಾಗುತ್ತಿದೆ. ಇದೆಲ್ಲ ಅಗತ್ಯವಿಲ್ಲ’ ಎಂಬುದು ಪರಿಸರಕ್ಕಾಗಿ ಕೆಲಸ ಮಾಡುತ್ತಿರುವ ಪವಿತ್ರಾ ಅವರ ಮಾತು.

ಕ್ಷೇತ್ರವಾರು ಹಂಚಿಕೆ: ಕೆರೆಗಳ ಅಭಿವೃದ್ಧಿಗಾಗಿ ಸರ್ಕಾರ ಅನುಮೋದಿಸಿರುವ ಹಣವನ್ನು ವಿಧಾನಸಭೆ ಕ್ಷೇತ್ರವನ್ನು ಹಂಚಿಕೆ ಮಾಡಿಕೊಂಡಿರುವುದು ಕೂಡ ಆಕ್ರೋಶಕ್ಕೆ ಕಾರಣವಾಗಿದೆ. ಬೆಂಗಳೂರು ದಕ್ಷಿಣ, ಕೆ.ಆರ್. ಪುರ, ಯಶವಂತರಪುರ, ಬೊಮ್ಮನಹಳ್ಳಿ, ಮಹದೇವಪುರ ವಿಧಾನಸಭೆ ಕ್ಷೇತ್ರದ ಕೆರೆಗಳ ಕಾಮಗಾರಿಗೆ ಎಂದು ₹60 ಲಕ್ಷದಿಂದ ₹1 ಕೋಟಿವರೆಗೆ ಹಂಚಿಕೆಯಾಗಿದೆ. ಯಾವ ಕೆರೆಗಳು, ಯಾವ ಕಾಮಗಾರಿ ಎಂಬುದನ್ನು ತೋರಿಸಿಲ್ಲ. ಅದೂ ಅಲ್ಲದೆ, ನಗರೋತ್ಥಾನ ಅನುದಾನವನ್ನು ಬಿಜೆಪಿ ಶಾಸಕರಿರುವ ಕ್ಷೇತ್ರಕ್ಕೆ ಮಾತ್ರ ಈ ರೀತಿ ಹಂಚಿಕೆ ಮಾಡಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ರಾಜರಾಜೇಶ್ವರಿ ನಗರದ ರಾಜರಾಜೇಶ್ವರಿ ದೇವಸ್ಥಾನದ ಹಿಂಭಾಗದಲ್ಲಿ ಕೊಳಕು ತುಂಬಿರುವ ಕೆಂಚೇನಹಳ್ಳಿ– ಪಟ್ಟಣಗೆರೆ ಕೆರೆ

ಹಲವು ರೀತಿಯ ಒತ್ತುವರಿಯ ನಡುವಿರುವ ಕಾಚರಕನಹಳ್ಳಿ ಕೆರೆ

ವಿಧಾನಸಭೆ ಕ್ಷೇತ್ರವಾರು ಹಣ
(ಕೆರೆಗಳಲ್ಲಿ ಫೆನ್ಸಿಂಗ್, ಇತರೆ ಕೆಲಸಕ್ಕೆ)

ಯಲಹಂಕ ವಲಯ	₹2.5 ಕೋಟಿ
ಕೆ.ಆರ್.ಪುರ	₹1 ಕೋಟಿ
ಮಹದೇವಪುರ	₹1 ಕೋಟಿ
ಯಶವಂತಪುರ	₹1 ಕೋಟಿ
ಬೆಂಗಳೂರು ದಕ್ಷಿಣ	₹1 ಕೋಟಿ
ಬೊಮ್ಮನಹಳ್ಳಿ	₹60 ಲಕ್ಷ

ಹೊಸದಾಗಿ ಅಭಿವೃದ್ಧಿಯಾಗಲಿರುವ ಕೆರೆಗಳು (₹ಕೋಟಿಗಳಲ್ಲಿ)

ವಲಯ	ವಿಧಾನಸಭೆ ಕ್ಷೇತ್ರ	ಕೆರೆ	ವೆಚ್ಚ
ಬೊಮ್ಮನಹಳ್ಳಿ	ಬೊಮ್ಮನಹಳ್ಳಿ	ಗಾರ್ವೆಬಾವಿಪಾಳ್ಯ ಕೆರೆ	6
	ಬೆಂಗಳೂರು ದಕ್ಷಿಣ	ಅಗ್ರಹಾರ ಕೆರೆ	6
	ಬೆಂಗಳೂರು ದಕ್ಷಿಣ	ಕೋಣನಕುಂಟೆ ಕೆರೆ	6
ಆರ್.ಆರ್. ನಗರ	ರಾಜರಾಜೇಶ್ವರಿನಗರ	ಕೆಂಚೇನಹಳ್ಳಿ ಕೆರೆ	3
	ಯಶವಂತಪುರ	ಗಾಂಧಿನಗರ ಹೊಸಕೆರೆ	8.8
	ಯಶವಂತಪುರ	ಲಿಂಗಧೀರನಹಳ್ಳಿ ಕೆರೆ	2
ಪೂರ್ವ	ಸರ್ವಜ್ಞನಗರ	ಕಾಚರಕನಹಳ್ಳಿ ಕೆರೆ	2.5
ಮಹದೇವಪುರ	ಮಹದೇಪುರ	ಗುಂಜೂರು ಕೆರೆ	11
	ಮಹದೇವಪುರ	ಜುನ್ನಸಂದ್ರ ಕೆರೆ	4
	ಮಹದೇವಪುರ	ದೊಡ್ಡನೆಕ್ಕುಂದಿ ಕೆರೆ	15
ದಾಸರಹಳ್ಳಿ	ದಾಸರಹಳ್ಳಿ	ಲಕ್ಷ್ಮಿಪುರ ಕೆರೆ	4.5
	ದಾಸರಹಳ್ಳಿ	ಕರಿಹೋಬನಹಳ್ಳಿ ಕೆರೆ	4.5
	ದಾಸರಹಳ್ಳಿ	ದೊಡ್ಡಬಿದರನಕಲ್ಲು ಕೆರೆ	6.5
	ದಾಸರಹಳ್ಳಿ	ಅಬ್ಬಿಗೆರೆ ಕೆರೆ	4.5
	ದಾಸರಹಳ್ಳಿ	ಶಿವನಪುರ ಕೆರೆ	2
	ದಾಸರಹಳ್ಳಿ	ನೆಲಗದರನಹಳ್ಳಿ ಕೆರೆ	4
ಯಲಹಂಕ	ಬ್ಯಾಟರಾಯನಪುರ	ವೆಂಕಟೇಶಪುರ ಕೆರೆ	2.5
	ಬ್ಯಾಟರಾಯನಪುರ	ಸಿಂಗಾಪುರ ಕೆರೆ	5
	ಯಲಹಂಕ	ಶಿವನಹಳ್ಳಿ ಕೆರೆ	3
	ಯಲಹಂಕ	ವಡೇರಹಳ್ಳಿ ಕೆರೆ	3
	ಯಲಹಂಕ	ಚಿಕ್ಕಬೆಟ್ಟಹಳ್ಳಿ ಕೆರೆ	1.5

ಎರಡು ತಿಂಗಳಲ್ಲಿ ಕಾಮಗಾರಿ ಆರಂಭ

ಅಮೃತ್ ನಗರೋತ್ಥಾನ ಅನುದಾನದಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ 68 ಕೆರೆ ಕಾಮಗಾರಿಗಳನ್ನು ಕೈಗೊಂಡಿದ್ದೇವೆ. ಇದರಲ್ಲಿ 21 ಕೆರೆಗಳನ್ನು ಹೊಸದಾಗಿ ಅಭಿವೃದ್ಧಿ ಮಾಡುತ್ತಿದ್ದೇವೆ. ಕೆರೆಗಳಿಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಹಾಗೂ ಅಂದಾಜು ವೆಚ್ಚ ತಯಾರಿಸಲಾಗುತ್ತಿದೆ. ಕೆಲವು ಕೆರೆಗಳ ಡಿಪಿಆರ್ ಸಿದ್ಧವಾಗಿದೆ. ಅದಕ್ಕೆ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಇಲಾಖೆ (ಕೆಎಲ್‌ಸಿಡಿಎ) ಅನುಮೋದನೆ ನೀಡಿದೆ. ಇನ್ನುಳಿದ ಕೆರೆಗಳ ಡಿಪಿಆರ್ ಅನ್ನು ನಾಗರಿಕರ ಸಲಹೆ ಪಡೆದು ಸಿದ್ಧಪಡಿಸುತ್ತೇವೆ. ನಂತರ ಟೆಂಡರ್ ಪ್ರಕ್ರಿಯೆಯನ್ನು ಒಂದು ತಿಂಗಳಲ್ಲಿ ಮುಗಿಸಿ, ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಮೋಹನ್‌ಕೃಷ್ಣ ತಿಳಿಸಿದರು.

ಸೌಂದರ್ಯೀಕರಣಕ್ಕೆ ದುಂದುವೆಚ್ಚ



ರಾಮ್‌ಪ್ರಸಾದ್

ಬೆಂಗಳೂರಿನಲ್ಲಿ ಕೆರೆಗಳ ಅಭಿವೃದ್ಧಿಗೆ ಹಣ ಇಲ್ಲ ಎಂಬ ಮಾತಿತ್ತು. ಇದೀಗ ಹೆಚ್ಚು ಹಣ ಬರುತ್ತಿದೆ. ಆದರೆ ಬೇಕಾದ ಕಾಮಗಾರಿಗೆ ಹಣ ವ್ಯಯ ಮಾಡದೆ, ಅಭಿವೃದ್ಧಿ ಕಂಡಿರುವ ಕೆರೆಗಳ ಸೌಂದರ್ಯ ಕಾಮಗಾರಿಗಳಿಗೇ ವೆಚ್ಚ ಮಾಡಲಾಗುತ್ತಿದೆ ಎಂದು ಪರಿಸರ ಪ್ರೇಮಿಗಳು ದೂರುತ್ತಿದ್ದಾರೆ.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿಯ ಕುರುಹನ್ನೇ ಕಾಣದಿರುವ ಕೆರೆಗಳಿವೆ. ಈಗ ಇವರು ಹೇಳುತ್ತಿರುವ 21 ಹೊಸ ಕೆರೆಗಳ ಅಭಿವೃದ್ಧಿ ಹೊರತಾಗಿಯೂ ಪುನಶ್ಚೇತನ ಕಾಣಬೇಕಿರುವ ಕೆರೆಗಳ ಸಂಖ್ಯೆ ಸಾಕಷ್ಟಿದೆ. ಕೆರೆಗಳ ಸೌಂದರ್ಯೀಕರಣ ಕಾಮಗಾರಿ ಮಾಡಲಿ, ಬೇಡ ಅನ್ನುವುದಿಲ್ಲ. ಆದರೆ, ಕೆರೆಗೆ ಬೇಕಿರುವ ಕನಿಷ್ಠ ಕಾಮಗಾರಿಗಳು ಇವರೇ ಗುರುತಿಸಿರುವ 210 ಕೆರೆಗಳಲ್ಲೂ ಆದ ಮೇಲೆ ಅಲಂಕಾರ ಸಾಮಗ್ರಿಗಳನ್ನು ತಂದಿಡಲಿ’ ಎನ್ನುತ್ತಾರೆ ಫ್ರೆಂಡ್ಸ್ ಆಫ್ ಲೇಕ್ಸ್‌ನ ರಾಮ್‌ಪ್ರಸಾದ್.

‘ಕೆರೆಗಳು ಮಳೆ ನೀರನ್ನು ಹಿಡಿದಿಟ್ಟುಕೊಳ್ಳಬೇಕು. ನೀರನ್ನು ಇಂಗಿಸಿಕೊಳ್ಳಬೇಕು. ಒಳಚರಂಡಿ ನೀರು ಹರಿಯಬಾರದು. ಬೇಲಿ ಕಾಣಬೇಕು. ಹೂಳು ಹೊರಹೋಗಬೇಕು. ಏರಿ ಭದ್ರಪಡಿಸಲಿ. ಇಷ್ಟು ಕೆಲಸವನ್ನು ಎಲ್ಲ ಕೆರೆಗಳಲ್ಲೂ ಮಾಡಿದ ಮೇಲೆ ನಂತರದ ಕಾಮಗಾರಿ ಮಾಡಲಿ’ ಎಂದರು.

ಕೆರೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು

ಅಕ್ಷಯನಗರ ಕೆರೆ, ದೊರೆಕೆರೆ, ಬಸಾಪುರ ಕೆರೆ–2, ಯಲಚೇನಹಳ್ಳಿ ಕೆರೆ, ಗೊಟ್ಟಿಗೆರೆ, ದುಬಾಸಿಪಾಳ್ಯ ಕೆರೆ, ಭಟ್ಟರಹಳ್ಳಿ ಕೆರೆ	ಫೆನ್ಸಿಂಗ್, ಪಾದಚಾರಿ ಮಾರ್ಗ ದುರಸ್ತಿ.
ಬತ್ತಳ್ಳಿ ಕೆರೆ, ಸ್ವರ್ಣಕುಂಟೆ ಗುಡ್ಡೆ ಕೆರೆ, ಮೇಸ್ತ್ರಿಪಾಳ್ಯ ಕೆರೆ, ಪಟ್ಟಂದೂರು ಅಗ್ರಹಾರ ಕೆರೆ–1 ಮತ್ತು 2	ಫೆನ್ಸಿಂಗ್.
ಪನತ್ತೂರು ಕೆರೆ, ಭೋಗನಹಳ್ಳಿ ಕೆರೆ, ವಾರಣಾಸಿ ಕೆರೆ, ಗುಂಜೂರು ಪಾಳ್ಯ ಕೆರೆ, ಗಣೇಶಶೆಟ್ಟಿ ಕೆರೆ, ರಾಚೇನಹಳ್ಳಿ ಕೆರೆ, ಸ್ಯಾಂಕಿ ಕೆರೆ	ಬಾಕಿ ಕಾಮಗಾರಿಗಳು.
ಹೂಡಿ ಗಿಡ್ಡನಕೆರೆ, ಹೊರಮಾವು ಕೆರೆ, ಪರಪ್ಪನ ಅಗ್ರಹಾರ ಕೆರೆ	ಅಭಿವೃದ್ಧಿ ಕಾಮಗಾರಿಗಳು.
ಬೇಗೂರು ಕೆರೆ	ಫೆನ್ಸಿಂಗ್, ಗೇಟ್ ಅಳವಡಿಕೆ.
ಸಾರಕ್ಕಿ ಕೆರೆ	ಫೆನ್ಸಿಂಗ್ ಮತ್ತು ಇತರೆ ಕಾಮಗಾರಿ.
ಮಲ್ಲತ್ತಹಳ್ಳಿ ಕೆರೆ	ಕಾಂಪೌಂಡ್ ನಿರ್ಮಾಣ, ತ್ಯಾಜ್ಯ ಘಟಕ, ತಿರುವ ಚರಂಡಿ ನಿರ್ಮಾಣ.
ಹಂದ್ರಾಹಳ್ಳಿ ಕೆರೆ	ತುರ್ತು ಕಾಮಗಾರಿ.
ಉಲ್ಲಾಳು ಕೆರೆ	ಏರಿ ಸದೃಢ, ಹೂಳು ತಡೆಯುವ ಸೌಲಭ್ಯ.
ಹಲಸೂರು ಕೆರೆ	ತಡೆಗೋಡೆ ನಿರ್ಮಾಣ.
ಕಗ್ಗದಾಸಪುರ ಕೆರೆ	ಪಾದಚಾರಿ ಮಾರ್ಗ.
ಚಿನ್ನಪ್ಪನಹಳ್ಳಿ ಕೆರೆ	ಫೆನ್ಸಿಂಗ್, ತ್ಯಾಜ್ಯ ಸೌಲಭ್ಯ ದುರಸ್ತಿ.
ಸೂಲೆಕೆರೆ	ಹೂಳು ತೆಗೆಯುವುದು, ಫೆನ್ಸಿಂಗ್, ಪಾದಚಾರಿ ಮಾರ್ಗ ನಿರ್ಮಾಣ.
ಗುಬ್ಬಲಾಳು ಕೆರೆ	ಫೆನ್ಸಿಂಗ್, ಭದ್ರತಾ ಕೊಠಡಿ.
ಕಮ್ಮನಹಳ್ಳಿ ಮೀನಾಕ್ಷಿ ಕೆರೆ	ಒಳ–ಹೊರ ಹರಿವು ಅಭಿವೃದ್ಧಿ, ಫೆನ್ಸಿಂಗ್, ಪಾದಚಾರಿ ಮಾರ್ಗ ಅಭಿವೃದ್ಧಿ.
ದೊಡ್ಡಕಲ್ಲಸಂದ್ರ ಕೆರೆ	ಫೆನ್ಸಿಂಗ್, ಭದ್ರತಾ ಕೊಠಡಿ, ಶೌಚಾಲಯ.
ಕೋನಪ್ಪನ ಅಗ್ರಹಾರ ಕೆರೆ	ಫೆನ್ಸಿಂಗ್, ಬಾಕಿ ಕಾಮಗಾರಿಗಳು.
ಸುಬ್ರಮಣ್ಯಪುರ ಕೆರೆ	ಪಾದಚಾರಿ ಮಾರ್ಗ ಅಭಿವೃದ್ಧಿ, ಭದ್ರತಾ ಕೊಠಡಿ.
ಬಿ. ನಾರಾಯಣಪುರ ಕೆರೆ	ತಿರುವು ಚರಂಡಿ, ತ್ಯಾಜ್ಯ ಸೌಲಭ್ಯ, ಒಳ ಅರಿವು ಅಭಿವೃದ್ಧಿ, ಫೆನ್ಸಿಂಗ್.
ಕೌದೇನಹಳ್ಳಿ ಕೆರೆ	ಏರಿ ಸೋರಿಕೆ ದುರಸ್ತಿ.
ಕಲ್ಕೆರೆ	ತಿರುವು ಚರಂಡಿ, ಪಾದಚಾರಿ ಮಾರ್ಗ.
ಪಾಲನಹಳ್ಳಿ, ತಿರುಮೇನಹಳ್ಳಿ ಕೆರೆ	ಏರಿ ಅಭಿವೃದ್ಧಿ ಕಾಮಗಾರಿ.
ನರಸೀಪುರ ಕೆರೆ 20 ಮತ್ತು 26 ಕೆರೆ	ಹೂಳು ತೆರವು.

ಬಾಹ್ಯಾಕಾಶದಲ್ಲಿನ ತ್ಯಾಜ್ಯ ನಿರ್ವಹಣೆ ಕೇಂದ್ರ ಆರಂಭ

ಉಪಗ್ರಹಗಳ ರಕ್ಷಣೆಗೆ ಇಸ್ರೊ ಹೆಜ್ಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಹ್ಯಾಕಾಶದಲ್ಲಿನ ತ್ಯಾಜ್ಯಗಳನ್ನು ಗುರುತಿಸಿ, ನಿರ್ವಹಿಸುವ ಮೂಲಕ ಉಪಗ್ರಹಗಳನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಇಸ್ರೊ ಮಹತ್ವದ ಮೈಲಿಗಲ್ಲು ಸಾಧಿಸಿದೆ.

ಸುರಕ್ಷಿತ ಮತ್ತು ಸುಸ್ಥಿರ ಬಾಹ್ಯಾಕಾಶ ಕಾರ್ಯಾಚರಣೆ ಹಾಗೂ ನಿರ್ವಹಣೆಯ ಕೇಂದ್ರವನ್ನು (ಐಎಸ್‌4ಒಎಂ) ಇಸ್ರೊ ಆರಂಭಿಸಿದ್ದು, ಬಾಹ್ಯಾಕಾಶದಲ್ಲಿನ ಆಸ್ತಿಗಳನ್ನು ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

ಉಪಗ್ರಹಗಳ ಸುರಕ್ಷತೆ ಕಾಪಾಡುವುದು ಮತ್ತು ಹೊಸ ಉಡಾವಣೆಯ ಸಂದರ್ಭದಲ್ಲಿ ಯಾವುದೇ ರೀತಿ ಅಡಚಣೆಗಳಾಗದಂತೆ ಕ್ರಮ ಕೈಗೊಳ್ಳುವುದು ಈ ಯೋಜನೆಯ ಉದ್ದೇಶವಾಗಿದೆ.

ಪೀಣ್ಯದಲ್ಲಿರುವ ಇಸ್ರೊದ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ ಕೇಂದ್ರದ (ಇಸ್ಟ್ರ್ಯಾಕ್) ಆವರಣದಲ್ಲಿ ಆರಂಭಿಸಿರುವ ಐಎಸ್‌4ಒಎಂ ಕೇಂದ್ರವನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬಾಹ್ಯಾಕಾಶ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಸೋಮವಾರ ಉದ್ಘಾಟಿಸಿದರು. ಬಾಹ್ಯಾಕಾಶ ಇಲಾಖೆ ಕಾರ್ಯದರ್ಶಿ ಮತ್ತು ಇಸ್ರೊ ಅಧ್ಯಕ್ಷ ಎಸ್. ಸೋಮನಾಥನ್ ಇದ್ದರು.

ಸದ್ಯ ಕ್ರಿಯಾಶೀಲವಾಗಿರುವ ಉಪಗ್ರಹಗಳು ಇತರ ಬಾಹ್ಯಾಕಾಶ ವಸ್ತುಗಳ ಜತೆ ಡಿಕ್ಕಿಯಾಗುವ ಸಾಧ್ಯತೆಗಳನ್ನು ಗುರುತಿಸಿ, ತಪ್ಪಿಸುವ ಯೋಜನೆ ಇದಾಗಿದೆ. ಈ ಮೂಲಕ ದೇಶದ ಬಾಹ್ಯಾಕಾಶ ಆಸ್ತಿಗಳನ್ನು ಕಾಪಾಡಿಕೊಳ್ಳುವುದಾಗಿದೆ.

ಸದ್ಯ ಬಾಹ್ಯಾಕಾಶದಲ್ಲಿ ಲಕ್ಷಾಂತರ ತ್ಯಾಜ್ಯಗಳಿವೆ. ಉಡಾವಣೆಗೆ ಬಳಸಿದ ವಸ್ತುಗಳು, ನಿಷ್ಕ್ರಿಯ ಬಾಹ್ಯಾಕಾಶ ನೌಕೆಗಳು, ಕೃತಕ ಉಪಗ್ರಹಗಳು, ರಾಕೆಟ್‌ಗಳ ಅವಶೇಷಗಳು ಸೇರಿ ಅಸಂಖ್ಯಾತ ತ್ಯಾಜ್ಯಗಳು ಕಕ್ಷೆಯಲ್ಲಿಯೇ ಉಳಿದಿವೆ. ಈ ಎಲ್ಲ ಅವಶೇಷಗಳು ಚೂರು ಚೂರಾಗಿವೆ. ಇವುಗಳ ಪ್ರಮಾಣ ವೇಗವಾಗಿ ವೃದ್ಧಿಯಾಗುತ್ತಿದೆ. ಈ ತ್ಯಾಜ್ಯಗಳು ಸಂಘರ್ಷಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗುತ್ತಿವೆ. ಇದರಿಂದ, ಬಾಹ್ಯಾಕಾಶದ ಸುರಕ್ಷಿತ ಬಳಕೆಗೆ ಸಮಸ್ಯೆಯಾಗುತ್ತಿದೆ.

‘ತ್ಯಾಜ್ಯಗಳ ನಿರ್ವಹಣೆಗೆ ಸಂಬಂಧಿಸಿದಂತೆ ವಿವಿಧ ರಾಷ್ಟ್ರಗಳು ಪರಸ್ಪರ ನೆರವು ನೀಡುತ್ತಿವೆ. ಭಾರತವು ಈ ವಿಷಯದಲ್ಲಿ ಹಲವು ರಾಷ್ಟ್ರಗಳಿಗೆ ಮನವರಿಕೆ ಮಾಡಿಕೊಟ್ಟಿದೆ. 1947ರಲ್ಲಿ ಕೇವಲ ಎರಡು ತ್ಯಾಜ್ಯ ವಸ್ತುಗಳಿದ್ದವು. ಈಗ 25 ಸಾವಿರಕ್ಕೂ ಹೆಚ್ಚು ವಸ್ತುಗಳಿವೆ. ತ್ಯಾಜ್ಯಗಳ ಮೇಲೆ ನಿಗಾವಹಿಸುವ ಜತೆಗೆ ಅವುಗಳನ್ನು ನಿರ್ಮೂಲನೆ ಮಾಡುವ ಬಗ್ಗೆ ಗಮನಹರಿಸಲಾಗುತ್ತಿದೆ’ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ತಿಳಿಸಿದರು.

‘ಐಎಸ್‌4ಒಎಂ ಭಾಗವಾಗಿ ವಿಶೇಷ ಪ್ರಯೋಗಾಲಯಗಳನ್ನು ಸಹ ಸ್ಥಾಪಿಸಲಾಗಿದೆ. ಈ ಪ್ರಯೋಗಾಲಯದಲ್ಲಿ ನಿರಂತರವಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ನಡೆಯಲಿವೆ’ ಎಂದು ವಿವರಿಸಿದರು.

ಬೆಂಗಳೂರಿನ ಪೀಣ್ಯದ ಇಸ್ರೊ ಆವರಣದಲ್ಲಿ ಸುರಕ್ಷಿತ ಮತ್ತು ಸುಸ್ಥಿರ ಬಾಹ್ಯಾಕಾಶ ಕಾರ್ಯಾಚರಣೆ ಹಾಗೂ ನಿರ್ವಹಣೆಯ ಕೇಂದ್ರದ(ಐಎಸ್‌4ಒಎಂ) ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಮತ್ತು ಇಸ್ರೊ ಮಾಜಿ ಅಧ್ಯಕ್ಷ ಕೆ. ರಾಧಾಕೃಷ್ಣನ್ ಪಾಲ್ಗೊಂಡಿದ್ದರು

ಕಾರ್ಯಾಚರಣೆ ಹೇಗೆ?

ಲೇಸರ್ ಮತ್ತು ಎಲೆಕ್ಟ್ರೊಮ್ಯಾಗ್ನೆಟ್ ಸೇರಿದಂತೆ ವಿವಿಧ ತಂತ್ರಜ್ಞಾನಗಳ ಮೂಲಕ ಬಾಹ್ಯಾಕಾಶ ತ್ಯಾಜ್ಯವನ್ನು ವಿಲೇವಾರಿ ಮಾಡುವ ಪ್ರಯತ್ನ ಮಾಡಲಾಗುವುದು. ಇದಕ್ಕಾಗಿ ನಿಷ್ಕ್ರಿಯಗೊಂಡ ಉಪಗ್ರಹಗಳ ಚಲನವಲನಗಳ ಮೇಲೆ ನಿಗಾ ಇಡಲಾಗುತ್ತದೆ ಎಂದು ಇಸ್ರೊ ಅಧ್ಯಕ್ಷರು ತಿಳಿಸಿದ್ದಾರೆ.

ತ್ಯಾಜ್ಯಗಳನ್ನು ಗುರುತಿಸುವುದು, ನಿಗಾವಹಿಸುವುದು ಮತ್ತು ಅಪಾಯದ ವಿಶ್ಲೇಷಣೆ ನಡೆಸುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದ್ದಾರೆ.

‘ಇಸ್ರೊ ಜತೆ 60 ನವೋದ್ಯಮಗಳ ನೋಂದಣಿ’

ಬೆಂಗಳೂರು: ‘ಬಾಹ್ಯಾಕಾಶ ಕ್ಷೇತ್ರವನ್ನು ಖಾಸಗಿ ವಲಯಕ್ಕೂ ಮುಕ್ತಗೊಳಿಸಿದ ಬಳಿಕ ಸುಮಾರು 60 ನವೋದ್ಯಮಗಳು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಜತೆ ಒಪ್ಪಂದ ನೋಂದಾಯಿಸಿಕೊಂಡಿವೆ’ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದರು.

‘ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಬಾಹ್ಯಾಕಾಶ ಕ್ಷೇತ್ರದಲ್ಲಿ ಖಾಸಗಿ ವಲಯವನ್ನು ಸಹ ತೊಡಗಿಸಿಕೊಳ್ಳಲಾಯಿತು. ಇಸ್ರೊದ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಮೂಲಕ ಖಾಸಗಿ ಕಂಪನಿಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಹಲವು ಕಂಪನಿಗಳು ಆಸಕ್ತಿ ವಹಿಸಿವೆ. ಕೆಲವು ಕಂಪನಿಗಳು ಬಾಹ್ಯಾಕಾಶದಲ್ಲಿ ತ್ಯಾಜ್ಯಗಳ ನಿರ್ವಹಣೆಯಲ್ಲೂ ತೊಡಗಿವೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

‘ದಿಗಂತರ ನವೋದ್ಯಮವು ಬಾಹ್ಯಾಕಾಶ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿದೆ. ಜತೆಗೆ, ವಿವಿಧ ಕಂಪನಿಗಳು ನ್ಯಾನೊ ಉಪಗ್ರಹಗಳು, ಉಡಾವಣೆ ವಾಹಕಗಳು, ಸಂಶೋಧನೆ ವಲಯ ಕ್ಷೇತ್ರಗಳಲ್ಲೂ ನವೋದ್ಯಮಗಳು ತೊಡಗಿಸಿಕೊಂಡಿವೆ’ ಎಂದು ವಿವರಿಸಿದರು.

‘ಉಪಗ್ರಹಗಳ ಉಡಾವಣೆಯಿಂದಾಗಿ ಬಾಹ್ಯಾಕಾಶದಲ್ಲಿ ಈಗ ದಟ್ಟಣೆ ಹೆಚ್ಚಾಗುತ್ತಿವೆ. ನಮಗೆ ಸುಸ್ಥಿರ ಬಾಹ್ಯಾಕಾಶ ಕ್ಷೇತ್ರ ಅಗತ್ಯವಿದೆ. ಹೀಗಾಗಿ, ಬಾಹ್ಯಾಕಾಶದಲ್ಲಿ ತ್ಯಾಜ್ಯ ಮತ್ತು ದಟ್ಟಣೆಯಾಗುವುದನ್ನು ತಪ್ಪಿಸಬೇಕಾಗಿದೆ. ತ್ಯಾಜ್ಯಗಳಿಂದ ಉಪಗ್ರಹಗಳಿಗೆ ಹಾನಿಯಾಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಆರಂಭಿಸಿರುವ ಐಎಸ್‌4ಒಎಂ ಮಹತ್ವದ ಹೆಜ್ಜೆಯಾಗಿದೆ’ ಎಂದರು. ‘ಬಾಹ್ಯಾಕಾಶ ಕ್ಷೇತ್ರದಲ್ಲಿನ ಸಾಧನೆಯಿಂದಾಗಿ ಭಾರತ 2047ರಲ್ಲಿ ಅತ್ಯಮೂಲ್ಯ ಸಾಧನೆ ಮಾಡಿ ಜಗತ್ತಿನಲ್ಲೇ ಮುಂಚೂಣಿಯಲ್ಲಿರಲಿದೆ’ ಎಂದು ಆಶಯ ವ್ಯಕ್ತಪಡಿಸಿದರು.

‘ಮಹಿಳಾ ರೋಬೊ’: ‘ಗಗನಯಾನ ಯೋಜನೆಯಲ್ಲಿ ಮಹಿಳಾ ರೋಬೊ ಕಳುಹಿಸಲು ನಿರ್ಧರಿಸಲಾಗಿದೆ’ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದರು.

‘ಕೋವಿಡ್ ಕಾರಣಕ್ಕೆ ಗಗನಯಾನ ಯೋಜನೆ ವಿಳಂಬವಾಗಿದ್ದು, ಮುಂದಿನ ವರ್ಷ ಖಚಿತವಾಗಿ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ಐಎಸ್‌4ಒಎಂ’ ಹೀಗೆ ಕಾರ್ಯನಿರ್ವಹಿಸಲಿದೆ...

- ಕ್ಷುದ್ರ ಗ್ರಹಗಳು ಮತ್ತು ಧೂಮಕೇತುಗಳನ್ನು ಗುರುತಿಸಿ ನಿರಂತರವಾಗಿ ನಿಗಾವಹಿಸುವುದು ಮತ್ತು ಅವುಗಳ ಗುಣಲಕ್ಷಣಗಳ ಮೂಲಕ ಅಪಾಯಗಳ ಬಗ್ಗೆ ಎಚ್ಚರವಹಿಸುವುದು.
- 2022ರ ಮೇ 6ರಂದು ಗುರುತಿಸಿದಂತೆ ಉಪಗ್ರಹಗಳು ಸೇರಿದಂತೆ ಬಾಹ್ಯಾಕಾಶಕ್ಕೆ ಸಂಬಂಧಿಸಿದ 25,505 ವಿವಿಧ ವಸ್ತುಗಳಿವೆ. ಇವುಗಳಲ್ಲಿ 5732 ಸಕ್ರಿಯ ಉಪಗ್ರಹಗಳಿವೆ.

ದೇಶದಲ್ಲಿ ವಿವಿಧೆಡೆ ಬಿದ್ದ ಬಾಹ್ಯಾಕಾಶ ತ್ಯಾಜ್ಯಗಳು

- ಗುಜರಾತ್‌ನಲ್ಲಿ 2022ರ ಮೇ 12ರಂದು ಐದು ಲೋಹದ ಚೆಂಡುಗಳು ಬಿದ್ದಿದ್ದವು.
- ಮಹಾರಾಷ್ಟ್ರದ ಚಂದಾಪುರ ಜಿಲ್ಲೆಯ ವಿವಿಧೆಡೆ ಲೋಹದ ಉಂಗುರ ಮತ್ತು ಸಿಲಿಂಡರ್ ರೀತಿಯ ವಸ್ತುಗಳು ಬಿದ್ದಿದ್ದವು.
- ತಮಿಳುನಾಡಿನ ದಿಂಡಿಗಲ್‌ನಲ್ಲಿ 2016ರ ನವೆಂಬರ್‌ನಲ್ಲಿ ತ್ಯಾಜ್ಯಗಳು ಬಿದ್ದಿದ್ದವು.

ಜಂಕ್ಷನ್ ದಟ್ಟಣೆ: ಪರಿಹಾರಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಂಕ್ಷನ್‌ಗಳಲ್ಲಿ ವಾಹನ ಸಂಚಾರ ದಟ್ಟಣೆ ಸುಗಮಗೊಳಿಸಲು ತಾತ್ಕಾಲಿಕ ಪರಿಹಾರದ ಜೊತೆಗೆ ಶಾಶ್ವತ ಪರಿಹಾರಗಳ ಅನುಷ್ಠಾನಕ್ಕೆ ಆದ್ಯತೆ ನೀಡಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಸೂಚಿಸಿದರು.

ವಿವಿಧ ಇಲಾಖೆಗಳ ಜೊತೆ ನಡೆದ 3ನೇ ಸಮನ್ವಯ ಸಭೆಯಲ್ಲಿ ಸೋಮವಾರ ಅವರು ಮಾತನಾಡಿದರು.

ಗೊರಗುಂಟೆಪಾಳ್ಯ ಜಂಕ್ಷನ್‌ನಲ್ಲಿ ಡಾಂಬರೀಕರಣ ಪೂರ್ಣಗೊಂಡಿದ್ದು, ತಾಜ್ ವಿವಾಂತ ಪಕ್ಕದಲ್ಲಿ ಮುಕ್ತ ಎಡ ತಿರುವು ಕಾಮಗಾರಿ ತಕ್ಷಣ ಆರಂಭಿಸಬೇಕು. ಹೊರ ವರ್ತುಲ ರಸ್ತೆಗೆ 990 ಮೀ. ಸಮಾನಾಂತರ ರಸ್ತೆಗೆ ಡಾಂಬರೀಕರಣವನ್ನು ತಕ್ಷಣವೇ ಮಾಡಬೇಕು. ಜಲಮಂಡಳಿ ಶೌಚಾಲಯ ಕಾಮಗಾರಿಯನ್ನು 10 ದಿನಗಳಲ್ಲಿ ಪೂರ್ಣಗೊಳಿಸಬೇಕು. ಸೈನೇಜ್ ವಿನ್ಯಾಸವನ್ನು ಬಿಡಿಎ ವಾರದೊಳಗಾಗಿ ಅಳವಡಿಸಬೇಕು. ಪಾದಚಾರಿ ಮೇಲುಸೇತುವೆ ಟೆಂಡರ್ ಪ್ರಕ್ರಿಯೆಯನ್ನು ಕೂಡಲೇ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗೊರಗುಂಟೆಪಾಳ್ಯ ಕಡೆಯಿಂದ ಹೆಬ್ಬಾಳದ ಮಾರ್ಗದ ರೈಲ್ವೇ ಮೇಲುಸೇತುವೆ ರಚನೆಯಲ್ಲಿಯೇ ಸಮಸ್ಯೆಗಳಿವೆ. ಅದನ್ನು ಪರಿಶೀಲಿಸಿ ರೈಲ್ವೆ ಇಲಾಖೆ ವರದಿ ನೀಡಲಿದೆ. ಪಾಲಿಕೆ ಅದರ ವೆಚ್ಚವನ್ನು ನೀಡಲಿದ್ದು, ರೈಲ್ವೆ ಇಲಾಖೆಯಿಂದ ದುರಸ್ತಿ ಮಾಡಿಸಬೇಕು. ಜೊತೆಗೆ ಹೆಬ್ಬಾಳ ಕಡೆಯಿಂದ ಬರುವ ವಾಹನಗಳು ಮೇಲುಸೇತುವೆ ಕೆಳಭಾಗದಲ್ಲಿ ಯು-ಟರ್ನ್ ತೆಗೆದುಕೊಳ್ಳುವ ವ್ಯವಸ್ಥೆಗೆ ಖಾಸಗಿ ಸ್ಥಳವನ್ನು ಭೂಸ್ವಾಧೀನ ಪಡಿಸಿಕೊಳ್ಳಬೇಕಿದೆ. ಅದಕ್ಕಾಗಿ ಸುಮಾರು ₹9 ಕೋಟಿ ಅಗತ್ಯವಿದ್ದು, ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹೆಬ್ಬಾಳ ಜಂಕ್ಷನ್‌ನಲ್ಲಿ ರೈಲ್ವೆ ಕೆಳಸೇತುವೆ ಯೋಜನೆ ಕೈಗೆತ್ತಿಕೊಳ್ಳುವ ಯೋಜನೆ ಬಗ್ಗೆ ಚರ್ಚಿಸಲಾಯಿತು. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಬಿಎಂಟಿಸಿ ಬಸ್ ನಿಲ್ದಾಣದ ಪ್ರವೇಶ ಮಾರ್ಗವನ್ನು ಅಂತಿಮಗೊಳಿಸಿ, ಅದರಂತೆ ಬಸ್ ಬರಲು ಅನುಮತಿ ನೀಡಬೇಕು. ಜಯದೇವ ಜಂಕ್ಷನ್ ಕೆಳಸೇತುವೆ ಕಾಮಗಾರಿಯನ್ನು ಜುಲೈ 15ರೊಳಗೆ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು ಎಂದು ಅಧಿಕಾರಿಗಳಿಗೆ ರಾಕೇಶ್ ಸಿಂಗ್ ಸೂಚಿಸಿದರು

ಆಗಸ್ಟ್ 5ಕ್ಕೆ ಶಿವಾನಂದ ಮೇಲುಸೇತುವೆ ಮುಕ್ತ: ಶಿವಾನಂದ ಮೇಲುಸೇತುವೆ ಕಾಮಗಾರಿಯನ್ನು ಆ.5ರೊಳಗೆ ಪೂರ್ಣಗೊಳಿಸಲು ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್‌ಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶಿಸಿದರು. ಕೆಂಪೇಗೌಡ ರಸ್ತೆಯ (ಕೆ.ಜಿ.ರಸ್ತೆ) ಸಂತೋಷ್ ಚಿತ್ರಮಂದಿರದ ಬಳಿ ಹೊಸದಾಗಿ ಪಾದಚಾರಿ ಮೇಲುಸೇತುವೆ ನಿರ್ಮಾಣ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ, ಜಲಮಂಡಳಿ ಅಧ್ಯಕ್ಷ ಜಯರಾಮ್, ಬಿಡಿಎ ಆಯುಕ್ತ ರಾಜೇಶ್ ಗೌಡ, ಸಂಚಾರ ಪೊಲೀಸ್ ಜಂಟಿ ಆಯುಕ್ತ ರವಿಕಾಂತೇಗೌಡ, ಸ್ಮಾರ್ಟ್ ಸಿಟಿ ಹಾಗೂ ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಇದ್ದರು.

ನಿಷೇಧಿತ ಪ್ಲಾಸ್ಟಿಕ್ ಜಪ್ತಿ: ₹5 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಉಪಯೋಗಿಸುತ್ತಿರುವ ಮಾರಾಟ ಮಳಿಗೆಗಳು, ಉತ್ಪಾದಿಸುತ್ತಿರುವ ಘಟಕಗಳನ್ನು ಅನಿರೀಕ್ಷಿತವಾಗಿ ತಪಾಸಣೆ ಮಾಡಿರುವ ಅಧಿಕಾರಿಗಳು, ಅವುಗಳ ಮೇಲೆ ₹5.97 ಲಕ್ಷ ದಂಡ ವಿಧಿಸಿದ್ದಾರೆ.

ಜುಲೈ 1ರಿಂದ 10ರ ವರೆಗೆ ನಗರದ 990 ಸ್ಥಳಗಳಲ್ಲಿ ಅಧಿಕಾರಿಗಳು ತಪಾಸಣೆ ನಡೆಸಿ, ಒಟ್ಟು 1,380.8 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ.

ಪಶ್ಚಿಮ ವಲಯದಲ್ಲಿ ಅತಿಹೆಚ್ಚು ಅಂದರೆ 631 ಕೆ.ಜಿ. ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದೆ. ಮಹದೇವಪುರ– 153 ಕೆ.ಜಿ, ಆರ್.ಆರ್. ನಗರ– 129.5 ಕೆ.ಜಿ, ದಾಸರಹಳ್ಳಿ– 118 ಕೆ.ಜಿ, ದಕ್ಷಿಣ– 110.5 ಕೆ.ಜಿ., ಪೂರ್ವ– 88.3 ಕೆ.ಜಿ, ಬೊಮ್ಮನಹಳ್ಳಿ– 77 ಕೆ.ಜಿ, ಯಲಹಂಕ ವಲಯದಲ್ಲಿ 73.5 ಕೆ.ಜಿ ಪ್ಲಾಸ್ಟಿಕ್ ಜಪ್ತಿಯಾಗಿದೆ.

ಬಿಬಿಎಂಪಿ ವ್ಯಾಪ್ತಿಯ 8 ವಲಯಗಳ ಎಲ್ಲ ವಾರ್ಡ್‌ಗಳಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಅನ್ನು ಸಂಪೂರ್ಣ ನಿಯಂತ್ರಿಸಲು ಘನತ್ಯಾಜ್ಯ ವಿಭಾಗದಿಂದ ಕ್ರಮ ಕೈಗೊಳ್ಳಲಾಗಿದೆ. ಪಾಲಿಕೆ ಕಿರಿಯ ಆರೋಗ್ಯ ಪರಿವೀಕ್ಷಕರು, ಮಾರ್ಷಲ್‌ಗಳ ಮೇಲ್ವಿಚಾರಕರು ಹಾಗೂ ಮಾರ್ಷಲ್‌ಗಳ ತಂಡದವರು ಅನಿರೀಕ್ಷಿತವಾಗಿ ಸಗಟು ವ್ಯಾಪಾರ ಮಳಿಗೆಗಳು, ಅಂಗಡಿಗಳು, ಹೋಟೆಲ್ ಉದ್ದಿಮೆ, ಪ್ಲಾಸ್ಟಿಕ್ ಉತ್ಪಾದಿಸುವ ಉದ್ದಿಮೆಗಳಲ್ಲಿ ತಪಾಸಣೆ ನಡೆಸುತ್ತಿದ್ದಾರೆ. ದಂಡ ವಿಧಿಸುವ ಜೊತೆಗೆ ಮತ್ತೊಮ್ಮೆ ಪ್ಲಾಸ್ಟಿಕ್ ಬಳಸದಂತೆ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ಘನತ್ಯಾಜ್ಯ ವಿಭಾಗದ ಮುಖ್ಯ ಮಾರ್ಷಲ್ ರಾಜ್‌ಬೀರ್ ಸಿಂಗ್ ತಿಳಿಸಿದರು.

ನಗರದ ಹಲವೆಡೆ ವಶಪಡಿಸಿಕೊಂಡ ನಿಷೇಧಿತ ಪ್ಲಾಸ್ಟಿಕ್‌ನೊಂದಿಗೆ ಬಿಬಿಎಂಪಿ ಮಾರ್ಷಲ್‌ಗಳು

‘ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಕವರ್ ಬಳಕೆ ಬದಲು ಪುನರ್ ಬಳಕೆ ಮಾಡಬಹುದಾದ ಬಟ್ಟೆ ಬ್ಯಾಗ್, ನಾರಿನ ಬ್ಯಾಗ್, ಪೇಪರ್‌ನಿಂದ ತಯಾರಿಸಿದ ಕವರ್ ಬಳಸುವ ಬಗ್ಗೆ ಮಾರಾಟಗಾರರು ಹಾಗೂ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ’ ಎಂದರು.

ಅಮರನಾಥ ಯಾತ್ರೆ ಮತ್ತೆ ಆರಂಭ

ಜಮ್ಮು (ಪಿಟಿಐ): ಪ್ರತಿಕೂಲ ಹವಾಮಾನದಿಂದಾಗಿ ಒಂದು ದಿನದ ಮಟ್ಟಿಗೆ ಸ್ಥಗಿತಗೊಂಡಿದ್ದ ಅಮರನಾಥ ಯಾತ್ರೆಯನ್ನು ಸೋಮವಾರದಿಂದ ಪುನಃ ಪ್ರಾರಂಭಿಸಲಾಗಿದೆ. 4 ಸಾವಿರ ಮಂದಿ ಯಾತ್ರೆ ಹೊರಟಿದ್ದಾರೆ.

ಮುಂಬೈನಲ್ಲಿ ಸಿಕ್ಕಿಬಿದ್ದ ಆರೋಪಿಗಳು • ಕದ್ದ ಮೊಬೈಲ್ ಬಳಸುತ್ತಿದ್ದ ಮಹಿಳೆಯರು

ಮನೆ ಕೆಲಸದ ಸೋಗಿನಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೆಲಸಕ್ಕೆ ಸೇರಿದ್ದ ಮೂರೇ ದಿನದಲ್ಲಿ ಉದ್ಯಮಿಯೊಬ್ಬರ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಮಹಿಳೆ ಸೇರಿ ಮೂವರನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಹಾದೇವಿ ಕಲಾಲ್ (26), ಬೈನ ಪ್ರಿಯಾಂಕಾ ಮೊಗ್ರೆ (29) ಹಾಗೂ ವನಿತಾ ಗಾಯಕವಾಡ್ (37) ಬಂಧಿತರು. ಇವರಿಂದ 250 ಗ್ರಾಂ ಚಿನ್ನಾಭರಣ ಹಾಗೂ 100 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ. ಮೂವರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಮನೆ ಕೆಲಸಗಾರರ ಸೋಗಿನಲ್ಲಿ ಆರೋಪಿಗಳು ಹಲವು ವರ್ಷಗಳಿಂದ ಕಳ್ಳತನ ಮಾಡುತ್ತಿದ್ದರು. ಮುಂಬೈನಲ್ಲಿ ಕೃತ್ಯ ಎಸಗಿ ಪೊಲೀಸರಿಗೆ ಸಿಕ್ಕಿಬಿದ್ದು ಜೈಲಿಗೂ ಹೋಗಿ ಬಂದಿದ್ದರು. ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದ ಆರೋಪಿಗಳು, ಉದ್ಯಮಿ ಅರವಿಂದ ಎಂಬುವರ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದರು. ಮುಂಬೈನಲ್ಲಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ತಿಳಿಸಿದರು.

ಫೇಸ್‌ಬುಕ್ ಮೂಲಕ ಪರಿಚಯ: ‘ಆರೋಪಿ ಮಹಾದೇವಿ, ಸುಬ್ಬಲಕ್ಷ್ಮಿ ಎಂಬ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ಖಾತೆ ತೆರೆದಿದ್ದರು. ‘ಮನೆ ಕೆಲಸಕ್ಕೆ ಮಹಿಳೆಯರು ಲಭ್ಯರಿದ್ದಾರೆ’ ಎಂಬುದಾಗಿ ಫೇಸ್‌ಬುಕ್ ಗ್ರೂಪ್‌ನಲ್ಲಿ ಪೋಸ್ಟ್ ಪ್ರಕಟಿಸಿದ್ದರು. ಅದನ್ನು ನೋಡಿದ್ದ ಅರವಿಂದ್, ಮಹಿಳೆಯನ್ನು ಸಂಪರ್ಕಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ತಮ್ಮದು ದಕ್ಷಿಣ ಕನ್ನಡ ಜಿಲ್ಲೆ ಎಂದು ಹೇಳಿದ್ದ ಮಹಾದೇವಿ, ಕೆಲ ವರ್ಷ ಮುಂಬೈನಲ್ಲಿ ಕೆಲಸ ಮಾಡಿರುವುದಾಗಿ ತಿಳಿಸಿದ್ದರು. ಅವರ ಮಾತು ನಂಬಿದ್ದ ಅರವಿಂದ ಕೆಲಸಕ್ಕೆ ನೇಮಿಸಿಕೊಂಡಿದ್ದರು’ ಎಂದೂ ತಿಳಿಸಿದರು.

ಪ್ರಿಯಾಂಕಾ

ಮಹಾಲಕ್ಷ್ಮಿ

ವನಿತಾ

ಮಾಲೀಕರು ಇಲ್ಲದಿದ್ದಾಗ ಕಳ್ಳತನ: ‘ಮೂರು ದಿನ ಮನೆಯಲ್ಲಿ ಕೆಲಸ ಮಾಡಿದ್ದ ಮಹಾದೇವಿ, ಚಿನ್ನಾಭರಣ, ನಗದು ಹಾಗೂ ಬೆಳ್ಳಿ ಸಾಮಗ್ರಿಗಳು ಎಲ್ಲೆಲ್ಲಿವೆ ಎಂಬುದನ್ನು ತಿಳಿದುಕೊಂಡಿದ್ದರು. ಮೇ 3ರಂದು ಮನೆಯಲ್ಲಿ ಯಾರೂ ಇಲ್ಲದ ವೇಳೆಯಲ್ಲಿ ಇನ್ನಿಬ್ಬರು ಆರೋಪಿಗಳನ್ನು ಕರೆಸಿಕೊಂಡಿದ್ದರು. ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಕದ್ದುಕೊಂಡು ಪರಾರಿಯಾಗಿದ್ದರು’ ಎಂದು ಪೊಲೀಸರು ಹೇಳಿದರು.

ಕದ್ದ ಮೊಬೈಲ್ ಬಳಕೆ: ‘ಕಳ್ಳತನ ಮಾಡುವ ಉದ್ದೇಶದಿಂದಲೇ ಆರೋಪಿಗಳು ನಗರಕ್ಕೆ ಬಂದಿದ್ದರು. ಮುಂಬೈನಲ್ಲಿ ಕದ್ದು ತಂದಿದ್ದ ಮೊಬೈಲ್‌ಗಳನ್ನು ಬಳಸುತ್ತಿದ್ದರು. ಕೃತ್ಯದ ನಂತರ ಮೊಬೈಲ್ ಜಾಡು ಹಿಡಿದು ಪೊಲೀಸರು ತಮ್ಮನ್ನು ಬಂಧಿಸಬಹುದೆಂಬ ಭಯ ಅವರಲ್ಲಿತ್ತು’ ಎಂದು ಪೊಲೀಸರು ತಿಳಿಸಿದರು.

‘ಅರವಿಂದ್ ಅವರಿಗೆ ಮಹಾದೇವಿ ನೀಡಿದ್ದ ಮೊಬೈಲ್ ಸಂಖ್ಯೆ ಆಧರಿಸಿ ತನಿಖೆ ಕೈಗೊಂಡಾಗ ಸುಳಿವು ಸಿಕ್ಕಿರಲಿಲ್ಲ. ಆದರೆ, ಆರೋಪಿಗಳು ಕೆಲದಿನ ನಗರದ ವಸತಿಗೃಹಗಳಲ್ಲಿ ಉಳಿದುಕೊಂಡಿದ್ದರು. ಅದೇ ಮಾಹಿತಿ ಆಧರಿಸಿ ತನಿಖೆ ಕೈಗೊಂಡಾಗ ಮೂವರು ಸಿಕ್ಕಿಬಿದ್ದರು’ ಎಂದೂ ಹೇಳಿದರು.

ಜಲಮಂಡಳಿ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ

ಬೆಂಗಳೂರು: ಜಲಮಂಡಳಿಯಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ಅಭ್ಯರ್ಥಿಗಳಿಂದ ಹಣ ಪಡೆದು ನಕಲಿ ನೇಮಕಾತಿ ಆದೇಶ ನೀಡಿ ವಂಚಿಸಲಾಗಿದ್ದು, ಈ ಬಗ್ಗೆ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜಲಮಂಡಳಿ ಕಾರ್ಯದರ್ಶಿ ಆರ್. ವೀಣಾ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಕುಣಿಗಲ್ ತಾಲ್ಲೂಕಿನ ಪ್ರಕಾಶ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಲಕ್ಷಾಂತರ ರೂಪಾಯಿ ಪಡೆದಿದ್ದ ಆರೋಪಿ ಪ್ರಕಾಶ್ ವಂಚನೆ ಮಾಡಿರುವ ಬಗ್ಗೆ ಕೆಲ ಅಭ್ಯರ್ಥಿಗಳು ಜಲಮಂಡಳಿಗೆ ದೂರು ಸಲ್ಲಿಸಿದ್ದರು. ಈ ಬಗ್ಗೆ ಆಂತರಿಕ ತನಿಖೆ ಕೈಗೊಂಡಿದ್ದ ಕಾರ್ಯದರ್ಶಿ, ಅದರ ವಿವರ ಸಮೇತವಾಗಿಯೇ ದೂರು ಕೊಟ್ಟಿದ್ದಾರೆ. ಆರೋಪಿ ಸದ್ಯ ತಲೆಮರೆಸಿಕೊಂಡಿದ್ದಾನೆ’ ಎಂದೂ ತಿಳಿಸಿವೆ.

ನಿವೃತ್ತ ನೌಕರನ ಮಗ: ‘ಆರೋಪಿ ಪ್ರಕಾಶ್, ಜಲಮಂಡಳಿ ನಿವೃತ್ತ ನೌಕರನ ಮಗ. ಜಲಮಂಡಳಿಯಲ್ಲಿ ಕೆಲಸ ಖಾಲಿ ಇರುವುದಾಗಿ ಹೇಳಿ ಕೆಲ ಅಭ್ಯರ್ಥಿಗಳನ್ನು ಈತ ಸಂಪರ್ಕಿಸಿದ್ದ. ಹಣ ನೀಡಿದರೆ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿದ್ದ. ಆರೋಪಿ ಮಾತು ನಂಬಿದ್ದ ಅಭ್ಯರ್ಥಿಗಳು ಹಣ ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜಲಮಂಡಳಿಯ ಈ ಹಿಂದಿನ ಕಾರ್ಯದರ್ಶಿ ಮಹೇಶ್ ಅವರ ಸಹಿ ಹಾಗೂ ಲೆಟರ್ ಹೆಡ್ ನಕಲು ಮಾಡಿದ್ದ ಆರೋಪಿ, ನಕಲಿ ನೇಮಕಾತಿ ಆದೇಶ ಸಿದ್ಧಪಡಿಸಿದ್ದ. ಅದನ್ನೇ ಅಭ್ಯರ್ಥಿಗಳಿಗೆ ನೀಡಿದ್ದ. ಕೆಲಸಕ್ಕೆ ಸೇರಲು ಅಭ್ಯರ್ಥಿಗಳು, ಜಲಮಂಡಳಿಗೆ ಹೋದಾಗಲೇ ಆದೇಶಗಳು ನಕಲಿ ಎಂಬುದು ಗೊತ್ತಾಗಿತ್ತು’ ಎಂದೂ ತಿಳಿಸಿವೆ.

ಸುದ್ದಿ 2 ನಿಮಿಷ

ನಟ ಸುದೀಪ್‌ಗೆ ನಿಂದನೆ: ಪೊಲೀಸ್ ಆಯುಕ್ತರಿಗೆ ದೂರು

ಬೆಂಗಳೂರು: ನಟ ಸುದೀಪ್ ಅವರ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಅವಹೇಳನಕಾರಿಯಾದ ಮಾತುಗಳನ್ನಾಡುತ್ತಿರುವ ಚರಣ್ ಹಾಗೂ ಅಹೋರಾತ್ರ ಎಂಬುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ.ಹರೀಶ್ ಸೋಮವಾರ ಸೈಬರ್ ಕ್ರೈಂ ವಿಭಾಗ ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ.

‘ಭಾರತೀಯ ಚಲನಚಿತ್ರರಂಗದ ಹೆಸರಾಂತ ಕಲಾವಿದ ಕಿಚ್ಚ ಸುದೀಪ್ ಅವರ ವಿರುದ್ಧ ಅಹೋರಾತ್ರ ಮತ್ತು ಚರಣ್ ಎಂಬುವವರು ಸಾಮಾಜಿಕ ಜಾಲತಾಣಗಳಲ್ಲಿ ಅವಾಚ್ಯ, ಅವಹೇಳನಕಾರಿಯಾಗಿ ಪದಬಳಕೆ ಮಾಡುವ ಮೂಲಕ ಕನ್ನಡ ಚಿತ್ರರಂಗ ಹಾಗೂ ಸುದೀಪ್ ಅವರ ಘನತೆ, ಗೌರವಕ್ಕೆ ಚ್ಯುತಿ ತರುವಂತಹ ಹೇಳಿಕೆ ನೀಡಿರುವುದು ಬೇಸರದ ಸಂಗತಿಯಾಗಿದೆ. ಇಂತಹ ಹೇಳಿಕೆಗಳಿಂದ ಕನ್ನಡ ಚಿತ್ರರಂಗ ಹಾಗೂ ಕಲಾವಿದರ ಬಗ್ಗೆ ಸಾರ್ವಜನಿಕರಲ್ಲಿ ಇಲ್ಲಸಲ್ಲದ ಗೊಂದಲಗಳಿಗೆ ಎಡೆಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ತಾವು ಅಹೋರಾತ್ರ ಮತ್ತು ಚರಣ್ ಇವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಚಿತ್ರರಂಗದ ಹಾಗೂ ಕಲಾವಿದರ ಬೆಳವಣಿಗೆಗೆ ಯಾವುದೇ ರೀತಿಯ ಚ್ಯುತಿ ಬರದಂತೆ ಸಹಕರಿಸಬೇಕು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆನ್‌ಲೈನ್ ಗೇಮ್‌ಗಳ ವಿಚಾರದಲ್ಲಿ ಸುದೀಪ್ ಅವರ ವಿರುದ್ಧ ಚರಣ್ ಹಾಗೂ ಅಹೋರಾತ್ರ ಎಂಬುವವರು ಸಾಮಾಜಿಕ ಮಾಧ್ಯಮಗಳಲ್ಲಿ ಇತ್ತೀಚೆಗೆ ಹಲವು ಪೋಸ್ಟ್ ಹಾಕಿದ್ದರು. ಇವು ಸುದೀಪ್ ಅಭಿಮಾನಗಳ ಆಕ್ರೋಶಕ್ಕೂ ಕಾರಣವಾಗಿದೆ. ಸುದೀಪ್ ಅವರ ವಿರುದ್ಧ ಈ ರೀತಿ ನಿಂದನೆಯನ್ನು ನಿರ್ದೇಶಕ ನಂದಕಿಶೋರ್ ಕೂಡಾ ಇತ್ತೀಚೆಗೆ ತೀವ್ರವಾಗಿ ಖಂಡಿಸಿದ್ದರು.

ವೇಶ್ಯಾವಾಟಿಕೆ: ಸ್ಪಾ ಮೇಲೆ ಸಿಐಡಿ ದಾಳಿ

ಬೆಂಗಳೂರು: ವೇಶ್ಯಾವಾಟಿಕೆ ನಡೆಯುತ್ತಿದ್ದ ಮಾಹಿತಿ ಮೇರೆಗೆ ಇಂದಿರಾನಗರ ಹಾಗೂ ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯ ಸ್ಪಾಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಎಂಟು ಮಹಿಳೆಯರನ್ನು ರಕ್ಷಿಸಿದ್ದಾರೆ.

‘ಜೆ.ಪಿ.ನಗರ 5ನೇ ಹಂತದ ಎಸ್‌ಎನ್‌ಬಿಆರ್ ಕಾಂಪ್ಲೆಕ್ಸ್‌ನಲ್ಲಿರುವ ‘ರೂಹಿ ಥೈ’ ಹಾಗೂ ಇಂದಿರಾನಗರ 100 ಅಡಿ ರಸ್ತೆಯಲ್ಲಿರುವ ‘ಐರಾ’ ಸ್ಪಾ ಮೇಲೆ ದಾಳಿ ಮಾಡಲಾಗಿದೆ. ಮೂವರು ಕೆಲಸಗಾರರು ಹಾಗೂ ನಾಲ್ವರು ಗ್ರಾಹಕರನ್ನು ಬಂಧಿಸಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಥಾಯ್ಲೆಂಡ್ ಹಾಗೂ ಇತರೆಡೆ ಮಹಿಳೆಯರಿಗೆ ಉದ್ಯೋಗದ ಆಮಿಷವೊಡ್ಡಿ ನಗರಕ್ಕೆ ಕರೆಸಿಕೊಳ್ಳಲಾಗಿತ್ತು. ಅವರನ್ನೇ ವೇಶ್ಯಾವಾಟಿಕೆಗೆ ತಳ್ಳಲಾಗಿತ್ತು. ಮಸಾಜ್ ಹೆಸರಿನಲ್ಲಿ ಗ್ರಾಹಕರನ್ನು ಆಹ್ವಾನಿಸಿ ವೇಶ್ಯಾವಾಟಿಕೆ ನಡೆಸಲಾಗುತ್ತಿತ್ತು’ ಎಂದೂ ತಿಳಿಸಿವೆ.

ನಿಧನವಾರ್ತೆ

ಎಂ.ಕೆ. ನಾರಾಯಣ ಭಟ್

ಬೆಂಗಳೂರು: ಪತ್ರಕರ್ತ ಎಂ.ಕೆ. ನಾರಾಯಣ ಭಟ್ (78) ಸೋಮವಾರ ಬೆಳಿಗ್ಗೆ ನಿಧನರಾದರು. ’ನವಭಾರತ’ ಪತ್ರಿಕೆಯಲ್ಲಿ ವೃತ್ತಿ ಜೀವನ ಆರಂಭಿಸಿದ್ದ ಭಟ್ಟರು, ನಂತರ ’ಕನ್ನಡಪ್ರಭ’ ಪತ್ರಿಕೆ ಸೇರಿ, 2000ನೇ ಇಸವಿಯಲ್ಲಿ ಉಪ ಸುದ್ದಿ ಸಂಪಾದಕರಾಗಿ ನಿವೃತ್ತಿಯಾದರು. ಮೃತರಿಗೆ ಪತ್ನಿ, ಪುತ್ರಿ ಹಾಗೂ ಪುತ್ರ ಇದ್ದಾರೆ.

ಕೈದಿ ಬಂಧನ: ಅಣ್ಣನೂ ಜೈಲುಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆರೋಲ್ ಮೇಲೆ ಜೈಲಿನಿಂದ ಹೊರಹೋಗಿ ವಾಪಸು ಬರದೇ ತಲೆಮರೆಸಿಕೊಂಡಿದ್ದ ಕೈದಿ ಹರೀಶ್ ಕುಲಾಲ್ ಮಂಗಳೂರಿನಲ್ಲಿ ಸಿಕ್ಕಿಬಿದ್ದಿದ್ದು, ಆತನಿಗೆ ಜಾಮೀನು ನೀಡಿದ್ದ ದಿನೇಶ್ ಎಂಬುವವರನ್ನೂ ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಂಗಳೂರಿನ ನಿವಾಸಿ ಹರೀಶ್, ಅಪರಾಧ ಪ್ರಕರಣವೊಂದರಲ್ಲಿ ಜೈಲು ಸೇರಿದ್ದ. ತಂದೆಗೆ ಹುಷಾರಿಲ್ಲವೆಂದು ಹೇಳಿ ಪೆರೋಲ್ ಪಡೆದುಕೊಂಡು ಹೋಗಿದ್ದ. ಜುಲೈ 8ರಂದು ಪೆರೋಲ್ ಅವಧಿ ಮುಗಿದರೂ ವಾಪಸು ಜೈಲಿಗೆ ಬಂದಿರಲಿಲ್ಲ. ಈ ಬಗ್ಗೆ ಜೈಲಿನ ಅಧಿಕಾರಿಗಳು ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹರೀಶ್‌ಗೆ ಪೆರೋಲ್ ಪಡೆಯಲು ಅಣ್ಣ ದಿನೇಶ್ ಜಾಮೀನು ಮುಚ್ಚಳಿಕೆ ಬರೆದುಕೊಟ್ಟಿದ್ದರು. ಹೀಗಾಗಿ, ಇಬ್ಬರ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು.’

‘ಯುವತಿಯೊಬ್ಬರನ್ನು ಮದುವೆಯಾಗಿದ್ದ ಹರೀಶ್, ಮಂಗಳೂರಿನ ಸ್ಥಳವೊಂದಕ್ಕೆ ಭೇಟಿ ನೀಡುತ್ತಿರುವ ಮಾಹಿತಿ ಲಭ್ಯವಾಗಿತ್ತು. ಸ್ಥಳಕ್ಕೆ ಹೋದ ವಿಶೇಷ ತಂಡ ಕೈದಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ಅಣ್ಣ–ತಮ್ಮ ಇಬ್ಬರೂ ಇದೀಗ ಜೈಲಿನಲ್ಲಿದ್ದಾರೆ’ ಎಂದೂ ಮೂಲಗಳು ತಿಳಿಸಿವೆ.

‘ಪೊಲೀಸ್ ವರದಿ ಕಡ್ಡಾಯ’

‘ಮಾನವೀಯತೆ ದೃಷ್ಟಿಯಿಂದ ಕೈದಿಗಳಿಗೆ ಪೆರೋಲ್ ಮಂಜೂರು ಮಾಡಲಾಗುತ್ತದೆ. ಆದರೆ, ಕೆಲವರು ಈ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಪೆರೋಲ್ ಪಡೆದು ತಲೆಮರೆಸಿಕೊಳ್ಳುವವರ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ’ ಎಂದು ಜೈಲಿನ ಮೂಲಗಳು ಹೇಳಿವೆ.

‘ಕೈದಿ ನಡತೆ ಪರಿಗಣಿಸಿ ಈ ಹಿಂದೆ ಪೆರೋಲ್ ನೀಡಲಾಗುತ್ತಿತ್ತು. ಆದರೆ, ಇದೀಗ ಪೊಲೀಸ್ ವರದಿ ಕಡ್ಡಾಯ ಮಾಡಲಾಗಿದೆ. ಕೈದಿಯಿಂದ ಬೇರೆಯವರಿಗೆ ತೊಂದರೆ ಆಗಬಾರದು, ಬೇರೆಯವರಿಂದ ಕೈದಿಗೆ ತೊಂದರೆ ಇರಬಾರದು. ಇದೆಲ್ಲವೂ ವರದಿಯಿಂದ ಖಾತ್ರಿಯಾದ ನಂತರವೇ ಪೆರೋಲ್ ಮಂಜೂರು ಮಾಡಲಾಗುತ್ತಿದೆ’ ಎಂದೂ ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

₹ 10 ಸಾವಿರ ವಾಪಸು ಕೇಳಿದ್ದಕ್ಕೆ ಕೊಲೆ

ಬೆಂಗಳೂರು: ಕಷ್ಟದ ಕಾಲದಲ್ಲಿ ಸ್ನೇಹಿತನಿಗೆ ನೀಡಿದ್ದ ₹ 10 ಸಾವಿರ ಸಾಲ ವಾಪಸು ಕೇಳಿದರೆಂಬ ಕಾರಣಕ್ಕೆ ಸುಬ್ರಮಣಿ (52) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಗಳಾದ ನಾಗರಾಜ (51) ಹಾಗೂ ಬಸಂತ್ (50) ಬಂಧಿತರು. ಸುಬ್ರಮಣಿ ಅವರ ಸ್ನೇಹಿರಾಗಿದ್ದ ಇವರಿಬ್ಬರು, ಕೊಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದರು. ಗಸ್ತು ವಾಹನದ ಸಿಬ್ಬಂದಿ ಬೆನ್ನಟ್ಟಿ ಹಿಡಿದು ಬಂಧಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

ಯುವಕರ ತಬ್ಬಿಕೊಂಡು ಸರಗಳವು: ಬಂಧನ

ಬೆಂಗಳೂರು: ರಸ್ತೆಯಲ್ಲಿ ಹೋಗುವ ಯುವಕರನ್ನು ತಬ್ಬಿಕೊಂಡು ಅವರ ಚಿನ್ನದ ಸರ ಕಳ್ಳತನ ಮಾಡುತ್ತಿದ್ದ ಆರೋಪಿ ಜೂಲಿ ಅಲಿಯಾಸ್ ಕೃಷ್ಣ (40) ಎಂಬುವವರನ್ನು ಕಬ್ಬನ್ ಪಾರ್ಕ್ ಪೊಲೀಸರು ಬಂಧಿಸಿದ್ದಾರೆ.

‘ಸುಂಕದಕಟ್ಟೆ ನಿವಾಸಿ ಜೂಲಿ ತೃತೀಯ ಲಿಂಗಿ. ಇವರಿಂದ 44 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಜುಲೈ 5ರಂದು ರಾತ್ರಿ 10.50ರ ಸುಮಾರಿಗೆ ಬ್ರಿಗೇಡ್ ರಸ್ತೆಯಲ್ಲಿ ಉದ್ಯಮಿ ವಿಶ್ವಾಸ್ ಎಂಬುವವರನ್ನು ಒಂದು ನಿಮಿಷ ತಬ್ಬಿಕೊಂಡು ಕೊರಳಲ್ಲಿದ್ದ ₹1 ಲಕ್ಷ ಮೌಲ್ಯದ ಚಿನ್ನದ ಸರ ಬಿಚ್ಚಿಕೊಂಡು ಹೋಗಿದ್ದರು. ಈ ಕುರಿತು ವಿಶ್ವಾಸ್ ದೂರು ನೀಡಿದ್ದರು. ‘ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ, ಇತರೆ ಸಾಕ್ಷ್ಯಗಳನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು ಎನ್ನಲಾಗಿದೆ.

ಉಪಕರಣ ಬಳಸಿ ಕಾರು ಕಳ್ಳತನ: ಬಂಧನ

ಬೆಂಗಳೂರು: ಆಧುನಿಕ ಉಪಕರಣ ಬಳಸಿ ಕಾರು ಕದಿಯುತ್ತಿದ್ದ ಆರೋಪಿ ಅರುಣ್ ಎಂಬುವವರನ್ನು ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ಅರುಣ್, ಬಿ.ಕಾಂ ಪದವೀಧರ. ಈತನಿಂದ ₹ 70 ಲಕ್ಷ ಮೌಲ್ಯದ 10 ಕಾರು, ಬೈಕ್ ಹಾಗೂ ಆಧುನಿಕ ಉಪಕರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ವೇತನ ಕಡಿಮೆ ಎಂಬ ಕಾರಣಕ್ಕೆ ಹಲವು ಕೆಲಸ ತೊರೆದಿದ್ದ ಅರುಣ್ ಕಳ್ಳತನಕ್ಕೆ ಇಳಿದಿದ್ದ ಎಂದು ಹೇಳಿದ್ದಾರೆ.

ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಟೂಲ್ಸ್ ಕಿಟ್ ಖರೀದಿ ವಿಚಾರ

ಟೆಂಡರ್‌ನಲ್ಲಿ ಅವ್ಯವಹಾರ: ಎಎಪಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಟೂಲ್ಸ್ ಕಿಟ್ ಖರೀದಿಸಿ, ವಿತರಿಸುವ ಟೆಂಡರ್‌ನಲ್ಲಿ ಅಕ್ರಮ ನಡೆದಿದ್ದು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಸಚಿವ ಸಿ.ಎನ್. ಅಶ್ವತ್ಥ ನಾರಾಯಣ ಅವರ ನೇರ ಹಸ್ತಕ್ಷೇಪ ಹಾಗೂ ಕೈವಾಡ ಇದೆ’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ ಆರೋಪಿಸಿದರು.

‘ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ, ಪಂಗಡಗಳ 13 ಸಾವಿರ ವಿದ್ಯಾರ್ಥಿಗಳಿಗೆ ₹ 22 ಕೋಟಿ ವೆಚ್ಚದಲ್ಲಿ ಅಗತ್ಯ ಸಲಕರಣೆ ವಿತರಣೆಗೆ ಟೆಂಡರ್ ಕರೆಯಲಾಗಿತ್ತು. ಅದರಲ್ಲಿ ಅವ್ಯವಹಾರ ನಡೆದಿದೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಯೊಂದು ನಕಲಿ ದಾಖಲೆ ನೀಡಿ ತಾಂತ್ರಿಕ ಅನುಮೋದನೆ ಪಡೆದುಕೊಂಡಿದೆ. ಸಚಿವರ ಒತ್ತಡದಿಂದ ಬೋಗಸ್ ಕಂಪನಿಗೆ ಅನುಮತಿ ಕೊಡಲಾಗಿದೆ. ಇದು ಶೇ 40 ಕಮಿಷನ್‌ಗೆ ಸ್ಪಷ್ಟ ಉದಾಹರಣೆ ಅಲ್ಲವೇ ಎಂದರು. ಮೊದಲು ಕರೆದ ಟೆಂಡರ್‌ನಲ್ಲಿ ಈ ಕಂಪನಿಗೆ ತಾಂತ್ರಿಕ ಅರ್ಹತೆ ಇಲ್ಲದ ಕಾರಣಕ್ಕೆ ಪ್ರಕ್ರಿಯೆ ರದ್ದುಪಡಿಸಲಾಗಿತ್ತು. ಈಗ ಅದೇ ಸಂಸ್ಥೆಗೆ ಟೆಂಡರ್ ನೀಡಿರುವುದು ಸಂಶಯಕ್ಕೆ ದಾರಿ ಮಾಡಿಕೊಟ್ಟಿದೆ ಎಂದು ದೂರಿದರು.

ಇದೇ ಕಂಪನಿ ನಕಲಿ ಜಿಎಸ್‌ಟಿ ಬಿಲ್ ಸೃಷ್ಟಿಸಿ ಸಾಮಗ್ರಿ ಪೂರೈಸಿತ್ತು. ಜಿಎಸ್‌ಟಿ ಮಂಡಳಿಯವರೂ ನಕಲಿ ಬಿಲ್ ಎಂದು ದೃಢಪಡಿಸಿದ್ದರು. ಆ ಕಂಪನಿಗೆ ಮತ್ತೆ ಟೆಂಡರ್ ನೀಡಿರುವ ಉದ್ದೇಶವಾದರೂ ಏನು ಎಂದು ಪ್ರಶ್ನಿಸಿದರು.

ರಾಜ್ಯದ ಪರಿಶಿಷ್ಟ ಜಾತಿ, ಪಂಗಡಗಳ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಯೋಜನೆಯಲ್ಲೂ ಬಿಜೆಪಿ ಸರ್ಕಾರವು ಭ್ರಷ್ಟಾಚಾರ ಎಸಗುತ್ತಿರುವುದು ದುರದೃಷ್ಟಕರ ಎಂದು ಹೇಳಿದರು.

ಪಕ್ಷದ ಮುಖಂಡ ಡಾ.ವೆಂಕಟೇಶ್ ಮಾತನಾಡಿ, ಟೆಂಡರ್ ಪಡೆದ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಿ ಅನುಮೋದನೆ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ಚನ್ನಪ್ಪಗೌಡ ನೆಲ್ಲೂರು, ಉಷಾ ಮೋಹನ್ ಹಾಜರಿದ್ದರು.

‘ಪಾರದರ್ಶಕ ಟೆಂಡರ್’: ಸಚಿವರ ಸ್ಪಷ್ಟನೆ

ಟೆಂಡರ್ ಪ್ರಕ್ರಿಯೆ ಅತ್ಯಂತ ಪಾರದರ್ಶಕವಾಗಿ ನಡೆದಿದೆ ಎಂದು ಸಚಿವ ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟನೆ ನೀಡಿದ್ದಾರೆ.

ಆಮ್ ಆದ್ಮಿ ಪಕ್ಷದ ಆರೋಪಕ್ಕೆ ಪ್ರತಿಕ್ರಿಯಿಸಿ, ’ಜನರ ಗಮನ ಸೆಳೆಯಲು ರಚನಾತ್ಮಕ ಕಾರ್ಯಕ್ರಮ ಹಾಗೂ ಕಾರ್ಯಸೂಚಿ ಹೊಂದಿರದ ಆಮ್ ಆದ್ಮಿ ಪಕ್ಷವು ಇಲ್ಲದ ಭ್ರಷ್ಟಾಚಾರದ ವಾಸನೆಯನ್ನು ಹಬ್ಬಿಸುವ ಮೂಲಕ ತನ್ನ ಅಸ್ತಿತ್ವ ತೋರಿಸಿಕೊಳ್ಳಲು ಹೊರಟಿದೆ‘ ಎಂದು ಹೇಳಿದ್ದಾರೆ.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಮೂಲಕ ನಡೆದ ಟೆಂಡರ್‌ನಲ್ಲಿ ಅಕ್ರಮವಾಗಿದೆ ಎಂದು ಎಎಪಿ ಮುಖಂಡ ಮೋಹನ್ ದಾಸರಿ ಆರೋಪಿಸಿದ್ದಾರೆ. ಆದರೆ, ವಾಸ್ತವ ಏನೆಂದರೆ ಮುಂಚೆ ₹ 22 ಕೋಟಿಗೆ ಕರೆಯಲಾಗಿದ್ದ ಟೆಂಡರ್ ಅನ್ನು ರದ್ದುಗೊಳಿಸಿ ಎರಡನೇ ಬಾರಿ 21-01-22ರಂದು ತೆರೆದ ಬಿಡ್‌ನಲ್ಲಿ ₹ 15.99 ಕೋಟಿಗೆ ಅಂತಿಮಗೊಳಿಸಲಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು ₹ 5.27 ಕೋಟಿ ಉಳಿತಾಯವಾಗಿದೆ. ಆದರೆ, ಎಎಪಿ ಮುಖಂಡರ ಗಮನ ಸೆಳೆಯುವ ಭರದಲ್ಲಿ ಕೂಲಂಕಷವಾಗಿ ಪರಿಶೀಲಿಸದೆ ಬೇಕಾಬಿಟ್ಟಿ ಆರೋಪ ಮಾಡಿದೆ‘ ಎಂದು ವಿವರಿಸಿದ್ದಾರೆ.

ADMISSION CORNER ಕ್ಲಾಸಿಫೈಡ್ಸ್

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

SVR PU & DEGREE COLLEGE
ADMISSIONS OPEN 2022-23

PUC - Science & Commerce
B.Com, BCA, MBA & M.Com
With Value Added Certificates & Placement Assistance
For Admission Contact
+9194488 83586
+9197397 17000
080 - 41442121
080 - 42229348
www.svrinstitutions.com
E-Mail : svrinstitution@gmail.com
KEY HIGHLIGHTS
- Internships
- University Ranks
- Industrial Visits
- ICT Enabled Classrooms
- Highly Qualified Teaching Staff
- State of the art computing Facility
- Library & NSS Unit
Samasandrapalya, HSR Layout, 2nd Sector, Bangalore - 560102
Bengaluru's Emerging Experiential College
Affiliated to BANGALORE UNIVERSITY
Approved by AICTE & MHRD, New Delhi
20 years of excellence

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 1 Lakhs: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

Distributors

WANTED AREA WISE DISTRIBUTORS for Health Mix Natural Products. Minimum Investment 25,000. Attractive Returns. Call: 9702702999/ 83742-43687

TOURS & TRAVEL

Travel

"NEPAL TOUR" EVERY MONTH Muktinath for Parents, Chandragiri for kids, Kathmandu- Mankamna- Pokhara for All! NALANDA TRAVELS, Kundapura- 8310028157

EDUCATIONAL

Special Courses

JOB ORIENTED Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

PUBLIC NOTICE

BUNTS' SANGHA BANGALORE
No.324, Bunts' Sangha Complex, Chord Road, Vijayanagar, Bangalore- 560040
Ph : 080-23399323 / 23399635 / 23399636
E-mail : info@buntsanghablr.com
TENDER NOTICE
Tender is invited for catering / food services for the inauguration of BSRNSV-II @ Yelachaguppe Tavarekere on 24/07/2022. For further details visit www.buntsanghablr.com or contact the above address.
Sd/- Hon. Secretary

JOB OPPORTUNITIES

Hospital & Medical Jobs

WANTED
STAFF NURSES
GNM, B.Sc Nursing,M.Sc Nursing (Fresher & Experienced) for the following Areas
Bridge Duty Available
CTVS, OT, CCU, MICU, ED
Contact Number
Ph: 9497868022, 8075623035
Whatsapp your Resume
VADAKARA CO-OPERATIVE HOSPITAL
Ltd.No.D2411, Vadakara, Kozhikode Dist. Kerala
Contact No: 0496 2520600, 0496 2520700

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

PERSONAL

Change of Name

14831326P SEP/MT KURA RONA 2ATC Mother name Records PROMADIHI RONA instead of PRAMODINI RANA Notary KV Mani

GOUREE DEVI W/O 14847411F NK RAM PRAKASH R/a BABARPUR SHAWAYIPUR HARDOI UP my name GOUREE DEVI to GAURI DEVI Notary KV Mani

I, M.K. LAXMIPRAKASH, residing at 516, B-4, Ghataprabha, National Games Village, Koramangala, Bangalore- 560047, have changed my name from LAXMI PRAKASH M.K. to M.K. LAXMIPRAKASH vide affidavit dated 11th July 2022 before notary B.M. Chandrashekar, Bangalore.

I, MOHAMMAD Amtarul Fazal, residing at #49, 31st Main, BTM Layout 2nd Stage, Bangalore-76. Have changed my Minor daughters name from “Farha' to 'Farha Fazal' vide affidavit dated 01.03.2021 before Notary H.S. Sakalesh Aradhya, Vijayanagar Bangalore.

I, VASUDEVA, residing at #94, Pattandur Agrahara, Whitefield, Bangalore- 560066, have changed my name to P.Y VASUDEVA, vide affidavit dated 05.07.2022 before Notary Y.V. Shankar, Bangalore. Henceforth I shall be known as P.Y VASUDEVA only

NITUMONI RABHA W/O 14831645F SEP/MT RAJU RABHA R/a TANGLACHITRANAGAR TANGLA UDALGURI ASSAM my name NITUMONI RABHA to NITU MONI KONWAR RABHA Notary KV Mani

KIRAN W/O 14842344X SEP/MT BABU LAL R/a JERTHI KUDAN SIKAR my name KIRAN to KIRAN BHARIA Notary KV Mani

SASI TIWARI W/O 14841770Y SEP VIVEK PRASAD TIWARI R/a RANDOULI UDAYAPUR AMBEDKARNAGAR UP my name SASI TIWARI to SHASHI TIWARI Notary KV Mani

14839156L NK APPALA SWAMY ALLU 2ATC Mother name Records BADHAMMA instead of ALLU BHADRAMMA Notary KV Mani

RADHIKA RANI W/O 14839156L NK APPALA SWAMY ALLU R/a CHINTADA SRIKAKULAM AP my name RADHIKA RANI to ALLU RADHIKA RANI Notary KV Mani

14842643W SEP/MT UDAI DAHAL 2ATC Mother name Records JUNO DAHAL instead of JUNU DAHAL Notary KV Mani

I, NOORIE C.M. Wife of Mohammed Hayath Chadkhan Mohammed Gulzar, residing at 9M-224, 9th Main Road, HRBR Layout 1st block, KalyanNagar, Bangalore- 560043, have changed my name to AYSHA NOORISTHA CHADKHAN MOHAMMED, vide affidavit dated 11.07.2022 before Notary Y.R. Chandrasekar, Bangalore.

Others

NAME CHANGE: I, Sreenivas Subramanian S/O SV Subramaniam residing in-301 SMR Vinay Harmony 129 Banaswadi Main Road Bangalore-43 have changed my name to Sreenivas Subramaniam as per my Aadhar and education records for all future purposes.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
ಪ್ರಜಾವಾಣಿ

Classifieds EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ಬಂಡಾಯ ಕವಿ ಸಿದ್ಧಲಿಂಗಯ್ಯ ಹೆಸರು ಚಿರಸ್ಥಾಯಿ ಆಗಿಸಲು ಅಭಿಮಾನಿಗಳ ಪ್ರಯತ್ನ

ಜಾಗಕ್ಕೆ ಸಿಗದ ಮಂಜೂರಾತಿ

• ಆದಿತ್ಯ ಕೆ.ಎ.

ಮುಖ್ಯಾಂಶಗಳು
- ಶಿಷ್ಯಂದಿರ ಪ್ರಯತ್ನ
- ಭೂ ವಿವಾದ–ವಾಪಸಾದ ಕಡತ
- ಜಾಗಕ್ಕೆ ಒಪ್ಪಿಗೆ ನೀಡಲು ಮನವಿ

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಬಂಡಾಯ ಕವಿ' ದಿವಂಗತ ಸಿದ್ಧಲಿಂಗಯ್ಯ ಹೆಸರನ್ನು ಚಿರಸ್ಥಾಯಿಗೊಳಿಸಲು ಅವರ ಅಭಿಮಾನಿಗಳು, ಸಾಹಿತ್ಯಾಸಕ್ತರು ಮುಂದಾಗಿದ್ದಾರೆ.

ಅವರ ಹೆಸರಿನಲ್ಲಿ ಗ್ರಂಥಾಲಯ, ಸಾಂಸ್ಕೃತಿಕ ಭವನವನ್ನು ರಾಜಧಾನಿಯಲ್ಲಿ ನಿರ್ಮಿಸುವ ಪ್ರಕ್ರಿಯೆಗಳು ಆರಂಭಗೊಂಡಿದ್ದರೂ, ಸಿದ್ಧಲಿಂಗಯ್ಯ ಟ್ರಸ್ಟ್‌ಗೆ ಜಾಗದ ಸಮಸ್ಯೆ ಎದುರಾಗಿದೆ.

ಸಿದ್ಧಲಿಂಗಯ್ಯ ನಿಧನರಾಗಿ ಜೂನ್ 11ಕ್ಕೆ ವರ್ಷ ತುಂಬಿತ್ತು. ಅವರ ಅಭಿಮಾನಿಗಳು ಟ್ರಸ್ಟ್ ಸ್ಥಾಪಿಸಿ ಸಾಮಾಜಿಕ ಕಾರ್ಯದಲ್ಲಿ ತೊಡಗಿದ್ದಾರೆ. ಆ ಟ್ರಸ್ಟ್ ಈಗ ಮಹತ್ವದ ಯೋಜನೆಗೆ ಕೈಹಾಕಿದ್ದರೂ ಜಾಗ ಮಂಜೂರಾಗದೇ ಗ್ರಂಥಾಲಯ, ಸಾಂಸ್ಕೃತಿಕ ಭವನ ನಿರ್ಮಾಣದ ಯೋಜನೆಗೆ ಹಿನ್ನಡೆ ಆಗಿದೆ.

ಸಿದ್ಧಲಿಂಗಯ್ಯ ಅವರ ಶಿಷ್ಯಂದಿರೇ ಆಸಕ್ತಿ ವಹಿಸಿ ಕಂಗೇರಿ ಬಳಿ ಸೂಕ್ತ ಜಾಗ ಗುರುತಿಸಿ ಸಂಬಂಧಿಸಿದ ಕಡತವನ್ನು ಸರ್ಕಾರಕ್ಕೆ ರವಾನಿಸಿದ್ದರು. ಕಡತವು ಕಂದಾಯ ಸಚಿವರ ಕೈಸೇರಿತ್ತು. 'ಜಾಗವು ವಿವಾದದಿಂದ ಕೂಡಿದೆ' ಎಂದು ಹೇಳಿ ಹಿರಿಯ ಅಧಿಕಾರಿಗಳು ಕಂದಾಯ ಇಲಾಖೆಗೆ ಕಡತ ವಾಪಸ್ ಕಳುಹಿಸಿದ್ದು, ಯೋಜನೆಗೆ ಆರಂಭಿಕ ಸಮಸ್ಯೆ ಎದುರಾಗಿದೆ.

ಈಗ ಗುರುತಿಸಿರುವ ಜಾಗ ಸೂಕ್ತವಾಗಿದೆ. ಕಡತವನ್ನು ಸಚಿವ ಸಂಪುಟದ ಮುಂದೆ ಬೇಗ ತಂದು ಜಾಗ ಮಂಜೂರು ಮಾಡಿಕೊಟ್ಟರೆ ಶೀಘ್ರವೇ ಕಾಮಗಾರಿ ಆರಂಭಿಸಲು ಟ್ರಸ್ಟ್ ತೀರ್ಮಾನಿಸಿದೆ.

ನಗರದ ಕೆಂಗೇರಿ ಬಳಿ ಟ್ರಸ್ಟ್‌ನವರು ಗುರುತಿಸಿದ್ದ ಜಾಗ

> ಕಡುಬಡತನದಲ್ಲಿ ಬೆಳೆದು ಬಂದ ಸಿದ್ಧಲಿಂಗಯ್ಯ ಅವರ ಜೀವನವೇ ಯುವಕರಿಗೆ ಸ್ಫೂರ್ತಿ.
> **ಮೋಹನ್ ಕೊಂಡಜ್ಜಿ,** ಮೇಲ್ಮನೆ ಸದಸ್ಯ

> ಸಾಂಸ್ಕೃತಿಕ ಭವನದಲ್ಲಿ ನಾಟಕ ಪ್ರದರ್ಶನ, ಕ್ರಾಂತಿಗೀತೆ ಹಾಡಲು ಅವಕಾಶ ಸಿಗಲಿದೆ.
> **ಡಾ.ಮಾನಸ,** ಅಧ್ಯಕ್ಷೆ, ಡಾ.ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ

ಸಿದ್ಧಲಿಂಗಯ್ಯ ಮನೆಯೇ ದೊಡ್ಡ ಗ್ರಂಥಾಲಯವಾಗಿದೆ. ಮನೆಯಲ್ಲಿರುವ ಎಲ್ಲ ಪುಸ್ತಕಗಳನ್ನೂ ಗ್ರಂಥಾಲಯದಲ್ಲಿ ಇರಿಸಲಾಗುವುದು. ಜೊತೆಗೆ ಆಸಕ್ತರೂ ತಮ್ಮ ಮನೆಯಲ್ಲಿರುವ ಪುಸ್ತಕಗಳನ್ನು ಕೊಡುಗೆಯಾಗಿಯೂ ನೀಡಬಹುದು. ಇದರಿಂದ ಸಂಶೋಧನಾ ಅಭ್ಯರ್ಥಿಗಳಿಗೆ ನೆರವಾಗಲಿದೆ ಎಂದು ಮೇಲ್ಮನೆ ಸದಸ್ಯ ಕೊಂಡಜ್ಜಿ ಮೋಹನ್ 'ಪ್ರಜಾವಾಣಿ'ಗೆ ತಿಳಿಸಿದರು.

'ಸಿದ್ಧಲಿಂಗಯ್ಯ ಸ್ಮರಣೆಯ ಕಾರ್ಯಕ್ರಮಕ್ಕೆ ಬಂದಿದ್ದ ಸಚಿವರಾದ ವಿ.ಸೋಮಣ್ಣ, ಮುನಿರತ್ನ ಟ್ರಸ್ಟ್‌ಗೆ ವೈಯಕ್ತಿಕ ನೆರವು ನೀಡುವುದಾಗಿ ಭರವಸೆ ನೀಡಿದ್ದರು. ಸರ್ಕಾರದಿಂದಲೂ ಅನುದಾನ ಕೊಡಿಸುವ ಭರವಸೆ ಕೊಟ್ಟಿದ್ದಾರೆ. ದಲಿತ ಪರ ಹೋರಾಟ, ಸಾಮಾಜಿಕ ಸಮಾನತೆಗೆ ಸಾಹಿತ್ಯ ರಚಿಸಿದ್ದರು. ಎಲ್ಲ ಕೃತಿಗಳನ್ನೂ ಗ್ರಂಥಾಲಯದಲ್ಲಿ ಇಡಲಾಗುವುದು' ಎಂದು ಮೋಹನ್ ತಿಳಿಸಿದರು.

'ತಂದೆಯವರು ಕೊಳೆಗೇರಿಗೆ ತೆರಳಿ ಅಲ್ಲಿನ ಮಕ್ಕಳಿಗೆ ಪಾಠ ಮಾಡುತ್ತಿದ್ದರು. ಅವರಲ್ಲಿ ಬಹುತೇಕರು ಇಂದು ಉನ್ನತ ಹುದ್ದೆಗಳಲ್ಲಿದ್ದು, ಅವರೇ ಸಾಂಸ್ಕೃತಿಕ ಭವನ ನಿರ್ಮಿಸುವ ಇಚ್ಛೆ ಹೊಂದಿದ್ದಾರೆ' ಎಂದು ಅವರ ಪುತ್ರಿ, ಡಾ.ಸಿದ್ಧಲಿಂಗಯ್ಯ ಸ್ಮಾರಕದ ಪ್ರತಿಷ್ಠಾನದ ಅಧ್ಯಕ್ಷೆ ಡಾ.ಮಾನಸ ಹೇಳಿದರು.

ಬೆಂಗಳೂರಿನ ಚರ್ಚ್ ಸ್ಟ್ರೀಟ್ ನಲ್ಲಿ ಸೋಮವಾರ ಜಿಟಿಜಿಟಿ ಮಳೆಯಲ್ಲಿ ಜನರು ಕೊಡೆ ಹಿಡಿದು ಸಾಗಿದ್ದು ಕಂಡುಬಂತು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ

'ಹಿಂದೂ ಹತ್ಯಾಕಾಂಡ ವಿಷಯ ದ್ವೇಷ ಭಾವನೆ ಮೂಡಿಸಲಿದೆ'

ಬೆಂಗಳೂರು: 'ಇತಿಹಾಸ ವಿಷಯದ ಪಠ್ಯದಲ್ಲಿ ಹಿಂದೂ ಹತ್ಯಾಕಾಂಡಗಳಂಥ ವಿಚಾರ ಮಕ್ಕಳ ಮನಸ್ಸಿನಲ್ಲಿ ಪರಸ್ಪರ ದ್ವೇಷ ಭಾವನೆ ಮೂಡಿಸಲಿದೆ. ಇಂತಹ ಪಠ್ಯ ಸಂವಿಧಾನದ ಆಶಯಗಳಿಗೆ ಮತ್ತು ಶೈಕ್ಷಣಿಕ ಚೌಕಟ್ಟಿಗೆ ವಿರುದ್ಧವಾಗಿದ್ದು ಶಾಂತಿ, ಸೌಹಾರ್ದತೆ, ಸಹಬಾಳ್ವೆಗೆ ಭಂಗ ತರಲಿದೆ' ಎಂದು ಗುಲ್ಬರ್ಗಾ ಕೇಂದ್ರಿಯ ವಿಶ್ವವಿದ್ಯಾಲಯದ ವಿಶ್ರಾಂತ ಸಮ-ಕುಲಪತಿ ಪ್ರೊ.ಎಸ್. ಚಂದ್ರಶೇಖರ್, ತುಮಕೂರು ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಒ. ಅನಂತರಾಮಯ್ಯ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಅಶೋಕ್ ಶೆಟ್ಟರ್ ಅಭಿಪ್ರಾಯಪಟ್ಟಿದ್ದಾರೆ.

ಈ ಹೇಳಿಕೆಗೆ ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಅಶ್ವತ್ಥನಾರಾಯಣ, ಕ್ರೈಸ್ಟ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಎಸ್.ಪಿ. ವಾಗೀಶ್ವರಿ, 'ಇತಿಹಾಸ ದರ್ಪಣ'ದ ಸಂಪಾದಕ ಹಂ.ಗು.ರಾಜೇಶ್, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರ ಅಶ್ವತ್ಥನಾರಾಯಣ ಅವರೂ ಸಹಮತಿ ಸೂಚಿಸಿದ್ದಾರೆ.

'ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಭಾಗವಾಗಿ ಇತಿಹಾಸ ವಿಷಯದ ತಜ್ಞರು ಸಲ್ಲಿಸಿರುವ ವರದಿಯ ಶಿಫಾರಸ್ಸಿನಲ್ಲಿ ಭಾರತದ ಇತಿಹಾಸದಲ್ಲಿ ನಡೆದ ಹಿಂದೂ ಹತ್ಯಾಕಾಂಡಗಳನ್ನು ಸೇರಿಸಬೇಕು ಎಂದು ಹೇಳಿರುವುದು ಆತಂಕ ಮತ್ತು ಆಶ್ಚರ್ಯ ಉಂಟು ಮಾಡಿದೆ. ಭಾರತದ ಇತಿಹಾಸದಲ್ಲಿ ಅನೇಕ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಕಾರಣಗಳಿಗಾಗಿ ಹಿಂದೂ - ಬೌದ್ಧರು, ಹಿಂದೂ - ಜೈನರು, ಹಿಂದೂ - ಹಿಂದೂಗಳ ನಡುವೆ ಹತ್ಯಾಕಾಂಡಗಳು ನಡೆದಿವೆ. ಅವುಗಳನ್ನು ಮರೆಮಾಚಿ ಒಂದು ಧರ್ಮಿಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಹಿಂದೂಗಳ ಹತ್ಯಾಕಾಂಡವಷ್ಟೆ ನಡೆದಿದೆ ಎಂದು ಬಿಂಬಿಸುವುದು ಚರಿತ್ರೆಗೆ ಮಾಡಿದ ಅಪಚಾರವಾಗುತ್ತದೆ' ಎಂದಿದ್ದಾರೆ.

'ಬೀದಿ ನಾಯಿ ನಿಯಂತ್ರಣಕ್ಕೆ ಕ್ರಮ'

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಸಂಖ್ಯೆಯನ್ನು ನಿತ್ಯ 400ಕ್ಕೆ ಹೆಚ್ಚಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಪಶು ಸಂಗೋಪನೆ ಸಚಿವ ಪ್ರಭು ಬಿ. ಚವ್ಹಾಣ್ ತಿಳಿಸಿದರು.

ಬೀದಿನಾಯಿಗಳ ರಕ್ಷಣೆ ಕುರಿತು ಅಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಬಿಬಿಎಂಪಿ ವ್ಯಾಪ್ತಿಯಲ್ಲಿ 3 ಲಕ್ಷಕ್ಕೂ ಹೆಚ್ಚು ಬೀದಿ ನಾಯಿಗಳಿವೆ. ಸದ್ಯ ನಿತ್ಯ 240 ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ' ಎಂದರು.

'ಬೆಂಗಳೂರಿನಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ ಎಂದು ಪ್ರಾಣಿ ಸಹಾಯವಾಣಿ ಕೇಂದ್ರಕ್ಕೆ ಪ್ರತಿನಿತ್ಯ ಕರೆಗಳು ಬರುತ್ತಿವೆ. ಹೀಗಾಗಿ, ಬಿಬಿಎಂಪಿ, ಪಶು ಸಂಗೋಪನೆ ಇಲಾಖೆಯ ಅಧಿಕಾರಿಗಳು, ಪಶುಸಂಗೋಪನೆ ಕಾಲೇಜು ಪ್ರಾಧ್ಯಾಪಕರ ಜೊತೆ ಚರ್ಚೆ ನಡೆಸಿದ್ದೇನೆ' ಎಂದು ತಿಳಿಸಿದರು.

'ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಂಟು ವಲಯಗಳಲ್ಲಿ ಬೀದಿ ನಾಯಿಗಳನ್ನು ನಿಯಂತ್ರಿಸುವ ಕಾರ್ಯವನ್ನು ಸರ್ಕಾರೇತರ ಸಂಸ್ಥೆಗಳಿಗೆ ವಹಿಸಲಾಗಿದೆ. ಇದರ ಹೊರತಾಗಿಯೂ ಇಲಾಖೆಯ ಆಸ್ಪತ್ರೆಗಳಲ್ಲಿಯೂ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಇಲಾಖೆಯಿಂದಲೇ ಸಂತಾನೋತ್ಪತ್ತಿ ತಡೆಗಟ್ಟಲು ಶಸ್ತ್ರಚಿಕಿತ್ಸೆ ಮತ್ತು ರೇಬಿಸ್ ಚುಚ್ಚುಮದ್ದು ನೀಡುವ ಸಂಬಂಧ ಪ್ರಸ್ತಾವನೆ ಸಲ್ಲಿಸುವಂತೆ ಬಿಬಿಎಂಪಿ ಪಶುಸಂಗೋಪನೆ ಇಲಾಖೆ ಅಧಿಕಾರಿ ಗೆ ಸೂಚಿಸಿದ್ದೇನೆ' ಎಂದರು.

ಇಲಾಖೆಯ ಕಾರ್ಯದರ್ಶಿ ಸಲ್ಮಾ ಕೆ. ಫಾಹೀಮ್, ಆಯುಕ್ತ ಬಸವರಾಜೇಂದ್ರ, ನಿರ್ದೇಶಕ ಮಂಜುನಾಥ್ ಪಾಳೇಗಾರ್, ಬಿಬಿಎಂಪಿ ಪಶುಸಂಗೋಪನೆ ಇಲಾಖೆ ಪ್ರಭಾರ ಸಹಾಯಕ ನಿರ್ದೇಶಕ ಮಂಜುನಾಥ್ ಶಿಂಧೆ, ಪಶುವೈದ್ಯಕೀಯ ಮಹಾವಿದ್ಯಾಲಯದ ಡೀನ್ ಸಿ.ಎಸ್. ನಾಗರಾಜ್, ಪ್ರಾಧ್ಯಾಪಕ ಶ್ರೀಕೃಷ್ಣ ಇಸ್ಲೂರ ಇದ್ದರು.

ಮುಖ್ಯಮಂತ್ರಿ ಮನೆ ಮುತ್ತಿಗೆಗೆ ರೈತ ಸಂಘ ಯತ್ನ

ರೈಲು ನಿಲ್ದಾಣದಲ್ಲಿ ರೈತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಬ್ಬಿನ ಬೆಲೆಯನ್ನು ಟನ್‌ಗೆ ₹ 4,500 ನಿಗದಿ ಮಾಡಬೇಕು' ಎನ್ನುವುದೂ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲು ಹೊರಟಿದ್ದ ರೈತರನ್ನು ನಗರದ ರೈಲು ನಿಲ್ದಾಣದಲ್ಲೇ ಪೊಲೀಸರು ಸೋಮವಾರ ವಶಕ್ಕೆ ಪಡೆದರು.

ರೈತರ ಬೇಡಿಕೆ ಈಡೇರಿಸಲು ವಿಫಲವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲು ರಾಜ್ಯ ರೈತ ಸಂಘ ಕರೆ ನೀಡಿತ್ತು. ಮಂಡ್ಯ, ರಾಮನಗರ, ಮೈಸೂರು, ಬೆಳಗಾವಿ, ಧಾರವಾಡ ಸೇರಿ ರಾಜ್ಯದ ಹಲವು ಜಿಲ್ಲೆಗಳ ರೈತರು ರೈಲು ಮೂಲಕ ಬೆಂಗಳೂರಿಗೆ ಸೋಮವಾರ ಬೆಳಿಗ್ಗೆ ಬಂದಿಳಿದಿದ್ದರು.

'ಕಬ್ಬು ಬೆಳೆಗಾರರಿಗೆ ತೂಕದಲ್ಲಿ ಆಗುತ್ತಿರುವ ವಂಚನೆಗೆ ಕಡಿವಾಣ ಹಾಕಬೇಕು. ಬಾಕಿ ಹಣವನ್ನೂ ಕೂಡಲೇ ಪಾವತಿಸಲು ಕ್ರಮ ಕೈಗೊಳ್ಳಬೇಕು. ನಾಲ್ಕು ವರ್ಷಗಳಿಂದ ಕಬ್ಬು ಬೆಳೆಗಾರರಿಗೆ ಎಸ್‌ಎಪಿ ಸಂದಾಯವಾಗಿಲ್ಲ. ಈ ಬಗ್ಗೆ ಗಮನಹರಿಸಬೇಕು. ಗೃಹ ವಿದ್ಯುತ್ ಬಾಕಿ ವಸೂಲಿಯನ್ನು ಕೂಡಲೇ ನಿಲ್ಲಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲು ಹೊರಟಿದ್ದ ರೈತರನ್ನು ಬೆಂಗಳೂರಿನ ರೈಲು ನಿಲ್ದಾಣದಲ್ಲಿ ಸೋಮವಾರ ಬೆಳಿಗ್ಗೆ ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ನಲ್ಲಿ ಆಡುಗೋಡಿ ಮೈದಾನಕ್ಕೆ ಕರೆದೊಯ್ದರು – ಪ್ರಜಾವಾಣಿ ಚಿತ್ರ

50 ಕ್ಕೂ ಹೆಚ್ಚು ರೈತರನ್ನು ವಶಕ್ಕೆ ಪಡೆದ ಪೊಲೀಸರು, ಬಿಎಂಟಿಸಿ ಬಸ್‌ಗಳಲ್ಲಿ ಆಡುಗೋಡಿ ಸಿಎಆರ್ ಮೈದಾನಕ್ಕೆ ಕರೆದೊಯ್ದರು. ಕೆಲ ಹೊತ್ತಿನ ನಂತರ ಮುಚ್ಚಳಿಕೆ ಬರೆಸಿಕೊಂಡು ಎಲ್ಲರನ್ನೂ ಬಿಟ್ಟು ಕಳುಹಿಸಿದರು.

ಬೆಂಗಳೂರು– ಮೈಸೂರು ಹೆದ್ದಾರಿ ಭೂ ಪರಿಹಾರ

ಮಧ್ಯಸ್ಥಿಕೆದಾರರ ತೀರ್ಮಾನ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್–275) ವಿಸ್ತರಣೆಗಾಗಿ ಭೂಸ್ವಾಧೀನ ಮಾಡಿಕೊಂಡಿದ್ದ ಜಮೀನಿಗೆ ಭೂ ಪರಿಹಾರ ಹೆಚ್ಚಿಸುವಂತೆ ಮಧ್ಯಸ್ಥಿಕೆದಾರರು ನೀಡಿದ್ದ ತೀರ್ಮಾನವನ್ನು ಸುಪ್ರೀಂ ಕೋರ್ಟ್ ಸೋಮವಾರ ರದ್ದುಪಡಿಸಿದೆ.

ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ಹಾಗೂ ಎ.ಎಸ್.ಬೋಪಣ್ಣ ಅವರನ್ನು ಒಳಗೊಂಡ ಪೀಠವು ಈ ಪ್ರಕರಣವನ್ನು ಮಧ್ಯಸ್ಥಿಕೆದಾರರಿಗೆ ಮರಳಿ ವರ್ಗಾಯಿಸಿದ್ದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಲ್ಲಿಸಿರುವ ಅರ್ಜಿಯನ್ನು ಮರು ಪರಿಶೀಲಿಸುವಂತೆ ಸೂಚಿಸಿದೆ.

ಪರಿಹಾರ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಾದ ಮಂಡಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಕ್ತ ಅವಕಾಶ ದೊರೆಯಲಿಲ್ಲ ಎಂಬುದನ್ನು ಪೀಠ ಗಮನಿಸಿದೆ.

ವಿಶೇಷ ಭೂಸ್ವಾಧೀನ ಅಧಿಕಾರಿಯು ಪ್ರತಿ ಚದರ ಮೀಟರ್‌ಗೆ ನಿರ್ಧರಿಸಿದ್ದ ₹2026 ಹಾಗೂ ₹17,200 ಪರಿಹಾರವನ್ನು ಕ್ರಮವಾಗಿ ₹15,400 ಹಾಗೂ 25,800ಕ್ಕೆ ಹೆಚ್ಚಿಸಿರುವ ಮಧ್ಯಸ್ಥಿಕೆದಾರರ ತೀರ್ಮಾನಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ. ಮಾರುಕಟ್ಟೆ ಮೌಲ್ಯದ ಆಧಾರದಲ್ಲಿ ಮಧ್ಯಸ್ಥಿಕೆದಾರರು ನಿಗದಿಪಡಿಸಿದ ಪರಿಹಾರವನ್ನು ಜಿಲ್ಲಾ ನ್ಯಾಯಾಲಯ ಹಾಗೂ ಹೈಕೋರ್ಟ್ ಎತ್ತಿ ಹಿಡಿದಿತ್ತು.

ಹೆದ್ದಾರಿ ವಿಸ್ತರಣೆಗಾಗಿ ಮಾಯಗಾನಹಳ್ಳಿ, ಮಾದಾಪುರ, ಕಲ್ಲುಗೋಪಹಳ್ಳಿ, ಕುಂಬಳಗೋಡು ಹಾಗೂ ಮತ್ತಿತರ ಪ್ರದೇಶಗಳಲ್ಲಿ ಭೂಸ್ವಾಧೀನ ಮಾಡಿಕೊಳ್ಳಲಾಗುತ್ತಿದೆ.

ಬೆಂಗಳೂರು ವಿ.ವಿ: ಡಾ. ಜಯಕರ್ ಕುಲಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಡಾ. ಎಸ್.ಎಂ. ಜಯಕರ್ ಅವರನ್ನು ನೇಮಿಸಲಾಗಿದೆ.

ಪ್ರಭಾರ ಕುಲಪತಿಯಾಗಿದ್ದ ಪ್ರೊ. ಸಿಂಥಿಯಾ ಮೆನೇಜಸ್ ಅವ ರಿಂದ ಜಯಕರ್ ಸೋಮವಾರ ಅಧಿಕಾರ ಸ್ವೀಕರಿಸಿದರು. ಜಯಕರ್ ಅವರು ಬೆಂಗಳೂರಿನ ಮಾರುತಿ ದಂತ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾಗಿದ್ದರು.

ಜಯಕರ್ ಅವರ ನೇಮಕಾತಿ ಬಗ್ಗೆ ರಾಜ್ಯಪಾಲರು ಅಧಿಸೂಚನೆ ಹೊರಡಿ ಸಿದ್ದಾರೆ. ಅಧಿಕಾರ ವಹಿಸಿಕೊಂಡ ದಿನದಿಂದ ನಾಲ್ಕು ವರ್ಷಗಳ ಅವಧಿ ಯವರೆಗೆ ಅಥವಾ 67 ವರ್ಷಗಳಾಗುವವರೆಗೆ ಅವರು ಕುಲಪತಿ ಹುದ್ದೆಯಲ್ಲಿರುತ್ತಾರೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ವೈದ್ಯಕೀಯ ವಲಯದಿಂದ ಕುಲಪತಿಯಾಗಿ ನೇಮಕಗೊಂಡವರಲ್ಲಿ ಡಾ.ಜಯಕರ್ ಎರಡನೇಯವರಾಗಿದ್ದಾರೆ. ಈ ಮೊದಲು ಜಯದೇವ ಹೃದ್ರೋಗ ಸಂಸ್ಥೆ ಮಾಜಿ ನಿರ್ದೇಶಕರಾಗಿದ್ದ ಡಾ. ಎನ್. ಪ್ರಭುದೇವ್ ನೇಮಕಗೊಂಡಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಭಾರ ಕುಲಪತಿಯಾಗಿದ್ದ ಪ್ರೊ. ಸಿಂಥಿಯಾ ಮೆನೇಜಸ್ ಅವರಿಂದ ಡಾ. ಎಸ್.ಎಂ. ಜಯಕರ್ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು.

ಮುಜರಾಯಿ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ ಪರಿಶೀಲನೆ

ಕಾಶಿ ಯಾತ್ರೆಗೆ ಭಾರತ್ ಗೌರವ್ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಿಂದ ಕಾಶಿ ಯಾತ್ರೆಗೆ ಭಾರತ್ ಗೌರವ್ ರೈಲು ಯೋಜನೆ ಪ್ರಾರಂಭ ಆಗಲಿದೆ ಎಂದು ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಬೈಯ್ಯಪ್ಪನಹಳ್ಳಿಯ ಸರ್. ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣದಲ್ಲಿ ಕಾಶಿ ಯಾತ್ರೆಗೆ ಕಾಯ್ದಿರಿಸಿರುವ ರೈಲು ಪರಿಶೀಲಿಸಿ ಅವರು ಮಾತನಾಡಿದರು.

ಕಾಶಿಯಾತ್ರೆಗೆ ಯಾತ್ರಾರ್ಥಿಗಳನ್ನು ಕರೆದೊಯ್ಯಲು ಭಾರತ್ ಗೌರವ್ ರೈಲು ಸಿದ್ಧಪಡಿಸಲು ಅನುಮತಿ ನೀಡಿದ್ದು, ಶ್ರಾವಣ ಮಾಸದ ಕೊನೆಯ ವಾರದಲ್ಲಿ ಯಾತ್ರೆ ಪ್ರಾರಂಭ ಆಗಲಿದೆ. ಪುಣ್ಯ ಕ್ಷೇತ್ರಗಳಿಗೆ ಕಡಿಮೆ ಖರ್ಚಿನಲ್ಲಿ ಪ್ರವಾಸ ಕೈಗೊಳ್ಳಲು ಅನುಕೂಲ ಆಗುವಂತೆ ಪ್ಯಾಕೇಜ್ ರೂಪಿಸುವ ನಿಟ್ಟಿನಲ್ಲಿ ಮುಜರಾಯಿ ಇಲಾಖೆ ಮಹತ್ವದ ಹೆಜ್ಜೆ ಇಟ್ಟಿದೆ. ಭಾರತ್ ಗೌರವ್ ರೈಲು ಯೋಜನೆ ಅಡಿಯಲ್ಲಿ ರಾಜ್ಯ ಮುಜರಾಯಿ ಇಲಾಖೆಯ ವತಿಯಿಂದ ರೈಲನ್ನು ಬಾಡಿಗೆಗೆ ಪಡೆದು ಕಾಶಿಗೆ ಓಡಿಸಲು ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ರಿಯಾಯಿತಿ ದರದಲ್ಲಿ 7 ದಿನ ಪ್ರವಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಇದಕ್ಕೆ ₹ 1 ಕೋಟಿ ಭೌತಿಕ ಬ್ಯಾಂಕ್ ಗ್ಯಾರಂಟಿ ನೀಡಿ ರೈಲನ್ನು ಬಾಡಿಗೆಗೆ ತೆಗೆದುಕೊಳ್ಳಲಾಗಿದೆ ಎಂದರು.

ಬೈಯ್ಯಪ್ಪನಹಳ್ಳಿಯ ಸರ್. ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣದಲ್ಲಿ ಕಾಶಿ ಯಾತ್ರೆಗೆ ಕಾಯ್ದಿರಿಸಿರುವ ರೈಲನ್ನು ಸಚಿವೆ ಶಶಿಕಲಾ ಜೊಲ್ಲೆ ಪರಿಶೀಲಿಸಿದರು. ಡಾ.ಅನೂಪ್ ದಯಾನಂದ್ ಇದ್ದರು

ಬೆಂಗಳೂರು-ವಾರಾಣಸಿ-ಅಯೋಧ್ಯೆ-ಪ್ರಯಾಗರಾಜ್ ಮಾರ್ಗದಲ್ಲಿ ರೈಲು 7 ದಿನಗಳಲ್ಲಿ 4,161 ಕಿ.ಮೀ ಸಂಚರಿಸಲಿದೆ. 14 ಬೋಗಿಗಳನ್ನು ಈ ರೈಲು ಒಳಗೊಂಡಿದೆ. 11 ಬೋಗಿಗಳನ್ನು ಪ್ರಯಾಣಿಕರ ಪ್ರವಾಸಕ್ಕೆ ಅಣಿ ಮಾಡಲಾಗುತ್ತಿದೆ. 3 ಟಯರ್ ಎಸಿಯ ವ್ಯವಸ್ಥೆ ಇರಲಿದೆ. ಒಂದು ಬೋಗಿಯನ್ನು ದೇವಸ್ಥಾನವಾಗಿ ಪರಿವರ್ತಿಸಿ ಯಾತ್ರಾರ್ಥಿಗಳ ಭಜನೆಗೆ ಅವಕಾಶ ನೀಡಲಾಗುವುದು ಎಂದರು.

ಆಹಾರ, ನೀರು, ವಸತಿ, ಸ್ಥಳೀಯ ಸಾರಿಗೆ ಮತ್ತು ಇತರೆ ಸೌಕರ್ಯಗಳಿಗೆ ರೈಲ್ವೆಯ ಅಧೀನ ಸಂಸ್ಥೆಯ ಜೊತೆ ಐಆರ್‌ಸಿಟಿಸಿ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗುವುದು. 7 ದಿನಗಳ ಪ್ರವಾಸಕ್ಕೆ ಪ್ರತಿ ಯಾತ್ರಾರ್ಥಿಗೆ ಅಂದಾಜು ₹ 15 ಸಾವಿರ ವೆಚ್ಚ ಆಗಲಿದೆ. ಇದರಲ್ಲಿ₹ 5 ಸಾವಿರ ಸಹಾಯಧನ ನೀಡಲಾಗುವುದು ಎಂದು ತಿಳಿಸಿದರು.

ಮುಜರಾಯಿ ಇಲಾಖೆಯ ಆಯುಕ್ತೆ ರೋಹಿಣಿ ಸಿಂಧೂರಿ, ಸೌತ್ ವೆಸ್ಟರ್ನ್ ರೈಲ್ವೆಯ ಚೀಫ್ ಕಮರ್ಷಿಯಲ್ ಮ್ಯಾನೇಜರ್ ಡಾ.ಅನೂಪ್ ದಯಾನಂದ್ ಹಾಜರಿದ್ದರು.

'ದೇವಾಲಯಗಳ ಅಭಿವೃದ್ಧಿಗೆ ಹೆಚ್ಚು ಅನುದಾನ'

ಬೆಂಗಳೂರು: ರಾಜ್ಯದ ದೇವಸ್ಥಾನಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಬೊಮ್ಮಾಯಿ ಸರ್ಕಾರ ₹693 ಕೋಟಿ ನೀಡುವ ಮೂಲಕ ಕಳೆದ 10 ವರ್ಷಗಳಲ್ಲೇ ಅತಿ ಹೆಚ್ಚಿನ ಅನುದಾನ ನೀಡಿದೆ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 2022– 23ನೇ ಸಾಲಿನ ಬಜೆಟ್‌ನಲ್ಲಿ ವಿವಿಧ ದೇವಸ್ಥಾನಗಳು, ಮಠಗಳು ಮತ್ತು ಹೊರ ರಾಜ್ಯಗಳಲ್ಲಿರುವ ಕರ್ನಾಟಕ ಛತ್ರಗಳ ಅಭಿವೃದ್ಧಿಗಾಗಿ ಒಟ್ಟು ₹421 ಕೋಟಿ ಅನುದಾನ ಒದಗಿಸಲಾಗಿದೆ ಎಂದರು.

ಅಲ್ಲದೆ, ಮುಖ್ಯಮಂತ್ರಿಯವರು ವಿಧಾನಸಭಾ ಕ್ಷೇತ್ರವಾರು ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಈ ವರೆಗೆ ಒಟ್ಟು ₹272 ಕೋಟಿ ವಿಶೇಷ ಅನುದಾನ ಒದಗಿಸಿದ್ದಾರೆ. ಅದರಲ್ಲಿ ಶೇ 50 ರಷ್ಟನ್ನು (₹136 ಕೋಟಿ) ಈಗಾಗಲೇ ಬಿಡುಗಡೆ ಮಾಡಿದ್ದಾರೆ ಎಂದರು.

ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಬಿಹಾರದ ರಾಜ್ಯಸಭಾ ಸದಸ್ಯ ಅನಿಲ್ ಪ್ರಸಾದ್ ಹೆಗ್ಡೆ ಅವರಿಗೆ 'ಎಂ.ಪಿ. ಪ್ರಕಾಶ್ ಪ್ರಶಸ್ತಿ' ನೀಡಿ ಗೌರವಿಸಿದರು. ಎಂ.ಪಿ. ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್, ನಾಡಗೌಡ, ವಿಧಾನ ಪರಿಷತ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್, ರಂಗಭಾರತಿ ಕಾರ್ಯಾಧ್ಯಕ್ಷೆ ಎಂ.ಪಿ. ಸುಮಾ ವಿಜಯ್ ಇದ್ದಾರೆ. ಪ್ರಜಾವಾಣಿ ಚಿತ್ರ

'ಅಪಾಯದಲ್ಲಿ ಸಂವಿಧಾನ'

ಎಂ.ಪಿ. ಪ್ರಕಾಶ್ 82ನೇ ಜನ್ಮದಿನಾಚರಣೆ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಎರಡೂ ಅಪಾಯದಲ್ಲಿವೆ. ಅವುಗಳ ಉಳಿವಿಗಾಗಿ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಇನ್ನಷ್ಟು ಬಲಪಡಿಸಬೇಕಾದ ಅನಿವಾರ್ಯ ಇದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಎಂ.ಪಿ. ಪ್ರಕಾಶ್ ಅವರ 82ನೇ ಜನ್ಮದಿನದ ಪ್ರಯುಕ್ತ ಎಂ.ಪಿ. ಪ್ರಕಾಶ್ ಪ್ರತಿಷ್ಠಾನ, ರಂಗಭಾರತಿ, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಮತ್ತು ಭಾರತ ಯಾತ್ರಾ ಕೇಂದ್ರ ಸಹಯೋಗದಲ್ಲಿ ನಗರದ ಚಿತ್ರಕಲಾ ಪರಿಷತ್‌ನಲ್ಲಿ ಸೋಮವಾರ ಆಯೋಜಿಸಿದ್ದ 'ಎಂ.ಪಿ. ಪ್ರಕಾಶ್–82' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಪಕ್ಷಾಂತರದ ಪಿಡುಗಿನಿಂದಾಗಿ ದೇಶದ ಪ್ರಜಾಪ್ರಭುತ್ವ ಸಂಕಷ್ಟಕ್ಕೆ ಸಿಲುಕಿದೆ. 2008ರಲ್ಲಿ ಬಿಜೆಪಿ ಆರಂಭಿಸಿದ 'ಆಪರೇಷನ್ ಕಮಲ' ಈಗ ದೊಡ್ಡ ಪಿಡುಗಾಗಿ ಬೆಳೆದಿದೆ. ಗೋವಾದಲ್ಲಿ 11 ಕಾಂಗ್ರೆಸ್ ಶಾಸಕರ ಪೈಕಿ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಎಂಟು ಮಂದಿ ಬಿಜೆಪಿ ಸೇರಲು ಹೊರಟಿದ್ದಾರೆ. ಪಕ್ಷಾಂತರ ಮಾಡುವವರು 10 ವರ್ಷ ಚುನಾವಣೆಗೆ ಸ್ಪರ್ಧಿಸುವುದನ್ನು ನಿಷೇಧಿಸುವುದಕ್ಕೆ ಪೂರಕವಾಗಿ ಪಕ್ಷಾಂತರ ನಿಷೇಧ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದರು.

ಜನಪರ ರಾಜಕಾರಣ: ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಮಾತನಾಡಿ, 'ಸಮಾಜವಾದಿಗಳಿಗೆ ದೇಶದ ರಾಜಕಾರಣವನ್ನು ಜನಪರ ದಿಕ್ಕಿಗೆ ಬದಲಿಸುವ ಶಕ್ತಿ ಇದೆ. ಇಂದಿರಾ ಗಾಂಧಿಯವರ ಸರ್ಕಾರದಲ್ಲೂ ಉತ್ತಮ ನಿರ್ಧಾರಗಳ ಹಿಂದೆ ಸಮಾಜವಾದಿಗಳ ಪ್ರಭಾವವೇ ಇತ್ತು. ಕಾಂಗ್ರೆಸ್ ಸೇರಿ ಇತರರ ಅಭಿಪ್ರಾಯಗಳು ಏನೇ ಇದ್ದರೂ, ಶೋಷಿತರ ಪರ ಹೋರಾಟದ ವಿಚಾರದಲ್ಲಿ ಸಮಾಜವಾದಿಗಳ ಪಾತ್ರ ದೊಡ್ಡದು' ಎಂದು ಹೇಳಿದರು.

ಚರ್ಚೆಗೆ ಹೋಗಿದ್ದ ನಾನು ಮರಳಲಿಲ್ಲ: ಪ್ರಸಕ್ತ ಸಾಲಿನ ಎಂ.ಪಿ. ಪ್ರಕಾಶ್ ಗೌರವ ಸ್ವೀಕರಿಸಿದ ರಾಜ್ಯಸಭಾ ಸದಸ್ಯ (ಬಿಹಾರದಿಂದ ಆಯ್ಕೆಯಾಗಿರುವ ಕನ್ನಡಿಗ) ಅನಿಲ್ ಪ್ರಸಾದ್ ಹೆಗ್ಡೆ, 'ಸಮಾಜವಾದಿ ಸಿದ್ಧಾಂತಕ್ಕೆ ಮನಸೋತು ರಾಜಕೀಯಕ್ಕೆ ಬಂದವನು ಆರೇಳು ವರ್ಷ ಮನೆಗೆ ಹೋಗಿರಲಿಲ್ಲ. ಪಕ್ಷದ ಸಂಘಟನಾ ಕಾರ್ಯದರ್ಶಿ ಹುದ್ದೆ ದೊರಕಿದ ಬಳಿಕ ಮನೆಗೆ ಮರಳಿದ್ದೆ' ಎಂದು ಪ್ರಕಾಶ್ ಅವರೊಂದಿಗಿನ ಒಡನಾಟ ಸ್ಮರಿಸಿದರು.

'1994ರಲ್ಲಿ ಡಂಕೆಲ್ ಪ್ರಸ್ತಾವದ ಕುರಿತ ಚರ್ಚೆಗೆ ಸಿದ್ದರಾಮಯ್ಯ ಮತ್ತು ಬಿ.ಆರ್. ಪಾಟೀಲ ಅವರೊಂದಿಗೆ ದೆಹಲಿಗೆ ಹೋಗಿದ್ದೆ. ಜಾರ್ಜ್ ಫರ್ನಾಂಡಿಸ್ ಅವರ ಒತ್ತಾಸೆಗೆ ಕಟ್ಟುಬಿದ್ದು ಅಲ್ಲಿಯೇ ಉಳಿದೆ' ಎಂದರು.

ವಿಧಾನ ಪರಿಷತ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಮಾತನಾಡಿದರು. ಮಾಜಿ ಸಚಿವ ಅಂಜನಮೂರ್ತಿ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಡಾ.ಎಂ.ಪಿ. ನಾಡಗೌಡ, ಎಂ.ಪಿ. ಪ್ರಕಾಶ್ ಅವರ ಪತ್ನಿ ರುದ್ರಾಂಬ, ಮಕ್ಕಳಾದ ಸುಮಾ ವಿಜಯ್, ವೀಣಾ ಮಹಾಂತೇಶ್ ಉಪಸ್ಥಿತರಿದ್ದರು.

> **' ಪ್ರಯತ್ನದಿಂದ ಸಿಎಂ ಆಗಿದ್ದು'**
>
> 'ಎಂ.ಪಿ. ಪ್ರಕಾಶ್ ಅವರು ಈ ರಾಜ್ಯದ ಮುಖ್ಯಮಂತ್ರಿ ಆಗಬೇಕಿತ್ತು. ಅವರಿಗೆ ಸಾಧ್ಯವಾಗಲಿಲ್ಲ. ನಾನು ಮುಖ್ಯಮಂತ್ರಿಯಾದೆ' ಎಂದು ಸಿದ್ದರಾಮಯ್ಯ ಹೇಳಿದರು. ಆಗ ಸಭಿಕರ ಸಾಲಿನಲ್ಲಿದ್ದ ಚಿತ್ರಕಲಾ ಪರಿಷತ್ ಉಪಾಧ್ಯಕ್ಷ ಟಿ. ಪ್ರಭಾಕರ್, 'ಅವರ ಹಣೆಯಲ್ಲಿ ಬರೆದಿರಲಿಲ್ಲ' ಎಂದರು.
>
> 'ಏಯ್ ಪ್ರಭಾಕರ, ಹಣೆಯಲ್ಲೂ ಬರೆಯೊಲ್ಲ, ಬೆನ್ನಲ್ಲೂ ಬರೆಯೊಲ್ಲ ಕಣಯ್ಯ. ಪ್ರಯತ್ನದಿಂದ ಆಗಬೇಕು. ಅವರಿಗೆ ಆಗಲಿಲ್ಲ, ನಾನು ಸಿಕ್ಕ ಅವಕಾಶವನ್ನು ಬಳಸಿಕೊಂಡು ಮುಖ್ಯಮಂತ್ರಿ ಆದೆ. 1989ರಲ್ಲೇ ನೀನು ಶಾಸಕ ಆಗಬೇಕಿತ್ತು. ನಾನೇ ಆಗ ಹಟ ಹಿಡಿದು ಟಿಕೆಟ್ ತಪ್ಪಿಸಿ ಆರ್. ಕೃಷ್ಣಪ್ಪನಿಗೆ ಅವಕಾಶ ಕೊಡಿಸಿದೆ. ನಿನ್ನ ಹಣೆಬರಹ ಕಾರಣ ಅಲ್ಲ, ನಾನು ತಪ್ಪಿಸಿದ್ದು' ಎಂದೂ ಹೇಳಿದರು.
>
> 'ಪ್ರಭಾಕರ ಒಳ್ಳೆಯ ಮನುಷ್ಯ. ಆದರೆ, ನಾನೇ ಟಿಕೆಟ್ ತಪ್ಪಿಸಿದ್ದು ಎಂದು ಹೇಳಿದ್ದೇನೆ. ಆತ ಯಾವತ್ತೂ ಬೇಸರಿಸಿಕೊಳ್ಳಲಿಲ್ಲ' ಎಂದು ಸಿದ್ದರಾಮಯ್ಯ ನೆನಪಿಸಿಕೊಂಡರು.

ಜೆ.ಎಸ್ ಪದವಿಪೂರ್ವ ಕಾಲೇಜಿಗೆ ಉತ್ತಮ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಲ್ಲತ್ತಹಳ್ಳಿಯ ಜೆಎಸ್ ಪದವಿಪೂರ್ವ ಕಾಲೇಜಿನ ನಾಲ್ವರು ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ ಒಟ್ಟು 32 ವಿದ್ಯಾರ್ಥಿಗಳು ಶೇ 85ಕ್ಕಿಂತ ಹೆಚ್ಚು ಅಂಕ ಗಳಿಸಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. 30ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಮಧುಶ್ರೀ ಎಸ್ ಶೆಟ್ಟಿ 8ನೇ ಸ್ಥಾನ ಮತ್ತು ಮೌಲ್ಯ ಆರ್. ಗೌಡ 10ನೇ ಸ್ಥಾನ ಹಾಗೂ ಆರ್. ಸುಜಲ್ ಕುಮಾರ್ 20ನೇ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪೂಜಾ ಜೆ. ಯಾದವ್ 15ನೇ ಸ್ಥಾನ ಪಡೆದಿದ್ದಾರೆ.

ಪ್ರಿಯಾಂಕಾ ಎ. (ಶೇ 95.6)

ಪೂಜಾ ಜೆ. (ಶೇ 96.66)

ಮಧುಶ್ರೀ ಎಸ್. (ಶೇ 98.16)

ಕೆ.ಆರ್. ಚೇತನ್ (ಶೇ 95.5)

ಮೌಲ್ಯ ಆರ್. (ಶೇ 97.8)

ಸುಜಲ್ ಆರ್. (ಶೇ 96)

ಪ್ರಜಾವಾಣಿ
ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್
ನೀವು ಶಿವಾಜಿನಗರ ವಿಧಾನಸಭಾ ಕ್ಷೇತ್ರದ ನಿವಾಸಿಯೇ?

ಶ್ರೀ ರಿಜ್ವಾನ್
ನಿಮ್ಮ ಸಮಸ್ಯೆಗಳಿಗೆ ದನಿ ನೀಡಲು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಆಯೋಜಿಸಿರುವ ಜನಸ್ಪಂಧನ ಕಾರ್ಯಕ್ರಮದಲ್ಲಿ ಭಾಗವಹಿಸಿ. ನಿಮ್ಮ ಕ್ಷೇತ್ರದ ಶಾಸಕರೊಂದಿಗೆ, ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇನ್ನಿತರ ಇಲಾಖೆಗಳ ಅಧಿಕಾರಿಗಳೂ ಉಪಸ್ಥಿತರಿದ್ದು, ನಿಮ್ಮ ಅಹವಾಲುಗಳಿಗೆ ಕಿವಿಯಾಗಲಿದ್ದಾರೆ. ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ.
• ಟ್ರಾಫಿಕ್ • ಕಸ ವಿಲೇವಾರಿ
• ನೀರು ಸರಬರಾಜು • ರಸ್ತೆ ಗುಂಡಿಗಳು
ಕಾರ್ಯಕ್ರಮದ ದಿನಾಂಕ: 16–07–2022, ಶನಿವಾರ
ಸಮಯ: 10:00 ರಿಂದ ಮಧ್ಯಾಹ್ನ 1:00 ರವರೆಗೆ
(ನೊಂದಣಿ ಬೆಳಿಗ್ಗೆ 9:00 ರಿಂದ, ಪ್ರವೇಶ ಉಚಿತ)
ಸ್ಥಳ: ಬಂಜಾರ ಭವನ, ತಿಮ್ಮಯ್ಯ ರಸ್ತೆ, ಕಾವೇರಪ್ಪ ಲೇಔಟ್, ವಸಂತನಗರ, ಬೆಂಗಳೂರು – 51
ಸಂಪರ್ಕಕ್ಕೆ: ಗಿರೀಶ್ – 9916674666

ವರ್ಷಧಾರೆ, ನಲುಗಿದ ಧರೆ

ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕಿನ ಕಲ್ಮಕ್ಕಿ ಸಮೀಪದ ನೀರೋಡಿ ಹೊಳೆಗೆ ಅಡ್ಡಲಾಗಿ ಕಟ್ಟಲಾಗಿರುವ ಸೇತುವೆಯ ಮೇಲ್ಭಾಗ ಕೊಚ್ಚಿ ಹೋಗಿದೆ

ನಿಲ್ಲದ ಮುಸಲಧಾರೆ • ಜಲಾಶಯಗಳಿಂದ ನದಿಗಳಿಗೆ ಹೆಚ್ಚಿನ ನೀರು • ನದಿ ತೀರ ಪ್ರದೇಶದಲ್ಲಿ ಹೆಚ್ಚಿನ ಆತಂಕ

ಗುಡ್ಡ ಕುಸಿತ: ವಿವಿಧೆಡೆ ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಕಾರವಾರ: ಜಿಲ್ಲೆಯಾದ್ಯಂತ ಸೋಮವಾರವೂ ಉತ್ತಮ ಮಳೆಯಾಗಿದ್ದು, ಜೊಯಿಡಾ ತಾಲ್ಲೂಕಿನ ಅಣಶಿ ಘಟ್ಟದಲ್ಲಿ ಎರಡು ಕಡೆ ಗುಡ್ಡ ಕುಸಿದಿದೆ. ಸದಾಶಿವಗಡ– ಬೆಳಗಾವಿ ರಾಜ್ಯ ಹೆದ್ದಾರಿಯಲ್ಲಿ ಕುಸಿದಿದ್ದ ಗುಡ್ಡ ತೆರವುವರೆಗೂ ವಾಹನಗಳ ಸಂಚಾರ ಸ್ಥಗಿತಗೊಳಿಸಲಾಗಿದೆ.

ಜೊಯಿಡ ಮೂಲಕ ದಾಂಡೇಲಿ, ಬೆಳಗಾವಿ, ಧಾರವಾಡಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದೆ. ಒಂದು ವಾರದ ಹಿಂದೆಯೂ ಇಲ್ಲಿ ದೊಡ್ಡ ಗಾತ್ರದ ಕಲ್ಲುಗಳು ರಸ್ತೆಗೆ ಬಿದ್ದಿದ್ದವು. ಜೊಯಿಡಾ ತಾಲ್ಲೂಕಿನ ಬಾಪೇಲಿಯಲ್ಲಿ ಪೊಲೀಸ್ ಚೆಕ್‌ಪೋಸ್ಟ್ ತೆರೆಯಲಾಗಿದೆ.

ಮಣ್ಣು ತೆರವು ಕಾರ್ಯಾಚರಣೆ ಜಾರಿಯಲ್ಲಿದ್ದು, ಕಾರವಾರಕ್ಕೆ ಹೋಗುವ ವಾಹನಗಳು ಯಲ್ಲಾಪುರ–ಅಂಕೋಲಾದ ಮೂಲಕ ಸಂಚರಿಸಬೇಕು ಎಂದು ಜಿಲ್ಲಾಡಳಿತ ಸೂಚಿಸಿದೆ.

ಜೊಯಿಡ ತಾಲ್ಲೂಕಿನ ಅಣಶಿ ಘಟ್ಟದಲ್ಲಿ ರಾಜ್ಯ ಹೆದ್ದಾರಿಯ ಮೇಲೆ ಸೋಮವಾರ ಗುಡ್ಡ ಕುಸಿದಿರುವುದು

24 ಗಂಟೆಗಳಲ್ಲಿ ಕಾರವಾರ ತಾಲ್ಲೂಕಿನಲ್ಲಿ ಒಂದು ಮನೆ ಹಾನಿಗೀಡಾಗಿದೆ. ಕುಮಟಾ ತಾಲ್ಲೂಕಿನಲ್ಲಿ ನಾಲ್ಕು, ಹಳಿಯಾಳ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ತಲಾ ಎರಡು ಮನೆಗಳಿಗೆ ಹೆಚ್ಚು ಹಾನಿಯಾಗಿದೆ. ಜಿಲ್ಲೆಯಾದ್ಯಂತ 26 ಮನೆಗಳು ಭಾಗಶಃ ಕುಸಿದಿವೆ.

ಜಿಲ್ಲೆಯಲ್ಲಿ 'ರೆಡ್ ಅಲರ್ಟ್' ಹಿಂಪಡೆದಿದ್ದು, ಜುಲೈ 15ರವರೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ ಮುನ್ಸೂಚನೆ ನೀಡಿದೆ.

ಕೃಷ್ಣಾ ನದಿ ಹರಿವಿನಲ್ಲಿ ಏರಿಕೆ: (ಬೆಳಗಾವಿ ವರದಿ): ಜಿಲ್ಲೆಯಲ್ಲಿ ಸೋಮವಾರವೂ ಉತ್ತಮ ಮಳೆಯಾಗಿದೆ. ಮಹಾರಾಷ್ಟ್ರದ ಕೊಂಕಣ ಭಾಗದಲ್ಲಿ ಭಾರಿ ಮಳೆ ಕಾರಣ ಜಿಲ್ಲೆ ವ್ಯಾಪ್ತಿಯಲ್ಲಿ ನದಿಗಳಲ್ಲಿ ನೀರಿನಹರಿವು ಹೆಚ್ಚಾಗಿದೆ.

ಮಹಾರಾಷ್ಟ್ರ ರಾಜಾಪುರ ಬ್ಯಾರೇಜಿನಿಂದ ಕೃಷ್ಣಾ ನದಿಗೆ 70 ಸಾವಿರ ಕ್ಯುಸೆಕ್ ನೀರು ಹರಿದು ಬರಲಾರಂಭಿಸಿದೆ. ದೂಧಗಂಗಾ ನದಿಯಿಂದ 19 ಸಾವಿರ ಕ್ಯುಸೆಕ್ ನೀರು ಕೃಷ್ಣಾ ನದಿಗೆ ಸೇರುತ್ತದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಹತ್ತಿರ 89 ಸಾವಿರ ಕ್ಯುಸೆಕ್ ನೀರು ಬರುತ್ತಿದೆ.

ಜಿಲ್ಲೆಯ ಬೆಳಗಾವಿ ನಗರ–ತಾಲ್ಲೂಕು, ಖಾನಾಪುರ, ಚನ್ನಮ್ಮನ ಕಿತ್ತೂರು, ಯರಗಟ್ಟಿ, ಚಿಕ್ಕೋಡಿ, ಗೋಕಾಕ ತಾಲ್ಲೂಕಿನಲ್ಲಿ ಕೂಡ ಉತ್ತಮ ಮಳೆ ಸುರಿದಿದೆ.

ಆಲಮಟ್ಟಿ (ವಿಜಯಪುರ): ಜಲಾಶಯದ ಒಳಹರಿವು ಒಂದು ಲಕ್ಷ ಕ್ಯುಸೆಕ್ ದಾಟಿದೆ. ಮುನ್ನೆಚ್ಚರಿಕೆಯಾಗಿ ಜಲಾಶಯ ಭರ್ತಿಗೂ ಇನ್ನೂ 2.5 ಮೀಟರ್ ಬಾಕಿ ಇರುವಾಗಲೇ 18 ಕ್ರಸ್ಟ್‌ಗೇಟ್‌ಗಳನ್ನು ತೆರೆಯಲಾಗಿದ್ದು 75 ಸಾವಿರ ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ.

ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಭಾಗದ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಯ ಅವಧಿಯಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿದೆ.

ರಾಜ್ಯದ ಇತರೆ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿ ಭಾಗದಲ್ಲಿ ಬಿರುಗಾಳಿ ವೇಗವು ಗಂಟೆಗೆ 65 ಕಿ.ಮೀ. ವರೆಗೂ ತಲುಪುವ ಸಾಧ್ಯತೆಯಿದೆ.

ಎಲ್ಲಿ ಏನಾಯಿತು?

ರಾಮನಾಥಪುರ–ಕೊಣನೂರು ರಸ್ತೆ ಬಂದ್

ಹಾಸನ: ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ಹೆದ್ದಾರಿ ಬದಿ ಭೂಕುಸಿತ ಮುಂದುವರಿದಿದೆ. ಅರಕಲಗೂಡು ತಾಲ್ಲೂಕಿನ ಕೊಣನೂರಿನಿಂದ ರಾಮನಾಥಪುರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಜಲಾವೃತವಾಗಿದೆ. ರಸ್ತೆ ಸಂಪರ್ಕ ಬಂದ್ ಮಾಡಲಾಗಿದೆ. ಮುಂದಿನ ಐದು ದಿನ ಹಾಸನ ಜಿಲ್ಲೆಯಲ್ಲಿ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಬೀಸನಗದ್ದೆ ಜಲಾವೃತ

ಶಿವಮೊಗ್ಗ: ಜಿಲ್ಲೆಯಲ್ಲಿ ಭದ್ರಾ, ಲಿಂಗನಮಕ್ಕಿ, ಮಾಣಿ ಜಲಾಶಯಗಳಿಗೆ ಒಳಹರಿವು ಹೆಚ್ಚಿದ್ದು, ನೀರಿನ ಮಟ್ಟ ಬಹಳಷ್ಟು ಏರಿಕೆಯಾಗಿದೆ.

ಆಗುಂಬೆ ಘಾಟಿಯ 11ನೇ ತಿರುವಿನಲ್ಲಿ ಆಗಿದ್ದ ಭೂಕುಸಿತ ತೆರವು ಮುಗಿದಿದೆ. ಘಾಟಿಯಲ್ಲಿ ಜುಲೈ 31ರ ನಂತರ ಭಾರಿ ವಾಹನಗಳ ಪ್ರವೇಶಕ್ಕೆ ಅವಕಾಶ ನೀಡಲಾಗುವುದು ಅಧಿಕಾರಿಗಳು ತಿಳಿಸಿದ್ದಾರೆ. ಸಾಗರ ತಾಲ್ಲೂಕಿನ ಬೀಸನಗದ್ದೆ ಗ್ರಾಮ ಜಲಾವೃತಗೊಂಡಿದ್ದು, ಸಂಪರ್ಕ ಕಡಿದುಕೊಂಡಿದೆ. ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಸಮೀಪದ ಉಕ್ಕಡಗಾತ್ರಿ ಫತ್ಯಾಪುರ ಸೇತುವೆ ಅಕ್ಕಪಕ್ಕದ ಜಮೀನು ಮುಳುಗಡೆ ಆಗಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೀದರ್: 50 ಮನೆಗಳು ಕುಸಿತ

ಬೀದರ್: ಜಿಲ್ಲೆಯಲ್ಲಿ 24 ಗಂಟೆಗಳಲ್ಲಿ ಸರಾಸರಿ 15.24 ಮಿ.ಮೀ ಮಳೆಯಾಗಿದೆ. ಜಿಲ್ಲೆಯಲ್ಲಿ ಒಟ್ಟು 50 ಮನೆಗಳ ಗೋಡೆಗಳು ಬಿದ್ದಿವೆ. ಬಸವಕಲ್ಯಾಣ ತಾಲ್ಲೂಕಿನಲ್ಲಿ 20, ಔರಾದ್ ತಾಲ್ಲೂಕಿನಲ್ಲಿ 12, ಕಮಲನಗರದಲ್ಲಿ 7, ಬೀದರ್, ಭಾಲ್ಕಿಯಲ್ಲಿ ತಲಾ ನಾಲ್ಕು ಹಾಗೂ ಹುಲಸೂರಿನಲ್ಲಿ 2, ಹುಮನಾಬಾದ್‌ನಲ್ಲಿ 1 ಮನೆಗಳ ಗೋಡೆಗಳು ಕುಸಿದಿವೆ.

ಪಕ್ಷಿಧಾಮ ಬಂದ್

ಶ್ರೀರಂಗಪಟ್ಟಣ: ರಂಗನತಿಟ್ಟು ಪಕ್ಷಿಧಾಮದ ವುಡ್‌ಲಾಟ್ ಒಳಗೆ ಮೂರು ಅಡಿಗೂ ಹೆಚ್ಚು ನೀರು ನಿಂತಿದೆ. ಗಾಜಿನ ಸೇತುವೆ ಮೇಲೆ ಪ್ರವಾಸಿಗರಿಗೆ ನಿರ್ಬಂಧಿಸಿದೆ. ನಡುಗಡ್ಡೆಗಳಲ್ಲಿ ಪಕ್ಷಿಗಳು ಮರಗಳ ತುದಿಯಲ್ಲಿ ಆಶ್ರಯ ಪಡೆದಿವೆ. 'ಎಲ್ಲಾ ರೀತಿಯ ಸುರಕ್ಷಾ ಕ್ರಮ ಕೈಗೊಳ್ಳಲಾಗಿದೆ' ಎಂದು ಪಕ್ಷಿಧಾಮದ ಸಿಬ್ಬಂದಿ ತಿಳಿಸಿದರು.

ಪಕ್ಷಿಧಾಮದ ನಡುಗಡ್ಡೆಗಳು ಜಲಾವೃತ ಗೊಂಡಿರುವುದು ಚಿತ್ರ; ಅನೂಪ್ ರಾಗ್ ಟಿ

ಕಲಬುರಗಿ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳದಲ್ಲಿ ತುಂತುರು ಮಳೆಯಾಗಿದೆ.

ಆಗುಂಬೆ ಘಾಟಿ: ಸಂಚಾರ ನಿಷೇಧ

ಉಡುಪಿ: ಆಗುಂಬೆ ಘಾಟಿಯ 11ನೇ ತಿರುವಿನಲ್ಲಿ ಕುಸಿದಿದ್ದ ಗುಡ್ಡ ತೆರವು ಕಾರ್ಯ ಪೂರ್ಣಗೊಂಡಿದೆ. ಜುಲೈ 12ರಂದು ಬೆಳಿಗ್ಗೆ 8ರಿಂದ ಘಾಟಿಯಲ್ಲಿ ಲಘುವಾಹನಗಳ ಸಂಚಾರಕ್ಕೆ ಜಿಲ್ಲಾಡಳಿತ ಅವಕಾಶ ಕಲ್ಪಿಸಿದ್ದು, 30ರವರೆಗೆ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಶಿವಮೊಗ್ಗ ಜಿಲ್ಲೆಯಿಂದ ಮಂಗಳೂರು ಕಡೆಗೆ ಬರುವ ವಾಹನಗಳು ರಾಷ್ಟ್ರೀಯ ಹೆದ್ದಾರಿ 169 ಹಾಗೂ 169 ಎ ಮೂಲಕ ತೀರ್ಥಹಳ್ಳಿ ಮಾರ್ಗವಾಗಿ ಕೊಪ್ಪ, ಶೃಂಗೇರಿ, ಕಾರ್ಕಳದಿಂದ ಮಂಗಳೂರು ತಲುಪಬಹುದು. ತೀರ್ಥಹಳ್ಳಿ, ಮಾಸ್ತಿಕಟ್ಟೆ,ಕುಂದಾಪುರ ಬದಲಿ ಮಾರ್ಗವನ್ನೂ ಬಳಸಹುದು ಎಂದು ಜಿಲ್ಲಾಧಿಕಾರಿ ಕೂರ್ಮಾರಾವ್ ತಿಳಿಸಿದ್ದಾರೆ.

ಕಾವೇರಿ ತೀರದ 59 ಗ್ರಾಮಗಳಿಗೆ ಅಪಾಯ

ಮಂಡ್ಯ: ಕೆಆರ್‌ಎಸ್‌ನಿಂದ ಹೆಚ್ಚು ನೀರು ನದಿಗೆ ಹರಿಸಿದ್ದು, ನದಿಪಾತ್ರದ 59 ಗ್ರಾಮಗಳ ನಿವಾಸಿಗಳಿಗೆ ಸುರಕ್ಷಿತ ಸ್ಥಳಕ್ಕೆ ತೆರಳಲು ಜಿಲ್ಲಾಡಳಿತ ಸೂಚಿಸಿದೆ. ಹಾಸನ ಜಿಲ್ಲೆ ಹೇಮಾವತಿ ಜಲಾಶಯದಿಂದಲೂ ನೀರು ಹರಿಸಲಾಗಿದೆ.

ನದಿಯಲ್ಲಿ ನೀರಿನ ರಭಸ ಹೆಚ್ಚಿದ್ದು, ಪಶ್ಚಿಮವಾಹಿನಿಯ ದೇಗುಲ, ಮಹಾತ್ಮ ಗಾಂಧಿ ಚಿತಾಭಸ್ಮ ಸ್ಮಾರಕ ಮುಳುಗಿದೆ. ವೆಲ್ಲೆಸ್ಲಿ ಸೇತುವೆ ತಳಕ್ಕೆ ನದಿನೀರು ತಾಕುತ್ತಿದೆ. ನೀರು ಅಪಾಯದ ಮಟ್ಟದಲ್ಲಿ ಹರಿಯುತ್ತಿದ್ದು ಆಯಕಟ್ಟಿನ ಸ್ಥಳದಲ್ಲಿ ಭದ್ರತೆ ನಿಯೋಜಿಸಲಾಗಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನ 21 ಹಳ್ಳಿ, ಮಳವಳ್ಳಿ ತಾಲ್ಲೂಕಿನ 9, ಪಾಂಡವಪುರ ತಾಲ್ಲೂಕಿನ 7, ಮದ್ದೂರು ತಾಲ್ಲೂಕಿನ 14, ನಾಗಮಂಗಲ ತಾಲ್ಲೂಕಿನ 8 ಹಳ್ಳಿಗಳು ಪ್ರವಾಹ ಸ್ಥಿತಿಯಿಂದ ಅಪಾಯ ಎದುರಿಸುವ ಸಾಧ್ಯತೆ ಇದೆ ಎಂದು ಜಿಲ್ಲಾಡಳಿತ ಗುರುತಿಸಿದೆ.

ಸಿದ್ದಾಪುರ; ಕಾಳಜಿ ಕೇಂದ್ರದಲ್ಲಿ 84 ಮಂದಿಗೆ ಆಶ್ರಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಳೆಯ ಅಬ್ಬರ ಭಾಗಶಃ ತಗ್ಗಿದೆ. ನಾಪೋಕ್ಲು, ಸೋಮವಾರಪೇಟೆ ಭಾಗದಲ್ಲಿ ಬಿರುಸುಗೊಂಡಿದೆ. ಸಿದ್ದಾಪುರ ಭಾಗದಲ್ಲಿ ಕಾವೇರಿ ನದಿ ಅಪಾಯದ ಮಟ್ಟಮೀರಿದ್ದು, ಕಾಳಜಿ ಕೇಂದ್ರ ತೆರೆಯಲಾಗಿದೆ. ಜಿಲ್ಲೆಯ 84 ಸಂತ್ರಸ್ತರು ಆಶ್ರಯ ಪಡೆದಿದ್ದಾರೆ.

ಕರಾವಳಿ: ಗುಡ್ಡ ಕುಸಿತ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮಳೆಯ ಆರ್ಭಟ ಕೊಂಚ ಕಡಿಮೆಯಾಗಿದೆ. ಕೆಲವೆಡೆ ಗುಡ್ಡ ಕುಸಿದು ಸಮಸ್ಯೆ ಉಂಟಾಗಿದೆ. ಉಡುಪಿ ಜಿಲ್ಲೆಯ ಕಲ್ಮಕ್ಕಿ ಸಮೀಪದ ನೀರೋಡಿ ಹೊಳೆಗೆ ಕಟ್ಟಿರುವ ಸೇತುವೆಯ ಕೊಚ್ಚಿ ಹೋಗಿದೆ.

ಬ್ರಹ್ಮಾವರ ತಾಲ್ಲೂಕಿನ ಆರೂರು, ಉಪ್ಪೂರು, ಮೂಳೂರು ಭಾಗಕ್ಕೆ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಭೇಟಿನೀಡಿ ನೆರೆ ಹಾನಿ ಹಾಗೂ ಕಡಲ್ಕೊರೆತ ವೀಕ್ಷಿಸಿದರು.

ಮಳೆ: ಎಲ್ಲಿ, ಎಷ್ಟು? (ಸೆಂಟಿ ಮೀಟರ್‌ಗಳಲ್ಲಿ)	
ಹಳ್ಳಿಹೊಳೆ (ಕುಂದಾಪುರ)	18.8
ಕಿಗ್ಗಾ (ಚಿಕ್ಕಮಗಳೂರು)	15.2
ಗಾಳಿಬೀಡು(ಕೊಡಗು)	14
ಕಮ್ಮರಡಿ (ಚಿಕ್ಕಮಗಳೂರು)	13.5
ಭಟ್ಕಳ (ಉತ್ತರಕನ್ನಡ)	13.3
ಚೆಂಬು (ಕೊಡಗು)	12
ಗೇರುಸೊಪ್ಪ (ಶಿವಮೊಗ್ಗ)	10.1
ಮಾರನಹಳ್ಳಿ (ಸಕಲೇಶಪುರ)	7.2
ಔರಾದ್(ಬೀದರ್)	4.3

ಪುತ್ತೂರು ತಾಲ್ಲೂಕಿನ ಕುಂಬಾಡಿಯಲ್ಲಿ ಗುಡ್ಡ ಕುಸಿದು ಹೊಸ ಮನೆ ನಾಶವಾಗಿದೆ. ಬಜಪೆ ಬಳಿ ಆದ್ಯಪಾಡಿ, ಮುಗೇರು ಪ್ರದೇಶದಲ್ಲಿ ಫಲ್ಗುಣಿ ನದಿ ಉಕ್ಕಿ ಹರಿದು ಉಂಟಾಗಿದ್ದ ಪ್ರವಾಹ ತಗ್ಗಿದೆ. ಉಳ್ಳಾಲ ಪ್ರದೇಶದಲ್ಲಿ ಕಡಲ್ಕೊರೆತ ಮುಂದುವರಿದಿದೆ.

ಚಿಕ್ಕಮಗಳೂರು ತಾಲ್ಲೂಕಿನ ಕೆರೆಮಕ್ಕಿಯ ಕಸಿಗೆ, ಅರೆನೂರಿನಲ್ಲಿ ಕಾಫಿ ತೋಟದಲ್ಲಿ ಗುಡ್ಡದ ಮಣ್ಣು ಕುಸಿದಿದೆ. ಹಲವು ಕಾಫಿ, ಅಡಿಕೆ ಗಿಡಗಳು ನಾಶವಾಗಿವೆ. ಶೃಂಗೇರಿ ತಾಲ್ಲೂಕಿನ ಹುಲಗರಡಿಯಲ್ಲಿ ಕಾಲುಸಂಕ ಕೊಚ್ಚಿಹೋಗಿದೆ. ನಾರ್ವೆ ಬಳಿ ತುಂಗಾ ನದಿ ನೀರು ಗದ್ದೆಗೆ ನುಗ್ಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆಆರ್‌ಎಸ್*	124.80	122.54	71,147	72,612
ಹಾರಂಗಿ	2,859	2,854	19,380	25,000
ಕಬಿನಿ	2284.00	2282.72	32,232	38,000
ಹೇಮಾವತಿ	2,922	2,919.07	23,530	17,575
ಲಿಂಗನಮಕ್ಕಿ	1,819	1779	50,273	908
ಸೂಪಾ (ಮೀ)	564	530.70	33,680	-
ಮಾಣಿ	595	578.44	7,853	-
ತುಂಗಭದ್ರಾ	1,633	1,628.45	90,905	319
ಮಲಪ್ರಭಾ	2079.5	2,057.60	10,402	194
ಘಟಪ್ರಭಾ	2175	2,116.03	27,398	110
ಭದ್ರಾ	186	174.6	41,645	153
ಆಲಮಟ್ಟಿ (ಮೀ)	519.6	516.95	81,910	2,976
ನಾರಾಯಣಪುರ (ಮೀ)	492.25	491.20	20,000	19,800

*ನೆಲಮಟ್ಟದಿಂದ

ತಗ್ಗದ ಮಳೆ, ತಪ್ಪದ ಆತಂಕ

ಒಂದನೇ ಪುಟದಿಂದ...

ದೋಣಿಗಲ್ ಬಳಿ ಭೂಕುಸಿತವಾಗಿದ್ದ ಸ್ಥಳಕ್ಕೆ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಸೋಮವಾರ ಭೇಟಿ ನೀಡಿ ಪರಿಶೀಲಿಸಿ, ತ್ವರಿತ ದುರಸ್ತಿಗೆ ಸೂಚಿಸಿದರು. 'ಹಾಸನ –ಶಿರಾಡಿಘಾಟಿ ರಸ್ತೆಯಲ್ಲಿ ಸಂಚಾರ ಬಂದ್ ಮಾಡುವುದಿಲ್ಲ' ಎಂದು ಹೇಳಿದರು.

ಕಾವೇರಿ ನದಿಪಾತ್ರದಲ್ಲಿ ಆತಂಕ: ಮಂಡ್ಯ ಜಿಲ್ಲೆ ಕೆಆರ್‌ಎಸ್ ಜಲಾಶಯದಿಂದ ನದಿಗೆ ಸೋಮವಾರ 72 ಸಾವಿರ ಕ್ಯುಸೆಕ್ ನೀರು ಹರಿಸಿದ್ದು ನದಿಪಾತ್ರದಲ್ಲಿ ಪ್ರವಾಹ ಸ್ಥಿತಿ ತಲೆದೋರಿದೆ. ಪಶ್ಚಿಮವಾಹಿನಿ ದೇಗುಲ, ಮಂಟಪ ಸಂಪೂರ್ಣ, ರಂಗನತಿಟ್ಟು ಪಕ್ಷಿಧಾಮ ಭಾಗಶಃ ಮುಳುಗಿವೆ.

ಜಲಾಶಯದ ಒಳಹರಿವು ಹೆಚ್ಚಿದೆ. ಕ್ರಮೇಣ ಒಂದು ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ಹೊರಬಿಡಲಿದ್ದು, ನದಿಪಾತ್ರ ಜನರು ಹಾಗೂ ಅಪಾಯ ಸ್ಥಿತಿ 59 ಗ್ರಾಮಗಳ ನಿವಾಸಿಗಳಿಗೆ ಮುಂಜಾಗ್ರತೆಯಾಗಿ ಸುರಕ್ಷಿತ ಸ್ಥಳಕ್ಕೆ ತೆರಳಬೇಕು ಎಂದು ಜಿಲ್ಲಾಡಳಿತವು ಕಟ್ಟೆಚ್ಚರ ನೀಡಿದೆ.

ಮಹಾರಾಷ್ಟ್ರದ ಕೊಂಕಣ ಭಾಗದಲ್ಲಿ ಭಾರಿ ಪ್ರಮಾಣದಲ್ಲಿ ಮಳೆ ಮುಂದುವರಿದಿದ್ದು, ಬೆಳಗಾವಿ ಜಿಲ್ಲೆಯ ಭಾಗದಲ್ಲಿ ಕೃಷ್ಣಾ, ದೂಧಗಂಗಾ ಮತ್ತು ವೇದಗಂಗಾ ನದಿಯಲ್ಲಿ ನೀರಿನ ರಭಸ ಗಣನೀಯವಾಗಿ ಹೆಚ್ಚಿದ್ದು, ನದಿಪಾತ್ರದಲ್ಲಿ ಆತಂಕದ ಸ್ಥಿತಿ ಮುಂದುವರಿದಿದೆ.

ಶಿವಮೊಗ್ಗ ಜಿಲ್ಲೆಯಲ್ಲಿಯೂ ವರ್ಷಧಾರೆ ಮುಂದುವರಿದಿದೆ. ಇದರಿಂದಾಗಿ ತುಂಗಾ, ಭದ್ರಾ, ಶರಾವತಿ ಹಾಗೂ ಕುಮುದ್ವತಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ಇಂದು–ನಾಳೆ ಸಿ.ಎಂ ಪ್ರವಾಸ

ಒಂದನೇ ಪುಟದಿಂದ...

ಮಂಗಳವಾರ(ಜು.12) ಬೆಳಿಗ್ಗೆ ಮೈಸೂರಿಗೆ ತೆರಳಿ ಮಧ್ಯಾಹ್ನ ಕೊಡಗು ಜಿಲ್ಲೆಯಲ್ಲಿ ಹಾನಿಯಾದ ಪ್ರದೇಶದ ವೀಕ್ಷಣೆ ನಡೆಸುವರು, ಸಂಜೆ ದಕ್ಷಿಣ ಕನ್ನಡದಲ್ಲಿ ಹಾನಿಗೀಡಾದ ಪ್ರದೇಶಗಳಿಗೆ ಭೇಟಿ ನೀಡುವರು.

ಬುಧವಾರ (ಜು.13) ಬೆಳಿಗ್ಗೆ ಉಡುಪಿಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳ ಜತೆ ಸಭೆ ನಡೆಸಲಿದ್ದಾರೆ. ಆ ಬಳಿಕ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಬೆಳಿಗ್ಗೆ 11 ಕ್ಕೆ ಉತ್ತರ ಕನ್ನಡ ಜಿಲ್ಲೆಯ ಅಧಿಕಾರಿಗಳ ಜತೆ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ 2ರ ಬಳಿಕ ಉಡುಪಿ ಜಿಲ್ಲೆಯ ಹಾನಿಗೀಡಾದ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ.

ಗುಜರಾತ್: ಪ್ರವಾಹ ಸ್ಥಿತಿ

ಅಹಮದಾಬಾದ್ (ಪಿಟಿಐ): 'ಭಾರಿ ಮಳೆಯಿಂದಾಗಿ ಗುಜರಾತ್‌ನ ಹಲವೆಡೆ ಪ್ರವಾಹದ ಪರಿಸ್ಥಿತಿ ನಿರ್ಮಾಣವಾಗಿದ್ದು, ಸುಮಾರು 6 ಸಾವಿರ ಮಂದಿಯನ್ನು ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಅಹಮದಾಬಾದ್ ಸೇರಿದಂತೆ ದಕ್ಷಿಣ ಹಾಗೂ ಕೇಂದ್ರ ಭಾಗದ ಹಲವು ಜಿಲ್ಲೆಗಳಲ್ಲಿ ಹಿಂದಿನ 24 ಗಂಟೆಗಳಲ್ಲಿ ಧಾರಾಕಾರ ಮಳೆಯಾಗಿದೆ. ಹೀಗಾಗಿ ತಗ್ಗು ಪ್ರದೇಶಗಳಿಗೆ ಮಳೆ ನೀರು ನುಗ್ಗಿದೆ' ಎಂದು ತಿಳಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಕರೆಮಾಡಿ ಮಾತನಾಡಿದ್ದಾರೆ. ಕೇಂದ್ರದಿಂದ ಎಲ್ಲಾ ರೀತಿಯ ನೆರವು ಒದಗಿಸುವ ಭರವಸೆ ನೀಡಿದ್ದಾರೆ' ಎಂದು ಮುಖ್ಯಮಂತ್ರಿಗಳ ಕಾರ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

'ರಾಜ್ಯ ಹೆದ್ದಾರಿ ಸೇರಿದಂತೆ ಒಟ್ಟು 388 ರಸ್ತೆಗಳು ಜಲಾವೃತಗೊಂಡಿವೆ. ಎನ್‌ಡಿಆರ್‌ಎಫ್‌ನ 13 ಹಾಗೂ ಎಸ್‌ಡಿಆರ್‌ಎಫ್‌ನ 16 ತಂಡಗಳನ್ನು ರಕ್ಷಣಾ ಕಾರ್ಯಕ್ಕೆ ನಿಯೋಜಿಸಲಾಗಿದೆ' ಎಂದೂ ಪ್ರಕಟಣೆಯಲ್ಲಿ ಹೇಳಲಾಗಿದೆ.

ದೇವಸ್ಥಾನ ಮುಳುಗಡೆ (ಮುಂಬೈ ವರದಿ): ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ನದಿ ನೀರಿನ ಮಟ್ಟವೂ ಹೆಚ್ಚಳವಾಗಿದೆ. ಗೋದಾವರಿ ನದಿ ತೀರದಲ್ಲಿರುವ ದೇವಸ್ಥಾನಗಳು ಮುಳುಗಡೆಯಾಗಿವೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಸೋಮವಾರ ಸುರಿದ ಭಾರಿ ಮಳೆಯಿಂದಾಗಿ ಅಹಮದಾಬಾದ್‌ನ ವಾಣಿಜ್ಯ ಸಂಕೀರ್ಣವೊಂದರ ಮುಂದೆ ಕಾರು ಮುಳುಗಿದೆ – ಎಎಫ್‌ಪಿ ಚಿತ್ರ

'ಕೇಂದ್ರದ ವಿರುದ್ಧ ಧ್ವನಿ ಎತ್ತಿ'

ಯುವಜನೋತ್ಸವ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಡೀ ದೇಶದಲ್ಲಿ ನಿರುದ್ಯೋಗ ತಾಂಡವವಾಡುತ್ತಿದೆ. ನಿರುದ್ಯೋಗ ಪ್ರಮಾಣ ಗ್ರಾಮೀಣ ಪ್ರದೇಶದಲ್ಲಿ ಶೇ 7, ನಗರ ಪ್ರದೇಶದಲ್ಲಿ ಶೇ 9 ರಷ್ಟಿದೆ. ಇಷ್ಟು ಪ್ರಮಾಣದ ನಿರುದ್ಯೋಗ ಹಿಂದೆಂದೂ ಇರಲಿಲ್ಲ, ನರೇಂದ್ರ ಮೋದಿ ಅವರ ಕೇಂದ್ರ ಸರ್ಕಾರದ ವಿರುದ್ಧ ಎಲ್ಲರೂ ಧ್ವನಿ ಎತ್ತಬೇಕು' ಎಂದು ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮನವಿ ಮಾಡಿದರು.

ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಯುವಕರಿಗೆ ದೊಡ್ಡ ಅನ್ಯಾಯ ಮಾಡಿದ್ದರೆ ಅದು ಮೋದಿ ಮತ್ತು ಕೇಂದ್ರದ ಬಿಜೆಪಿ ಸರ್ಕಾರ' ಎಂದು ಅವರು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, '75ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ಪ್ರತಿ ಜಿಲ್ಲೆಯಲ್ಲಿ 75 ಕಿ.ಮೀ ಪಾದಯಾತ್ರೆ ಮಾಡಲು ತೀರ್ಮಾನಿಸಿದೆ. ಬೆಂಗಳೂರಿನಲ್ಲಿ ಆಗಸ್ಟ್ 15ರಂದು ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮದಲ್ಲಿ ಕನಿಷ್ಠ 1 ಲಕ್ಷ ಮಂದಿ ರಾಷ್ಟ್ರ ಧ್ವಜ ಹಿಡಿದು ಹೆಜ್ಜೆ ಹಾಕಬೇಕು' ಎಂದು ಹೇಳಿದರು.

ಯುವಜನೋತ್ಸವ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಮಾತನಾಡಿದರು. ಯುವ ಕಾಂಗ್ರೆಸ್ ರಾಜ್ಯ ಉಸ್ತುವಾರಿ ಕೃಷ್ಣ ಅಲ್ಲವರು, ಡಿ.ಕೆ. ಶಿವಕುಮಾರ್, ಬಿ.ವಿ. ಶ್ರೀನಿವಾಸ್, ಸಲೀಂ ಅಹ್ಮದ್ ಇದ್ದರು.

'ಆಪರೇಷನ್ ಕಮಲದ ಹೊಲಸು ದಂಧೆ'

ಬೆಂಗಳೂರು: 'ಸಾಧನೆಯ ಬಲದಿಂದ ಬಹುಮತ ಗಳಿಸಿ ಅಧಿಕಾರಕ್ಕೆ ಬರುವುದು ನಿಮ್ಮ ಹಣೆಯಲ್ಲಿ ಬರೆದಿಲ್ಲ. ನಿಮ್ಮದೇನಿದ್ದರೂ ಆಪರೇಷನ್ ಕಮಲದ ಹೊಲಸು ದಂಧೆ. ಎದುರಿಗಿದ್ದವರ ಊಟದೆಲೆಯ ಮೇಲಿನ ಸತ್ತ ನೊಣವನ್ನು ಹುಡುಕುವ ಚಾಳಿ ಬಿಡಿ, ನಿಮ್ಮ ಊಟದ ಎಲೆಯಲ್ಲಿ ಸತ್ತು ಬಿದ್ದಿರುವ ಆನೆಯನ್ನು ನೋಡಿ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿಯ ಅವರನ್ನು ಸಿದ್ದರಾಮಯ್ಯ ಕುಟುಕಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ನಾಲ್ಕು ದಶಕಗಳ ಕಾಲ ರಕ್ತ-ಬೆವರು ಹರಿಸಿ ಪಕ್ಷ ಕಟ್ಟಿದ್ದ ಬಿ.ಎಸ್. ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಿದವರು ಯಾರು? ಪಕ್ಷ ಅಧಿಕಾರದಲ್ಲಿದ್ದಾಗಲೇ ಅವರನ್ನು ಜೈಲಿಗೆ ಕಳಿಸಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದು ಯಾರ ಷಡ್ಯಂತ್ರ? ನೀವೂ ಅದರಲ್ಲಿ ಶಾಮೀಲಾಗಿಲ್ಲವೇ' ಎಂದು ಜೋಶಿಯವರನ್ನು ಪ್ರಶ್ನಿಸಿದ್ದಾರೆ.

'ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನದ ಆಸೆ ತೋರಿಸಿ, ಅವರಿಂದಲೆ ಆಪರೇಷನ್ ಕಮಲ ಮಾಡಿಸಿದ್ದು ಯಾರು? ಕೊನೆಗೆ ಅವರನ್ನೇ ಮುಖ್ಯಮಂತ್ರಿ ಸ್ಥಾನದಿಂದ ಕಿತ್ತು ಹಾಕಿದ್ದು ಯಾರು? ಕೈಗೆ ಬಂದದ್ದು ಬಾಯಿಗೆ ಬಾರದೆ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದಾಗ ಬೆಂಕಿ ಬಿದ್ದದ್ದು ಯಾರ ಹೊಟ್ಟೆಗೆ' ಎಂದೂ ಕೇಳಿದ್ದಾರೆ.

ಪಿಎಸ್‌ಐ ಅಕ್ರಮ: ₹ 40 ಲಕ್ಷಕ್ಕೆ ಅಭ್ಯರ್ಥಿಗಳೊಂದಿಗೆ ಡೀಲ್

ಖಾಲಿ ಉತ್ತರ ಪತ್ರಿಕೆಯಲ್ಲಿ ಮಂಜುನಾಥ ಕರಾಮತ್ತು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್ಐ ನೇಮಕಾತಿ ಅಕ್ರಮದಲ್ಲಿ ಶಾಮೀಲಾದ ಆರೋಪಿ ಮಂಜುನಾಥ ಮೇಳಕುಂದಿ ಒಎಂಆರ್ ಉತ್ತರ ಪತ್ರಿಕೆಗಳನ್ನು ಪರೀಕ್ಷೆ ಮುಗಿದ ಕೆಲವೇ ನಿಮಿಷಗಳಲ್ಲಿ ಪರೀಕ್ಷಾ ಸಿಬ್ಬಂದಿಯಿಂದ ಭರ್ತಿ ಮಾಡಿಸುವ ಮೂಲಕ ಅಭ್ಯರ್ಥಿಗಳು ಉತ್ತೀರ್ಣರಾಗುವಂತೆ ನೋಡಿಕೊಳ್ಳುತ್ತಿದ್ದ. ಆ ನಂತರ ತನ್ನ ಪಾಲಿನ ಹಣ ಬರುವವರೆಗೆ ಉತ್ತರ ಪತ್ರಿಕೆಯ ಅಭ್ಯರ್ಥಿಗಳ (ಕ್ಯಾಂಡಿಡೇಟ್ ಕಾಪಿ) ಪ್ರತಿ ತನ್ನ ಬಳಿಯೇ ಇಟ್ಟುಕೊಳ್ಳುತ್ತಿದ್ದ ಸಂಗತಿ ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಹೊರಬಿದ್ದಿದೆ.

ಮಂಜುನಾಥ ಮೇಳಕುಂದಿ

ಪ್ರಕರಣದಲ್ಲಿ ಮೊದಲಿಗೆ ಬಂಧನಕ್ಕೆ ಒಳಗಾದ ಅಭ್ಯರ್ಥಿ, ಸೇಡಂನ ವೀರೇಶನಿಗೆ ₹40 ಲಕ್ಷಕ್ಕೆ ಬೇಡಿಕೆಯಿಟ್ಟು, ಆತನಿಂದ ₹36 ಲಕ್ಷ ಮಂಜುನಾಥ ಪಡೆದಿದ್ದ. ₹4 ಲಕ್ಷವಷ್ಟೇ ಬಾಕಿಯುಳಿದಿದ್ದರೂ ವಿದ್ಯಾರ್ಥಿಯ ಉತ್ತರ ಪತ್ರಿಕೆಯ ಕಾರ್ಬನ್ ಪ್ರತಿ ನೀಡಿರಲಿಲ್ಲ. ಅಕ್ರಮ ಹೊರಬಿದ್ದು, ಕಲಬುರಗಿಯ ಚೌಕ ಠಾಣೆಯಲ್ಲಿಪ್ರಕರಣದಾಖಲಾದಬಳಿಕಆತಂಕಗೊಂಡು ಆತ ನಾಲೆಯಲ್ಲಿ ಎಸೆದು ನಾಶ ಮಾಡಿದ್ದ.

'ಕರ್ನಾಟಕ ನೀರಾವರಿ ನಿಗಮದಲ್ಲಿ ಸಹಾಯಕ ಎಂಜಿನಿಯರ್ (ಎಇ) ಆಗಿದ್ದ ಮಂಜುನಾಥ ಮೇಳಕುಂದಿಗೆ ಅಮರ್ಜಾ ಜಲಾಶಯದ ಉಸ್ತುವಾರಿ ವಹಿಸಲಾಗಿತ್ತು. ಪರೀಕ್ಷಾ ಅಕ್ರಮದಲ್ಲಿ ಪಳಗಿದ್ದ ಆರೋಪಿ ಪ್ರತಿ ಅಭ್ಯರ್ಥಿಗಳನ್ನು ವಿವಿಧ ಸ್ಥಳಗಳಲ್ಲಿ ಭೇಟಿ ಮಾಡುತ್ತಿದ್ದ. ಅಭ್ಯರ್ಥಿಗಳಿಂದ ಹಣ ಪಡೆಯಲು ಸಹಚರರಿಗೂ ತಿಳಿಸಿದ್ದ. ವೀರೇಶನಿಂದ ₹5 ಲಕ್ಷ ಹಣ ಖುದ್ದಾಗಿ ಪಡೆದಿದ್ದ. ಉಳಿದ ಹಣವನ್ನು ಸಂಬಂಧಿಕರಿಗೆ ಕೊಡುವಂತೆ ಸೂಚಿಸಿದ್ದ' ಎಂದು ದೋಷಾರೋಪ ಪಟ್ಟಿಯಲ್ಲಿ ದಾಖಲಾಗಿದೆ.

ಉತ್ತರ ಪತ್ರಿಕೆ ಭರ್ತಿ ಹೇಗೆ?: 2021ರ ಅಕ್ಟೋಬರ್ 3ರಂದು ನಡೆದ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಎರಡು ಉತ್ತರ ಪತ್ರಿಕೆಗಳನ್ನು ಬರೆಯಬೇಕಿತ್ತು. ಮಧ್ಯಾಹ್ನದ ನಂತರ ಇದ್ದ ಪೇಪರ್–2 ಪತ್ರಿಕೆ ಅಂಕ ಗಳಿಕೆ ದೃಷ್ಟಿಯಿಂದ ಮಹತ್ವದ್ದಾಗಿದೆ. ಅಭ್ಯರ್ಥಿಗಳಿಂದ ಮುಂಚೆಯೇ ಹಣ ಪಡೆದಿದ್ದ ಮಂಜುನಾಥ ಆ ಪತ್ರಿಕೆಯಲ್ಲಿ ಅವರಿಗೆ ಗೊತ್ತಿರುವ ಸರಿ ಉತ್ತರಗಳನ್ನಷ್ಟೇ ಭರ್ತಿ ಮಾಡುವಂತೆ ಸೂಚನೆ ನೀಡಿದ್ದ. ಅದರಂತೆ ಅಭ್ಯರ್ಥಿಗಳು ಶೇ 25ರಷ್ಟು ಮಾತ್ರ ಉತ್ತರವನ್ನು ತುಂಬುತ್ತಿದ್ದರು. ಉಳಿದ ಶೇ 75ರಷ್ಟು ಉತ್ತರಗಳನ್ನು ಅಲ್ಲಿ ಪರಿವೀಕ್ಷಕರಾಗಿದ್ದ ಜ್ಞಾನಜ್ಯೋತಿ ಶಾಲೆಯ ಶಿಕ್ಷಕಿಯರ ಮೂಲಕ ಅಕ್ರಮವಾಗಿ ಭರ್ತಿ ಮಾಡಿಸಿದ್ದ.

'ಇದಕ್ಕಾಗಿ ಶಾಲೆಯ ಮುಖ್ಯ ಶಿಕ್ಷಕ ಕಾಶಿನಾಥ ಚಿಳ್ಳ, ಶಾಲೆಯ ಕಾರ್ಯದರ್ಶಿ ದಿವ್ಯಾ ಹಾಗರಗಿ, ಭದ್ರತೆಗೆ ನಿಯೋಜನೆಗೊಂಡಿದ್ದ ಎಸ್ಪಿ ಕಚೇರಿಯ ಬೆರಳಚ್ಚು ವಿಭಾಗದ ಸಿಪಿಐ ಆಗಿದ್ದ ಆನಂದ ಮೇತ್ರೆ ಸಹಕಾರ ನೀಡಿದ್ದರು' ಎಂದು ಸಿಐಡಿ ತನ್ನ ದೋಷಾರೋಪ ಪಟ್ಟಿಯಲ್ಲಿ ತಿಳಿಸಿದೆ.

ಹಣ ಕೊಟ್ಟಿದ್ದ ಐವರೂ ಪಾಸ್

ಪರೀಕ್ಷಾ ಅಕ್ರಮದಲ್ಲಿ ಪಳಗಿದ್ದ ಮಂಜುನಾಥ ಮೇಳಕುಂದಿ ತಾನು ಹಣ ಪಡೆದಿದ್ದ ಎಲ್ಲ ಅಭ್ಯರ್ಥಿಗಳನ್ನು ಪಾಸ್ ಮಾಡಿಸುವಲ್ಲಿ ಯಶಸ್ವಿಯಾಗಿದ್ದ.

ವೀರೇಶ, ಚೇತನ ನಂದಗಾಂವ, ಪ್ರವೀಣಕುಮಾರ್, ಅರುಣಕುಮಾರ್ ಮತ್ತು ಶಾಂತಿಬಾಯಿ ಅವರ ಹೆಸರುಗಳು ಜನವರಿ 19ರಂದು ಪ್ರಕಟವಾದ ಪಿಎಸ್ಐ ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಇದ್ದವು.

ಪರೀಕ್ಷೆಯ ದಿನ ವಾಟ್ಸ್‌ಆ್ಯಪ್ ಮೂಲಕ ತನ್ನ ಸಹಚರರನ್ನು ಸಂಪರ್ಕಿಸಲು ಮತ್ತು ಪ್ರಶ್ನೆಗಳಿಗೆ ಉತ್ತರ ಹುಡುಕಲು ಬಳಸಿದ್ದ ಮೂರು ಮೊಬೈಲ್ ಫೋನ್‌ಗಳನ್ನು ಅಮರ್ಜಾ ಜಲಾಶಯದಲ್ಲಿ ಮಂಜುನಾಥ ಎಸೆದಿದ್ದ. ಆ ನಂತರ ಸಿಐಡಿ ಅಧಿಕಾರಿಗಳು ಹುಡುಕಾಟ ನಡೆಸಿದ್ದರೂ ಅವು ಸಿಗಲಿಲ್ಲ.

'ಹಗರಣ ಮುಚ್ಚಿಹಾಕಲು ಹುನ್ನಾರ'

ವಿಜಯಪುರ: 'ಪಿಎಸ್ಐ ನೇಮಕಾತಿ ಹಗರಣ ಮುಚ್ಚಿ ಹಾಕುವ ಹುನ್ನಾರ ನಡೆದಿದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಿಎಸ್ಐ ಅಕ್ರಮ ನೇಮಕಾತಿ ಪ್ರಕರಣದಲ್ಲಿ ದೊಡ್ಡ ದೊಡ್ಡವರು ಇದ್ದಾರೆ ಎನ್ನಲಾಗುತ್ತಿದೆ. ಆ ದೊಡ್ಡವರು ಯಾರು ಎಂಬುದು ಬಹಿರಂಗವಾಗಬೇಕಿದೆ' ಎಂದರು.

'ಮಾಜಿ ಮುಖ್ಯಮಂತ್ರಿಯ ಮಗನೊಬ್ಬನೇ ಸುಮಾರು 150 ಪಿಎಸ್ಐ ಹುದ್ದೆಗಳಿಗೆ ಅಕ್ರಮವಾಗಿ ನೇಮಕ ಮಾಡಲು ತಲಾ ₹80 ಲಕ್ಷ ಹಣ ತೆಗೆದುಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಮಾಜಿ ಮುಖ್ಯಮಂತ್ರಿ ಮಗ ಅಂದರೆ ಯಾರು? ದೇವೇಗೌಡರ ಮಗನಾ? ಸಿದ್ದರಾಮಯ್ಯನವರ ಮಗನಾ ಅಥವಾ ಯಡಿಯೂರಪ್ಪನವರ ಮಗನಾ? ಎನ್ನುವುದು ಸ್ಪಷ್ಟವಾಗಬೇಕು' ಎಂದು ಆಗ್ರಹಿಸಿದರು.

ಸರ್ಕಾರದಿಂದ ಒತ್ತಡ– ಡಿಕೆಶಿ

ಬೆಂಗಳೂರು: 'ಪಿಎಸ್ಐ ಅಕ್ರಮ ಪ್ರಕರಣದ ವಿಚಾರಣೆ ನಡೆಸುತ್ತಿರುವ ಅಧಿಕಾರಿಗಳು, ಸರ್ಕಾರದ ಒತ್ತಡಕ್ಕೆ ಮಣಿದು ಪ್ರಬಲ ಅಧಿಕಾರಿಗಳು ಮತ್ತು ಹಾಗೂ ರಾಜಕಾರಣಿಗಳಿಗೆ ಬೆಂಬಲವಾಗಿ ನಿಂತಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್ ಅವರನ್ನು ತನಿಖಾಧಿಕಾರಿಗಳು ಬಂಧಿಸಿದ್ದು, ನ್ಯಾಯಾಲಯದ ಮುಂದೆ ಅವರ ಹೇಳಿಕೆ ದಾಖಲಿಸಿಕೊಳ್ಳಬೇಕು' ಎಂದು ಆಗ್ರಹಿಸಿದರು.

'ಈ ಪ್ರಕರಣದಲ್ಲಿ ಸಚಿವ ಅಶೋಕ ಕೂಡ ಭಾಗಿಯಾಗಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ತಮಗೆ ಬಂದಿರುವ ಮಾಹಿತಿಯ ಆಧಾರದಲ್ಲಿ ಸಚಿವರುಗಳು ಭಾಗಿಯಾಗಿದ್ದಾರೆ ಎಂದು ಹೇಳಿದ್ದಾರೆ' ಎಂದರು.

ಪ್ರತಿಭಟನೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ಒಗ್ಗಟ್ಟು ಪ್ರದರ್ಶನ

ಮೀಸಲಾತಿ ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಮೇದಾರ ಗುರುಪೀಠದ ಮೇದಾರ ಕೇತೇಶ್ವರ ಸ್ವಾಮೀಜಿ, ಬಹುಜನ ಸಮಾಜ ಪಕ್ಷದ ಮುಖಂಡ ಮಾರಸಂದ್ರ ಮುನಿಯಪ್ಪ ಪಾಲ್ಗೊಂಡಿದ್ದರು

ಚಿತ್ರದುರ್ಗ / ಹುಬ್ಬಳ್ಳಿ / ಕಲಬುರಗಿ: ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ನಾಗಮೋಹನ ದಾಸ್ ಸಮಿತಿ ನೀಡಿದ ವರದಿಯನ್ನು ಜಾರಿಗೊಳಿಸುವಂತೆ ಆಗ್ರಹಿಸಿ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ಚಿತ್ರದುರ್ಗದಲ್ಲಿ ವಿವಿಧ ಮಠಾಧೀಶರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಪ್ರತಿಭಟನಕಾರರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಹಿರಂಗ ಸಭೆ ನಡೆಸಿದ ಪ್ರತಿಭಟನಕಾರರು ನಾಗಮೋಹನ ದಾಸ್ ಸಮಿತಿ ವರದಿ ಜಾರಿಯಾಗುವವರೆಗೂ ಹೋರಾಟ ನಿಲ್ಲುವುದಿಲ್ಲ ಎಂಬ ಸಂದೇಶ ರವಾನಿಸಿದರು. ಆರ್ಥಿಕವಾಗಿ ದುರ್ಬಲವಾಗಿರುವ ಮೇಲ್ವರ್ಗಕ್ಕೆ ಶೇ 10ರಷ್ಟು ಮೀಸಲಾತಿ ಕಲ್ಪಿಸಿರುವುದಕ್ಕೆ ವಿರೋಧ ವ್ಯಕ್ತಪಡಿಸಿದರು.

ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಮೇದಾರ ಗುರುಪೀಠದ ಮೇದಾರ ಕೇತೇಶ್ವರ ಸ್ವಾಮೀಜಿ ಇದ್ದರು.

ಹೊಸಪೇಟೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯ ವೇಳೆ ಪೊಲೀಸರು ಮತ್ತು ಪ್ರತಿಭಟನಕಾರರ ನಡುವೆ ವಾಗ್ವಾದ ನಡೆದು, ತಳ್ಳಾಟ, ನೂಕಾಟ ಉಂಟಾಗಿತ್ತು. ಕರ್ನಾಟಕ ರಾಜ್ಯ ಸ್ವಾಭಿಮಾನಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ನೇತೃತ್ವದಲ್ಲಿ ನೂರಾರು ಜನ ಜಿಲ್ಲಾಧಿಕಾರಿ ಕಚೇರಿ ಗೇಟ್‌ಗೆ ಬೀಗ ಜಡಿದು, ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಕೆಲವೆಡೆ ರಸ್ತೆ ತಡೆ ನಡೆಸಿದರು.

ಸರ್ಕಾರ ಹಾಗೂ ಸಾರಿಗೆ ಸಚಿವ ಬಿ. ಶ್ರೀರಾಮುಲು ಸೇರಿದಂತೆ ಎಸ್‌ಸಿ, ಎಸ್‌ಟಿ ಸಮಾಜದ ಸಚಿವ, ಶಾಸಕರ ರಾಜೀನಾಮೆಗೆ ಒತ್ತಾಯಿಸಿದರು.

ಕೊಪ್ಪಳದಲ್ಲಿ ಕರ್ನಾಟಕ ಸ್ವಾಭಿಮಾನಿ ಎಸ್‌ಸಿ, ಎಸ್‌ಟಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ಸದಸ್ಯರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಪ್ರತಿಭಟನಕಾರರು ಮುಂದಾದಾಗ, ಅವರನ್ನು ಪೊಲೀಸರು ಬ್ಯಾರಿಕೇಡ್‌ಗಳ ಮೂಲಕ ತಡೆಯಲು ಪ್ರಯತ್ನಿಸಿದರು.

ವಿಶ್ವಕರ್ಮ: ಶೇ 20ರಷ್ಟು ಒಳಮೀಸಲಿಗೆ ಒತ್ತಾಯ

ದಾವಣಗೆರೆ: ಹಿಂದುಳಿದ ವರ್ಗ 2 'ಎ' ಅಡಿಯಲ್ಲಿ ವಿಶ್ವಕರ್ಮ ಸಮಾಜಕ್ಕೆ ಶೇ 20ರಷ್ಟು ಒಳ ಮೀಸಲಾತಿ ನೀಡಬೇಕು ಎಂದು ವಿಶ್ವಬ್ರಾಹ್ಮಣ ಮಠಾಧಿಪತಿಗಳ ಒಕ್ಕೂಟ ಒತ್ತಾಯಿಸಿತು.

ಅಖಿಲ ಭಾರತ ವಿಶ್ವಕರ್ಮ ಪರಿಷತ್ ಮತ್ತು ರಾಜ್ಯ ವಿಶ್ವಕರ್ಮ ಸಮಾಜದ ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ನಗರದಲ್ಲಿ ಸೋಮವಾರ ನಡೆದ ಅಖಿಲ ಕರ್ನಾಟಕ ವಿಶ್ವಬ್ರಾಹ್ಮಣ ಪೀಠಾಧಿಪತಿಗಳ ಮತ್ತು ಮಠಾಧಿಪತಿಗಳ ಒಕ್ಕೂಟದ ಸಮ್ಮಿಲನದಲ್ಲಿ ಪರಿಷತ್ ರಾಷ್ಟ್ರೀಯ ಕಾರ್ಯಾಧ್ಯಕ್ಷ ಕೆ.ಪಿ. ಪರಮೇಶ್ವರಾಚಾರ್ ಈ ಕುರಿತ ಬೇಡಿಕೆ ಮಂಡಿಸಿದರು.

'ವಿಶ್ವಕರ್ಮರ ಪಂಚ ಕಸುಬುಗಳಿಗೆ, ಇತರೆ ಸಮಾಜದ ಕರಕುಶಲ ವಸ್ತುಗಳ ಕೈಗಾರಿಕಾ ತರಬೇತಿಗೆ ದಾವಣಗೆರೆಯಲ್ಲಿ 25 ಎಕರೆ ಜಮೀನು ಮಂಜೂರು ಮಾಡಬೇಕು. ಮಠಗಳ ಅಭಿವೃದ್ಧಿಗೆ ಅನುದಾನ ನೀಡಬೇಕು. ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಸಮುದಾಯ ಭವನ ಹಾಗೂ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

ನಟ ಪುನೀತ್ ರಾಜ್‌ಕುಮಾರ್ ನೆನಪಿನಲ್ಲಿ ವಿಜಯ ರಾಘವೇಂದ್ರ ಅವರಿಗೆ 'ವಿಶ್ವ ಪುನೀತ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

'12ನೇ ತರಗತಿವರೆಗೆ ಕನ್ನಡ ಕಡ್ಡಾಯ'

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯಡಿ ಭಾಷಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿದ ವರದಿಯಲ್ಲಿ (ಪೊಸಿಷನ್ ಪೇಪರ್) 1 ರಿಂದ 12ನೇ ತರಗತಿವರೆಗೆ 'ತ್ರಿ–ಭಾಷಾ' ನೀತಿ ಅಳವಡಿಸಲು ಪ್ರಸ್ತಾಪಿಸಲಾಗಿದ್ದು, ಈ ಪೈಕಿ, ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯಗೊಳಿಸಲಾಗಿದೆ.

5ನೇ ತರಗತಿವರೆಗೆ ಮಾತೃಭಾಷೆ ಅಥವಾ ಮನೆ ಭಾಷೆ ಅಥವಾ ಸ್ಥಳೀಯ ಭಾಷೆ ಅಥವಾ ಕನ್ನಡದಲ್ಲಿ ಬೋಧನೆಯನ್ನು ಪ್ರಸ್ತಾಪಿಸಲಾಗಿದೆ. ಆ ಮೂಲಕ, ಬೋಧನೆಗೆ ದ್ವಿಭಾಷಾ ನೀತಿಗೆ ಅವಕಾಶ ನೀಡಲಾಗಿದೆ. ಅಂದರೆ, ತರಗತಿಯಲ್ಲಿ ಇಂಗ್ಲಿಷ್ ಮಾತೃಭಾಷೆಯ ಮಕ್ಕಳು ಅಥವಾ ಸ್ಥಳೀಯ ಭಾಷೆ ಗೊತ್ತಿಲ್ಲದ ಇತರ ರಾಜ್ಯಗಳ ಮಕ್ಕಳಿದ್ದರೆ, ಮಾತೃಭಾಷೆಯ ಜೊತೆಗೆ, ಮನೆ ಭಾಷೆ, ಸ್ಥಳೀಯ ಭಾಷೆ ಅಥವಾ ಕನ್ನಡದ ಜೊತೆಗೆ ಹೆಚ್ಚುವರಿಯಾಗಿ ಇಂಗ್ಲಿಷ್‌ನಲ್ಲಿಯೂ ಬೋಧಿಸಲು ಅವಕಾಶ ಕಲ್ಪಿಸಲಾಗಿದೆ.

ಇತರ ತರಗತಿಗಳಿಗೆ ಬೋಧನಾ ಮಾಧ್ಯಮ ದ್ವಿ ಭಾಷೆಯಲ್ಲಿ ಇರಲಿದೆ. ಮಾತೃಭಾಷೆಯ ಜೊತೆಗೆ ಇಂಗ್ಲಿಷ್ ಅಥವಾ ಕನ್ನಡದಲ್ಲಿ ಶಿಕ್ಷಕರು ಬೋಧಿಸಬಹುದು. ಮಕ್ಕಳು ಈ ಎರಡು ಭಾಷೆಗಳ ಪೈಕಿ, ಯಾವುದರಲ್ಲಿ ಬೇಕಾದರೂ ಪರೀಕ್ಷೆಯನ್ನು ಬರೆಯಬಹುದು ಎಂದು ತಜ್ಞರ ಸಮಿತಿ ಹೇಳಿದೆ.

ನಿಗಮ–ಮಂಡಳಿ ಅಧ್ಯಕ್ಷರ ರಾಜೀನಾಮೆಗೆ ಸೂಚನೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿರುವಂತೆ ಕೆಲವು ನಿಗಮ–ಮಂಡಳಿ ಅಧ್ಯಕ್ಷರು– ಉಪಾಧ್ಯಕ್ಷರನ್ನು ಬದಲಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮುಂದಾಗಿದ್ದಾರೆ. ರಾಜೀನಾಮೆ ನೀಡುವಂತೆ ಈಗಾಗಲೇ ಕೆಲವರಿಗೆ ಸೂಚನೆ ನೀಡಿದ್ದಾರೆ.

ಶಾಸಕ ಬಿ.ಎಸ್. ಯಡಿಯೂರಪ್ಪ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಭಾನುವಾರ ಭೇಟಿ ಮಾಡಿದ ಬೆನ್ನಲ್ಲೆ ಈ ಬೆಳವಣಿಗೆ ನಡೆದಿದೆ. ಈ ಬಗ್ಗೆ ಮುಖ್ಯಮಂತ್ರಿ ಜೊತೆ ನಳಿನ್ ಕುಮಾರ್ ಕೂಡಾ ಚರ್ಚೆ ನಡೆಸಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪಕ್ಷದ ಶಾಸಕರು ಅಧ್ಯಕ್ಷರಾಗಿರುವ ನಿಗಮ–ಮಂಡಳಿಗಳನ್ನು ಹೊರತುಪಡಿಸಿ ಉಳಿದ ನಿಗಮ ಮಂಡಳಿಗಳ ಅಧ್ಯಕ್ಷರನ್ನು ಬದಲಿಸಲು ಚರ್ಚೆ ನಡೆದಿದೆ. 8–10 ನಿಗಮ ಮಂಡಳಿಗಳನ್ನು ಬಿಟ್ಟು ಉಳಿದೆಲ್ಲವುಗಳ ಅಧ್ಯಕ್ಷರನ್ನು ಬದಲಿಸುವ ಬಗ್ಗೆ ಚರ್ಚೆ ನಡೆದಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧೀನದಲ್ಲಿ ಬರುವ ಯಾವುದೇ ಅಕಾಡೆಮಿಗಳ ಅಧ್ಯಕ್ಷರ ಬದಲಾವಣೆ ಸಾಧ್ಯತೆ ಇಲ್ಲ ಎಂದೂ ಮೂಲಗಳು ತಿಳಿಸಿವೆ.

'ಚುನಾವಣೆಗೆ 10 ತಿಂಗಳು ಇರುವಾಗ ಪಕ್ಷದ ಶಾಸಕರು ಮತ್ತು ಕಾರ್ಯಕರ್ತರಿಗೆ ನಿಗಮ ಮಂಡಳಿಗಳಲ್ಲಿ ಆದ್ಯತೆ ನೀಡಲು ಉದ್ದೇಶಿಸಲಾಗಿದೆ. ಯಾರನ್ನೆಲ್ಲ ಬದಲಾವಣೆ ಮಾಡಬೇಕು ಎಂಬ ಬಗ್ಗೆ ಚರ್ಚೆ ನಡೆದಿದೆ' ಎಂದೂ ಮೂಲಗಳು ಹೇಳಿವೆ.

ಸರ್ಕಾರಿ ನೌಕರರ ಶಸ್ತ್ರಚಿಕಿತ್ಸೆ ಪ್ಯಾಕೇಜ್ ದರ ನಿಗದಿ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರು ಶ್ವಾಸಕೋಶದ ಶಸ್ತ್ರ ಚಿಕಿತ್ಸೆಗೆ ಮತ್ತು ವೈದ್ಯಕೀಯ ವೆಚ್ಚ ಮರುಪಾವತಿ ಪಡೆಯುವ ಸಂಬಂಧ ಹೊಸ ಆದೇಶವೊಂದನ್ನು ಹೊರಡಿಸಲಾಗಿದೆ.

ಶ್ವಾಸಕೋಶ ಕಸಿಗೆ ₹ 15 ಲಕ್ಷ, ಹೃದಯ ಮತ್ತು ಶ್ವಾಸಕೋಶ ಕಸಿ ಚಿಕಿತ್ಸೆಗೆ ₹15 ಲಕ್ಷ ಮತ್ತು ಶ್ವಾಸಕೋಶ ಕಸಿಯ ಶೇ 50 ರಷ್ಟು ಪ್ಯಾಕೇಜ್ ದರವನ್ನು ನಿಗದಿ ಮಾಡಲಾಗಿದೆ.

ಸಮಾಜ ವಿಜ್ಞಾನದಲ್ಲೇ ನಾರಾಯಣ ಗುರು ಪಠ್ಯ

ಬೆಂಗಳೂರು: ಇಂಧನ ಸಚಿವ ವಿ. ಸುನಿಲ್ ಕುಮಾರ್ ಅವರ ಒತ್ತಾಯಕ್ಕೆ ಮಣಿದಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಬ್ರಹ್ಮಶ್ರೀ ನಾರಾಯಣ ಗುರುಗಳ ಪಠ್ಯವನ್ನು ಸಮಾಜ ವಿಜ್ಞಾನ ವಿಷಯದಲ್ಲೇ ಅಳವಡಿಸಲು ಆದೇಶ ಹೊರಡಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೋಮವಾರ ನಿರ್ದೇಶನ ನೀಡಿದ್ದಾರೆ.

ನಾರಾಯಣ ಗುರು ಅವರಿಗೆ ಸಂಬಂಧಿಸಿದ ಪಠ್ಯವನ್ನು ಈ ಹಿಂದೆ ಇದ್ದಂತೆ ಸಮಾಜ ವಿಜ್ಞಾನ ವಿಷಯದಲ್ಲೇ ಅಳವಡಿಸುವಂತೆ ಸುನಿಲ್ ಕುಮಾರ್ ಅವರು ಬಿ.ಸಿ. ನಾಗೇಶ್ ಅವರಿಗೆ ಪತ್ರ ಬರೆದಿದ್ದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉಪಸ್ಥಿತಿಯಲ್ಲೇ ನಾಗೇಶ್ ಅವರನ್ನು ಸೋಮವಾರ ಭೇಟಿಮಾಡಿ ಪತ್ರವನ್ನು ಸಲ್ಲಿಸಿದ್ದರು.

ನಾರಾಯಣ ಗುರುಗಳಿಗೆ ಸಂಬಂಧಿಸಿದ ಪಠ್ಯವನ್ನು ಸಮಾಜ ವಿಜ್ಞಾನ ವಿಷಯದಿಂದ ಕನ್ನಡ ವಿಷಯಕ್ಕೆ ವರ್ಗಾವಣೆ ಮಾಡಿರುವುದನ್ನು ಆಕ್ಷೇಪಿಸಿ ಹಲವರು ತಮ್ಮ ಬಳಿ ಚರ್ಚಿಸಿರುವುದನ್ನು ಆಧರಿಸಿ ಪತ್ರ ಬರೆದಿರುವುದಾಗಿ ಇಂಧನ ಸಚಿವರು ತಿಳಿಸಿದ್ದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕೊಪ್ಪಳ. ದೂರವಾಣಿ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2022–23/1704 ದಿ:06.07.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕೊಪ್ಪಳ ಜಿಲ್ಲೆಯ ಟೆಂಡರ ಕಾಮಗಾರಿಗಾಗಿ 4702 ಪ್ರಧಾನ ಕಾಮಗಾರಿಗಳು ಶೀರ್ಷಿಕೆ ಅಡಿಯಲ್ಲಿ 5 ಕಾಮಗಾರಿಗಳ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.17.44 ಲಕ್ಷಗಳ ರಿಂದ 35.41 ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: 11.07.2022 ರಿಂದ ದಿನಾಂಕ:19.07.2022 ಸಂಜೆ. 5.30 ಗಂಟೆಯವರೆಗೆ ಸಲ್ಲಿಸಬಹುದು. ತಾಂತ್ರಿಕ ಹಾಗೂ ಆರ್ಥಿಕ ಬಿಡ್ಡನ್ನು ದಿನಾಂಕ:21.07.2022 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು, ಹೆಚ್ಚಿನ ಮಾಹಿತಿಗಳನ್ನು "ಇ–ಪ್ರಕ್ಯೂರ್‌ಮೆಂಟ್" ವೆಬ್‌ಸೈಟ್ **http://eproc.karntaka.gov.in/e-portal/index.seam** ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ಡಿಐಪಿಆರ್/ಕೊಪ್ಪಳ/210/ಎಂಸಿಎ/2022–23

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–560001

ಹೆಚ್‌ಸಿಸಿ ಸಂ.30/2018 ದಿನಾಂಕ: 08.07.2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ತನ್ನ ಅಧೀನ ನ್ಯಾಯಾಲಯಗಳ ನ್ಯಾಯಾಂಗ ಅಧಿಕಾರಿಗಳಿಗೆ, **772 ಸಂಖ್ಯೆ ಲ್ಯಾಪ್‌ಟಾಪ್‌ಗಳನ್ನು** ಖರೀದಿಸಿ ಸರಬರಾಜು ಮಾಡಲು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ನ್ನು **10.08.2022ರ ಸಂಜೆ 4.00 ಗಂಟೆಯೊಳಗೆ** ಆಸಕ್ತರು ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು **https://eproc.karnataka.gov.in** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/– (ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
ವಾಸಾಸಂಇ/ಉನಿ–ಸಿ.ಪಿ/1291/ಎಂಸಿಎ/2022–23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001. ಕರ್ನಾಟಕ ರಾಜ್ಯ, ಭಾರತ.
ಫೋನ್: 25581383, 25589112, 25589113, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ನಂ: ಮಾನಿಮಂ/165/ಹಿಪಅ/ಗಣಿ/ಪಸಾಸ/2022-23/2456 ದಿನಾಂಕ: 08.07.2022

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಶ್ರೀ. ಶ್ರೀರಾಮ ರೆಡ್ಡಿ, ರವರು ನೈಸರ್ಗಿಕ ಮರಳು ಗಣಿಗಾರಿಕೆ ಮಾಡಲು ಸರ್ವೆ ನಂ. 46, ಉರ್ತಾಳ ಗ್ರಾಮ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 9–26 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 68,166 ಟನ್‌ಗಳಷ್ಟು ನೈಸರ್ಗಿಕ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಗೆ ಒಳಪಟ್ಟಿದ್ದು, ಅದರ ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ **Terms of Reference** ಪತ್ರ ಸಂಖ್ಯೆ : **SEIAA 82 MIN 2021** ದಿನಾಂಕ: **07.08.2021** ಮತ್ತು ಉದ್ದಿಮೆದಾರರು ಮಂಡಳಿಗೆ ಸಲ್ಲಿಸಿದ ನಿವೇದನಾ ಪತ್ರ ದಿನಾಂಕ : 21.05.2022 ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಅರ್ಜಿದಾರರ ಹೆಸರು ಮತ್ತು ವಿಳಾಸ :** ಶ್ರೀ. ಶ್ರೀರಾಮ ರೆಡ್ಡಿ, S/o ಎಚ್. ತಿಮ್ಮಪ್ಪ, ಹೌಸ್ ನಂ. 201, ವಾರ್ಡ್ ನಂ. 01, ಜೆ. ಬಿ. ಹಳ್ಳಿ, ಜಹಗೀರ್ ಬುದ್ದೇನಹಳ್ಳಿ, ರಾಮ್‌ಪುರ, ಚಿತ್ರದುರ್ಗ ಜಿಲ್ಲೆ, ಕರ್ನಾಟಕ– 577540
2. **ಉದ್ದೇಶಿತ ಯೋಜನೆಯ ಸ್ಥಳ : ಸರ್ವೆ ನಂ. 46, ಉರ್ತಾಳ ಗ್ರಾಮ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಕರ್ನಾಟಕ.**
3. **ಉದ್ದೇಶಿತ ಯೋಜನೆಯ ಕಾರ್ಯ ಚಟುವಟಿಕೆ: ವರ್ಷಕ್ಕೆ 68,166 ಟನ್‌ಗಳಷ್ಟು ನೈಸರ್ಗಿಕ ಮರಳು ಗಣಿಗಾರಿಕೆ.**
4. **ಉದ್ದೇಶಿತ ಮಾಲಿನ್ಯ ನಿಯಂತ್ರಣ ಕ್ರಮಗಳು :** ಸಿಬ್ಬಂದಿ ಕಛೇರಿಯಿಂದ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ಸೆಪ್ಟಿಕ್ ಟ್ಯಾಂಕ್ ಮತ್ತು ಹಳ್ಳದ ವ್ಯವಸ್ಥೆಗೆ ಮಾಡಲಾಗುವುದು. ಗಣಿಗಾರಿಕೆ ಪ್ರದೇಶದ ಅಂತರ್ಜಲ ಸಂಪನ್ಮೂಲವನ್ನು ಸುಧಾರಿಸುವ ಸಲುವಾಗಿ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಕೈಗೊಳ್ಳಲಾಗುವುದು. ಸಾಗಿಸುವ ಮತ್ತು ಪ್ರವೇಶ ರಸ್ತೆಗಳಲ್ಲಿ ನಿಯಮಿತವಾಗಿ ನೀರನ್ನು ಸಿಂಪಡಿಸಲಾಗುತ್ತದೆ. ಡೀಸಲ್ ಎಂಜಿನ್‌ಗಳಿಂದ ಹೊರಹೊಮ್ಮುವ ಧೂಳಿನ ಕಣಗಳು ಮತ್ತು ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಎಲ್ಲಾ ಉಪಕರಣಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಲಾಗುತ್ತದೆ. ಗುತ್ತಿಗೆ ಪ್ರದೇಶದ ಗಡಿ ವಲಯದ ಉದ್ದಕ್ಕೂ ದಟ್ಟವಾದ ಹಸಿರು ಪಟ್ಟಿಯನ್ನು ಒದಗಿಸಲಾಗಿದೆ.
5. **ಪರಿಸರ ಸಾರ್ವಜನಿಕ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: 12.08.2022 (ಶುಕ್ರವಾರ) ರಂದು ಅಪರಾಹ್ನ 12:00 ಗಂಟೆ, ಸರ್ವೆ ನಂ. 46, ಉರ್ತಾಳ ಗ್ರಾಮ, ಮೊಳಕಾಲ್ಮೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಕರ್ನಾಟಕ.**
6. **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳಗಳು:** ಅ) ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ. ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಚಿತ್ರದುರ್ಗ. ಈ) ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಮೊಳಕಾಲ್ಮೂರು. ಉ) ತಹಶೀಲ್ದಾರರ ಕಾರ್ಯಾಲಯ, ಚಿತ್ರದುರ್ಗ. ಊ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಉರ್ತಾಳ ಋ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಚಿತ್ರದುರ್ಗ. ಎ) ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001 ಏ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ಮತ್ತು ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ(ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in**ರಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in.
Azadi Ka Amrit Mahotsav

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/22–23/06 ದಿನಾಂಕ: 08/07/2022

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು http://www.ireps.gov.in (Works) ಆನ್‌ಲೈನ್ ಮೂಲಕ ಕೆಳಗೆ ತಿಳಿಸಿರುವ ಕೆಲಸಗಳಿಗೆ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ	ವಿವರ	ಅಂದಾಜು ವೆಚ್ಚ ರೂ.ಗಳಲ್ಲಿ	ಕೊನೆಯ ದಿನಾಂಕ ಹಾಗೂ ಸಮಯ
ಡಬ್ಲ್ಯೂ.496/ ಆರ್‌ಡಬ್ಲ್ಯೂಎಫ್/ ವೈಎನ್‌ಕೆ/994	ಆರ್‌ಡಬ್ಲ್ಯೂಎಫ್ ಕಾರ್ಖಾನೆ ಆವರಣದ ಆಕ್ಸಲ್ ಶಾಪ್‌ನಲ್ಲಿರುವ ಹೊಸ ಫೋರ್ಜಿಂಗ್ ಸಂಕೀರ್ಣ ಆರ್‌ಹೆಚ್‌ಎಫ್ ಪ್ರದೇಶದಲ್ಲಿ ಒಂದು ಕ್ರೇನ್ ಬೇ (12ಮೀ) ವಿಸ್ತರಣೆ	21011068.73	04/08/2022 ರಂದು 11.00 ಗಂಟೆಗೆ

ಇ–ಟೆಂಡರ್ ಷರತ್ತುಗಳು 1. ಟೆಂಡರ್‌ದಾರರು ವೆಬ್‌ಸೈಟ್ www.ireps.gov.in ನಲ್ಲಿರುವ ಶೆಡ್ಯೂಲ್ ಪೇಜ್ ಮೂಲಕ ದರಗಳನ್ನು ಸಲ್ಲಿಸಬೇಕು. 2. ಈ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.

ಉಪ ಮುಖ್ಯ ಇಂಜಿನಿಯರ್

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಕೃಷಿನಗರ, ಧಾರವಾಡ–580005 (ಕರ್ನಾಟಕ)

ಸಂಖ್ಯೆ:ಆ.ಅ/ಕೃವಿವಿ/ಹೆಚ್ಚುವರಿ ಅನುದಾನ/2022–23 ದಿನಾಂಕ : 08.07.2022

ಆಸಕ್ತಿ ಅಭಿವ್ಯಕ್ತಪಡಿಸುವುದು

ನಿಖರ ಠೇವಣಿಗಾಗಿ ಆಸಕ್ತಿ ಅಭಿವ್ಯಕ್ತ ಪಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಇ–ಟೆಂಡರ್ ಮೂಲಕ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಶಾಖೆಯನ್ನು ಹೊಂದಿರಬಹುದಾದ ಸಾರ್ವಜನಿಕ ವಲಯದ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಕೋರಲಾಗಿದೆ. ಸರ್ಕಾರದ ಅನುದಾನದ ಕಂತಿನ ಹಣ ಮತ್ತು ಆಂತರಿಕ ಆದಾಯದ ಮೊತ್ತವು ಅಲ್ಪಾವಧಿ ಠೇವಣಿಗಾಗಿ ಲಭ್ಯವಿರುವುದು. ವಿವರವಾದ ಅಧಿಸೂಚನೆ ಮತ್ತು ಅರ್ಹತೆಗಳನ್ನು ತಿಳಿದುಕೊಳ್ಳಲು ವೆಬ್ ಸೈಟ್ **https://eproc.karnataka.gov.in.** ನ್ನು ನೋಡುವುದು.

ಟೆಂಡರ ವೇಳಾಪಟ್ಟಿ

(1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **18.07.2022** ಸಾಯಂಕಾಲ 5.00 ಘಂಟೆ (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ : **20.07.2022** ಬೆಳಿಗ್ಗೆ 11.00 ಘಂಟೆ

ಆಸಕ್ತ ಬ್ಯಾಂಕುಗಳು ಇ–ಟೆಂಡರ್ ಪೋರ್ಟಲ್ ಮೂಲಕ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : **080–23010900** ಯನ್ನು ಸಂಪರ್ಕಿಸಬಹುದು. ಬ್ಯಾಂಕುಗಳು ಈ ಟೆಂಡರಗೆ ತಿದ್ದುಪಡಿ/ಜೋಡಣೆ ಅಥವಾ ಇನ್ನೇನಾದರು ತಿಳಿದು ಕೊಳ್ಳಲು ಸದಾ ವೆಬ್ ಸೈಟ್ **https://eproc.karnataka.gov.in.** ನ್ನು ನೋಡುವುದು. ವಿಶ್ವವಿದ್ಯಾಲಯವು ಯಾವುದೇ ಸಮಯದಲ್ಲಿ ಟೆಂಡರ್ ಮುಂದುವರಿಸುವ ಅಥವಾ ರದ್ದು ಪಡಿಸುವ ಕುರಿತು ಅಂತಿಮ ಅಧಿಕಾರವನ್ನು ಹೊಂದಿರುವುದು. ವಿಶ್ವವಿದ್ಯಾಲಯವು ತೆಗೆದು ಕೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

ವಾಸಾಸಂಇ/ಧಾರವಾಡ/ಎಂಸಿಎ/337/2022–23 ಸಹಿ/– ಆಸ್ತಿ ಅಧಿಕಾರಿಗಳು

ಕೃಷಿ ವಿಶ್ವವಿದ್ಯಾನಿಲಯ
ಆಸ್ತಿ ಅಧಿಕಾರಿಗಳ ಕಛೇರಿ, ಜಿಕೆವಿಕೆ, ಬೆಂಗಳೂರು–560 065

No. EO/CANTEEN/GKVK/2022-23 Date: 07-07-2022

ಅಡುಗೆ ಮಾಡುವವರಿಗೆ ಪ್ರಿಕ್ವಾಲಿಫಿಕೇಷನ್ ಟೆಂಡರ್ ಅಧಿಸೂಚನೆ

ಕೃಷಿ ವಿಶ್ವವಿದ್ಯಾನಿಲಯದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸುಮಾರು 2000 ವಿದ್ಯಾರ್ಥಿಗಳು ಮತ್ತು ಸಿಬ್ಬಂಧಿಗಳಿಗೆ ಉಪಹಾರ / ಆಹಾರವನ್ನು ಪೂರೈಕೆ ಮಾಡಲು ಕಾರ್ಮಿಕ ಕಾಯ್ದೆಯಡಿಯಲ್ಲಿ ನೋಂದಾಯಿತ **ನುರಿತ ಕ್ಯಾಟರರ್ಸ್ / ಹೋಟೆಲ್ ಉದ್ಯಮಿಗಳಿಂದ** ತಾಂತ್ರಿಕ ಬಿಡ್ಡ್‌ಗಳನ್ನು ಆಹ್ವಾನಿಸಲಾಗಿದೆ. ಸಸ್ಯಹಾರಿ ಉಪಹಾರ ಮಂದಿರ. ಸಸ್ಯೋಧ್ಯಾನದ ಬಳಿ. ಟೆಂಡರ್‌ದಾರರು ತಾಂತ್ರಿಕ ಬಿಡ್ಡುಗಳನ್ನು **ದಿನಾಂಕ: 22–07–2022 ರ ಅಪರಾಹ್ನ 2.00 ಗಂಟೆಗೆ** ಸೀಲ್ ಮಾಡಲಾದ ಲಕೋಟೆಯಲ್ಲಿ ಆಸ್ತಿ ಅಧಿಕಾರಿಗಳ ಕಛೇರಿಯಲ್ಲಿಟ್ಟಿರುವ ಪೆಟ್ಟಿಗೆಯಲ್ಲಿ ಹಾಕುವುದು. ತಾಂತ್ರಿಕ ಬಿಡ್ಡಿನಲ್ಲಿ 1) ನೋಂದಾವಣೆ ಪ್ರಮಾಣ ಪತ್ರ. 2) ಅನುಭವದ ಪ್ರಮಾಣ ಪತ್ರ. 3) ಕೆಲಸ ನಿರ್ವಹಿಸುತ್ತಿರುವ ಮಾನವ ಸಂಪನ್ಮೂಲಗಳ ವಿವರ. 4) ರೂ.2,00,000/– ಗಳಿಗೆ ಸಾಲ್ವೆನ್ಸಿ ಪ್ರಮಾಣ ಪತ್ರ. 5) ಹಾಲಿ ಕಾರ್ಯನಿರ್ವಹಿಸುತ್ತಿರುವ ಹೋಟೆಲ್‌ಗಳ ಛಾಯಚಿತ್ರಗಳು ಒಳಗೊಂಡಿರಬೇಕು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಕೃಷಿ ವಿಶ್ವವಿದ್ಯಾನಿಲಯಕ್ಕೆ ಟೆಂಡರ್ ಅನ್ನು ಯಾವುದೇ ಕಾರಣ ನೀಡದೆ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವಿರುತ್ತದೆ. ತಾಂತ್ರಿಕ ಬಿಡ್ಡುಗಳನ್ನು **ದಿನಾಂಕ: 22–07–2022 ರ ಅಪರಾಹ್ನ 2.30 ಗಂಟೆಗೆ** ತೆರೆಯಲಾಗುವುದು. ಉಪಹಾರ ಮಂದಿರದ ಮೇಲ್ವಿಚಾರಣಾ ಸಮಿತಿಯು ತಾಂತ್ರಿಕ ಬಿಡ್ಡುಗಳನ್ನು ಪರಿಶೀಲಿಸಿ ಅಂತಿಮ ನಿರ್ಣಯ ತೆಗೆದುಕೊಳ್ಳುತ್ತದೆ. ಹಣಕಾಸಿನ ಬಿಡ್ಡನ್ನು ತಾಂತ್ರಿಕವಾಗಿ ತೇರ್ಗಡೆಹೊಂದಿದ ಉಪಹಾರಮಂದಿರದಿಂದ ಪಡೆಯಲಾಗುವುದು.

DIPR/CP/RO1292/AAPL/2022-23
ಸಹಿ/–
ಆಸ್ತಿ ಅಧಿಕಾರಿಗಳು

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ
ಮೈಸೂರು ಜಿಲ್ಲೆ, ಮೈಸೂರು.
ಡಾ.ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ
ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು.
E-mail- dswomysore9@gmail.com ದೂ.: 0821–2344661

ಸಂಖ್ಯೆ:ನಿಪಕೇ.ಮೈ/ಆಡಳಿತ/ಸಿಆರ್–1/2022–23 ದಿನಾಂಕ: 11–07–2022

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2022–23ನೇ ಸಾಲಿಗೆ ಮೈಸೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಹೊಸದಾಗಿ ಸ್ಥಾಪನೆಯಾಗುತ್ತಿರುವ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಹೊರಸಂಪನ್ಮೂಲದಿಂದ ಮಾನವ ಸಿಬ್ಬಂದಿ ಸೇವೆಯನ್ನು ಪಡೆಯಲು ನೊಂದಾಯಿತ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

1) ಇ–ಟೆಂಡರ್ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 11–07–2022 ರಿಂದ 10–08–2022ರ ಬೆಳಿಗ್ಗೆ 11.00 ಗಂಟೆಯವರೆಗೆ.
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್‌ಗೆ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 10–08–2022ರ ಸಂಜೆ 04.00 ಗಂಟೆಯವರೆಗೆ
3) Prebid ಸಭೆ ದಿನಾಂಕ:04–08–2022ರ ಬೆಳಿಗ್ಗೆ 11.00 ಗಂಟೆಯ ನಂತರ. (ಇದಕ್ಕೆ ಯಾವುದೇ ಸೂಚನ ಪತ್ರ ಕಳುಹಿಸುವುದಿಲ್ಲ)
4) ಇ–ಟೆಂಡರ್ ತೆರೆಯುವ ದಿನಾಂಕ: 12–08–2022ರ ಬೆಳಿಗ್ಗೆ 11.00 ಗಂಟೆಯ ನಂತರ.

ಸಹಿ/– ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು.

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001.
ಫೋನ್: 080–29701510, ಇ–ಮೇಲ್: dce.tender2017@gmail.com

ಸಂಖ್ಯೆ: DCE/RUSA/GEN/68/2021/RUSA- (Computer No. 611450) ದಿನಾಂಕ: 11.07.2022

ಇ–ಟೆಂಡರ್ ಅಧಿಸೂಚನೆ

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಸಾಮಗ್ರಿಗಳನ್ನು ಪೂರೈಸುವ ಸಂಬಂಧ ಆಸಕ್ತ ಬಿಡ್‌ದಾರರಿಂದ ಇ–ಸಂಗ್ರಹಣೆ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ಇತರ ವಿವರಗಳಿಗಾಗಿ https://eproc.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ	ಪ್ರೀಬಿಡ್ ಸಭೆಯ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	ಟೆಂಡರ್ ಸಂಖ್ಯೆ: ಡಿಸಿಇ/2021–22/ಐಎನ್‌ಡಿ1068/Call-3 "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ RUSA ಕಾಲೇಜುಗಳಿಗೆ CCTV ವ್ಯವಸ್ಥೆಯ ಪೂರೈಕೆ, ಅನುಸ್ಥಾಪನೆ, ಕಾರ್ಯಾರಂಭ ಮತ್ತು ನಿರ್ವಹಣೆ"	07.07.2022	12.07.2022 ಬೆಳಿಗ್ಗೆ 11.00 ಗಂಟೆಗೆ	08.08.2022 ಸಂಜೆ 5.00 ಗಂಟೆಗೆ

DIPR/CP/1304/Zenkar/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ 6 ಅಡಿ ದೈಹಿಕ ಅಂತರ ಪಾಲಿಸಿ ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/–
ಕಾಲೇಜು ಶಿಕ್ಷಣ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಗ್ರಾಮೀಣ ಕುಡಿಯುವ ನೀರು
ಮತ್ತು ನೈರ್ಮಲ್ಯ ವಿಭಾಗ, ಬೆಳಗಾವಿ
ಪಂ.ರಾ.ಇಂ.ವಿಭಾಗ ಕಚೇರಿಯ 1ನೇ ಮಹಡಿ, ಕೊಲ್ಲಾಪೂರ ವೃತ್ತ, ನೆಹರು ನಗರ, ಬೆಳಗಾವಿ–590010
ಫೋನ್ ನಂ: 0831–240835/2420836 ಇ–ಮೇಲ್ : ee.rdws.bgm@gmail.com

ನಂ: ಗ್ರಾಕುನೀ&ನೈ/ಬೆಳಗಾವಿ/ಪಿಬಿ–2,3,4/ಕು.ನೀ.ಸ.ಯೋ/ಕೆಡಬ್ಲ್ಯು1/ಟೆಂಡರ್–29/2022–23/1404 ದಿನಾಂಕ: 11–07–2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 29/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಜಲ ಜೀವನ್ ಮಿಷನ್ ಅಡಿಯಲ್ಲಿ Empanelment of Third-Party Inspection Agenccy under Jal Jeevan Mission and other works by Rural Drinking water and sanction Department in Belagavi Division of Belagavi District ಸೇವಾ ಟೆಂಡರ್ ಡಾಕ್ಯುಮೆಂಟ್ KC-8 ನಿಬಂಧನೆಗೊಳಪಟ್ಟಂತೆ ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1	ಆನ್‌ಲೈನ್‌ನಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ಅಪ್‌ಲೋಡ್ ಮಾಡುವ ದಿನಾಂಕ	:	12–07–2022 ರಂದು ಬೆಳಿಗ್ಗೆ 11:00 ಗಂಟೆ ನಂತರ
2	ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ.&ನೈ ವಿಭಾಗ, ಬೆಳಗಾವಿ ಇವರ ಕಚೇರಿಯಲ್ಲಿ	:	18–07–2022 ಬೆಳಿಗ್ಗೆ 11:00 ಗಂಟೆಯವರೆಗೆ
3	ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	:	26–07–2022 ಸಾಯಂಕಾಲ 05:30 ಗಂಟೆಯವರೆಗೆ
4	ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	:	28–07–2022 ಸಾಯಂಕಾಲ 18:00 ಗಂಟೆ ನಂತರ
5	ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	:	ತಾಂತ್ರಿಕ ಬಿಡ್ ಅನುಮೋದಿಸಿದ ನಂತರ

ಕ್ರ ಸಂ	ಒದಗಿಸಬೇಕಾಗಿರುವ ಸೇವೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಕಾಲಾವಧಿ	ಅರ್ಹತೆ ಸಂಸ್ಥೆಗಳು
1	Hiring and Empanelment of Third-Party Inspection Agency under Jal Jeevan Mission for Rural Drinking Water Works and Chartered Accountant for Concurrent Audit of Drinking Water Schemes for Rural Drinking Water and Sanction Department in Belagavi Division, Belagavi District.	1,00,000	1 ವರ್ಷ	The Firm/agency must have registered under Companies Act or Societies Act. ರಡಿಯಲ್ಲಿ ನೊಂದಾಯಿತ ಸಂಸ್ಥೆಗಳು

ಸೂಚನೆ: ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ
ಗ್ರಾ.ಕು.ನೀ.&ನೈ. ವಿಭಾಗ, ಬೆಳಗಾವಿ
DIPO/RO No. 503/2022-23

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ಇ–ಮೇಲ್: dir-mines@karnataka.gov.in

ಸಂ: ಡಿಎಂಜಿ–17012/5/2021/2022–23 ದಿನಾಂಕ: 11.07.2022
ಸಿ.ನಂ. 558708

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ
"ಕಬ್ಬಿಣ ಅದಿರಿನ ಗಣಿಗಾರಿಕೆಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ"

Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 and Mineral (Auction) Amendment Rules, 2015 ಮತ್ತು ಅದರಡಿ ಹೊರಡಿಸಿದ ತಿದ್ದುಪಡಿಗಳ ಅನುಗುಣವಾಗಿ, ಭಾರತ ಸರ್ಕಾರದ ಗಣಿ ಸಚಿವಾಲಯವು ನೀಡಿದ ಸ್ಪಷ್ಟೀಕರಣಗಳು ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಮಾಜ ಪರಿವರ್ತನಾ ಸಮುದಾಯ ಮತ್ತು ಇತರೆ v/s ಕರ್ನಾಟಕ ಸರ್ಕಾರದ ಮತ್ತು ಇತರೆ W.P. (C) 562 of 2009 ರಲ್ಲಿನ ತೀರ್ಪು ಮತ್ತು ಆದೇಶಗಳನುಸಾರ ಕಬ್ಬಿಣ ಅದಿರಿನ 05 'ಸಿ' ವರ್ಗದ ಗಣಿಗುತ್ತಿಗೆಗಳನ್ನು ಎಲೆಕ್ಟ್ರಾನಿಕ್ ಹರಾಜಿಗೆ ಒಳಪಡಿಸಲು ಗುರುತಿಸಿದೆ.
ಹರಾಜಿಗೆ ಒಳಪಡಿಸಿದ ಪ್ರದೇಶದ ವಿವರ ಈ ಕೆಳಕಂಡಂತಿದೆ.

S. No.	Name of the mine	Mineral	Concession Area (in Ha.)	Estimated resources (in MMT)
1.	M/s Srinivasalu ML No. 2631	Iron ore	75.14	9.88
2.	Ramgad Mines & Minerals Pvt. Ltd. ML No. 2451	Iron ore	24.04	2.137
3.	M/s Thangavelu & Others ML No. 2585	Iron ore	60.92	3.303
4.	B.R Yogendranath Singh ML No. 2186	Iron ore	15.89	2.84
5.	Sri. Allum Veerabhadrappa ML No. 2436	Iron ore & Manganese	24.53	Fe – 3.645 Mn – 0.93

ಖನಿಜ (ಹರಾಜು) ನಿಯಮಗಳು 2015ರ ನಿಯಮ 9ರ ಉಪ–ನಿಯಮ 11ರ ಷರತ್ತು (ಬಿ) ಮತ್ತು ಅದರ ಅಡಿಯಲ್ಲಿ ತಿದ್ದುಪಡಿಗಳ ಪ್ರಕಾರ ಎರಡನೇ ಪ್ರಯತ್ನವನ್ನು ಕೈಗೊಳ್ಳಲಾಗುತ್ತಿದೆ. ಅರ್ಹತಾ ಮಾನದಂಡಗಳನ್ನು ಪೂರೈಸುವ ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಕಂಪನಿಯು ಹರಾಜಿನಲ್ಲಿ ಭಾಗವಹಿಸಬಹುದು. ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ. ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತ (https://www.mstcecommerce.com/auctionhome/mlcl/index.jsp) ದಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು. ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಹಣ ರೂ. 2,00,000/– (ಎರಡು ಲಕ್ಷ ರೂಪಾಯಿಗಳು ಮಾತ್ರ) + ಜಿಎಸ್‌ಟಿ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು. ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 12.07.2022 ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್ ನಲ್ಲಿ ಲಭ್ಯವಿದ್ದು ದಿನಾಂಕ: 10.08.2022 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್ ಸೈಟ್‌ನಲ್ಲಿ ದಿನಾಂಕ: 16.08.2022ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: 16.08.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು
DIPR/CP/1306/Zenkar/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ 6 ಅಡಿ ದೈಹಿಕ ಅಂತರ ಪಾಲಿಸಿ ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕ್ಷೇಮ ಕುಶಲ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ



‘ಸ್ಕ್ರೀನ್ ಟೈಮ್’ಗೆ ಇರಲಿ ಮಿತಿ

ಡಾ. ಕುಶ್ವಂತ್ ಕೋಳಿಬೈಲು

ಚಂದಿರನನ್ನು ತೋರಿಸಿದರೆ ಮಾತ್ರ ತುತ್ತು ತಿನ್ನುವ ಹಠಮಾರಿ ಮಕ್ಕಳ ಅಮ್ಮಂದಿರಿಗೆ ಈಗ ಕೈಗಳಲ್ಲೇ ಸ್ಮಾರ್ಟ್‌ಫೋನಿರುವ ಕಾರಣದಿಂದಾಗಿ ಅಮಾವಾಸ್ಯೆಯ ಭಯವಿಲ್ಲ. ಜೋಗುಳ ಹಾಡದಿದ್ದರೆ ನಿದ್ರೆಗೆ ಜಾರದಿರುವ ಕಂದಮ್ಮಗಳನ್ನು ಸಂಬಾಳಿಸುವುದಕ್ಕೂ ಈಗ ತಂತ್ರಜ್ಞಾನದ ಮೊರೆಹೋಗಲು ಕಲಿತಿದ್ದಾಳೆ ತಾಯಿ. ಕಥೆ ಹೇಳಿ ನಿದ್ರೆ ಮಾಡಿಸುವ ಅಜ್ಜಿಯ ಜಾಗವನ್ನು ಕಾರ್ಟೂನ್‌ಗಳು ಆಕ್ರಮಿಸಿಕೊಂಡಿವೆ. ಪುಟಾಣಿಗಳ ಕೈ ಮತ್ತು ಕಂಗಳನ್ನು ಈಗ ವಿಡಿಯೋ ಗೇಮ್ಸ್ ವ್ಯಾಪಿಸಿಕೊಂಡಿರುವ ಕಾರಣ, ದಶಕಗಳ ಹಿಂದೆ ತುಂಬಿ ತುಳುಕುತ್ತಿದ್ದ ಪ್ರತಿ ವಠಾರದ ಆಟದ ಮೈದಾನಗಳು ಈಗ ಸಂಜೆಯಾಯಿತೆಂದರೆ ಬಣಗುಟ್ಟುತ್ತಿರುತ್ತದೆ. ಕಳೆದೆರಡು ವರ್ಷದ ಕೊರೊನಾ ಕಾಲಘಟ್ಟದಲ್ಲಿ ಮಕ್ಕಳ ತರಗತಿಗಳೂ ಆನ್‌ಲೈನ್‌ನಲ್ಲಿ ನಡೆದ ಕಾರಣ ಮಕ್ಕಳು ಸ್ಕ್ರೀನ್ ಮುಂದೆ ಗಂಟೆಗಟ್ಟಲೆ ಕಾಲ ಕಳೆಯುವುದು ತಪ್ಪಲ್ಲವೆಂಬ ನಮಗೆ ಭಾವನೆ ಬಂದಿದೆ.

ಆಟ ಮತ್ತು ಆಟಿಕೆಗಳ ಕಲ್ಪನೆಗಳು ಈಗಿನ ಡಿಜಿಟಲ್ ಕಾಲಮಾನದಲ್ಲಿ ಬಹಳಷ್ಟು ಬದಲಾಗಿವೆ. ದಶಕಗಳ ಹಿಂದೆ ಪುಟ್ಟ ಮಕ್ಕಳಿಗೆ ಆಟಿಕೆಗಳನ್ನು ಕೊಡಿಸುವ ವಿಚಾರದಲ್ಲಿ ವೈದ್ಯರು ಹೆತ್ತವರನ್ನು ಎಚ್ಚರಿಸುವ ರೀತಿ ತುಸು ಭಿನ್ನವಿತ್ತು. ಒಂದು ವರ್ಷ ಮೇಲ್ಪಟ್ಟ ಮಕ್ಕಳು ತಮ್ಮ ಕಿವಿ ಅಥವಾ ಬಾಯಿಯೊಳಗಡೆ ಹಾಕಿ ಅಪಾಯ ತಂದುಕೊಳ್ಳಬಹುದಾದ ಸಣ್ಣ ಗಾತ್ರದ ಆಟಿಕೆಗಳನ್ನು ಕೊಡಿಸದಂತೆ ವೈದ್ಯರು ಶಿಫಾರಸು ಮಾಡುತ್ತಿದ್ದರು. ಶ್ವಾಸಕೋಶದ ಅಲರ್ಜಿಯಿರುವ ಮಕ್ಕಳಿಗೆ ಸಾಕು ಪ್ರಾಣಿಗಳಿಂದ ಅಂತರ ಕಾಯ್ದುಕೊಳ್ಳುವ ಸಲಹೆಯನ್ನು ನೀಡುತ್ತಿದ್ದರು. ಕಣ್ಣಿಗೆ ಅಪಾಯ ತರಬಹುದಾದ ಚೂಪಾದ ಆಟಿಕೆಗಳನ್ನೂ ಮಕ್ಕಳ ಕೈಗೆ ನೀಡದಂತೆ ಹೆತ್ತವರನ್ನು ಎಚ್ಚರಿಸುತ್ತಿದ್ದರು. ಸುತ್ತಮುತ್ತಲಿನ ಪರಿಸರದ ಕುರಿತು ವಯೋಸಹಜವಾಗಿರುವ ವಿಪರೀತ ಕುತೂಹಲ ಹೊಂದಿರುವ ಪುಟಾಣಿ ಮಕ್ಕಳ ಕೈಗೆ ಎಲೆಕ್ಟ್ರಿಕ್ ಪ್ಲಗ್ ಪಾಯಿಂಟ್‌ಗಳು ಮತ್ತು ಅಡುಗೆಮನೆಯ ಗ್ಯಾಸ್ ಸ್ಟವ್‌ಗಳು ಎಟುಕದಂತಿರಬೇಕೆಂಬ ಸಲಹೆಗಳನ್ನು ಹೆತ್ತವರು ಪಾಲಿಸುತ್ತಿದ್ದರು. ಇಂದಿನ ದಿನಗಳಲ್ಲಿ ಹಠ ಮಾಡುವ ಮಕ್ಕಳನ್ನು ರಮಿಸಲು ಕೂಡ ಹೆತ್ತವರು ಸ್ಮಾರ್ಟ್ ಫೋನಿನ ಮೊರೆ ಹೋಗುತ್ತಿರುವ ಕಾರಣದಿಂದಾಗಿ ಮತ್ತು ಹೆಚ್ಚಿನ ಮಕ್ಕಳ ಮನೋರಂಜನೆ ಮತ್ತು ಆಟೋಟಗಳು ಈಗ ಸ್ಮಾರ್ಟ್ ಫೋನ್, ಟಿವಿ ಮತ್ತು ಕಂಪ್ಯೂಟರ್ ಸುತ್ತ ಸುತ್ತುತ್ತಿವೆ; ಮಕ್ಕಳ ಈ ಹೊಸ ಆಟಿಕೆಗಳಿಂದಾಗಿ ಹೆಚ್ಚಾಗುತ್ತಿರುವ ‘ಸ್ಕ್ರೀನ್ ಟೈಮ್’ ಮಕ್ಕಳಲ್ಲಿ ಮಾಡುತ್ತಿರುವ ದುಷ್ಪರಿಣಾಮಗಳು ನಿಧಾನವಾಗಿ ಮುನ್ನಲೆಗೆ ಬರುತ್ತಿವೆ.

ಸ್ಕ್ರೀನ್ ಆಧಾರಿತ ಮಾಧ್ಯಮಗಳು ಮಾನವನ ಜೀವನದ ಅವಿಭಾಜ್ಯ ಅಂಗಗಳಾದ ಕಾರಣ ಇಂದು ಹೆಚ್ಚಿನವರ ಕೈಗಳಲ್ಲಿ ಸ್ಮಾರ್ಟ್ ಫೋನ್‌ಗಳು ಮತ್ತು ಹೆಚ್ಚಿನ ಮನೆಗಳನ್ನು ಟಿವಿ ಮತ್ತು ಕಂಪ್ಯೂಟರ್‌ಗಳು ಆಕ್ರಮಿಸಿಕೊಂಡಿವೆ. ಇಂದು ಹದಿಹರೆಯದ ಮಕ್ಕಳ ಕೈಗೆ ಸ್ಮಾರ್ಟ್ ಫೋನ್ ಮತ್ತು ಅಂತರ್ಜಾಲ ಎಟುಕಿರುವ ಕಾರಣದಿಂದ ಅವರೂ ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯರಾಗಿದ್ದಾರೆ. ಟಿವಿ ಮುಂದೆ ಕುಳಿತು ಭೋಜನ ಮಾಡುವ ಕೆಟ್ಟ ಸಂಪ್ರದಾಯ ಈಗ ಭಾರತದ ಹೆಚ್ಚಿನ ಮನೆಗಳಲ್ಲಿದೆ. ಮಕ್ಕಳ ಮನೋವಿಕಾಸ ಮತ್ತು ದೈಹಿಕ ಆರೋಗ್ಯದ ಮೇಲೆ ಡಿಜಿಟಲ್ ಬದಲಾವಣೆಗಳು ಬೀರುತ್ತಿರುವ ನಕಾರಾತ್ಮಕ ಪರಿಣಾಮಗಳು ಒಂದೊಂದಾಗಿ ಬೆಳಕಿಗೆ ಬರುತ್ತಿವೆ. ದಿನಕ್ಕೆ ಎರಡು ಗಂಟೆಗಳಿಗಿಂತ ಹೆಚ್ಚು ಸಮಯ ಸ್ಕ್ರೀನ್ ಮುಂದೆ (ಸ್ಮಾರ್ಟ್ ಫೋನ್/ ಟಿವಿ/ ಕಂಪ್ಯೂಟರ್) ಕಳೆಯುವ ಮಕ್ಕಳಲ್ಲಿ ಬಾಲ್ಯದಲ್ಲಿಯೆ ಬೊಜ್ಜು ಕಾಣಿಸಿಕೊಳ್ಳುತ್ತಿದೆ. ಫಾಸ್ಟ್ ಫುಡ್ ಸಂಸ್ಕೃತಿ ಕೂಡ ಅಂತಹ ಮಕ್ಕಳಲ್ಲಿ ಹೆಚ್ಚಿರುವುದರಿಂದ ಮತ್ತು ಆಟೋಟಗಳಲ್ಲಿ ಅವರಿಗೆ ಆಸಕ್ತಿ ಕಡಿಮೆಯಿರುವ ಕಾರಣ ಆ ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲೇ ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಸ್ಕ್ರೀನ್ ಟೈಮ್ ಹೆಚ್ಚಾದಂತೆ ಮಕ್ಕಳ ನಿದ್ರೆಯ ಅವಧಿ ಕಡಿಮೆಯಾಗುತ್ತಿದೆ. ಹೀಗಾಗಿ ಮನುಷ್ಯದೇಹದ ಹಸಿವನ್ನು ನಿಯಂತ್ರಿಸುವ ಹಾರ್ಮೋನ್‌ಗಳಾದ ‘ಗ್ರೆಲಿನ್’ ಮತ್ತು ‘ಲೆಪ್ಟಿನ್’ ಪ್ರಮಾಣಗಳು ಏರುಪೇರಾಗಿ ಬೊಜ್ಜಿನ ಕಾಯಿಲೆಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿದೆ. ನಿರಂತರವಾಗಿ ಸ್ಕ್ರೀನನ್ನು ವೀಕ್ಷಿಸುವುದರಿಂದ ಕಣ್ಣು ಮತ್ತು ಕತ್ತಿನ ಸ್ನಾಯುಗಳಲ್ಲಿ ತೊಂದರೆಗಳು ಕಾಣಿಸಿಕೊಂಡು, ದೃಷ್ಟಿದೋಷವೂ ಉಂಟಾಗಬಹುದು. ಹೆಚ್ಚಿನ ಸಮಯವನ್ನು ಸ್ಕ್ರೀನ್ ಮುಂದೆ ಕಳೆಯುವ ಮಕ್ಕಳಲ್ಲಿ ಕಲಿಕೆ ಮತ್ತು ಮನೋವಿಕಾಸದ ಸಮಸ್ಯೆಗಳು ಉಂಟಾಗುತ್ತವೆ; ಅಂತಹ ಮಕ್ಕಳಲ್ಲಿ ಹಿಂಸಾತ್ಮಕ ನಡವಳಿಕೆಯ ಪ್ರವೃತ್ತಿಗಳು ಮತ್ತು ಅಮಲು ಪದಾರ್ಥಗಳ ವ್ಯಸನಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ.

ನಮ್ಮ ದೇಶದಲ್ಲಿ ಮಕ್ಕಳ ಆರೋಗ್ಯದ ಕುರಿತಾದ ಸಮಸ್ಯೆಗಳ ನಿವಾರಣೆಯ ಬಗ್ಗೆ ನಿಖರವಾದ ನಿರ್ದೇಶನಗಳನ್ನು ನೀಡುತ್ತಾ ಬಂದಿರುವ ‘ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್’ ಕಳೆದ ವರ್ಷದ ಅಂತ್ಯದಲ್ಲಿ ಸ್ಕ್ರೀನ್ ಟೈಮ್ ಮತ್ತು ಮಕ್ಕಳ ಆರೋಗ್ಯದ ವಿಚಾರದಲ್ಲಿ ತನ್ನ ನಿಲುವುಗಳನ್ನು ಸ್ಪಷ್ಟ ಪಡಿಸಿದೆ. ಎರಡು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳು ಸ್ಕ್ರೀನ್ ವೀಕ್ಷಣೆ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಅಳುವ ಮಗುವನ್ನು ರಮಿಸಲು ಮತ್ತು ಮಗುವಿಗೆ ತಿನಿಸಲು ಹೆತ್ತವರು ಸ್ಕ್ರೀನ್ ಮೊರೆ ಹೋಗಬಾರದೆಂದು ಅಭಿಪ್ರಾಯಪಟ್ಟಿದೆ. ಕಥೆ ಹೇಳುವುದು, ಸಂಗೀತವನ್ನು ಕೇಳಿಸುವುದು ಮತ್ತು ಸರಳ ಆಟಿಕೆಗಳನ್ನು ಮಗುವಿಗೆ ನೀಡುವುದು ಈ ವಯಸ್ಸಿನ ಮಕ್ಕಳ ಮನೋವಿಕಾಸಕ್ಕೆ ಉತ್ತಮವೆಂದು ಅಭಿಪ್ರಾಯಪಟ್ಟಿದೆ.

ಎರಡದಿಂದ ಐದು ವಯಸ್ಸಿನ ಮಕ್ಕಳಿಗೆ ಪ್ರತಿದಿನ ಗರಿಷ್ಠ ಒಂದು ಗಂಟೆಯಷ್ಟು ಸ್ಕ್ರೀನ್ ಸಮಯವನ್ನು ನೀಡಬಹುದು. ಮಕ್ಕಳು ಹೆತ್ತವರ ಪರಿವೀಕ್ಷಣೆಯಲ್ಲಿ ತಮ್ಮ ವಯಸ್ಸಿಗೆ ಅನುಗುಣವಾಗಿ ಆರೋಗ್ಯಕರ, ಅಹಿಂಸಾತ್ಮಕ ಕಾರ್ಯಕ್ರಮಗಳನ್ನು ವೀಕ್ಷಿಸಬಹುದಾಗಿದೆ. ಆದರೆ ಮಕ್ಕಳ ತಮ್ಮ ಆಟಕ್ಕೆ ಮೀಸಲಾಗಿರುವ ಸಮಯದಲ್ಲಿ, ಊಟ ಮಾಡುವಾಗ ಮತ್ತು ನಿದ್ರೆ ಹೋಗುವ ಒಂದು ಗಂಟೆಯ ಮುಂಚಿನ ಸಮಯದಲ್ಲಿ ಸ್ಕ್ರೀನ್ ನೋಡುವಂತಿಲ್ಲ!

ಐದರಿಂದ ಹತ್ತು ವರ್ಷ ವಯಸ್ಸಿನ ಮಕ್ಕಳು ದಿನದಲ್ಲಿ ಎರಡು ಗಂಟೆಗಳಿಗಿಂತ ಜಾಸ್ತಿ ಸ್ಕ್ರೀನ್ ಸಮಯವನ್ನು ನೀಡಬಾರದು; ಆ ಸ್ಕ್ರೀನ್ ಸಮಯವನ್ನು ಕೂಡ ಶೈಕ್ಷಣಿಕ ಉದ್ದೇಶಕ್ಕೆ ಬಳಸಿಕೊಳ್ಳಲು ಒತ್ತು ನೀಡಬೇಕು. ಆ ವಯಸ್ಸಿನ ಮಕ್ಕಳ ಆಟ ಮತ್ತು ನಿದ್ರೆಯ ಸಮಯವನ್ನು ಈ ಸ್ಕ್ರೀನ್ ಸಮಯವು ನುಂಗದಂತೆ ಎಚ್ಚರ ವಹಿಸಬೇಕು; ಜೊತೆಗೆ ಮಕ್ಕಳು ವೀಕ್ಷಿಸುವ ವಿಷಯಗಳ ಬಗ್ಗೆ ಗಮನವನ್ನು ವಹಿಸಬೇಕು. ಹದಿಹರೆಯದ ಮಕ್ಕಳಲ್ಲಿ ಸ್ಕ್ರೀನ್ ಸಮಯವು ಅವರ ಸರ್ವಾಂಗೀಣ ಬೆಳವಣಿಗೆಗೆ ಕುಂಠಿತವಾಗದಂತೆ ಎಚ್ಚರ ವಹಿಸಬೇಕು. ಸೈಬರ್ ಕಾನೂನುಗಳ ಬಗ್ಗೆಯೂ ಹದಿಹರೆಯದವರನ್ನು ಜಾಗೃತಿಗೊಳಿಸುವುದರಿಂದ ಅವರು ಸೈಬರ್ ಅಪರಾಧಗಳನ್ನು ಮಾಡದಂತೆ ಮತ್ತು ಅವರ ವಿರುದ್ಧ ಸೈಬರ್ ಅಪರಾಧಗಳು ನಡೆಯದಂತೆ ಮುಂಜಾಗ್ರತೆ ವಹಿಸಬಹುದು.

ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಮುಂತಾದ ಸಾಮಾಜಿಕ ಜಾಲತಾಣಗಳನ್ನು ಹದಿಮೂರು ವರ್ಷ ಮೀರಿದ ಮಕ್ಕಳು ಹೆತ್ತವರ ಪರಿವೀಕ್ಷಣೆಯೊಂದಿಗೆ ಆರೋಗ್ಯಕರ ರೀತಿಯಲ್ಲಿ ಬಳಸಿಕೊಳ್ಳಬಹುದು. ಆರೋಗ್ಯಕರ ಡಿಜಿಟಲ್ ನಡವಳಿಕೆ ಮತ್ತು ಶಿಷ್ಟಾಚಾರದ ಬಗ್ಗೆ ಮಕ್ಕಳಿಗೆ ತಿಳಿಹೇಳುವುದರಿಂದ ಮಕ್ಕಳ ‘ಡಿಜಿಟಲ್ ಫೂಟ್ ಪ್ರಿಂಟ್’ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬಹುದು. ಶೈಕ್ಷಣಿಕ ಕಾರಣಗಳಿಗಾಗಿ ಸ್ಕ್ರೀನ್ ಮುಂದೆ ದೀರ್ಘಕಾಲ ಕುಳಿತಿರಬೇಕಾದ ಸಂದರ್ಭದಲ್ಲಿ 20-20-20 ನಿಯಮವನ್ನು ಪಾಲಿಸಬೇಕು. ಕಣ್ಣಿನ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಪ್ರತಿ ಇಪ್ಪತ್ತು ನಿಮಿಷದ ನಂತರ ಇಪ್ಪತ್ತು ಸೆಕೆಂಡುಗಳ ವಿರಾಮವನ್ನು ಪಡೆದು ತಮ್ಮಿಂದ ಇಪ್ಪತ್ತು ಮೀಟರ್ ದೂರದಲ್ಲಿರುವ ವಸ್ತುವನ್ನು ನೋಡಬೇಕು. ಮಕ್ಕಳು ಡಿಜಿಟಲ್ ಪ್ರಪಂಚದ ವ್ಯಸನಿಗಳಾಗದಂತೆ ಎಚ್ಚರ ವಹಿಸಲು ಮನೆಯ ಕೆಲವು ಕೋಣೆಗಳನ್ನು ಡಿಜಿಟಲ್ ಫ್ರೀ ಝೋನ್ ಮಾಡುವುದು ಮತ್ತು ಕುಟುಂಬದ ಸದಸ್ಯರು ಒಟ್ಟು ಸೇರುವ ಸಮಯದಲ್ಲಿ ಪ್ರತಿಯೊಬ್ಬರೂ ‘ಡಿಜಿಟಲ್ ಫಾಸ್ಟಿಂಗ್’ ಅನುಸರಿಸುವಂತೆಯೂ ಸಲಹೆಗಳನ್ನು ನೀಡಿದೆ. ❖

> ಆರೋಗ್ಯದ ಮೂರು ಪ್ರಮುಖ ಆಧಾರ ಸ್ತಂಭಗಳಾದ ನಿದ್ರೆ, ವ್ಯಾಯಾಮ ಮತ್ತು ಅಹಾರಪದ್ಧತಿಯನ್ನು ಹಳಿ ತಪ್ಪಿಸುವಲ್ಲಿ ಸ್ಕ್ರೀನ್ ವ್ಯಸನ ಮುಖ್ಯ ಕಾರಣ...

ನಿದ್ರೆಗೂ ಕುತ್ತು!

ಸ್ಕ್ರೀನ್ ಹೊರಹಾಕುವ ನೀಲಿ ಕಿರಣಗಳು ಮನುಷ್ಯನ ನಿದ್ರೆಯನ್ನು ನಿಯಂತ್ರಿಸುವ ಹಾರ್ಮೋನಾದ ಮೆಲಟೋನಿನ್ ಪ್ರಮಾಣವನ್ನು ಕುಗ್ಗಿಸುತ್ತವೆ. ವಿದ್ಯುತ್ ಆವಿಷ್ಕಾರವಾಗುವ ಮೊದಲು ಕತ್ತಲಾಗುತ್ತಿದ್ದಂತೆ ದೇಹದಲ್ಲಿ ಉತ್ಪತ್ತಿಯಾಗುವ ಮೆಲಟೋನಿನ್ ಮನುಷ್ಯನನ್ನು ನಿದ್ರೆಗೆ ಜಾರಿಸುತ್ತಿತ್ತು. ನಿದ್ರೆಹೋಗುವುದಕ್ಕಿಂತ ಒಂದು ಗಂಟೆಯ ಮೊದಲು ಸ್ಕ್ರೀನ್ ನೋಡುವುದನ್ನು ನಿಲ್ಲಿಸದಿದ್ದರೆ ಆರೋಗ್ಯಕರ ನಿದ್ರೆಯನ್ನು ತರಬಲ್ಲ ಮೆಲಟೋನಿನ್ ಹಾರ್ಮೋನಿನ ಪ್ರಮಾಣವು ದೇಹದಲ್ಲಿ ಏರುವುದಿಲ್ಲ. ಮಕ್ಕಳು ದೈಹಿಕ ಕಸರತ್ತು ನೀಡುವ ಆಟೋಟಗಳಲ್ಲಿ ಭಾಗವಹಿಸದಿರಲೂ ಸ್ಮಾರ್ಟ್ ಫೋನ್/ಟಿವಿ/ಕಂಪ್ಯೂಟರ್ ಮೂಲಕ ಮನೋರಂಜನೆ ಪಡೆಯುವ ವ್ಯಸನವು ಕಾರಣವಾಗಿದೆ. ಆರೋಗ್ಯದ ಮೂರು ಪ್ರಮುಖ ಆಧಾರ ಸ್ತಂಭಗಳಾದ ನಿದ್ರೆ, ವ್ಯಾಯಾಮ ಮತ್ತು ಆಹಾರಪದ್ಧತಿಯನ್ನು ಹಳಿ ತಪ್ಪಿಸುವಲ್ಲಿ ಈ ಸ್ಕ್ರೀನ್ ವ್ಯಸನವು ಪ್ರಮುಖ ಪಾತ್ರ ವಹಿಸುತ್ತಿವೆ.

ನೀವೂ ‘ಮಗು’ವಾಗಿ ಆಡಿ

ಡಾ. ಕೆ. ಎಸ್. ಪವಿತ್ರ

ಒಮ್ಮೆ ಯೋಚಿಸಿ ನೋಡಿ. ನೀವು ಕೊನೇ ಸಲ ಆಟವಾಡಿದ್ದು ಯಾವಾಗ?! (ಮೊಬೈಲ್ ಗೇಂ ಅಲ್ಲ! ಮತ್ತೊಬ್ಬರೊಂದಿಗೆ ಆಡುವ ಆಟ.)

ಹಿರಿಯರು ಚಿಕ್ಕ ಮಕ್ಕಳ ಕಾಟ ತಡೆಯಲಾಗದೆ ಅವರೊಂದಿಗೆ ಆಟವಾಡುತ್ತಾರೆ. ಆದರೆ ಅದರಿಂದ ತಮಗೆ ಆಗುವ ಲಾಭವನ್ನು ಗಮನಿಸುವುದಿಲ್ಲ. ಅದನ್ನು ತಾವು ಮಕ್ಕಳಿಗಾಗಿ ಮಾಡುವ ಒಂದು ‘ಕೆಲಸ’ವಾಗಿಯೇ ಗ್ರಹಿಸುತ್ತಾರೆ. ಅಪ್ಪಂದಿರಾದರೂ ಪಾಠ ಓದಿಸುವುದರ ಬದಲು ಮಕ್ಕಳೊಡನೆ ಆಟವಾಡುವುದನ್ನೇ ಆರಿಸಿಕೊಂಡಾರು! ಅಮ್ಮಂದಿರಿಗಂತೂ ಪಾಠವೇ ಮುಖ್ಯ. ‘ಆಟ ಆಡಿ’ ಎಂದರೆ, ಆಟಕ್ಕೆ ಸಮಯ ಕೊಟ್ಟರೆ ತೊಂದರೆಗೊಳಗಾಗುವ ತಮ್ಮ ಬಹು ಜವಾಬ್ದಾರಿಗಳ ಉದ್ದದ ಪಟ್ಟಿಯನ್ನೇ ನಮ್ಮ ಮುಂದಿಡುತ್ತಾರೆ!

ಆದರೆ ವಿಜ್ಞಾನದ ಪ್ರಕಾರ ‘All work and no play' (ಬರೀ ಕೆಲಸ, ಆಟವಿಲ್ಲದಿರುವುದು) ಬರೀ ಚಿಕ್ಕ ಮಕ್ಕಳನ್ನು ಮಾತ್ರ ‘ಮಂಕಾ’ಗಿಸುವುದಲ್ಲ, ದೊಡ್ಡವರನ್ನೂ ಮಂಕಾಗಿಸುತ್ತದೆ. ಪ್ರಾಣಿಗಳಲ್ಲಿಯೇ ಸಸ್ತನಿವರ್ಗದಲ್ಲಿ ಆಟವಾಡುವುದು ಒಂದು ಸಹಜ ಸ್ವಭಾವ. ಇದರಿಂದ ಮಿದುಳಿನ ವಿಕಾಸ, ದೇಹದ ಬೆಳವಣಿಗೆಯ ಹಾರ್ಮೋನ್‌ಗಳು, ಸಾಮಾಜಿಕ ಬುದ್ಧಿವಂತಿಕೆ ಮತ್ತು ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯಗಳು ಹೆಚ್ಚುತ್ತವೆ.

ಆಟ ಇಷ್ಟೆಲ್ಲಾ ಲಾಭ ತಂದರೂ, ಬೇರೆಯವರು ಆಟವಾಡುವುದನ್ನು ಸತತವಾಗಿ ನೋಡುವ ಅಭ್ಯಾಸ ಹಲವರಿಗೆ ಇದ್ದರೂ, ಆಟವಾಡಲು ಮಾತ್ರ ಹಿರಿಯರು ಮುಂದಾಗದಿರುವುದೇಕೆ? ಹಿರಿಯರಲ್ಲಿ ಆಟವಾಡಲು ಇರುವ ಹಿಂಜರಿಕೆಗೆ ಹಲವು ಕಾರಣಗಳನ್ನು ಅಧ್ಯಯನಗಳು ಪಟ್ಟಿ ಮಾಡಿವೆ. ಗುಂಪಿನಲ್ಲಿ ಸೇರಲು ನಾಚಿಕೆ/ಇರಿಸು-ಮುರಿಸು, ಬಾಲ್ಯದ ಆಟದ ಅನುಭವಗಳಲ್ಲಿ ಅವರಿಗೆ ಸಂತಸದ ಅನುಭವದ ಬದಲು ಕೇವಲ ಸ್ಪರ್ಧಾತ್ಮಕ ಮನೋಭಾವ ಅಭ್ಯಾಸವಾಗಿದ್ದದ್ದು, ಸೋಲು-ಗೆಲುವುಗಳ ಬಗ್ಗೆ ತುಂಬಾ ಗಂಭೀರವಾಗಿ ಚಿಂತಿಸುವುದು, ಬೇರೆಯವರು ತಮಾಷೆ ಮಾಡುವುದು - ಆಟವಾಡುವುದು ಹೆಚ್ಚಾದಾಗ ಅದು ಕಿರಿಕಿರಿ ಎನಿಸುವುದು - ಹೀಗೆ ಈ ಕಾರಣಗಳು ಹಲವು.

ವಿಶೇಷವಾಗಿ ಮಹಿಳೆಯರು ಆಟವಾಡುವಾಗ ತಾವು ತಪ್ಪು ಮಾಡುವ ಬಗ್ಗೆ, ತಮಗೆ ಒಂದು ವಿಷಯ ‘ಗೊತ್ತಿಲ್ಲ’ ಎಂದು ಒಪ್ಪುವ ಬಗ್ಗೆ ಹಿಂಜರಿಯುತ್ತಾರೆ. ಬಹುಶಃ ದೊಡ್ಡವರಿಗೆ ಮಕ್ಕಳ ಜೊತೆ ಆಡುವುದು ಹೇಗೆ ಎಂದೇ ಗೊತ್ತಿಲ್ಲದಿರುವುದೂ ಕಾರಣವಾಗಬಹುದು. ಆದರೆ ಹಿರಿಯರು ಆಟವನ್ನು ಒಂದು ಜೀವನಕಲೆಯಾಗಿ ತಮ್ಮದಾಗಿಸಿಕೊಳ್ಳಲು ಸಾಧ್ಯವಿದೆ. ಮಕ್ಕಳು ಆಟದ ಲಾಭಗಳ ಬಗೆಗೆ ತಲೆ ಕೆಡಿಸಿಕೊಳ್ಳದೆ, ಅದರಿಂದ ಸಿಗುವ ಆನಂದಕ್ಕಾಗಿಯೇ ಅದರ ಹಿಂದೆ ಓಡಬಹುದು. ಆದರೆ ಹಿರಿಯರು ಆಟದಿಂದ ಆ ಆನಂದದ ಜೊತೆಗೆ, ಅರಿವಿನಿಂದ ಮತ್ತಷ್ಟನ್ನು ಪಡೆದುಕೊಳ್ಳಬಹುದು.

ಆಟವನ್ನು ರೂಢಿಸಿಕೊಳ್ಳಬೇಕೆ? ಮೊದಲು ನಿಮ್ಮ ಬಾಲ್ಯವನ್ನು ನೆನಪಿಸಿಕೊಳ್ಳಿ. ನೀವು ಆಡುತ್ತಿದ್ದ ಆಟಗಳು ಯಾವುವು? ಯಾರ ಜೊತೆ ಆಡುತ್ತಿದ್ದಿರಿ? ಯಾವ ಅಂಶಗಳು ನಿಮ್ಮನ್ನು ಆಟವಾಡುವುದರಿಂದ ತಡೆದಿದ್ದವು? ಬಾಲ್ಯದ ಆಟದ ಕಹಿ ಘಟನೆಗಳು ಈಗಲೂ ನಿಮಗೆ ನೆನಪಾಗುತ್ತವೆಯೇ? ಈ ಪ್ರಶ್ನೆಗಳನ್ನು ನಿಮ್ಮನ್ನು ನೀವು ಕೇಳಿಕೊಳ್ಳುವುದು ಆಟಕ್ಕೆ ಮತ್ತೆ ಮರಳುವಲ್ಲಿ ಬಹು ಮುಖ್ಯವಾಗುತ್ತವೆ.

ಚಿಕ್ಕ ಮಕ್ಕಳಾಡುವ ‘imaginative play’ - ಕಾಲ್ಪನಿಕ ಆಟ ಹಿರಿಯರಿಗೂ ಬಹು ಉಪಯುಕ್ತ. ‘ಮಕ್ಕಳ’ ಪಾತ್ರದಲ್ಲಿ ದೊಡ್ಡವರು, ಮಕ್ಕಳು ‘ಶಿಕ್ಷಕ’ರಾಗುವುದು ‘ಅಪ್ಪ /ಅಮ್ಮ’ ಆಗುವುದು – ಇಂತಹ ಆಟಗಳಲ್ಲಿ ಉತ್ಸಾಹದಿಂದ ಭಾಗವಹಿಸುವುದು ಉಪಯುಕ್ತ. ಇಂತಹ ‘ನಾಟಕದ ಆಟ’ ಒಂದು ‘ರೋಲ್ ಪ್ಲೇ’ - ಪಾತ್ರಗಳ ಆಟವಾಗಿ ಮತ್ತೊಬ್ಬರ ಮನಸ್ಸನ್ನು ನಮಗೆ ಅರ್ಥ ಮಾಡಿಸುವುದರಲ್ಲಿ ಸಫಲವಾಗಲು ಸಾಧ್ಯವಿದೆ. ಇದರ ಪರಿಣಾಮ ಮಕ್ಕಳು-ಅಪ್ಪ-ಅಮ್ಮಂದಿರ ನಡುವೆ ಸಂಘರ್ಷ ಕಡಿಮೆಯಾಗಿ, ಕುಟುಂಬದಲ್ಲಿ ಜಗಳಗಳು ಕಡಿಮೆಯಾಗುವುದು.

ಸಾಮಾಜಿಕವಾಗಿ ಕೂಡ ಆಟದ ಗುಂಪುಗಳನ್ನು ಕಟ್ಟಲು ಸಾಧ್ಯವಿದೆ. ವಾರಕ್ಕೆ 2-3 ಗಂಟೆಗಳ ಅವಧಿಯನ್ನು ಸುಮಾರು 5ರಿಂದ 9 ಜನರ ಗುಂಪು ಈ ಚಟುವಟಿಕೆಗಾಗಿ ಇಟ್ಟುಕೊಳ್ಳಲು ಸಾಧ್ಯವಿದೆ. ಆಟ ದೈಹಿಕ ಚಟುವಟಿಕೆಯಾದಷ್ಟೂ, ಹೊರಾಂಗಣ ಆಟವಾದಷ್ಟೂ ಆರೋಗ್ಯಕ್ಕೆ ಲಾಭಗಳು ಹೆಚ್ಚು. ಆಟ ಎಂದ ಮೇಲೆ ಸೋಲು-ಗೆಲುವು ಇರಲೇಬೇಕಾದರೂ ಇಲ್ಲಿ ಆಡುವವರ ಗುರಿ ‘ಆಟದ ಪ್ರಕ್ರಿಯೆ’ಯಷ್ಟೇ ಆಗಬೇಕಷ್ಟೆ. ಪಿಕ್‌ನಿಕ್‌ಗೆಂದು ಹೋದಾಗ, ಸಮುದ್ರದ ದಂಡೆಗೆ ಹೋದಾಗ ಚೆಂಡಾಡುವುದು, ಮರಳಿನಲ್ಲಿ ಗೂಡು ಕಟ್ಟುವುದು – ಇಂಥವನ್ನು ನಮ್ಮ ‘ಹಿರಿತನ’ ಮರೆತು ನಾವು ಆನಂದಿಸುತ್ತೇವೆ. ಇಂಥದ್ದೇ ಪ್ರವೃತ್ತಿಯನ್ನು ವಾರದಲ್ಲಿ ಒಮ್ಮೆಯಾದರೂ ಆಟದ ಮೂಲಕ ನಾವು ರೂಢಿಸಿಕೊಳ್ಳಲು ಸಾಧ್ಯವಿದೆ.

ಕಳೆದ 30 ವರ್ಷಗಳಲ್ಲಿ ನಾವು ಆಟವಾಡುವುದನ್ನು ವಿವಿಧ ರೂಪಗಳಲ್ಲಿ ಮುಂದುವರಿಸಿದ್ದೇವೆ. ಆದರೆ ಆ ಆಟದಲ್ಲಿ ‘ಆಡುವ ಅಂಶ’ವೇ ಕಡಿಮೆಯಾಗಿಬಿಟ್ಟಿದೆ. ಆಟದ ಹುರುಪು-ತಮಾಷೆ - ‘Playful quality’ ಎಂಬ ಗುಣಮಟ್ಟ ಇಳಿದಿದೆ. ಮಕ್ಕಳು ‘ಆಟವಾಡಲಿ’ ಎನ್ನುವಾಗಲೂ ನಮ್ಮ ಗುರಿ ಅದು ಯಾವುದೋ ಒಂದು ಮಹತ್ವಾಕಾಂಕ್ಷೆಗೆ! ‘ವೀಡಿಯೋ ಗೇಂ’ಗಳನ್ನು ಆಡುವ ಸಮಯ ಹೆಚ್ಚಿರಬಹುದು, ವ್ಯಸನವಾಗಿ ಜೂಜಾಡಬಹುದು. ಆದರೆ ಆರೋಗ್ಯವನ್ನು ವರ್ಧಿಸುವ, ತತ್‌ಕ್ಷಣಕ್ಕೆ ಆ ಲಾಭವನ್ನು ಸ್ಪಷ್ಟವಾಗಿಸದ ಆಟಕ್ಕಾಗಿ ಸಮಯ ನೀಡುವುದು ಕಡಿಮೆಯೇ.

ಆಟವೆಂಬುದು ಮನಸ್ಸಿನ ಒತ್ತಡಗಳಿಗೆ ಒಂದು ಕಿಟಕಿಯಾಗಬಲ್ಲದು. ಮನದೊಳಗೆ-ಮಿದುಳಿನೊಳಗೆ ಗಾಳಿ-ಬೆಳಕುಗಳನ್ನು ತರಲು, ಕಲ್ಮಶಗಳನ್ನು ಹೊರಹಾಕಲು ಈ ‘ಕಿಟಕಿ’ ಸಹಾಯ ಮಾಡುತ್ತದೆ. ಆಟವಾಡುವವರ ಆಯುಷ್ಯವೂ ಹೀಗಾಗಿ ದೀರ್ಘವಾಗಲು ಸಾಧ್ಯವಿದೆ. ನೆನಪಿಡಿ: ಆಟವೆಂದರೆ ಆರೋಗ್ಯ. ಆಟದ ವಿರುದ್ಧ ಪದವೆಂದರೆ ಪಾಠವಲ್ಲ, ಖಿನ್ನತೆ! ಆರೋಗ್ಯಕ್ಕಾಗಿ ಆಟವಾಡಿ; ನಿಮ್ಮೊಳಗಿನ ‘ಮಗು’ವನ್ನು ಆಟವಾಡಲು ಹೊರಗೆ ಬಿಡಿ! ❖

ಗಾಯದ ಮೇಲೆ ಗಮನ ಇರಲಿ

ಡಾ. ಪಲ್ಲವಿ ಹೆಗಡೆ

ಗಾಯವು ದೇಹದಲ್ಲಿ ಎಲ್ಲಿ, ಹೇಗೇ ಆಗಿದ್ದರೂ ಒಂದು ವಾರದ ನಂತರ ಹಳೆಯದಾಗುತ್ತದೆ. ವಾರದೊಳಗಿನ ಎಲ್ಲಾ ಗಾಯವೂ ‘ಹೊಸ ಗಾಯ’ ಅಥವಾ ‘ಸದ್ಯೋವ್ರಣ’ ಅಥವಾ ‘ನವವ್ರಣ’. ಆಯುರ್ವೇದದ ದೃಷ್ಟಿಯಿಂದ ಇಂತಹ ಹೊಸ ಗಾಯಗಳು ಆರು ಬಗೆ:

1. **ಛಿನ್ನ:** ಅಂಗಗಳು ತುಂಡಾಗಿದ್ದು/ ಕತ್ತಿ ಹೋಗಿರುವುದು
2. **ಭಿನ್ನ:** ಒಡೆದದ್ದು, ಚೂರಾಗಿದ್ದು, ಬಿರಿದದ್ದು
3. **ವಿದ್ಧ:** ಚುಚ್ಚಿದ್ದು, ತೂತಾಗಿದ್ದು
4. **ಕ್ಷತ:** ಹರಿದದ್ದು, ಕುಯ್ದಿದ್ದು, ಪರಚಿದ್ದು
5. **ಘೃಷ್ಟ:** ತರಚಿದ್ದು
6. **ಪಿಚ್ಚಿತ:** ಅಪ್ಪಚ್ಚಿಯಾದ್ದು, ಜಜ್ಜಿದ್ದು

ಗಾಯವಾಗಿ ಒಂದು ವಾರದ ಅವಧಿಯಲ್ಲಿ ಯಾವುದೇ ಬಗೆಯ ಗಾಯದ ಆರೈಕೆಯಲ್ಲಿ ತಪ್ಪಾದರೆ ಒಣಗುವುದು, ಬಿರಿಯುವುದು, ಚರ್ಮ ಉದುರುವುದು, ಕಪ್ಪಾಗುವುದು – ಇಂತಹ ವಾತದೋಷ; ಉರಿಯುವುದು, ಕೆಂಪು, ಹಳದಿಯಾಗುವುದು, ಬಾಯುವುದು, ವಾಸನೆಯಾಗುವುದು, ಕೊಳೆಯುವುದು – ಇಂತಹ ಪಿತ್ತದೋಷ; ಊತ, ಸ್ರಾವ, ಕೀವುಗಳಂತಹ ಕಫದೋಷದಿಂದ ದೂಷಣೆ ಆಗತೊಡಗುತ್ತದೆ. ಅಂದರೆ ‘ದುಷ್ಟವ್ರಣ’ವೆಂಬ ಹೆಸರು ಪಡೆಯುತ್ತದೆ. ಹೀಗೆ ದೋಷಗಳ ಪರಿಣಾಮವಾಗಿ ಚರ್ಮ, ಮಾಂಸ ಸೇರದೆ ಗಾಯವು ಮಾಯುವುದು ನಿಧಾನವಾಗುತ್ತದೆ. ಇಂತಹ ದುಷ್ಟವ್ರಣದ ಚಿಕಿತ್ಸೆ, ಆಹಾರ, ವಿಹಾರಗಳ ಕ್ರಮ ಬೇರೆ. ಗಾಯವಾದವರಿಗೆ ಮೊದಲ ವಾರದ ಶುಶ್ರೂಷೆ ಅತ್ಯಂತ ಮುಖ್ಯವಾಗುತ್ತದೆ. ಈ ಆರೈಕೆ ಎಡವಿದಲ್ಲಿ ವ್ರಣವೊಂದು ಆ ಗಾಯಾಳುವಿಗೆ ಬಹುಕಾಲ ತೊಂದರೆ ನೀಡುವ ರೋಗವಾಗುವುದು ಖಂಡಿತ.



ಮೊದಲ ಆ ಒಂದು ವಾರದಲ್ಲಿ ಮಾಡಬೇಕಾದ ಮುಖ್ಯ ‘ವ್ರಣಿತೋಪಾಸನೆ’ಯ ಕುರಿತು ತಿಳಿಯೋಣ. ಈ ಆರೈಕೆಗಳು ವ್ರಣದ ತೀವ್ರತೆ, ವ್ಯಾಪ್ತಿ, ಆಳಕ್ಕನುಗುಣವಾಗಿ ಹೆಚ್ಚುಕಡಿಮೆ ಇರುತ್ತವೆ.

ಗಾಯವಾದವನ ಕೊಠಡಿ:

- ಗಾಯವಾದ ವ್ಯಕ್ತಿಯನ್ನು ಬೀಸುವ ಗಾಳಿಯ ತೀವ್ರತೆ ಇಲ್ಲದ, ಬಿಸಿಲಿನ ಝಳ ತಾಕದ, ಸ್ವಚ್ಛ, ಸ್ವಷ್ಟ ಕೊಠಡಿಯಲ್ಲಿ ವಾಸಿಸಲು ಅನುವು ಮಾಡಬೇಕು.
- ಹಾಸಿಗೆ, ಮಂಚ, ಹೊದಿಕೆ, ದಿಂಬು, ಆರಾಮವಾಗಿ ಕುಳಿತುಕೊಳ್ಳಲು ಗಾಯಕ್ಕೆ ಅನುಗುಣವಾದ ಆಸನ ಇತ್ಯಾದಿಗಳ ಸುಖಮಯ, ಮನೋಹರ ವ್ಯವಸ್ಥೆಯಿಂದ ಕೂಡಿರಬೇಕು.
- ಗಾಯವನ್ನು ಆರೈಕೆ ಮಾಡಲು ಶುಶ್ರೂಷಕರೂ ವೈದ್ಯರೂ ಓಡಾಡುವಷ್ಟು ಕೊಠಡಿಯಲ್ಲಿ ಅವಕಾಶವೂ ಇರಬೇಕು. ಇಕ್ಕಟ್ಟಿನಲ್ಲಿ ಎಲ್ಲರಿಗೂ ಹಿಂಸೆ. ಗಾಯಕ್ಕೆ ಏನಾದರೂ ತಟ್ಟಿ ಪೆಟ್ಟಾಗಲೂಬಹುದು.
- ಸ್ನೇಹಿತರು, ಪ್ರೀತಿಪಾತ್ರರು, ಹಿರಿಯರು, ಆಪ್ತರು ಆಗಾಗ ಮನಸ್ಸನ್ನು ಹಗುರವಾಗಿಡಲು ಪ್ರಯತ್ನಿಸಬೇಕು. ಆಶ್ವಾಸನೆಯಿಂದ ನೋವು ಸಹಿಸುವ ಶಕ್ತಿ ಇಮ್ಮಡಿಗೊಳ್ಳುತ್ತದೆ. ಇದೊಂದು ಭದ್ರಭಾವನೆ.
- ಮೃದುವಾದ ಗಾಳಿ ಬೀಸುವ ಬೀಸಣಿಕೆ ಅಥವಾ ಯಂತ್ರಚಾಲಿತ ಫ್ಯಾನ್‌ಗಳ ಮೃದುಗಾಳಿ ಹಿತಕರ.
- ಧನಾತ್ಮಕವಾಗಿ ಯೋಚಿಸುವ, ಯೋಚಿಸುವಂತೆ ಪ್ರೇರೇಪಿಸುವ ವ್ಯಕ್ತಿಗಳ ನಡುವೆ ಪಠಣ, ಜಪ, ಚಿಂತನೆ, ಪ್ರಾರ್ಥನೆ, ಕಥೆಗಳ ಶ್ರವಣ – ಇಂತಹ ಆಚರಣೆಗಳು ತೀವ್ರಾಘಾತದಲ್ಲಿ ಗುಣಮುಖವಾಗಲು ಸ್ಥೈರ್ಯ ನೀಡುತ್ತವೆ.
- ಚಿಂತೆ, ದುಃಖ, ವಿಷಾದ, ಸಿಟ್ಟು, ಜಗಳ, ದ್ವೇಷ, ಚಾಪಲ್ಯ, ಕಠೋರವಾದ ಮಾತು ಇಂತಹವನ್ನು ಮಾಡುವುದು ಅಥವಾ ಮಾಡಲು ಪ್ರೇರೇಪಿಸುವ ವ್ಯಕ್ತಿ, ವಿಚಾರ, ವಿಷಯಗಳಿಂದ ದೂರವಿರಿಸಬೇಕು. ಅಂದರೆ ವ್ರಣಿತನ ಕೊಠಡಿಯಲ್ಲಿ ಬಂದುಹೋಗುವವರ ಬಗ್ಗೆ ನಿಗಾ ವಹಿಸಬೇಕು.
- ವ್ರಣಿತನ ಕೊಠಡಿಯ ಕುರಿತು ಆಸ್ಪತ್ರೆಯಿರಲಿ, ಮನೆಯಲ್ಲೇ ಆಗಿರಲಿ – ಇವೇ ಅಂಶಗಳನ್ನು ಗಮನಿಸಿರಬೇಕು.
- ಧೂಪನವನ್ನು ಹಾಕುವುದು ವಾತಾವರಣವನ್ನು ಶುದ್ಧಗೊಳಿಸುವ ಸರಳ ವ್ಯವಸ್ಥೆ. ಸ್ವಚ್ಛತೆಯ ಬಗ್ಗೆ ಕಾಳಜಿ ಇವೆಲ್ಲವೂ ಆರೈಕೆ ಮಾಡುವ ವ್ಯಕ್ತಿಗಳಿಗೆ ಸಂಬಂಧಿಸಿದ್ದು.
- ಅಗತ್ಯವಿದ್ದಾಗ ವೈದ್ಯರು ತತ್‌ಕ್ಷಣದಲ್ಲಿ ಲಭ್ಯವಾಗುವಂತೆ, ಸಂವಹನಕ್ಕೆ ಸಿಗುವಂತೆ ಕೊಠಡಿಯಿರಬೇಕು.
- ಚಿಕ್ಕ ಗಾಯಗಳಲ್ಲಿ ಈ ಮೇಲೆ ಹೇಳಿದ ಅಂಶಗಳು ಅಷ್ಟೇನೂ ಮುಖ್ಯ ಅನಿಸದಿದ್ದರೂ, ತೀವ್ರಾಘಾತದಲ್ಲಿ ಈ ಸಣ್ಣ ಅಂಶಗಳೂ ಅತಿಮುಖ್ಯ ಪಾತ್ರ ವಹಿಸುತ್ತವೆ.

ಗಾಯವಾದವರಿಗೆ ಆರೈಕೆಯನ್ನು ಮಾಡುವಾಗ ಆಹಾರ, ನಿದ್ರೆ, ಚಟುವಟಿಕೆಗಳ ಬಗ್ಗೆ ತಿಳಿದಿರಬೇಕು.

ಆಹಾರ

ಹೊಟ್ಟೆ ತುಂಬಾ ಉಣ್ಣುವುದು, ಎಲ್ಲೆಲ್ಲೋ – ಹೇಗೋ ಯಾರೋ – ತಯಾರಿಸಿದ ಹೊಸಬಗೆಯ ಆಹಾರ ಸೇವಿಸುವುದು, ಹಸಿವಾದರೂ ತಿನ್ನದಿರುವುದು, ಬಾಯಾರಿಕೆ ಇಲ್ಲದಿದ್ದರೂ ನೀರು ಕುಡಿಯುವುದು, ಬಾಯಾರಿಕೆ ಇದ್ದರೂ ನೀರು ಕುಡಿಯದಿರುವುದು, ಹಳಸಿದ, ತಂಗಳಾದ, ಶೀತಲೀಕೃತ, ಮತ್ತೆ ಬಿಸಿಮಾಡಿದ, ಅರೆಬೆಂದ, ಸೀದುಹೋದ, ಹಸಿತರಕಾರಿ, ಮೊಳಕೆಕಾಳು, ಯಥೇಚ್ಛ ತರಕಾರಿಯುಳ್ಳ, ಈಗಷ್ಟೇ ಕಟಾವು ಆದ ಧಾನ್ಯಗಳಿಂದ ತಯಾರಾದ ಆಹಾರ, ಮೊಸರು, ಹುಳಿಮಜ್ಜಿಗೆ, ಮದ್ಯ, ಉಪ್ಪು-ಹುಳಿ ಯಥೇಚ್ಛವಾಗಿ ಇರುವ ಗೊಜ್ಜು, ಉಪ್ಪಿನಕಾಯಿ, ತೊಕ್ಕು, ಅಪ್ಪೇಹುಳಿಯಂತಹ ಅಡುಗೆಗಳು, ಮೇಲೋಗರಗಳು, ನೊಣ-ಕೀಟಗಳಿಂದ ಮುತ್ತಿದ ಅಶುದ್ಧ ಆಹಾರ-ವಿಧಾನವೆಲ್ಲವೂ ವರ್ಜ್ಯ. ಇವೆಲ್ಲವೂ ಗಾಯವನ್ನು ಮಾಯಗೊಡದೆ ಕೆರೆತ, ಬಾವು, ಸ್ರಾವ, ಕೀವುಗಳಿಗೆ ಕಾರಣವಾಗುತ್ತವೆ.

- ಹಿಂದಿನ ವರ್ಷದಲ್ಲಿ ಬೆಳೆದ ಧಾನ್ಯಗಳು, ಅಭ್ಯಾಸವಿರುವ ಆಹಾರ, ಮನೆಯಲ್ಲಿ ಆಗಷ್ಟೇ ತಯಾರಾದ, ತುಪ್ಪ, ಎಣ್ಣೆ, ತಂಗಿನಕಾಯಿ, ಹೀಗೆ ಜಿಡ್ಡುಗಳಿಂದ ಸಂಸ್ಕರಿಸಿದ, ಬೇಯಿಸಿದ, ಸಂಸ್ಕರಿಸಿದ ಸ್ವಲ್ಪಮಾತ್ರ ತರಕಾರಿಗಳಿರುವ ಆಹಾರ ಯೋಗ್ಯ.
- ಎಣ್ಣೆಯಲ್ಲಿ ಕರಿದದ್ದು, ಹುರಿದದ್ದು, ಹಲವು ರೀತಿಯ ಮಸಾಲೆವಸ್ತುಗಳಿಂದ ತಯಾರಿಸಿದ ಅಡುಗೆಗಳು ತೊಂದರೆಯಾದೀತು.
- ಮಾಂಸಾಹಾರಿಗಳಿಗೆ ಬಹುತೇಕ ಮಾಂಸ ವರ್ಜ್ಯ. ಆಡಿನ ಮಾಂಸರಸ ಬಲದಾಯಕ. ಹಸಿವೆ ಗಮನಿಸಿಯೇ ಮಾಂಸಸೇವನೆ ಇರಲಿ.
- ದಿನದಲ್ಲಿ ಎರಡು ಅಥವಾ ಮೂರು ಹೊತ್ತು ಆಹಾರಕಾಲದಲ್ಲಿ ಮಾತ್ರ ಆಹಾರಸೇವನೆ ಹಿತಕರ.
- ಹಣ್ಣಿನ, ತರಕಾರಿಯ, ಸೊಪ್ಪಿನ ಜ್ಯೂಸ್, ಹಾಲಿನೊಂದಿಗೆ ಹುಳಿಹಣ್ಣುಗಳ ಶೇಕ್, ಸಂಸ್ಕರಿಸಿದ, ಪ್ಯಾಕಿನಲ್ಲಿ ಕಾದಿಟ್ಟ ಹಣ್ಣಿನರಸಗಳು, ಮೊಸರಿನ ಸೇವನೆ, ಮಜ್ಜಿಗೆ ಕುಡಿಯುವುದು – ಈ ಎಲ್ಲವೂ ಹುಳಿರುಚಿಯಿಂದಾಗಿ ರಕ್ತದೂಷಕ; ಸೇವಿಸಬಾರದು. ಹಣ್ಣುಗಳನ್ನು ಆಹಾರದ ಮೊದಲು ಸೇವಿಸಿ ಉಳಿದ ಆಹಾರ ತಿನ್ನುವುದು ಕ್ಷೇಮ. ಆಗಷ್ಟೇ ಕಡೆದ ಸಿಹಿ ಮಜ್ಜಿಗೆಯನ್ನು ಅನ್ನದೊಂದಿಗೆ ಬೆರೆಸಿ, ಅಡುಗೆ ಮಾಡಿ ಉಣ್ಣಬಹುದು. ಬಿಸಿಹಾಲನ್ನು ಬೆಳಗ್ಗಿನ ತಿಂಡಿಯೊಂದಿಗೆ, ಸಂಜೆ ಒಮ್ಮೆ ಸೇವನೆ ಹಿತ.
- ಗೋಧಿ, ಹಳೇ ಅಕ್ಕಿ, ಜವೆಗೋಧಿ, ಹೆಸರುಬೇಳೆ, ಚೆನ್ನಂಗಿಬೇಳೆ, ಎಳೆಮೂಲಂಗಿ, ಎಳೆಯ ಬದನೆ, ಪಡವಲ, ಹಾಗಲ, ಹೀರೆ, ಬಿಳಿ-ಕೆಂಪು ಹರಿವೆ, ದಾಳಿಂಬೆಹಣ್ಣು, ನೆಲ್ಲಿಕಾಯಿ – ಇವುಗಳ ರುಚಿಕರ ಸರಳ ಅಡುಗೆ ಹಿತಕರ.

ನಿದ್ರೆ

- ಹಗಲುನಿದ್ರೆ ವರ್ಜ್ಯ. ಹಗಲಲ್ಲಿ ನಿದ್ರೆ ಮಾಡುವುದರಿಂದ ಗಾಯದಲ್ಲಿ ತುರಿಕೆ, ಮೈಭಾರವಾದಂತೆ, ಬಾವು, ಗಾಯದ ವರ್ಣವ್ಯತ್ಯಾಸ, ಸ್ರಾವ ಉಂಟಾಗುತ್ತವೆ.
- ರಾತ್ರಿಜಾಗರಣೆಯೂ ವರ್ಜ್ಯ. ಇದು ಕೂಡ ರಕ್ತದ ಗುಣಗಳನ್ನು ಹಾಳು ಮಾಡಿ, ಗಾಯದ ವಿಕೃತಿಗೆ ಕಾರಣ.
- ರಾತ್ರಿ ಸಕಾಲದಲ್ಲಿ ನಿದ್ರೆ, ಮುಂಜಾನೆ ಎಚ್ಚರವಾಗುವುದನ್ನು ಅನುಸರಿಸುವುದು.

ಚಟುವಟಿಕೆ

ಏಳುವಾಗ, ಕೂರುವಾಗ, ತಿರುಗಾಡುವಾಗ, ತಿರುಗುವಾಗ, ಏರುದನಿಯಲ್ಲಿ ಮಾತನಾಡುವಾಗ ಮೈಮರೆಯಬಾರದು. ಎಚ್ಚರಿಕೆಯಿಂದ ಗಾಯವನ್ನು ಕಾಪಾಡಿಕೊಳ್ಳಬೇಕು. ಇಲ್ಲದಿದ್ದರೆ ಮೈನೋವು, ಗಾಯದಲ್ಲಿಯೂ ನೋವಿನ ತೀವ್ರತೆ ಅರಿವಿಗೆ ಬರುವುದು.

- ಮೈಥುನ ನಿಷಿದ್ಧ. ಹಸ್ತಮೈಥುನ ಕೂಡ ದೇಹದಲ್ಲಿ ಬಲಹ್ರಾಸಕ್ಕೆ ಕಾರಣ. ಗಾಯಕ್ಕೆ ‘ಸಂಸರ್ಗ’ (ಇನ್‌ಫೆಕ್ಷನ್) ಆಗುವ ಸಾಧ್ಯತೆಯಿದೆ. ವೀರ್ಯವು ಸ್ರವಿಸಿದರೆ ಬಲವೂ ಉಡುಗಿದಂತೆ. ಇದು ಸ್ತ್ರೀಯರಿಗೂ ಅನ್ವಯಿಸುತ್ತದೆ.
- ಬಿಸಿಲು, ಬೀಸುವ ಗಾಳಿ, ಮಳೆ, ಛಳಿ, ಹಿಮಪಾತ – ಹೀಗೆ ವಿಪರೀತ ವಾತಾವರಣಕ್ಕೆ ಮೈಯೊಡ್ಡುವುದು ಕೂಡ ಗಾಯದ ಮಾಯುವಿಕೆಗೆ ಅಡ್ಡಿ.
- ದಿನಕ್ಕೆರಡು ಬಾರಿ, (ಬೆಳಗ್ಗೆ ಮತ್ತು ಸಂಜೆ), ಕೊಠಡಿಯಲ್ಲಿ ‘ಧೂಪ’ವನ್ನು ಹಾಕಬೇಕು. ಸಾಸಿವೆ, ಕಹಿಬೇವಿನ ಸೊಪ್ಪು, ತೊಗಟೆ, ಬಜೆಬೇರು, ಲಕ್ಕೀ ಸೊಪ್ಪು, ತುಳಸೀ, ಅರಿಶಿನ – ಹೀಗೆ ಲಭ್ಯವಿರುವ ಔಷಧಗಳೊಂದಿಗೆ ಉಪ್ಪು, ತುಪ್ಪ ಸೇರಿಸಿ ಹೊಗೆ ಹಾಕಬೇಕು. ಇದು ಕ್ರಿಮಿ, ಕೀಟ, ಗಾಳಿ, ವಾತಾವರಣದ ಸೂಕ್ಷ್ಮಜೀವಿಗಳನ್ನೂ ದೂರವಿರಿಸಿ ಶುದ್ಧಗೊಳಿಸುತ್ತದೆ. ಗಾಯವು ಇನ್ಫೆಕ್ಷನ್ ಅಥವಾ ಸಂಸರ್ಗಕ್ಕೊಳಗಾಗುವುದು ತಪ್ಪುತ್ತದೆ.

ಮೇಲಿನ ಆರೈಕೆಗಳನ್ನು ಗಾಯದ ತೀವ್ರತೆಗೆ ಅನುಗುಣವಾಗಿ ವೈದ್ಯರ ಮಾರ್ಗದರ್ಶನದಲ್ಲಿ ಅನುಸರಿಸುವುದು ಹಿತ. ❖

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ • ಸೇವಾ ದಾಖಲೆ ಪರಿಗಣಿಸಲು ಸೂಚನೆ

‘ಕಳಂಕಿತ ಅಧಿಕಾರಿಗಳ ನೇಮಕ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭ್ರಷ್ಟಾಚಾರ ನಿಗ್ರಹ ದಳದಂತಹ (ಎಸಿಬಿ) ಸಂಸ್ಥೆಗಳಿಗೆ ಕಳಂಕಿತ ಅಧಿಕಾರಿಗಳನ್ನು ನೇಮಕ ಮಾಡಬಾರದು. ಅಧಿಕಾರಿಗಳನ್ನು ನೇಮಕ ಮಾಡುವಾಗ ಅವರ ಸೇವಾ ದಾಖಲೆ (ಸರ್ವೀಸ್ ರೆಕಾರ್ಡ್) ಹಾಗೂ ಸಮಗ್ರತೆಯನ್ನು ಪರಿಗಣಿಸಬೇಕು’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಲಂಚಕ್ಕೆ ಬೇಡಿಕೆ ಇಟ್ಟ ಆರೋಪದಲ್ಲಿ ಬಂಧನಕ್ಕೆ ಒಳಗಾಗಿರುವ ಉಪ ತಹಸೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಕಾರ್ಯದರ್ಶಿಗೆ ಈ ನಿರ್ದೇಶನ ನೀಡಿದೆ.

‘ಎಸಿಬಿಗೆ ಅಧಿಕಾರಿಗಳನ್ನು ನೇಮಕ ಮಾಡುವಾಗ ಸಾರ್ವಜನಿಕ ಹಿತಾಸಕ್ತಿ ಗಮನಿಸಬೇಕು. ಭ್ರಷ್ಟಾಚಾರ ತಡೆಯಲೆಂದೇ ರಚಿಸಲಾಗಿರುವ ಎಸಿಬಿ ಅಧಿಕಾರಿ ಆಗುವವರು ಸಾಕಷ್ಟು ವಿಶ್ವಾಸಾರ್ಹತೆ ಹೊಂದಿಬೇಕು. ಸಂಸ್ಥೆಯ ಘನತೆಯನ್ನು ಉನ್ನತ ಹಂತಕ್ಕೆ

ಒಯ್ಯುವಂತಹ ಕ್ಷಮತೆ ಉಳ್ಳವರಾಗಿರಬೇಕು. ಆದ್ದರಿಂದ, ಎಸಿಬಿಯಂತಹ ಸಂಸ್ಥೆಗಳಿಗೆ ಅಧಿಕಾರಿಗಳನ್ನು ನೇಮಕ ಮಾಡುವಾಗ ಅವರ ಸೇವಾ ದಾಖಲೆ ಹಾಗೂ ಸಮಗ್ರತೆಯನ್ನು ಪರಿಗಣಿಸಬೇಕು’ ಎಂದು ನ್ಯಾಯಪೀಠ ಹೇಳಿದೆ.

‘ಅಧಿಕಾರಿಗಳ ನೇಮಕಾತಿಯನ್ನು ಯಾವುದೇ ಒತ್ತಡಗಳಿಗೂ ಒಳಗಾಗದೆ ಮಾಡಬೇಕು. ನೇಮಕದ ಹಿಂದೆ ಆಂತರಿಕ ಅಥವಾ ಬಾಹ್ಯ ಪ್ರಭಾವಗಳು ಇರಬಾರದು. ನೇಮಕ ಹೊಂದುವ ಅಧಿಕಾರಿಯ ವಿರುದ್ಧ ಎಸಿಬಿ ಅಥವಾ ಲೋಕಾಯುಕ್ತ ತನಿಖೆ ನಡೆಯುತ್ತಿರಬಾರದು. ಅವರ ಕುಟುಂಬ ಸದಸ್ಯರ ವಿರುದ್ಧವೂ ಯಾವುದೇ ತನಿಖೆ ನಡೆಯುತ್ತಿರಬಾರದು. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದ ನಂತರವೇ ಅಧಿಕಾರಿಗಳನ್ನು ನೇಮಕ ಮಾಡಬೇಕು’ ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ಹಾಗೂ ಡಿಪಿಎಆರ್ ಕಾರ್ಯದರ್ಶಿಗೆ ನ್ಯಾಯಪೀಠ ಖಡಕ್ ನಿರ್ದೇಶನ ನೀಡಿದೆ.

ಹೈಕೋರ್ಟ್ ನ್ಯಾಯಮೂರ್ತಿಗೆ ಬೆದರಿಕೆ: ‘ಸುಪ್ರೀಂ’ಗೆ ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಕಾರ್ಯವೈಖರಿ ವಿರುದ್ಧ ಟೀಕಿಸಿದ ಕಾರಣಕ್ಕೆ ವರ್ಗಾ ವಣೆ ಬೆದರಿಕೆ ಬಂದಿದೆ ಎಂಬ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರ ಹೇಳಿಕೆ ಪ್ರಕರಣದ ಬಗ್ಗೆ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಎಸಿಬಿ ಮುಖ್ಯಸ್ಥ ಸೀಮಂತ್ ಕುಮಾರ್ ಸಿಂಗ್ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದು, ಎರಡು ಅರ್ಜಿಗಳನ್ನು ಜುಲೈ 12ರಂದು ವಿಚಾರಣೆಗೆ ಪರಿಗಣಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ಕರ್ನಾಟಕ ಸರ್ಕಾರದ ಪರವಾಗಿ ಈ ಪ್ರಕರಣವನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠದ ಗಮನಕ್ಕೆ ತಂದರು.

‘ಈ ಪ್ರಕರಣದಲ್ಲಿ ಜಾಮೀನು ಅರ್ಜಿ ವಿಚಾರಣೆಯ ವೇಳೆಕರ್ನಾಟಕ ಹೈಕೋರ್ಟ್‌ನ ಏಕಸದಸ್ಯ ಪೀಠದ ನ್ಯಾಯಮೂರ್ತಿಯವರು ಹಲವು ನಿರ್ದೇಶನಗಳನ್ನು ನೀಡಿದ್ದಾರೆ. ಜತೆಗೆ, ಕೆಲವು ಅಭಿಪ್ರಾಯಗಳನ್ನೂ ನೀಡಿದ್ದಾರೆ. ಈ ಪ್ರಕರಣವನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು’ ಎಂದು ತುಷಾರ್ ಮೆಹ್ತಾ ಅವರು ಕೋರಿದರು.



ಸೀಮಂತ್ ಕುಮಾರ್ ಸಿಂಗ್

ಈ ಪ್ರಕರಣವನ್ನು ಸೂಕ್ತ ಪೀಠದ ಮುಂದೆ ಮಂಗಳವಾರ ಪಟ್ಟಿ ಮಾಡುವಂತೆ ಪೀಠವು ನಿರ್ದೇಶನ ನೀಡಿತು.

ಈ ಮಧ್ಯೆ, ಹಿರಿಯ ವಕೀಲ ಅಮಿತ್ ಕುಮಾರ್ ಕೂಡ ಎಸಿಬಿ ಮುಖ್ಯಸ್ಥರ ಪರವಾಗಿ ಪ್ರತ್ಯೇಕ ಅರ್ಜಿ ಸಲ್ಲಿಸಿ, ‘ಹಲವು ವರ್ಷಗಳ ಅನುಭವ ಹೊಂದಿರುವ ಎಸಿಬಿ ಮುಖ್ಯಸ್ಥರ ಕಾರ್ಯವೈಖರಿಯನ್ನು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಅವರು ಟೀಕಿಸಿದ್ದಾರೆ’ ಎಂದರು.

‘ನೀವು ನ್ಯಾಯಮೂರ್ತಿ ಅವರನ್ನು ವರ್ಗಾವಣೆ ಮಾಡುವ ಬೆದರಿಕೆ ಹಾಕಿದ್ದೀರಾ. ನೀವು ಪ್ರಭಾವಿ ವ್ಯಕ್ತಿ’ ಎಂದು ಪೀಠವು ಅರ್ಜಿದಾರರನ್ನು ಪ್ರಶ್ನಿಸಿತು. ಅಮಿತ್ ಕುಮಾರ್, ‘ಇದು ಮಾಧ್ಯಮಗಳ ಸೃಷ್ಟಿ. ಇದರಿಂದ ನಮ್ಮ ಕಕ್ಷಿದಾರರ ಘನತೆಗೆ ಕುಂದು ಉಂಟಾಗಿದೆ’ ಎಂದರು.

ಲಂಚ ಪ್ರಕರಣದಲ್ಲಿ ಆರೋಪಿಯಾಗಿರುವ ಬೆಂಗಳೂರು ನಗರ ಜಿಲ್ಲಾಧಿ ಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಕಳೆದ ವಾರ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್, ಎಸಿಬಿ ವಿರುದ್ಧ ಕೆಂಡ ಕಾರಿದ್ದರು.

ಕೆಇಎ ತಪ್ಪಿನಿಂದ 2.50 ಅಂಕ ನಷ್ಟ: ಆರೋಪ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಐಚ್ಛಿಕ ಕನ್ನಡ ಪತ್ರಿಕೆಯಲ್ಲಿ ತಾತ್ಕಾಲಿಕ ಸರಿ ಕೀ ಉತ್ತರಗಳಲ್ಲಿ ‘ಸರಿ’ ಆಗಿದ್ದ ಉತ್ತರವನ್ನು, ಅಂತಿಮ ಕೀ ಉತ್ತರದಲ್ಲಿ ‘ತಪ್ಪು’ ಎಂದು ಪರಿಗಣಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಎಡವಟ್ಟು ಮಾಡಿದೆ ಎಂದು ಕೆಲವು ಅಭ್ಯರ್ಥಿಗಳು ದೂರಿದ್ದಾರೆ.

‘ಕೆಇಎಯ ಈ ಎಡವಟ್ಟಿನಿಂದಾಗಿ, ತಾತ್ಕಾಲಿಕ ಸರಿ ಕೀ ಉತ್ತರದಲ್ಲಿದ್ದಂತೆ ಉತ್ತರಿಸಿದ ಅಭ್ಯರ್ಥಿಗಳಿಗೆ 2 ಅಂಕ ಮತ್ತು ಉತ್ತರ ತಪ್ಪು ಎಂಬ ಕಾರಣಕ್ಕೆ ಅರ್ಧ ಅಂಕ ಹೀಗೆ ಒಟ್ಟು 2.50 ಅಂಕ ಕಡಿಮೆ ಆಗಿದೆ. ಕೆಇಎ ಮಾಡಿದ ತಪ್ಪಿಗೆ 2.50 ಅಂಕ ನಷ್ಟ ವಾಗುವ ಅಭ್ಯರ್ಥಿಗಳು ಹುದ್ದೆ ಗಿಟ್ಟಿಸಿಕೊಳ್ಳುವ ಅವಕಾಶದಿಂದಲೇ ವಂಚಿತರಾಗಿ ದ್ದಾರೆ’ ಎಂದೂ ಅಭ್ಯರ್ಥಿಗಳು ಆರೋಪಿಸಿದ್ದಾರೆ.

‘ಎ-4 ಸರಣಿಯ ಪ್ರಶ್ನೆ ಸಂಖ್ಯೆ 37 ಹೇಳಿಕೆ- ವಿವರಣೆ ರೂಪದ್ದು. ಈ ಪ್ರಶ್ನೆಗೆ ತಾತ್ಕಾಲಿಕ ಸರಿ ಕೀ ಉತ್ತರಗಳಲ್ಲಿ ನೀಡಿದ್ದ ‘ಬಿ’ ಆಯ್ಕೆಯೇ ಸರಿಯಾಗಿತ್ತು. ಹೀಗಾಗಿ ಯಾರೂ ಆಕ್ಷೇಪಣೆ ಸಲ್ಲಿಸಿರಲಿಲ್ಲ. ಆದರೆ, ಜುಲೈ 19ರಂದು ಪ್ರಕಟಿಸಿರುವ ಅಂತಿಮ ಕೀ ಉತ್ತರದಲ್ಲಿ ತಪ್ಪಾದ ‘ಸಿ’ ಆಯ್ಕೆಯನ್ನು ಸರಿ ಉತ್ತರವೆಂದು ಪರಿಗಣಿಸಲಾಗಿದೆ. ಕೆಇಎಯ ವಿಷಯ ತಜ್ಞರ ಸಮಿತಿ ಯಾವ ಆಧಾರದಲ್ಲಿ ಈ ಉತ್ತರವನ್ನು ನಿರ್ಧರಿಸಿ, ಅಂತಿಮ ಕೀ ಉತ್ತರ ಪ್ರಕಟಿಸಲಾಗಿದೆಯೊ, ಇಲ್ಲವೊ ತಿಳಿಯುತ್ತಿಲ್ಲ’ ಎಂದೂ ಅಭ್ಯರ್ಥಿಗಳು ಹೇಳಿದ್ದಾರೆ.

ವರ್ಗಾವಣೆ ಬೆದರಿಕೆ ಆರೋಪ: ಆದೇಶದಲ್ಲಿ ದಾಖಲು– ಮತ್ತೆ ಗುಡುಗಿದ ನ್ಯಾಯಮೂರ್ತಿ

ವಿಚಾರಣೆ ನಡೆಯಲಿ ಬಿಡಿ: ನ್ಯಾ.ಸಂದೇಶ್

ಪ್ರಜಾವಾಣಿ ವಾರ್ತೆ



ಎಚ್.ಪಿ. ಸಂದೇಶ್

ಬೆಂಗಳೂರು: ‘ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯತ್ನ ನಡೆದಿದೆ. ನನಗೆ ವರ್ಗಾವಣೆ ಬೆದರಿಕೆಯೂ ಇದೆ. ಈ ಬಗ್ಗೆ ವಿಚಾರಣೆ ನಡೆಯಲಿ ಬಿಡಿ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರು ಮತ್ತೊಮ್ಮೆ ಗುಡುಗಿದ್ದಾರೆ.

₹ 5 ಲಕ್ಷ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ಆರೋಪಿಯಾಗಿ ಸದ್ಯ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿಯ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಮುಂದುವರಿಸಿತು.

ವಿಚಾರಣೆ ವೇಳೆ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪರ ವಕೀಲ ಪಿ.ಎನ್. ಮನಮೋಹನ್, ‘ಎಸಿಬಿ ಮತ್ತು ಎಸಿಬಿಯ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ವಿರುದ್ಧ ತಾವು ಈ ಹಿಂದಿನ ವಿಚಾರಣೆ ವೇಳೆ ಮುಕ್ತ ಕಲಾಪದಲ್ಲಿ ಮಾಡಿರುವ ಮೌಖಿಕ ಟೀಕೆ-ಟಿಪ್ಪಣಿಗಳಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ (ಎಸ್ಎಲ್‌ಪಿ) ಸಲ್ಲಿಸಲಾಗಿದೆ. ಆದ್ದರಿಂದ, ಸುಪ್ರೀಂ ಕೋರ್ಟ್ ಆದೇಶ ಬರುವ ತನಕ ಈ ಪ್ರಕರಣದ ವಿಚಾರಣೆ ಮುಂದೂಡಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ನ್ಯಾಯಮೂರ್ತಿ ಸಂದೇಶ್, ‘ಆಯ್ತು. ಆದರೆ, ಕೆಲವೊಂದು ಅಂಶಗಳನ್ನು ದಾಖಲು ಮಾಡುತ್ತೇನೆ’ ಎಂದು ಆದೇಶದಲ್ಲಿ ದಾಖಲಿಸಲು ಮುಂದಾದರು.

ಇದೇ ವೇಳೆ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಪರ ಹಾಜರಾಗಿದ್ದ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, ‘ನೀವು ಸೀಮಂತ್ ಕುಮಾರ್ ಸಿಂಗ್ ವಿರುದ್ಧ ಕೆಲವೊಂದು ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ. ಅವರು ಹುದ್ದೆಯಲ್ಲೇ ಇರಬಾರದು ಎಂಬಂತೆ ಹೇಳಿದ್ದೀರಿ. ಹೈಕೋರ್ಟ್ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುವುದು ಸರಿಯಲ್ಲ’ ಎಂದು ಆಕ್ಷೇಪಿಸಿದರು.

‘ನನ್ನ ಕಕ್ಷಿದಾರರು ಹೈಕೋರ್ಟ್‌ಗೆ ಅರ್ಜಿಯನ್ನೇ ಸಲ್ಲಿಸಿಲ್ಲ. ಕಡೇ ಪಕ್ಷ ನೋಟಿಸ್ ಕೂಡಾ ನೀಡಿಲ್ಲ. ಹೀಗಿರುವಾಗ ಅರ್ಜಿ ಸಲ್ಲಿಸದೇ ಇರುವ ವ್ಯಕ್ತಿಯ ಬಗ್ಗೆ ಬೇರೊಂದು ಪ್ರಕರಣದಲ್ಲಿ ತಾವು ಹೇಗೆ ಸೇವಾ ದಾಖಲೆ ಕೇಳುತ್ತೀರಿ. ಆ ರೀತಿಯ ಹಕ್ಕು ಎಲ್ಲಿದೆ’ ಎಂದೂ ಪ್ರಶ್ನಿಸಿದರು.

ಇದಕ್ಕೆ ನ್ಯಾ. ಸಂದೇಶ್, ‘ನೀವು ವಾದ ಮಂಡಿಸುವ ಮೊದಲು ಮಧ್ಯಂತರ ಅರ್ಜಿ ಸಲ್ಲಿಸಿ. ನಿಮಗೆ ಈಗ ಪ್ರತಿನಿಧಿಸುವ ಅಧಿಕೃತತೆ ಇಲ್ಲದಿರುವುದರಿಂದ ವಾದ ಮಂಡಿಸಲು ಸಾಧ್ಯವಿಲ್ಲ. ನೀವು ಅರ್ಜಿ ಸಲ್ಲಿಸಿದರೆ ಮಾತ್ರ ನಿಮ್ಮ ವಾದವನ್ನು ಪರಿಗಣಿಸಲು ಸಾಧ್ಯ’ ಎಂದರು.

‘ಈ ಪ್ರಕರಣದಲ್ಲಿ ನಾನು ಎಸಿಬಿ ಕಾರ್ಯವೈಖರಿಯ ಬಗ್ಗೆ ಮುಕ್ತ ಕಲಾಪದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವ ಕಾರಣ ನನಗೆ ಬೆದರಿಕೆ ಇದೆ’ ಎಂದು ಸಂದೇಶ್ ಪುನರುಚ್ಚರಿಸಿದರು.

ನ್ಯಾಯಮೂರ್ತಿ ಕಿವಿಯಲ್ಲಿ ಹೇಳಿದ್ದೇನು?

‘ಅವತ್ತು ಜುಲೈ 1. ಕರ್ನಾಟಕದ ಮುಖ್ಯ ನ್ಯಾಯಮೂರ್ತಿಯಾಗಿದ್ದ ಋತುರಾಜ್ ಅವಸ್ಥಿ ಅವರ ನಿವೃತ್ತಿಯ ಹಿನ್ನೆಲೆಯಲ್ಲಿ ಹೈಕೋರ್ಟ್ ನಲ್ಲಿ ಬೀಳ್ಕೊಡುಗೆ ವ್ಯವಸ್ಥೆ ಮಾಡಲಾಗಿತ್ತು. ಅಂದು ಡಿನ್ನರ್ ವೇಳೆ ಹಾಲಿ ನ್ಯಾಯಮೂರ್ತಿಯೊಬ್ಬರು ನನ್ನ ಪಕ್ಕ ಬಂದು ಕುಳಿತು, ದೆಹಲಿಯಿಂದ ನನಗೆ ಒಂದು ಕರೆ ಬಂದಿದೆ. ಕರೆ ಮಾಡಿದವರು ನಿಮ್ಮ ಬಗ್ಗೆ ವಿಚಾರಿಸಿದರು ಎಂದು ಹೇಳಿದರು’

ಅದಕ್ಕೆ, ನಾನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿಲ್ಲವಲ್ಲ ಎಂದೆ. ಆದರೆ, ಆ ನ್ಯಾಯಮೂರ್ತಿ ವಿಷಯವನ್ನು ಅಲ್ಲಿಗೇ ನಿಲ್ಲಿಸಲಿಲ್ಲ. ಎಸಿಬಿಯ ಎಡಿಜಿಪಿ ಉತ್ತರ ಭಾರತದವರು. ಪವರ್ ಫುಲ್ ಆಗಿದ್ದಾರೆ ಎಂದು ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯೊಬ್ಬರ ವರ್ಗಾವಣೆ ಉದಾಹರಿಸಿದರು’ ಎಂದು ಸಂದೇಶ್ ವಿವರಿಸಿದರು.

‘ನ್ಯಾಯಮೂರ್ತಿ ಈ ರೀತಿ ಹೇಳಿದ್ದು ಸರಿಯೇ’ ಎಂದು ಪ್ರಶ್ನಿಸಿದ ಅವರು, ‘ಹೀಗಾಗಿಯೇ ನಾನು ಮುಕ್ತ ಕಲಾಪದಲ್ಲಿ ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ. ಅಷ್ಟಕ್ಕೂ ನನಗೆ ಆ ರೀತಿ ಹೇಳಿರುವ ನ್ಯಾಯಮೂರ್ತಿ ಬಗ್ಗೆ ಎಲ್ಲಿ ಹೇಳಬೇಕೋ ಅಲ್ಲಿ ನಾನು ಎಲ್ಲವನ್ನೂ ಬಿಚ್ಚಿಟ್ಟಿದ್ದೇನೆ. ಇಲ್ಲಿ ನಾನು ಆ ನ್ಯಾಯಮೂರ್ತಿಯ ಹೆಸರು ಹೇಳುವ ಅಗತ್ಯವಿಲ್ಲ. ಯಾರಿಗೆ ತಿಳಿಸಿದ್ದೇನೆಯೊ ಅವರು ಕ್ರಮ ಕೈಗೊಳ್ಳುತ್ತಾರೆ’ ಎಂದು ಸ್ಪಷ್ಟಪಡಿಸಿದರು.

ಸಿಬಿಐಗೆ ಪ್ರಶ್ನೆ: ‘ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಆಗಿದ್ದ ಸೀಮಂತ್ ಕುಮಾರ್ ಸಿಂಗ್ ಮನೆ ಮೇಲೆ ಅಕ್ರಮ ಗಣಿಗಾರಿಕೆ ಆರೋಪದ ಪ್ರಕರಣದಲ್ಲಿ ನಡೆದಿದ್ದ ಸಿಬಿಐ ದಾಳಿ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ತನಿಖಾ ವರದಿಯನ್ನು ಸಲ್ಲಿಸಿ’ ಎಂದು ಕಳೆದ ವಿಚಾರಣೆ ವೇಳೆ ನ್ಯಾಯಪೀಠ ಎಸಿಬಿಗೆ ನಿರ್ದೇಶನ ನೀಡಿತ್ತು.

ಇದರ ಅನುಸಾರ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ನ್ಯಾಯಪೀಠಕ್ಕೆ ಸಂಬಂಧಿಸಿದ ದಾಖಲೆಗಳು ಮತ್ತು ವರದಿಯನ್ನು ಸಲ್ಲಿಸಿದರು.

ಅಕ್ರಮ ಗಣಿಗಾರಿಕೆ ವೇಳೆ ಎಸಿಬಿಯ ಎಡಿಜಿಪಿಯಾಗಿರುವ ಸೀಮಂತ್ ಸಿಂಗ್ ಅಂದು ಮಾಮೂಲಿ ಪಡೆಯುತ್ತಿದ್ದರು ಎಂದು ಕಾನ್‌ಸ್ಟೇಬಲ್ ಒಬ್ಬರು ಆರೋಪಿಸಿದ್ದರು. ಈ ಕುರಿತು ಸಿಬಿಐ ವಿಚಾರಣೆ ನಡೆಸಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದೆ. ಆದ್ದರಿಂದ, ಈ ಕುರಿತು ತನಿಖೆ ನಡೆಯಬೇಕಿದೆ ಎಂದು ತಿಳಿಸಲಾಗಿತ್ತು’ ಎಂದು ಪ್ರಸನ್ನಕುಮಾರ್ ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ನ್ಯಾಯಮೂರ್ತಿಗಳು, ‘ನಿಮ್ಮ ಈ ವರದಿಗೆ ಏನು ಉತ್ತರ ಬಂತು’ ಎಂದು ಮರು ಪ್ರಶ್ನಿಸಿದರು.

ಈ ಪ್ರಶ್ನೆಗೆ ಪ್ರಸನ್ನಕುಮಾರ್, ‘ಯಾವುದೇ ಉತ್ತರ ಬಂದಿಲ್ಲ. ಕಂದಾಯ, ಅರಣ್ಯ, ಪೊಲೀಸ್ ಇಲಾಖೆ ಸೇರಿದಂತೆ ಅನೇಕ ಇಲಾಖೆಗಳು ಆ ಸಮಯದಲ್ಲಿ ಅಕ್ರಮ ಗಣಿಗಾರಿಕೆ ತಡೆಯುವಲ್ಲಿ ವಿಫಲವಾಗಿದ್ದವು’ ಎಂದು ವಿವರಿಸಿದರು.

ಎಲ್ಲವನ್ನೂ ಆದೇಶದಲ್ಲಿ ದಾಖಲಿಸಿದ ನ್ಯಾಯಪೀಠ, ಅರ್ಜಿದಾರ ಮಹೇಶ್ ಜಾಮೀನು ಕೋರಿಕೆಯನ್ನು ಇದೇ 13ರಂದು ವಿಚಾರಣೆ ನಡೆಸಲಾಗುವುದು ಎಂದು ಪ್ರಕರಣ ಮುಂದೂಡಿದೆ.

ಎಚ್‌.ಡಿ. ಕುಮಾರಸ್ವಾಮಿಗೆ ಕೋವಿಡ್ ದೃಢ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಈ ಸಂಬಂಧ ಅವರು ಟ್ವೀಟ್ ಮಾಡಿದ್ದಾರೆ.

‘ಸಣ್ಣ ಪ್ರಮಾಣದ ಜ್ವರ, ಮೈಕೈ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದು, ಫಲಿತಾಂಶದಲ್ಲಿ ಪಾಸಿಟಿವ್ ಎಂದು ಬಂದಿದೆ. ಕೋವಿಡ್ ಲಕ್ಷಣಗಳಿರುವ ಕಾರಣ, ವೈದ್ಯರು ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿ ಚಿಕಿತ್ಸೆ ಪಡೆಯಲು ಸೂಚಿಸಿದ್ದಾರೆ’ ಎಂದು ಹೇಳಿದ್ದಾರೆ.

ರಾಜ್ಯದ 4 ಬೀಚ್‌ಗಳ ಸ್ವಚ್ಛತೆಗೆ ಯೋಜನೆ

ನವದೆಹಲಿ: ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ಕರ್ನಾಟಕದ ಮಂಗಳೂರಿನ ಪಣಂಬೂರು, ಮಲ್ಪೆ, ಭಟ್ಕಳದ ಗೊರಟೆ ಮತ್ತು ಕುಮಟಾದ ಅಘನಾಶಿನಿ ಸೇರಿ ದೇಶದಾದ್ಯಂತ 75 ಬೀಚ್‌ಗಳನ್ನು 75 ದಿನಗಳಲ್ಲಿ ಸ್ವಚ್ಛಗೊಳಿಸಲು ಕೇಂದ್ರ ಸರ್ಕಾರ ಯೋಜಿಸಿದೆ.

ದೇಶದ 7,500 ಕಿ.ಮೀ ಉದ್ದ ಪ್ರತಿ ಕಿಲೋ ಮೀಟರ್‌ಗೆ 75 ಸ್ವಯಂಸೇವಕರ ಬೆಂಬಲದೊಂದಿಗೆ ಕರಾವಳಿ ಸ್ವಚ್ಛತಾ ಅಭಿಯಾನ ಕೈಗೊಳ್ಳಲಾಗುತ್ತದೆ.

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16 ಡಿ, 5ನೇ ಮಹಡಿ ದೇವರಾಜ ಅರಸು ಭವನ, ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 0052.
ಸಂಖ್ಯೆ: ಕವಿಸಅನಿ/ಸಿಆರ್–01/2022–23 ದಿನಾಂಕ: 11.07.2022

ತಿದ್ದುಪಡಿ ಪ್ರಕಟಣೆ

ದಿನಾಂಕ 07.07.2022ರಂದು ಈ ದಿನಪತ್ರಿಕೆಯಲ್ಲಿ ಸಂಖ್ಯೆ: ಕವಿಸಅನಿ/ಸಿ.ಆರ್–01/2022–23, ದಿನಾಂಕ: 07.07.2022 ರ ಅಡಿಯಲ್ಲಿ ಪ್ರಕಟಗೊಂಡ “ಸುವಿಧಾ ತಂತ್ರಾಂಶದ ಮುಖಾಂತರ ಆನ್‌ಲೈನ್ ಅರ್ಜಿ ಸಲ್ಲಿಕೆಗಾಗಿ ಆಹ್ವಾನ” ಪ್ರಕಟಣೆಯ ಕ್ರಮ ಸಂಖ್ಯೆ (3) ರಲ್ಲಿನ ಅರಿವು ಶೈಕ್ಷಣಿಕ ನೇರಸಾಲ (ಹೊಸದು) ಯೋಜನೆಯಲ್ಲಿ ಸಿಇಟಿ ಪರೀಕ್ಷೆಯ ಫಲಿತಾಂಶವು ಇನ್ನೂ ಪ್ರಕಟಣೆಯಾಗದಿರುವ ಕಾರಣ ಸದರಿ ಯೋಜನೆಯ ಅರ್ಜಿ ಆಹ್ವಾನವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/1303/ಆಕಾರ್/22–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ) CIN: U02001KA1971SGC001999
‘ವನವಿಕಾಸ’ 5ನೇ ಮಹಡಿ, ಕೊಠಡಿ ಸಂಖ್ಯೆ. 515, 18 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ಫೋನ್: 080-23345199 ಇ-ಮೇಲ್ : dmkfdclbd@gmail.com
ಸಂ: ಕಅಅನಿನಿ/ವಿವ್ಯ/ಬೆಂ.ವಿ./ಮಾರಾಟ/ಕ&ಸಾ/ಸಿ.ಆರ್-04/2022-23/543 ದಿನಾಂಕ: 11.07.2022

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಈ ಮೂಲಕ ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಸುವುದೇನೆಂದರೆ, 2022-23ನೇ ಸಾಲಿನಲ್ಲಿ ಬೆಂಗಳೂರು ವಿಭಾಗದ, ವಿವಿಧ ನೆಡುತೋಪುಗಳಲ್ಲಿ ಲಭ್ಯವಿರುವ ಅಂದಾಜು ಸಿಪ್ಪೆ ರಹಿತ 31585 ಎಂ.ಟಿ. ಅಥವಾ ಸಿಪ್ಪೆ ಸಹಿತ 43585 ಎಂ.ಟಿ ಮೆದು ಮರಗಳನ್ನು ಕಡಿದು ವಿವಿಧ ಕೈಗಾರಿಕಾ ಉದ್ಯಮಗಳ ಪ್ರದೇಶಕ್ಕೆ ಸಾಗಾಣಿಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು https://www.eproc.karnataka.gov.in ಇಲ್ಲಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 28.07.2022ರ 17.30 ಗಂಟೆ ಒಳಗಾಗಿ** ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 080-23345199 (ರಜಾ ದಿನಗಳನ್ನು ಹೊರತುಪಡಿಸಿ) ಈ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ವಿಭಾಗೀಯ ವ್ಯವಸ್ಥಾಪಕರು, ಕಅಅನಿನಿ, ಬೆಂಗಳೂರು ವಿಭಾಗ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ (ರಾರಾನ), ಕೆರೆಗಳ ವಿಭಾಗ, ಸಂಖ್ಯೆ:308, 3ನೇ ಮಹಡಿ, ಹೊಸ ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–560 002.
ಸಂಖ್ಯೆ:ಕಾಪಾಅ–ರಾರಾನಗರ/ಕೆರೆಗಳು/ಟೆಂಡರ್–002/2022–23 ದಿನಾಂಕ: 11.07.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಟೆಂಡರ್)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ದಾಖಲೆ)

ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹.ಲಕ್ಷಗಳಲ್ಲಿ)
ಪ್ಯಾಕೇಜ್ –8 1) ಮಲ್ಲತ್ತಹಳ್ಳಿ ಕೆರೆಯಲ್ಲಿ ಬಾಕಿ ಉಳಿದ ಭಾಗಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ ಮಾಡುವುದು, ವೇಸ್ಟ್ ವೇಯರ್ (waste weir) ಮತ್ತು ಬಾಕಿ ಉಳಿದ ಪರ್ಯಾಯ ಮಾರ್ಗ ಚರಂಡಿ ನಿರ್ಮಾಣ ಮಾಡುವುದು. 2) ಪಟ್ಟಣಗೆರೆಯ ಕೆಂಚೇನಹಳ್ಳಿ ಕೆರೆಗೆ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು.	1800.00	18.00

ಟೆಂಡರ್ ವೇಳಾಪಟ್ಟಿ: (1)ಬಿಡ್‌ಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 13.07.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: 19.07.2022ರ ಮಧ್ಯಾಹ್ನ 3:00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ (ದಕ್ಷಿಣ) ಕೆರೆಗಳು, ಬೃ.ಬೆಂ.ಮ.ಪಾಲಿಕೆ ಇಲ್ಲಿ ನಡೆಸಲಾಗುವುದು. (3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 22.07.2022ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 25.07.2022ರ ಸಂಜೆ 4:30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ (ದಕ್ಷಿಣ) ಕೆರೆಗಳು, ಬೃ.ಬೆಂ.ಮ.ಪಾಲಿಕೆ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು–(ರಾರಾನ) ಕೆರೆಗಳು

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆಗಳು ಕೇಂದ್ರ–4 ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು–02.
ಸಂಖ್ಯೆ: ಕಾಪಾಅ/ಯೋಕೇ–4/ಟೆಂಡರ್/02/2022–23 ದಿನಾಂಕ: 11.07.2022

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು ಯೋಜನೆಗಳು ಕೇಂದ್ರ–4 ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ
ವಾರ್ಡ್ ಸಂಖ್ಯೆ–46 ಜೆಸಿ ನಗರದ ಬಳ್ಳಾರಿ ರಸ್ತೆಯಿಂದ ಪ್ರಾರಂಭವಾಗಿ ಮುಖ್ಯಮಂತ್ರಿಗಳ ನಿವಾಸದಿಂದ ರವಿಂದ್ರನಾಥ್ ಟ್ಯಾಗೋರ್ ವೃತ್ತದವರೆಗಿನ ಮಾರ್ಗವಾಗಿ ತರಳಬಾಳು ರಸ್ತೆಯನ್ನು ಟೆಂಡರ್‌ಶ್ಯೂರ್ ಮಾರ್ಗಸೂಚಿ–ಗಳಡಿಯಲ್ಲಿ ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ಆರ್‌ಟಿ ನಗರ ಮುಖ್ಯರಸ್ತೆಯಿಂದ ಸಿಟಿಜನ್ ಉದ್ಯಾನವನದವರೆಗೆ ತರಳಬಾಳು ರಸ್ತೆಗೆ ಟೆಂಡರ್‌ಶ್ಯೂರ್ ಮಾರ್ಗಸೂಚಿಗಳಡಿಯಲ್ಲಿ ವೈಟ್‌ಟಾಪಿಂಗ್ ಒದಗಿಸುವುದರೊಂದಿಗೆ ತರಳಬಾಳು ರಸ್ತೆಯನ್ನು ಸಮಗ್ರ ಅಭಿವೃದ್ಧಿ ಮಾಡುವುದು. (ಬೆಂ.ಮ.ಸಾ.ಸಂ ಘಟಕ)	2532.31	₹ 25.32 ಲಕ್ಷ (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿದಿದರು ಬಿಡ್ ದಾಖಲೆಯಲ್ಲಿ ಸೂಚಿಸಿರುವಂತೆ

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 22.07.2022ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, (ಯೋಜನೆಗಳು ಕೇಂದ್ರ) ಇಲ್ಲಿ ದಿನಾಂಕ 16.07.2022ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (3) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆಗಳು ಕೇಂದ್ರ–4 ವಿಭಾಗ ಇಲ್ಲಿ ದಿನಾಂಕ 25.07.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆಗಳು ಕೇಂದ್ರ–4 ವಿಭಾಗ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

And we know that for those who love God all things work together for good, for those who are called according to his purpose
Romans 8:28

90th Birthday Remembrance

Dr. Manmohan Attavar
Founder
Indo-American Hybrid Seeds (India) Pvt. Ltd
12.07.1932 - 12.12.2017

Santosh and Benita Attavar, Rashmi Attavar,
Abigail, Angela and Sunaina
Management & Staff, Indo-American Hybrid Seeds (India) Pvt. Ltd.



ಸುಭಾಷಿತ
ನಿಮ್ಮ ಹೃದಯದ ಕರೆ ಮತ್ತು ಆತ್ಮಸಾಕ್ಷಿಯನ್ನು ಅನುಸರಿಸುವ ಧೈರ್ಯ ಹೊಂದಿ.
-ಸ್ಟೀವ್ ಜಾಬ್ಸ್

ಶ್ರೀಲಂಕಾ ಬಿಕ್ಕಟ್ಟು ಶಮನಕ್ಕೆ ಜಗತ್ತಿನ ನೆರವು ಅಗತ್ಯ

ನೆರೆಯ ದ್ವೀಪರಾಷ್ಟ್ರ ಶ್ರೀಲಂಕಾದಲ್ಲಿನ ಬೆಳವಣಿಗೆಗಳು ಅಪಾಯಕಾರಿ ಸ್ಥಿತಿಗೆ ತಲುಪಿವೆ. ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟಿನಿಂದ ತತ್ತರಿಸಿದ್ದ ದೇಶವು ಈಗ ಇನ್ನಷ್ಟು ಸಂಕಷ್ಟಕ್ಕೆ ಒಳಗಾಗಿದೆ. ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಪ್ರತಿಭಟನಕಾರರ ಒತ್ತಡಕ್ಕೆ ಮಣಿದಿದ್ದಾರೆ; ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಶನಿವಾರ ಘೋಷಿಸಿದ್ದಾರೆ. ಬುಧವಾರ ರಾಜೀನಾಮೆ ಸಲ್ಲಿಸುವುದಾಗಿ ಅವರು ಹೇಳಿದ್ದಾರೆ. ವಾರದ ಹಿಂದಿನವರೆಗೆ ಅಧಿಕಾರದ ಮೇಲೆ ರಾಜಪಕ್ಸ ಅವರ ಹಿಡಿತವು ಅತ್ಯಂತ ಬಿಗಿಯಾಗಿಯೇ ಇತ್ತು. ಸೇನೆಯಿಂದ ಸಿಗುವ ರಕ್ಷಣೆಯ ಜತೆಗೆ ಅಧ್ಯಕ್ಷರಿಗೆ ಸಂವಿಧಾನವು ನೀಡಿರುವ ವ್ಯಾಪಕ ಅಧಿಕಾರಗಳು ಇದಕ್ಕೆ ಕಾರಣವಾಗಿದ್ದವು. ಆದರೆ, ಇಂಧನ, ಆಹಾರ ಮತ್ತು ವಿದೇಶಿ ವಿನಿಮಯದ ತೀವ್ರ ಕೊರತೆಯಿಂದ ಭಾರಿ ಸಂಕಷ್ಟಕ್ಕೆ ಸಿಲುಕಿರುವ ಶ್ರೀಲಂಕಾದ ಜನರ ಆಕ್ರೋಶದ ಮುಂದೆ ಈ ಎಲ್ಲವೂ ನಗಣ್ಯವಾದವು. ಗೊಟಬಯ ಅವರನ್ನು ರಕ್ಷಿಸಿ ಕರೆದೊಯ್ಯುವಲ್ಲಿ ಭದ್ರತಾ ಪಡೆಗಳು ಶನಿವಾರ ಯಶಸ್ವಿಯಾಗಿವೆ. ಆದರೆ, ಕೆರಳಿದ ಜನರ ಗುಂಪು ಅಧ್ಯಕ್ಷರ ನಿವಾಸ ಮತ್ತು ಕಚೇರಿಯಲ್ಲಿ ದಾಂದಲೆ ನಡೆಸುವುದನ್ನು ತಡೆಯಲು ಸೇನಾ ಪಡೆಗಳಿಗೆ ಸಾಧ್ಯವಾಗಿಲ್ಲ. ಪ್ರತಿಭಟನೆಯನ್ನು ದಮನ ಮಾಡಲು ಸೇನೆಯನ್ನು ನಿಯೋಜಿಸಲು ಗೊಟಬಯ ಅವರು ಹಿಂದೇಟು ಹಾಕಿರಲಿಲ್ಲ. ಅದೇನೇ ಇದ್ದರೂ ಕೊನೆಗೂ ಜನರಿಗೆ ಜಯ ಸಿಕ್ಕಿತು. ಸಿಂಹಳದ ಬೌದ್ಧ ಧರ್ಮೀಯರ ಭಾರಿ ಬೆಂಬಲದೊಂದಿಗೆ ಎರಡು ವರ್ಷಗಳ ಹಿಂದಷ್ಟೇ ಅಧಿಕಾರಕ್ಕೆ ಬಂದಿದ್ದ ಅಧ್ಯಕ್ಷರನ್ನು ಜನರು ಅಧಿಕಾರದಿಂದ ಅಕ್ಷರಶಃ ಹೊರದಬ್ಬಿದ್ದಾರೆ. ಗೊಟಬಯ ಅವರು ಮೇಲಕ್ಕೆ ಏರಿದ ರೀತಿಯಲ್ಲಿಯೇ ಪಾತಾಳಕ್ಕೆ ಕುಸಿದಿದ್ದಾರೆ. ಇದು, ನಿರಂಕುಶ ನಾಯಕರೆಲ್ಲರಿಗೂ ಪಾಠವಾಗಬೇಕು. ಅಧಿಕಾರದ ಮೇಲೆ ಎಷ್ಟೇ ಗಟ್ಟಿ ಹಿಡಿತ ಇದ್ದರೂ ಅದು ಕಾಯಂ ಅಲ್ಲ ಎನ್ನುವುದು ಅವರ ಗಮನದಲ್ಲಿ ಇರಬೇಕು. ಜನಶಕ್ತಿಯ ಮುಂದೆ ಅದು ಒಂದಲ್ಲ ಒಂದು ದಿನ ಮಂಡಿಯೂರಲೇಬೇಕು.

ಭಾರತವೂ ಸೇರಿದಂತೆ ಜಗತ್ತಿನ ಪ್ರಮುಖ ದೇಶಗಳು ಶ್ರೀಲಂಕಾಕ್ಕೆ ದೊಡ್ಡ ಪ್ರಮಾಣದಲ್ಲಿ ಮತ್ತು ಯಾವ ಷರತ್ತೂ ಇಲ್ಲದೆ ಆಹಾರ ಮತ್ತು ಇತರ ಬೆಂಬಲ ಒದಗಿಸಬೇಕು

ಗೊಟಬಯ ಅವರು ರಾಜೀನಾಮೆ ನೀಡಬೇಕು ಎಂಬುದೇ ಪ್ರತಿಭಟನಕಾರರ ಮುಖ್ಯ ಆಗ್ರಹವಾಗಿತ್ತು. ಆದರೆ, ಅವರು ಹುದ್ದೆಯಿಂದ ಕೆಳಗಿಳಿದ ಮಾತ್ರಕ್ಕೆ ಆ ದೇಶವು ಎದುರಿಸುತ್ತಿರುವ ಬಿಕ್ಕಟ್ಟು ಕೊನೆಯಾಗುವುದಿಲ್ಲ. ಬಿಕ್ಕಟ್ಟಿಗೆ ಪರಿಹಾರವನ್ನು ಕಂಡುಕೊಳ್ಳಲೇಬೇಕಾಗುತ್ತದೆ. ಶ್ರೀಲಂಕಾದ ಜನರ ಆಕ್ರೋಶವು ರಾಜಪಕ್ಸ ಅವರಿಗೆ ಮಾತ್ರ ಸೀಮಿತವಲ್ಲ. ಗೊಟಬಯ ಅವರ ಜತೆಗೆ ಸೇರಿಕೊಂಡಿರುವ ಎಲ್ಲರ ಮೇಲೆಯೂ ಜನರಿಗೆ ಸಿಟ್ಟು ಇದೆ. ಹಾಗೆ ನೋಡಿದರೆ, ಎಲ್ಲ ರಾಜಕಾರಣಿಗಳ ಮೇಲೆಯೂ ಜನರು ಆಕ್ರೋಶಗೊಂಡಿದ್ದಾರೆ. ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರ ನಿವಾಸಕ್ಕೂ ಪ್ರತಿಭಟನಕಾರರು ಶನಿವಾರ ಬೆಂಕಿ ಹಚ್ಚಿದ್ದಾರೆ. ಸಾಮೂಹಿಕವಾಗಿರುವ ಆಕ್ರೋಶದಿಂದಾಗಿ ದೇಶದಲ್ಲಿ ಸ್ಫೋಟಕ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಸರ್ಕಾರದ ಸಂಸ್ಥೆಗಳ ವಿರುದ್ಧ ತಿರುಗುವ ಅಪಾಯವೂ ಇದೆ. ಇದು ಶ್ರೀಲಂಕಾವನ್ನು ಅರಾಜಕತೆಗೆ ತಳ್ಳಬಹುದು.

ಎಲ್ಲ ಪಕ್ಷಗಳ ಪ್ರಾತಿನಿಧ್ಯವೂ ಇರುವ, ಸಮುದಾಯಗಳ ಪ್ರತಿನಿಧಿಗಳನ್ನೂ ಸೇರಿಸಿಕೊಂಡ ನಿಜಕ್ಕೂ ರಾಷ್ಟ್ರೀಯ ಎನಿಸುವಂತಹ ಸರ್ಕಾರವೊಂದು ಆ ದೇಶಕ್ಕೆ ಅಗತ್ಯ ಇದೆ. ಇದು ಅಲ್ಲಿನ ರಾಜಕೀಯ ಅಗತ್ಯ. ಆದರೆ, ಈ ಪರಿಹಾರವು ದೇಶದ ಆರ್ಥಿಕ ಮತ್ತು ಇತರ ಸಮಸ್ಯೆಗಳಿಗೆ ಪರಿಹಾರ ಒದಗಿಸಬಹುದೇ ಎಂಬುದು ಈಗ ಸ್ಪಷ್ಟವಿಲ್ಲ. ವಿವಿಧ ರಾಜಕೀಯ ಪಕ್ಷಗಳು ತಮ್ಮ ಭಿನ್ನಾಭಿಪ್ರಾಯ ಮರೆತು ಜತೆಗೆ ಸೇರಿ ಕೆಲಸ ಮಾಡಿದರೂ ಆರ್ಥಿಕ ಬಿಕ್ಕಟ್ಟು ಹಾಗೆಯೇ ಉಳಿಯಬಹುದು. ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಜತೆಗೆ ಶ್ರೀಲಂಕಾ ನಡೆಸಿದ ಮಾತುಕತೆಯು ಈವರೆಗೆ ಫಲ ಕೊಟ್ಟಿಲ್ಲ. ಈಗ ಎದುರಿಸುತ್ತಿರುವ ಅಸ್ಥಿರತೆಯಿಂದಾಗಿ ಆ ದೇಶಕ್ಕೆ ನೆರವು ನೀಡುವ ಐಎಂಎಫ್‌ನ ಉತ್ಸಾಹ ಉಡುಗಬಹುದು. ಭಾರತವೂ ಸೇರಿದಂತೆ ಜಗತ್ತಿನ ಇತರ ದೇಶಗಳು ಶ್ರೀಲಂಕಾಕ್ಕೆ ದೊಡ್ಡ ಪ್ರಮಾಣದಲ್ಲಿ ಮತ್ತು ಯಾವ ಷರತ್ತೂ ಇಲ್ಲದೆ ಆಹಾರ ಮತ್ತು ಇತರ ಬೆಂಬಲ ಒದಗಿಸಬೇಕು. ಅಂತರರಾಷ್ಟ್ರೀಯ ಭೌಗೋಳಿಕ ರಾಜಕಾರಣದ ನೆಲೆಯಲ್ಲಿಯೇ ಶ್ರೀಲಂಕಾದ ಬಿಕ್ಕಟ್ಟನ್ನು ಜಗತ್ತು ಈವರೆಗೆ ನೋಡಿದೆ. ಈ ಧೋರಣೆ ಬದಲಾಗಬೇಕು. ಶ್ರೀಲಂಕಾದ ಸೇನೆಯು ಇಡೀ ಪರಿಸ್ಥಿತಿಯನ್ನು ದೂರದಿಂದ ನೋಡುತ್ತಾ ನಿಂತಿದೆ. ಸನ್ನಿವೇಶ ಇಷ್ಟೊಂದು ಸ್ಫೋಟಕವಾಗಿರುವ ಕಾರಣ, ಮಧ್ಯಪ್ರವೇಶಿಸುವ ತಹತಹ ಸೇನೆಗೆ ಉಂಟಾಗಬಹುದು. ಇದು ಆಗದಂತೆ ನೋಡಿಕೊಳ್ಳಬೇಕು.

ದಿನದ ಟ್ವೀಟ್

ಕಾರಣಗಳು ಹಲವು

ಜೀವನಮಟ್ಟಕ್ಕೆ ಸಂಬಂಧಿಸಿದಂತೆ ಶ್ರೀಲಂಕಾವು ದಕ್ಷಿಣ ಏಷ್ಯಾದ ಅತಿ ದೊಡ್ಡ ಯಶೋಗಾಥೆಯನ್ನೇ ಹೊಂದಿದೆ. ಆದರೆ, ಸರ್ವಾಧಿಕಾರ, ವಿಭಜನಕಾರಿ ರಾಜಕೀಯ, ಅಲ್ಪಸಂಖ್ಯಾತರಿಗೆ ಕಿರುಕುಳ, ರೈತರ ಬಗ್ಗೆ ಸೂಕ್ಷ್ಮಗ್ರಾಹಿಯಲ್ಲದ ಹಾಗೂ ವಿನಾಶಕಾರಿಯಾದ ಕೃಷಿ ನೀತಿಗಳು ಆರ್ಥಿಕತೆಯ ಕುಸಿತಕ್ಕೆ ಕಾರಣವಾದವು.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ

ಮಹಾರಾಷ್ಟ್ರದ ಬಳಿಕ ಈಗ ಗೋವಾ. ಪ್ರಹಸನಕ್ಕೆ ವಿರಾಮ ಎಂಬುದೇ ಇಲ್ಲ. ಅದೇ ಭಾರತದ ಪ್ರಜಾಪ್ರಭುತ್ವ.

ಅಜಯ್ ಕಾಮತ್, ನೇತ್ರತಜ್ಞ

25 ವರ್ಷಗಳ ಹಿಂದೆ

ಶನಿವಾರ, 12-7-1997

- **ಮುಂಬೈನಲ್ಲಿ ಹಿಂಸಾಚಾರ: ಗೋಲಿಬಾರ್‌ಗೆ 11 ಬಲಿ**

ಮುಂಬೈ, ಜುಲೈ 11 (ಪಿಟಿಐ, ಯುಎನ್‌ಐ)– ಇಲ್ಲಿನ ಚೆಂಬೂರಿನ ರಮಾಬಾಯಿ ಅಂಬೇಡ್ಕರ್ ನಗರದಲ್ಲಿ ಇಂದು ಬೆಳಗಿನ ಜಾವ ಹಿಂಸಾಕೃತ್ಯನಿರತ ಜನರ ಮೇಲೆ ಪೊಲೀಸರು ಗೋಲಿಬಾರ್ ನಡೆಸಿದ್ದರಿಂದ 11 ಜನರು ಸತ್ತರು.

ಸತ್ತವರಲ್ಲಿ ಎಂಟು ಜನರನ್ನು ಪೊಲೀಸರು ಗುರುತಿಸಿದ್ದಾರೆ. ಮೃತರಲ್ಲಿ ಒಂದು ಮಗು, ಇಬ್ಬರು ಮಹಿಳೆಯರು, ಇತರರು 14ರಿಂದ 40 ವರ್ಷ ವಯೋಮಾನದ ಒಳಗಿನವರು.

'ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆಗೆ ಪಾದರಕ್ಷೆಯ ಹಾರ ಹಾಕಿದ್ದನ್ನು ನೋಡಿದ ಜನರು ಅಲ್ಲಿ ಗುಂಪು ಸೇರಿದರು. ಉದ್ರಿಕ್ತರು ಹೆದ್ದಾರಿಯಲ್ಲಿ ಹೋಗುತ್ತಿದ್ದ ವಾಹನಗಳನ್ನು ನಿಲ್ಲಿಸಿ ಕಲ್ಲು ತೂರಾಟ ಮತ್ತು ಬೆಂಕಿ ಹಚ್ಚಲು ತೊಡಗಿದರು. ಅನಿಲ ಸಾಗಿಸುತ್ತಿದ್ದ ಟ್ಯಾಂಕರ್ ಹಾಗೂ ಎರಡು ಬಸ್ಸು ಜನರ ಆಕ್ರೋಶದಿಂದ ಭಸ್ಮಗೊಂಡವು' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಮನೋಹರ್ ಜೋಶಿ ವಿಧಾನಸಭೆಗೆ ತಿಳಿಸಿದರು.

- **ಲಾಲೂ ನಿರೀಕ್ಷಣಾ ಜಾಮೀನಿಗೆ ನಕಾರ**

ಪಟ್ನಾ, ಜುಲೈ 11 (ಪಿಟಿಐ, ಯುಎನ್‌ಐ)– ಮೇವು ಹಗರಣದಲ್ಲಿ ಆರೋಪಿಯಾಗಿರುವ ಬಿಹಾರದ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್, ಅವರ ಇಬ್ಬರು ಸಚಿವ ಸಹೋದ್ಯೋಗಿಗಳು ಹಾಗೂ ಕೇಂದ್ರದ ಮಾಜಿ ಸಚಿವ ಚಂದ್ರದೇವ್ ಪ್ರಸಾದ್ ವರ್ಮಾ ಅವರಿಗೆ ಸಿಬಿಐನ ವಿಶೇಷ ನ್ಯಾಯಾಲಯವು ನಿರೀಕ್ಷಣಾ ಜಾಮೀನು ನೀಡಲು ಇಂದು ನಿರಾಕರಿಸಿತು.

ಮುಖ್ಯಮಂತ್ರಿ ಲಾಲೂ ಪ್ರಸಾದ್, ಕಾರ್ಮಿಕ ಸಚಿವ ವಿದ್ಯಾಸಾಗರ್ ನಿಶಾದ್, ಪಶು ಸಂಗೋಪನಾ ಸಚಿವ ಬೋಲಾ ರಾಂ ತೂಫಾನಿ ಹಾಗೂ ಕೇಂದ್ರದ ಮಾಜಿ ಸಚಿವ ಚಂದ್ರದೇವ್ ಪ್ರಸಾದ್ ವರ್ಮಾ ಅವರ ನಿರೀಕ್ಷಣಾ ಜಾಮೀನು ಅರ್ಜಿಗಳನ್ನು ತಿರಸ್ಕರಿಸಿದ ನ್ಯಾಯಾಧೀಶರು 'ಮೇಲುನೋಟಕ್ಕೆ ಆರೋಪಗಳು ಸ್ಪಷ್ಟವಾಗಿದ್ದು, ಈ ರಾಜಕಾರಣಿಗಳು ಹಗರಣದಲ್ಲಿ ಭಾಗಿಯಾಗಿರುವುದನ್ನು ಸೂಚಿಸುತ್ತಿವೆ' ಎಂದರು.

ರಕ್ಷಣೆ ಭರವಸೆ: ಲಾಲೂ ಪ್ರಸಾದ್ ಯಾದವ್ ಅವರೂ ಸೇರಿದಂತೆ ಮೇವು ಹಗರಣದಲ್ಲಿ ಆರೋಪಿಗಳಾಗಿರುವ ರಾಜಕೀಯ ಮುಖಂಡರನ್ನು ಬಂಧಿಸುವ ಸಿಬಿಐ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ಒದಗಿಸಲಾಗುವುದು ಎಂದು ಪಟ್ನಾ ಹೈಕೋರ್ಟ್‌ಗೆ ಬಿಹಾರ ಸರ್ಕಾರವು ಇಂದು ಭರವಸೆ ನೀಡಿತು.

50 ವರ್ಷಗಳ ಹಿಂದೆ

ಬುಧವಾರ, 12-7-1972

- **ರಾಜ್ಯದ ಮೆಡಿಕಲ್ ಕಾಲೇಜು ಸೀಟುಗಳ ಹಂಚಿಕೆಗೆ ಹೊಸ ನಿಯಮ**

ಬೆಂಗಳೂರು, ಜುಲೈ 11– ರಾಜ್ಯದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳ ಪ್ರವೇಶ ಮತ್ತು ಆಡಳಿತದ ಬಗ್ಗೆ ಸರ್ಕಾರ ಹೊಸ ನಿಯಮಾವಳಿಗಳನ್ನು ರೂಪಿಸಿದೆ. ಅದರ ರೀತ್ಯ ಅವುಗಳಲ್ಲಿ ಶೇ 50ರಷ್ಟು ಸೀಟುಗಳು ರಾಜ್ಯದ ವಿದ್ಯಾರ್ಥಿಗಳಿಗೆ, ಹಿಂದುಳಿದ ವರ್ಗಗಳಿಗೆ ಶೇ 25ರಷ್ಟು ಮೀಸಲು.

ಶ್ರೀ ಡಿ.ಬಿ.ಕಲಮನಕರ್ ಅವರ ಗಮನ ಸೆಳೆಯುವ ಸೂಚನೆಗೆ ಹೇಳಿಕೆ ನೀಡಿದ ಆರೋಗ್ಯ ಸಚಿವ ಶ್ರೀ ಎಚ್.ಸಿದ್ಧವೀರಪ್ಪ ಅವರು, ಅವುಗಳನ್ನು ಖಾಸಗಿ ಮೆಡಿಕಲ್ ಕಾಲೇಜುಗಳು ಕಾರ್ಯಗತಗೊಳಿಸಲೆಂದು ಆಶಿಸಿದರು. ಇಲ್ಲದಿದ್ದಲ್ಲಿ ಯಾವ ಕ್ರಮ ತೆಗೆದುಕೊಳ್ಳಬಹುದೆಂದು ಸರ್ಕಾರಕ್ಕೆ ಗೊತ್ತಿದೆಯೆಂದು ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಮಣಿಪಾಲ್, ಬೆಳಗಾವಿ, ದಾವಣಗೆರೆ ಮತ್ತು ಗುಲ್ಬರ್ಗಗಳಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳು ನಡೆಯುತ್ತಿವೆ.

ಗುಲ್ಬರ್ಗದ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಂದ ಪ್ರತೀ ಸೀಟಿಗೆ ಐದು ಸಾವಿರ ರೂ.ಗಳಿಂದ ಹದಿನೈದು ಸಾವಿರ ರೂ.ಗಳ ವರೆಗೆ ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ ಎಂದು ಶ್ರೀ ಕಲಮನಕರ್ ಆಪಾದಿಸಿದ್ದರು.

ಸಾಂವಿಧಾನಿಕ ಸಂಸ್ಥೆಗಳ ಸ್ವಾತಂತ್ರ್ಯ ಮೊಟಕಾಗುತ್ತಿರುವಾಗ ರಬ್ಬರ್‌ಸ್ಟ್ಯಾಂಪ್ ರಾಷ್ಟ್ರಪತಿ ಬೇಡ

ರಾಷ್ಟ್ರಪತಿ: ಹೇಗಿದ್ದರೆ ದೇಶಕ್ಕೆ ಹಿತ?

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ದೇಶದ ರಾಜಧಾನಿ ದೆಹಲಿಯಲ್ಲಿ ಅತಿ ಭವ್ಯ ಕಟ್ಟಡ ಯಾವುದು? ನಿಸ್ಸಂದೇಹವಾಗಿಯೂ ರಾಷ್ಟ್ರಪತಿ ಭವನ. 320 ಎಕರೆ ವ್ಯಾಪ್ತಿಯ ಎಸ್ಟೇಟಿನಲ್ಲಿ 340 ಕೋಣೆಗಳ ಬೃಹದಾಕಾರದ ನಿಲಯ. ಅದರಲ್ಲಿ 190 ಎಕರೆಗಳು ಉದ್ಯಾನಕ್ಕಾಗಿ ಬಳಕೆಯಾಗಿವೆ. 1929ರಲ್ಲಿ ಬ್ರಿಟಿಷ್ ವೈಸರಾಯ್‌ಗಾಗಿ ಅರಮನೆಯಾಗಿ ಕಟ್ಟಿದ್ದ ಈ ಭವನವನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತದ ರಾಷ್ಟ್ರಪತಿ ಬಳಸುತ್ತಿದ್ದಾರೆ. ಆದರೆ ರಾಷ್ಟ್ರಪತಿ ಸ್ಥಾನದ ಮಹತ್ವವು ಈ ಅತ್ಯಾಕರ್ಷಕ ಭವನದ ಕಾರಣದಿಂದಾಗಿ ಬಂದಿಲ್ಲ. ನಮ್ಮ ದೇಶದ ಸಂವಿಧಾನದ ಸಂರಕ್ಷಕನಾಗಿ ಕರ್ತವ್ಯ ನಿರ್ವಹಿಸುವ ಹಾಗೂ ನಮ್ಮ ಗಣರಾಜ್ಯದ ಪ್ರಮುಖನಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿ ಅವರದ್ದಾಗಿರುವುದರಿಂದಲೇ ರಾಷ್ಟ್ರಪತಿಯವರಿಗೆ ಮಹತ್ವ ದೊರಕಿದೆ.

ವಿಷಾದದ ವಿಷಯವೆಂದರೆ, ಇತ್ತೀಚಿನ ವರ್ಷಗಳಲ್ಲಿ ಈ ಸ್ಥಾನ ತನ್ನ ಘನತೆಯನ್ನು ಬಹಳಷ್ಟು ಕಳೆದುಕೊಂಡಿದೆ. ರಾಷ್ಟ್ರಪತಿ ಎಂದರೆ ಒಬ್ಬ ಉತ್ಸವಮೂರ್ತಿ, ಅದು ಬಾಹ್ಯ ಶಿಷ್ಟಾಚಾರಕ್ಕಾಗಿ ಬೇಕಾದ ಒಂದು ಔಪಚಾರಿಕ ಸ್ಥಾನ ಎಂಬ ತಪ್ಪು ನಂಬಿಕೆ ಹುಟ್ಟಿಕೊಂಡಿದೆ. ಆದರೆ ನಮ್ಮ ಸಂವಿಧಾನವನ್ನು ರೂಪಿಸಿದವರ ಕಲ್ಪನೆ ಹಾಗಿರಲಿಲ್ಲ. ಅವರು, ಅಮೆರಿಕದಂಥ ಶಕ್ತಿಶಾಲಿ ರಾಷ್ಟ್ರದ ಅಧ್ಯಕ್ಷರು ನಡೆಸುವ ಆಡಳಿತ ಮಾದರಿಯನ್ನು ಸ್ವೀಕರಿಸಲಿಲ್ಲ. ಬ್ರಿಟನ್ನಿನಲ್ಲಿರುವ ಸಂಸದೀಯ ವ್ಯವಸ್ಥೆಯನ್ನೂ ಯಥಾವತ್ತಾಗಿ ನಕಲು ಮಾಡಲಿಲ್ಲ. ನಮ್ಮದು ಸಂಸದೀಯ ಪ್ರಜಾಪ್ರಭುತ್ವವಾಗಿದ್ದರೂ ರಾಷ್ಟ್ರಪತಿಯು ಯಾವುದೇ ಅಧಿಕಾರ ಇಲ್ಲದ, ಹೆಸರಿಗಷ್ಟೇ ರಾಷ್ಟ್ರ ಪ್ರಮುಖರಾಗಿರುವ ಬ್ರಿಟನ್ನಿನ ರಾಜ ಅಥವಾ ರಾಣಿಯಂತೆ ಅಲ್ಲ. ಸಂವಿಧಾನವು ರಾಷ್ಟ್ರಪತಿಯವರಿಗೆ ನಿರ್ದಿಷ್ಟ ಅಧಿಕಾರಗಳನ್ನು ನೀಡಿದೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಎಂಬ ಮೂರು ಕಂಬಗಳ ಮೇಲೆ ನಿಂತಿರುವ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಷ್ಟ್ರಪತಿ ಈ ಮೂರೂ ಅಂಗಗಳ ಪ್ರಮುಖರು.

ಆದರೆ ರಾಷ್ಟ್ರಪತಿಯವರಿಗಾಗಲೀ ಇಲ್ಲವೇ ಕಾರ್ಯಾಂಗದ ಪ್ರಮುಖರಾದ ಪ್ರಧಾನ ಮಂತ್ರಿಯವರಿಗಾಗಲೀ ಅಪರಿಮಿತ, ನಿರಂಕುಶ ಅಧಿಕಾರಗಳಿಲ್ಲ. ಎಲ್ಲ ಸ್ಥಾನಗಳ ಹಾಗೂ ಎಲ್ಲ ಸಂಸ್ಥೆಗಳ ನಡುವೆ ನಿಯಂತ್ರಣ ಮತ್ತು ಸಮತೋಲನವು ನಮ್ಮ ಸಂವಿಧಾನದ ಅತಿ ಮಹತ್ವದ ವೈಶಿಷ್ಟ್ಯಗಳಲ್ಲಿ ಒಂದು. ಯಾವುದೇ ಸಂಸ್ಥೆ ಅಥವಾ ಅದನ್ನು ನಡೆಸುವ ವ್ಯಕ್ತಿ ತನ್ನ ಅಧಿಕಾರದ ಸೀಮೆಗಳನ್ನು ಉಲ್ಲಂಘಿಸಿದರೆ ಅಥವಾ ಸಂವಿಧಾನದ ತತ್ವಗಳ ಅವಹೇಳನ ಮಾಡಿದರೆ, ರಾಷ್ಟ್ರಪತಿ ಅವರು ಬಹಿರಂಗವಾಗಿ ಇಲ್ಲವೇ ಖಾಸಗಿಯಾಗಿ ಸಲಹೆ ಹಾಗೂ ಸದುಪದೇಶ ಕೊಡಬಹುದು. ಅವರು ಹೇಳಿದ ಮಾತುಗಳನ್ನು ಇತರ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸಲೇಬೇಕಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಹೀಗಿರುವಾಗ, ರಾಷ್ಟ್ರಪತಿ ಯಾರಾಗಬೇಕು ಎಂಬ ಪ್ರಶ್ನೆಗೆ ಉತ್ತರ ಸರಳವಾಗಿದೆ. ಸಂವಿಧಾನದ ಬಗ್ಗೆ ಆಳವಾದ ಅಧ್ಯಯನ ಮಾಡಿದವರು, ಅದರ ನೀತಿ-ನಿಯಮಗಳನ್ನು ಯಾವುದೇ ಅಂಜಿಕೆ, ಪಕ್ಷಪಾತ ಇಲ್ಲದೆ ಪಾಲಿಸುವ ಬದ್ಧತೆ ಇರುವವರು, ರಾಷ್ಟ್ರ ಜೀವನದಲ್ಲಿ ಹಾಗೂ ಶಾಸಕಾಂಗ ವ್ಯವಸ್ಥೆಯಲ್ಲಿ ವ್ಯಾಪಕ ಅನುಭವ ಪಡೆದು ಕೀರ್ತಿ ಗಳಿಸಿದವರು ಈ ಸ್ಥಾನವನ್ನು ಅಲಂಕರಿಸಲು ಅರ್ಹರು. ಇಂಥ ಅರ್ಹತೆ ಇದ್ದ ಕೆಲವರು ಭಾರತದ ರಾಷ್ಟ್ರಪತಿಯಾಗಿ ಆ ಸ್ಥಾನದ ಗೌರವವನ್ನು ಬೆಳೆಸಿದ್ದಾರೆ. ಉದಾಹರಣೆಗೆ, ಡಾ. ರಾಜೇಂದ್ರ ಪ್ರಸಾದ್, ಡಾ. ಎಸ್.ರಾಧಾಕೃಷ್ಣನ್, ಡಾ. ಜಾಕಿರ್ ಹುಸೇನ್, ಕೆ.ಆರ್.ನಾರಾಯಣನ್, ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಮತ್ತು ಪ್ರಣವ್ ಮುಖರ್ಜಿ. ಆದರೆ ಇನ್ನು ಕೆಲವರು ಮಾತ್ರ ಪ್ರಧಾನಿಯವರ ಕೈಗೊಂಬೆಯಂತೆ ಕೆಲಸ ಮಾಡಿದ್ದಾರೆ. ಫಕ್ರುದ್ದೀನ್ ಅಲಿ ಅಹಮದ್ ತಮ್ಮ ವಿವೇಚನೆ ಬಳಸದೆ, ಇಂದಿರಾ ಗಾಂಧಿ ನೇತೃತ್ವದ ಸರ್ಕಾರ ತೆಗೆದುಕೊಂಡ ತಪ್ಪು ನಿರ್ಣಯವನ್ನು ಪ್ರಶ್ನಿಸದೆ, ಕಣ್ಣುಮುಚ್ಚಿ ಒಪ್ಪಿಗೆ ನೀಡಿದ್ದರಿಂದಲೇ 1975ರಲ್ಲಿ ತುರ್ತು ಪರಿಸ್ಥಿತಿಯಂಥ ಸಂಕಟವನ್ನು ದೇಶ ಎದುರಿಸಬೇಕಾಯಿತು.

ಭಾರತದಲ್ಲಿ ಇಂದು ಅಘೋಷಿತ ತುರ್ತು ಪರಿಸ್ಥಿತಿಯ ವಾತಾವರಣ ಇದೆ. ಸಾಂವಿಧಾನಿಕ ಸಂಸ್ಥೆಗಳ ಸ್ವಾತಂತ್ರ್ಯ ಮೊಟಕುಗೊಂಡಿದೆ. ಆಡಳಿತ ಪಕ್ಷದ ರಾಜಕೀಯ ಲಾಭಕ್ಕಾಗಿ ವಿರೋಧ ಪಕ್ಷಗಳ ನಾಯಕರನ್ನು ಹೆದರಿಸಲು, ವಿರೋಧ ಪಕ್ಷಗಳನ್ನು ಒಡೆಯಲು, ಅವುಗಳ ನೇತೃತ್ವದ ಸರ್ಕಾರಗಳನ್ನು ಬೀಳಿಸಲು ಜಾರಿ ನಿರ್ದೇಶನಾಲಯ, ಸಿಬಿಐ, ಆದಾಯ ತೆರಿಗೆಯಂತಹ ಸಂಸ್ಥೆಗಳ ದುರುಪಯೋಗವಾಗುತ್ತಿದೆ. ನ್ಯಾಯಾಂಗವನ್ನೂ ನಿಯಂತ್ರಿಸುವ ಹುನ್ನಾರ ನಡೆದಿದೆ. ಸಮಾಜದಲ್ಲಿ ಧರ್ಮಾಂಧತೆಯನ್ನು ಪೋಷಿಸಿ, ಕೋಮುದ್ವೇಷ ಪಸರಿಸಿ ಚುನಾವಣೆ ಗೆಲ್ಲುವ ಹೀನ ಪ್ರಯತ್ನ ಮುಂದುವರಿದಿದೆ. ಪಾರ್ಲಿಮೆಂಟ್ ಸರಿಯಾಗಿ ಕೆಲಸ ಮಾಡುತ್ತಿಲ್ಲ.

ಇವೆಲ್ಲ ನಡೆದಿರುವಾಗ, ಈ ಐದು ವರ್ಷಗಳಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಎಲ್ಲರಿಗೂ ಕೇಳಿಸುವಂಥ ಮೌನಧಾರಣೆ ಮಾಡಿದರು. ಅವರು ಸರ್ಕಾರದ ರಬರ್ ಸ್ಟ್ಯಾಂಪ್ ಆಗಿಯೇ ಕೆಲಸ ಮಾಡಿದರು ಎಂಬುದಕ್ಕೆ ಹಲವಾರು ಉದಾಹರಣೆಗಳಿವೆ. ಅವುಗಳಲ್ಲಿ ಒಂದೆಂದರೆ, 2019ರ ನವೆಂಬರ್‌ನಲ್ಲಿ ಮಹಾರಾಷ್ಟ್ರದಲ್ಲಿ ಒಮ್ಮಿಂದೊಮ್ಮೆಲೇ ಮಧ್ಯರಾತ್ರಿಯಲ್ಲಿ ರಾಷ್ಟ್ರಪತಿ ಆಡಳಿತವನ್ನು ಹಿಂತೆಗೆದುಕೊಂಡರು. ನಂತರ ಯಾರಿಗೂ ಗೊತ್ತಾಗದಂತೆ ನಸುಕಿನಲ್ಲಿಯೇ ರಾಜ್ಯಪಾಲರು ಬಿಜೆಪಿಯ ದೇವೇಂದ್ರ ಫಡಣವೀಸ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿಬಿಟ್ಟರು. ಈ ಹಿಂದಿನ ಐದು ವರ್ಷಗಳಲ್ಲಿ ಸರ್ಕಾರದ ಯಾವುದೇ ತಪ್ಪಿನ ಬಗ್ಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವರು ಮಾತನಾಡಲಿಲ್ಲ.

ಈಗ ಮುಂದಿನ ಐದು ವರ್ಷಗಳಿಗೆ ಹೊಸ ರಾಷ್ಟ್ರಪತಿಯವರ ಆಯ್ಕೆಗಾಗಿ ಈ ತಿಂಗಳ 18ರಂದು ಚುನಾವಣೆ ನಡೆಯಲಿದೆ. ದ್ರೌಪದಿ ಮುರ್ಮು ಅವರು ಬಿಜೆಪಿಯ ಅಭ್ಯರ್ಥಿಯಾಗಿದ್ದಾರೆ. ವಿರೋಧ ಪಕ್ಷಗಳು ಯಶವಂತ ಸಿನ್ಹಾ ಅವರನ್ನು ತಮ್ಮ ಜಂಟಿ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸಿವೆ. ಸಂಸತ್ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು ಮಾತ್ರ ಭಾಗವಹಿಸಬಲ್ಲ ಈ ಚುನಾವಣೆಯಲ್ಲಿ ಮುರ್ಮು ಅವರು ಗೆಲ್ಲುವ ಸಾಧ್ಯತೆ ಹೆಚ್ಚು. ಅವರು ಗೆದ್ದರೆ ಮೊದಲನೇ ಬಾರಿ ಒಬ್ಬ ಆದಿವಾಸಿ ಮಹಿಳೆಯು ಭಾರತದ ರಾಷ್ಟ್ರಪತಿಯಾಗುವರು. ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆದರ್ಶಗಳಲ್ಲಿ ನಂಬಿಕೆ ಇರುವ ಎಲ್ಲರೂ ಇದನ್ನು ಸ್ವಾಗತಿಸಲೇಬೇಕು. ಭಾರತದ ಪ್ರಜಾಪ್ರಭುತ್ವವು ಎಲ್ಲ ವರ್ಗಗಳಿಗೂ ಸಮಾನ ಸ್ಥಾನ ಮತ್ತು ಅವಕಾಶಗಳನ್ನು ಕೊಡುತ್ತದೆ ಹಾಗೂ ಇಲ್ಲಿ ಒಬ್ಬ ಹಿಂದುಳಿದ ಸಮುದಾಯದ ಮಹಿಳೆಯೂ ದೇಶದ ಅತ್ಯುನ್ನತ ಸ್ಥಾನವನ್ನು ಅಲಂಕರಿಸುತ್ತಾಳೆ ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನವಾಗಬಲ್ಲದು.

ಆದರೆ, ಬರೀ ಒಬ್ಬ ಆದಿವಾಸಿ ಮಹಿಳೆ ರಾಷ್ಟ್ರಪತಿ ಆಗುವುದರಿಂದಲೇ ದೇಶದ ಜನತೆ ತೃಪ್ತರಾಗಬಹುದೇ? ಅವರು ಯಾವುದೇ ಭೀತಿ- ಪಕ್ಷಪಾತ ಇಲ್ಲದೆ ಸಂವಿಧಾನದ ಕಾವಲುಗಾರರಾಗಿಯೂ ಹೊಣೆ ನಿರ್ವಹಿಸಬೇಕು ಎಂಬುದೂ ಜನರ ಅಪೇಕ್ಷೆಯಾದರೆ ಅದು ತಪ್ಪೇ? ನಾವು ಒಬ್ಬ ದಲಿತ ವ್ಯಕ್ತಿಯನ್ನು ರಾಷ್ಟ್ರಪತಿಯನ್ನಾಗಿ ಮಾಡುತ್ತಿದ್ದೇವೆ ಎಂದು ಬಿಜೆಪಿಯವರು ಐದು ವರ್ಷಗಳ ಹಿಂದೆ ಹೇಳಿದ್ದರು. ಆದರೆ ದಲಿತ ಸಮಾಜವಾಗಲೀ ಇತರರಾಗಲೀ ಹೆಮ್ಮೆಪಡುವಂಥ ಕಾರ್ಯವು ಕೋವಿಂದ್ ಅವರಿಂದ ಆಗಲಿಲ್ಲ. ಆದ್ದರಿಂದ ಚುನಾವಣೆಯಲ್ಲಿ ಆದಿವಾಸಿ ಸಮುದಾಯದ ಮತಗಳನ್ನು ಗಳಿಸುವುದಕ್ಕಾಗಿ ಮಾತ್ರ ಮುರ್ಮು ಅವರನ್ನು ಬಿಜೆಪಿಯವರು ತಮ್ಮ ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ ಎಂಬ ಸಂದೇಹ ಇಂದು ಅನೇಕರಲ್ಲಿದೆ. ಇದಕ್ಕೆ ಮುರ್ಮು ಅವರ ಮೌನವೂ ಕಾರಣವಾಗಿದೆ.

ಇದುವರೆಗೆ ಅವರು ಒಂದೂ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿಲ್ಲ. ಸಂವಿಧಾನ ಹಾಗೂ ದೇಶದ ಎದುರಿಗಿರುವ ಯಾವುದೇ ಸವಾಲುಗಳ ಬಗ್ಗೆ ತಮ್ಮ ವಿಚಾರಗಳನ್ನು ಪ್ರಕಟಪಡಿಸಿಲ್ಲ. ಸಿನ್ಹಾ ಅವರು ದೇಶದಾದ್ಯಂತ ಮಾಧ್ಯಮ ಪ್ರತಿನಿಧಿಗಳ ಮೂಲಕ ತಮ್ಮ ನಿಲುವುಗಳನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಸಂವಿಧಾನದ ರೂವಾರಿಗಳು ಆಡಳಿತ ಪಕ್ಷದ ರಾಜಕೀಯ ಲಾಭಕ್ಕಾಗಿ ರಾಷ್ಟ್ರಪತಿ ಸ್ಥಾನವನ್ನು ಪ್ರತಿಷ್ಠಾಪಿಸಿಲ್ಲ. ರಾಷ್ಟ್ರಪತಿ ಭವನದ ಅಲಂಕಾರ ಮೂರ್ತಿಯನ್ನಾಗಿಯೂ ಈ ಸ್ಥಾನವನ್ನು ಪರಿಭಾವಿಸಿಲ್ಲ. ಯಾವುದೇ ಹಂಗಿಲ್ಲದೆ ಸಂಪೂರ್ಣ ಜವಾಬ್ದಾರಿಯಿಂದ ಸೇವೆ ಸಲ್ಲಿಸಿ, ತನ್ನ ಬದ್ಧತೆಯು ಸಂವಿಧಾನಕ್ಕೆ ಮಾತ್ರ, ಸರ್ಕಾರಕ್ಕೆ ಅಲ್ಲ ಎಂದು ತೋರಿಸಿಕೊಟ್ಟು, ಭಾರತೀಯ ಪ್ರಜಾಪ್ರಭುತ್ವಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆಯಾಗದಂತೆ ಕಾಳಜಿ ವಹಿಸಿ, ಜಗತ್ತಿನಲ್ಲಿ ಭಾರತದ ಕೀರ್ತಿ ಹೆಚ್ಚಿಸುವ ಕಾರ್ಯವು ಗೆಲ್ಲುವ ಅಭ್ಯರ್ಥಿಯಿಂದ ಆಗಬೇಕು.

ಚುರುಮುರಿ

ಸರ್ಪಯೋಗ

• ಲಿಂಗರಾಜು ಡಿ.ಎಸ್.

'ಅಲ್ಲ ಕಾ ತಮ್ಮಣ್ಣ, ಮಳೆ ತಾರಾಮಾರಾ ಹುಯ್ತಾ ಅದೆ. ಜನ ಯವಸಾಯ ಮಾಡದೇ ಗದ್ದೆ, ಹೊಲ-ತೋಟವ ಪಾಳು ಬುಟ್ಟಿರವೊತ್ಗೆ ಶಾದ್ರಿ ಬೆಳೆದು ಹಾವು-ಚೇಳು ತುಂಬಿಕ್ಯಂಡವೆ!' ಯಂಟಪ್ಪಣ್ಣ ಕೋಪ ತೋರಿಸಿತು.

'ಅಣೈ, ಸರ್ಕಾರದ ಭಾಗ್ಯಗಳು ಜಾಸ್ತಿಯಾಗಿ ಜನ ಸುಳ್ಳು ಬಿಪಿಎಲ್ ಕಾರ್ಡು ಮಾಡಿಸ್ಕ್ಯಂಡು ಕೆಲಸ ಮಾಡದೇ ಉಂಡು ಬೆಚ್ಚಗೆ ಮಕ್ಕತಾವ್ರೆ. ತುಂಬಿದ ಕೆರೆ ಕಡೀಗೇ ಹೋಯ್ತಿಲ್ಲ. ಹುಡ್ಲೆಲ್ಲಾ ಗದ್ದೆ ನೋಡದು ಬುಟ್ಟು ಸಿಟಿ ಬಿದ್ದವೆ. ಊರಲ್ಲಿ ಮುದುಕರು-ಮೋಟರು ಮನೆ ಮುಂದೆ ಬಿಸಿಲು ಕಾಯಿಸತಾ ಕುಂತಿರತರೆ. ಇನ್ನು ಗದ್ದೆಗೆ ನೀರು ಹಾಯಿಸಿ ಯವಸಾಯ ಮಾಡೋರ್‍ಯಾರು?' ತುರೇಮಣೆ ಸಿಟ್ಟಾದರು.

'ಹೋಗ್ಲಿ ಬುಡ್ರೋ, ಮೈಸೂರಿಗೆ ಸ್ನೇಕ್ ಸಿಟಿ ಸ್ನೈಮಣ್ಣ ಅನ್ನೋನು ಹಾವಿಡಿಯಕ್ಕೆ ಬಂದವ್ನಂತೆ. ಅವನ ತಾವು ಇರೋ ಪುಂಗಿ ಈಸ್ಗಂಡಿದ್ರೆ ನಮ್ಮ ಕೊಪ್ಪಲು ಸುತ್ತಮುತ್ತ ಇರ ಹಾವ್ನೆಲ್ಲಾ ಹಿಡುದಾಕಬೈದಿತ್ತು' ಅಂತು ಯಂಟಪ್ಪಣ್ಣ.

'ಯಂಟಪ್ಪಣ್ಣ, ನಾಗರಾವು, ಮಂಡಲದಹಾವು, ಕಾಳಿಂಗಸರ್ಪ ಎಲ್ಲಾ ಸರ್ವನಾಸಾಗೋಗವೆ. ಉಳಿದಿರವು ಹೆಬ್ಬಾವು, ಕೇರೆಹಾವು ಮಾತ್ರ!' ಅಂದೆ ನಾನು.

'ಲೇ ಯಡವಟ್ಟ, ಯಂಟಪ್ಪಣ್ಣ ಹೇಳ್ತಿರದು ನಮ್ಮ ಸುತ್ತ ತುಂಬಿರೋ ಐನಾತಿ ಭ್ರಷ್ಟಾಚಾರದ ಹಾವುಗಳು, ಪರ್ಸೆಂಟೇಜ್ ಹಾವುಗಳು, ಪಕ್ಷಾಂತರದ ಹಾವುಗಳು, ಕಂದಾಯದ ಹಾವುಗಳು, ಮಧ್ಯವರ್ತಿ ಹಾವುಗಳು, ಕಮೀಷನ್ ಹಾವುಗಳು, ಅಕ್ರಮದ ಹಾವುಗಳ ಬಗ್ಗೆ ಕಲಾ. ಇವು ಕಾಸಿಗೋಸ್ಕರ ಜನವ ಕಚ್ಚದ್ನೇ ಜಂಬರ ಮಾಡಿಕ್ಯಂಡು ಕೊಬ್ಬೋಗ್ಯವೆ!' ಅಂದ್ರು ತುರೇಮಣೆ.

'ಇಂತೇ ಆತ್ಮಸಾಕ್ಷಿ ಇಲ್ದಿರೋ ಇಸದ ಸರ್ಪಗಳನ್ನೆಲ್ಲಾ ಕೊಲ್ಲಕೆ ಏನೂ ದಾರಿ ಇಲ್ಲುವರಾ ಸಾ?' ಅಂತಂದೆ.

'ನೋಡ್ಲಾ, ಇಂತೇ ಕ್ಯಾತೆ ಸರ್ಕಾರಿ ಸರ್ಪಗಳ ಹಿಡಿಯಕೆ ಅಂತ್ಲೇ ಒಬ್ಬ ಹಾವಾಡಿಗ ಇದ್ದ. ಸರ್ಕಾರಗಳು ಅವುನ್ನ ಉಪಾಸ ಕೆಡಗಿ ಕೊಂದು ಪುಂಗಿ ಮುರಿದಾಕಿದೋ! ಈಗ ಹಾವಿನ ಇಸಮುಳ್ಳಲ್ಲಿ ಚುಳ್ಳನ್ನಿಸಿಕ್ಯಳದೇ ಹಣೇಬರವಾಗ್ಯದೆ' ತುರೇಮಣೆ ಮಾತಿಗೆ ನಮಗೆ ನಗ ಬರ್ನಿಲ್ಲ.

ಸಂಗತ

ಪೇಪರ್ ಬ್ಯಾಗ್ ಬಳಸುವ ಮುನ್ನ...

ಪ್ಲಾಸ್ಟಿಕ್ ಚೀಲಕ್ಕಿಂತ ಪೇಪರ್ ಬ್ಯಾಗ್‌ಗಳು ಉತ್ತಮ ಎಂಬುದು ಅರ್ಧಸತ್ಯ!

• ಶಿಶಿರ ವಸಿಷ್ಠ

ಏಕಬಳಕೆಯ ಪ್ಲಾಸ್ಟಿಕ್ ಚೀಲ ನಿಷೇಧಕ್ಕೆ ಒಳಗಾಗುತ್ತಿದ್ದಂತೆ, ಅಂಗಡಿ, ಹೋಟೆಲ್‌ಗಳಿಂದ ಸಾಮಾನು–ತಿಂಡಿ ಪಾರ್ಸಲ್ ತರಲು ಬಟ್ಟೆಯ ಇಲ್ಲವೇ ಪೇಪರ್ ಬ್ಯಾಗ್ ಬಳಸಲೇಬೇಕಾದ ಅನಿವಾರ್ಯ ಜನರಿಗೆ ಎದುರಾಗಿದೆ. ಅಂಗಡಿಯವನು ಸಲೀಸಾಗಿ ಸಾಮಾನು ತುಂಬಿಸಿ ಕೊಡುತ್ತಿದ್ದ ಪ್ಲಾಸ್ಟಿಕ್ ಬ್ಯಾಗುಗಳಿಗೆ ಈಗ ಕಟ್ಟುನಿಟ್ಟಿನ ಕಡಿವಾಣ ಬಿದ್ದಿದೆ. ಕೈ ಬೀಸಿಕೊಂಡು ಅಂಗಡಿಗೆ ಹೋಗುತ್ತಿದ್ದವರಿಗೆ ವಿಪರೀತ ಫಜೀತಿಯಾಗಿದೆ. ಹೋಟೆಲ್‌ನವರು ಪಾರ್ಸಲ್ ಕಟ್ಟಲು ಶೇಖರಿಸಿ ಇಟ್ಟುಕೊಂಡಿದ್ದ ಪ್ಲಾಸ್ಟಿಕ್ ಬ್ಯಾಗುಗಳ ಮೂಟೆಯನ್ನೇನು ಮಾಡುವುದು ಎಂದು ಕಂಗಾಲಾಗಿದ್ದಾರೆ.

ಪ್ಲಾಸ್ಟಿಕ್‌ನ ಜಾಗದಲ್ಲಿ ಪೇಪರ್ ಬ್ಯಾಗ್ ಬಂದು ವರ್ಷಗಳೇ ಕಳೆದಿದ್ದರೂ ಸಾಮಾನ್ಯ ಜನರ ಒಲವು ಆ ಕಡೆ ಹೆಚ್ಚಾಗಿ ಇರಲಿಲ್ಲ. ದೊಡ್ಡ ದೊಡ್ಡ ಶಾಪಿಂಗ್ ಮಾಲ್ ಅಥವಾ ಮೆಗಾಸ್ಟೋರ್‌ಗಳಿಂದ ಸಾಮಾನು ಖರೀದಿಸುವವರ ಕೈಯಲ್ಲಿ ಮಾತ್ರ ಪ್ರತಿಷ್ಠೆಯ ಸಂಕೇತವೆಂಬಂತೆ ಅವು ಕಾಣಿಸುತ್ತಿದ್ದವು. ಇನ್ನು ಮುಂದೆ ಪೇಪರ್ ಬ್ಯಾಗ್‌ಗಳು ಎಲ್ಲರ ಕೈಯಲ್ಲಿ ಇರಲಿವೆ. ಮಾರಕ ಪ್ಲಾಸ್ಟಿಕ್‌ಗಿಂತ ಸಾವಿರ ಪಾಲು ವಾಸಿ ಹಾಗೂ ಪರಿಸರಸ್ನೇಹಿ ಎಂದು ವ್ಯಾಪಕವಾಗಿ ಪ್ರಚಾರಗೊಂಡಿರುವುದರಿಂದ ಪೇಪರ್ ಬ್ಯಾಗ್‌ಗಳಿಗೆ ಬೇಡಿಕೆ ಹೆಚ್ಚಲಿದೆ. ಆದರೆ ಪೇಪರ್ ಬ್ಯಾಗ್‌ಗಳು ಪ್ಲಾಸ್ಟಿಕ್‌ನಷ್ಟೇ ಅಪಾಯಕಾರಿ ಮತ್ತು ಕೆಲವು ಸಲ ಅದಕ್ಕಿಂತ ಹೆಚ್ಚು ಎಂಬುದು ಹಲವು ಅಧ್ಯಯನಗಳಿಂದ ಸಾಬೀತಾಗಿದೆ.

ಪೇಪರ್ ಬ್ಯಾಗುಗಳ ಬಳಕೆ ಶುರುವಾಗಿ ನೂರಾಐವತ್ತು ವರ್ಷಗಳೇ ಕಳೆದಿವೆ. ಅಮೆರಿಕದ ಹವ್ಯಾಸಿ ಸಂಶೋಧಕ ಫ್ರಾನ್ಸಿಸ್‌ವೊಲ್ಲೆ 1852ರಲ್ಲಿ ಪೇಪರ್ ಬ್ಯಾಗ್ ತಯಾರಿಸುವ ಯಂತ್ರ ಕಂಡುಹಿಡಿದಾಗ ಪ್ಲಾಸ್ಟಿಕ್‌ನ ಹಾವಳಿ ಅಷ್ಟಾಗಿ ಇರಲಿಲ್ಲ. ಅದೇ ವರ್ಷ ಜುಲೈ 12ರಂದು ಪೇಟೆಂಟ್ ದೊರೆತದ್ದರಿಂದ ಆ ದಿನವನ್ನು 'ವರ್ಲ್ಡ್ ಪೇಪರ್ ಬ್ಯಾಗ್ ಡೇ' ಎಂದು ಕರೆಯಲಾಯಿತು. ಫ್ರಾನ್ಸಿಸ್‌ನ ಯಂತ್ರದಲ್ಲಿ ತಯಾರಾದ ಪೇಪರ್ ಬ್ಯಾಗ್‌ಗಳಿಗೆ ಚೌಕಾಕಾರದ ತಳ ಇರಲಿಲ್ಲವಾದ್ದರಿಂದ ಹೆಚ್ಚು ಜನಪ್ರಿಯವಾಗಲಿಲ್ಲ. ಈ ಮಿತಿಯನ್ನು ಅರಿತಿದ್ದ ಮಾರ್ಗರೆಟ್ ನೈಟ್ ಎಂಬ ಸಂಶೋಧಕಿ, ಚೌಕಾಕಾರದ ತಳವಿರುವ ಪೇಪರ್ ಬ್ಯಾಗ್ ತಯಾರಿಸಬಲ್ಲ ಯಂತ್ರವನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ಆಕೆಯನ್ನು ಗ್ರಾಹಕ ಜಗತ್ತು 'ಮದರ್ ಆಫ್ ಗ್ರಾಸರಿ ಬ್ಯಾಗ್' ಎಂದು ಕರೆದು ಗೌರವಿಸಿತು.

ಮರದ ಒಣ ಚಕ್ಕೆಗಳನ್ನು ಹೆಚ್ಚಿನ ಉಷ್ಣಾಂಶಕ್ಕೆ ಒಡ್ಡಿ, ಪುಡಿ ಮಾಡಿ, ನೀರಿನಲ್ಲಿ ತೊಳೆದು, ಬ್ಲೀಚ್ ಮಾಡಿ ಕಂದು ಬಣ್ಣಕ್ಕೆ ತಿರುಗಿಸಿ ಅದರಿಂದ ಹಾಳೆಯನ್ನು ತಯಾರಿಸಲಾಗುತ್ತದೆ. ಇದನ್ನು ಕ್ರಾಫ್ಟ್ ಪೇಪರ್ ಎನ್ನುತ್ತಾರೆ.

ಪೇಪರ್ ಬ್ಯಾಗ್‌ಗಳನ್ನು ಸುಲಭವಾಗಿ ನೂರಕ್ಕೆ ನೂರರಷ್ಟು ರೀಸೈಕಲ್ ಮಾಡಬಹುದು, ಇಲ್ಲವೆ ಮನೆಯಂಗಳದಲ್ಲೇ ಕಾಂಪೋಸ್ಟ್ ಮಾಡಬಹುದು, ಸಣ್ಣ ಮಕ್ಕಳು ತಲೆಯ ಮೇಲಿಂದ ಮುಖ ಮುಚ್ಚಿಕೊಂಡರೆ ಉಸಿರುಗಟ್ಟುವುದಿಲ್ಲ, ಜಾನುವಾರು ಹಾಗೂ ವನ್ಯ ಪ್ರಾಣಿಗಳಿಗೆ ಅಪಾಯವಿಲ್ಲ, ಭೂಭರ್ತಿ ಮಾಡಿದಾಗ ಬೇಗ ಕೊಳೆತು ಮಣ್ಣಿಗೆ ಸೇರಿಕೊಳ್ಳುತ್ತವೆ ಎಂಬ ಕಾರಣಗಳಿಗೆ ಅವು ಪರಿಸರಸ್ನೇಹಿ ಎಂಬ ಹೆಸರು ಪಡೆದಿವೆ. ಅಲ್ಲದೆ ಪ್ಲಾಸ್ಟಿಕ್‌ಗೆ ಹೋಲಿಸಿದರೆ ಪೇಪರ್ ರೀ ಸೈಕಲ್ ಮಾಡಲು ಕಡಿಮೆ ಶಕ್ತಿ ವ್ಯಯವಾಗುತ್ತದೆ ಎಂಬ ಭಾವನೆ ಸಹ ಇದೆ. ಇದು ಅರ್ಧ ಸತ್ಯವಷ್ಟೇ.

ಉತ್ಪಾದನೆಯಿಂದ ಹಿಡಿದು ಮರುಬಳಕೆಯವರೆಗೆ ಪೇಪರ್ ಬ್ಯಾಗ್‌ಗಳು ಪರಿಸರದ ಮೇಲೆ ಇನ್ನಿಲ್ಲದ ಒತ್ತಡ ಹೇರುತ್ತಿರುವುದು ಪತ್ತೆಯಾಗಿದೆ. ದಿ ಎನ್ವಿರಾನ್‌ಮೆಂಟಲ್ ಲಿಟರಸಿ ಕೌನ್ಸಿಲ್ ವರದಿಯಂತೆ, ಪ್ಲಾಸ್ಟಿಕ್‌ಗಿಂತ ಪೇಪರ್ ಶೇ 70ರಷ್ಟು ಹೆಚ್ಚು ವಾಯು ಹಾಗೂ ಶೇ 50ರಷ್ಟು ಜಲಮಾಲಿನ್ಯ ಉಂಟುಮಾಡುತ್ತದೆ. ಪ್ಲಾಸ್ಟಿಕ್‌ಗಿಂತ ಪೇಪರ್ ಐದಾರು ಪಟ್ಟು ದಪ್ಪ ಮತ್ತು ಭಾರವಾದ್ದರಿಂದ ಸಾಗಾಣಿಕೆಗೂ ಹೆಚ್ಚು ಶಕ್ತಿ ಖರ್ಚಾಗುತ್ತದೆ. 70ಕ್ಕೂ ಹೆಚ್ಚು ವಿಷಕಾರಕಗಳನ್ನು ಹೊರಬಿಡುವ ಪೇಪರ್, ಭೂಮಿಯ ಬಿಸಿಯನ್ನು ಏರಿಸುತ್ತದೆ. ತಯಾರಿಕೆಗೆ ಮರಗಳ ಚಕ್ಕೆ ಬೇಕಾದ್ದರಿಂದ ಏರುತ್ತಿರುವ ಬೇಡಿಕೆ ಪೂರೈಸಲು ಭಾರಿ ಸಂಖ್ಯೆಯ ಮರಗಳ ಹನನವಾಗುತ್ತದೆ. ಪ್ಲಾಸ್ಟಿಕ್‌ಗಿಂತ 5ರಿಂದ 7 ಪಟ್ಟು ಹೆಚ್ಚು ತೂಕ ಹೊಂದಿದ್ದು ಅಷ್ಟೇ ಪ್ರಮಾಣದ ತ್ಯಾಜ್ಯ ಮತ್ತು ಶಾಖವರ್ಧಕ ಅನಿಲಗಳನ್ನು ವಾತಾವರಣಕ್ಕೆ ಹೊಮ್ಮಿಸುತ್ತದೆ.

ರೀ ಸೈಕ್ಲಿಂಗ್ ವಿಷಯದಲ್ಲಿ ಪೇಪರ್‌ಗೆ ಶೇ 80ರಷ್ಟು ಹೆಚ್ಚು ಶಕ್ತಿ ವ್ಯಯವಾಗುತ್ತದೆ ಮತ್ತು ಭೂಭರ್ತಿ ಜಾಗದಲ್ಲಿ ಆಮ್ಲಜನಕ, ಬೆಳಕು ಮತ್ತು ಉಷ್ಣಾಂಶದ ಕೊರತೆಯಿಂದ ಕೊಳೆತು ಮಣ್ಣಾಗುವ ಪ್ರಕ್ರಿಯೆಗೆ ಹೆಚ್ಚೂ ಕಡಿಮೆ ಪ್ಲಾಸ್ಟಿಕ್‌ನಷ್ಟೇ ಸಮಯ ಬೇಕಾಗುತ್ತದೆ. ಪೇಪರ್ ಬ್ಯಾಗ್ ಒಮ್ಮೆ ಒದ್ದೆಯಾದರೆ ಮರುಬಳಕೆ ಸಾಧ್ಯವಿಲ್ಲದ್ದರಿಂದ ಅದು ನೇರವಾಗಿ ಕಸದ ರಾಶಿ ಸೇರುತ್ತದೆ. ಆದರೆ ಪ್ಲಾಸ್ಟಿಕ್‌ನಂತೆ ಅದು ಸಾಗರ, ನೀರಿನ ನಾಲೆಗಳನ್ನು ಸೇರಿ ಜಲಚರಗಳಿಗೆ ಹೆಚ್ಚಿನ ಹಾನಿ ಮಾಡುವುದಿಲ್ಲ ಎಂಬುದಷ್ಟೇ ಸಮಾಧಾನದ ಅಂಶ.

ಪೇಪರ್ ಮತ್ತು ಪ್ಲಾಸ್ಟಿಕ್ ಎರಡನ್ನೂ ಹೊರತುಪಡಿಸಿ ಸೆಣಬಿನ, ಬಟ್ಟೆಯ, ಬಯೊ ಪ್ಲಾಸ್ಟಿಕ್‌ನ ಬ್ಯಾಗ್‌ಗಳ ತಯಾರಿಕೆ ಹಾಗೂ ಬಳಕೆಗೆ ಒತ್ತು ನೀಡಬೇಕಾಗಿದೆ.

ವಾಚಕರ ವಾಣಿ

ಇಂಗ್ಲಿಷ್ ಮಾಧ್ಯಮ: ವಿರೋಧ ಸಲ್ಲ

'ಇಂಗ್ಲಿಷ್ ಮಾಧ್ಯಮ ಅನಗತ್ಯ' ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ. ಇದು ನಿರಾಶಾದಾಯಕ ಹೇಳಿಕೆ. ಕಾಂಗ್ರೆಸ್ ಮುಖಂಡ ಶಶಿ ತರೂರ್ ಅವರ ಇಂಗ್ಲಿಷ್ ಭಾಷಾ ಪಾಂಡಿತ್ಯವನ್ನು ಕೇಳಿ ಆನಂದಿಸಲು ಅವರನ್ನು ಮಧ್ಯಪ್ರಾಚ್ಯ ದೇಶಗಳಲ್ಲಿನ ಹಾಗೂ ಇಂಗ್ಲೆಂಡಿನ ಭಾರತೀಯ ವಿದ್ಯಾರ್ಥಿಗಳು ಆಗಾಗ್ಗೆ ಆಹ್ವಾನಿಸುವುದುಂಟು. ಹೀಗೆ, ನಾನಾ ವಿದ್ಯಾರ್ಥಿಗಳು ತಾವು ಬೆಳೆದಿರುವ ಹಿನ್ನೆಲೆಯನ್ನು ಆಧರಿಸಿ ಬಗೆಬಗೆಯ ಆಸಕ್ತಿ, ಕನಸನ್ನು ಕಾಣುತ್ತಿರುತ್ತಾರೆ. ಇಂಗ್ಲಿಷ್ ಭಾಷೆ ತಮ್ಮ ಕನಸಿಗೆ ಚಿಮ್ಮುಹಲಗೆ ಆಗಬಲ್ಲದು ಎಂದು ಅನೇಕರು ಭಾವಿಸಿದ್ದಾರೆ. ಅಂತಹವರ ಕನಸಿಗೆ ಇಂತಹ ಮಾತುಗಳು ತಣ್ಣೀರೆರಚಿದಂತೆ ಆಗುವುದಿಲ್ಲವೇ?

ಉತ್ತರಪ್ರದೇಶ, ಬಿಹಾರದ ನಿರುದ್ಯೋಗಿಗಳು ಕರ್ನಾಟಕಕ್ಕೆ ವಲಸೆ ಬರುತ್ತಿದ್ದಾರೆ. ಹಿಂದಿ ಮಾತನಾಡುವ ಇವರಿಗೆ ಇಲ್ಲಿಯ ಭಾಷೆಯನ್ನು ಕಲಿಯಲು ನಿರಾಸಕ್ತಿ. ಇಲ್ಲಿನ ದುರ್ಬಲ ವರ್ಗದ ಕುಟುಂಬಗಳು ವಿದ್ಯಾರ್ಜನೆಯ ಮಹತ್ವ ತಿಳಿದು, ತಮ್ಮ ಮಕ್ಕಳು ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಜ್ಞಾನ ಪಡೆಯಬೇಕೆಂದು ಹಂಬಲಿಸುತ್ತಿರುವಾಗ, ಇಂತಹ ಕಲ್ಪನೆಗೆ ಆಘಾತ ತರುವ ಮಾತುಗಳನ್ನು ಆಡಬಾರದಲ್ಲವೇ?

ಎಂ.ಶ್ರೀಧರ ರಾವ್, ಮರಲಹಳ್ಳಿ, ಕೋಲಾರ

ರಜೆ ಸಿಕ್ಕರೆ ಸಂಭ್ರಮ ಬೇಡ

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಇತ್ತೀಚೆಗೆ ಶಾಲಾಕಾಲೇಜುಗಳಿಗೆ ರಜೆ ಘೋಷಿಸಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಎಡೆಬಿಡದೆ ಸುರಿಯುತ್ತಿರುವ ಕಾರಣ, ಮಕ್ಕಳ ಸುರಕ್ಷತೆ ದೃಷ್ಟಿಯಿಂದ ರಜೆ ನೀಡಲಾಗುತ್ತಿದೆ. ಇದರ ಪರಿಣಾಮವಾಗಿ ಮಕ್ಕಳು ಮನೆಗಳಲ್ಲಿ ಕಾಲ ಕಳೆಯುವಂತಾಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ, ರಜೆ ಘೋಷಣೆಯಾದ ಕೂಡಲೇ ಮಕ್ಕಳು, ಯುವಕರ ಸಂಭ್ರಮ ಮುಗಿಲು ಮುಟ್ಟುತ್ತದೆ. ಕೆಲವರಂತೂ ರಜೆ ಸಿಗಲು ಕಾಯುತ್ತಿರುತ್ತಾರೆ. ರಜೆ ಸಿಕ್ಕ ಮೇಲೆ ಅವರ ಖುಷಿ ಇನ್ನೂ ಹೆಚ್ಚಾಗುತ್ತದೆ.

ರಜೆಯ ಸಂಭ್ರಮದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ತರಹೇವಾರಿ ಮೀಮ್ಸ್ ಬಿಟ್ಟು ಖುಷಿಪಡುವವರಿದ್ದಾರೆ. ಆದರೆ ಅದೇ ಸಂದರ್ಭದಲ್ಲಿ ಎಷ್ಟೋ ಜನರು ಮಳೆಯಿಂದಾಗಿ ತಮ್ಮ ಮನೆ-ಮಠ, ಆಸ್ತಿ, ಹೊಲ- ತೋಟಗಳ ಹಾನಿಯಿಂದ ನಷ್ಟವನ್ನು ಅನುಭವಿಸುತ್ತಿರುತ್ತಾರೆ ಎಂಬ ಸಂಗತಿ ಅವರ ಅರಿವಿಗೆ ಬರುವುದಿಲ್ಲ. ಹೀಗಾಗಿ, ರಜೆಯ ಕಾರಣಕ್ಕೆ ಸಂಭ್ರಮಪಡದೆ, ಮಳೆಯಿಂದ ಸಂತ್ರಸ್ತರಾದವರು ಹಾಗೂ ತೀವ್ರ ನಷ್ಟ ಅನುಭವಿಸುವವರಿಗೆ ನಮ್ಮ ಕೈಲಾದಷ್ಟು ನೆರವಾಗೋಣ. ಅವರ ಕಷ್ಟಕ್ಕೆ ಸ್ಪಂದಿಸುತ್ತ ಮಾದರಿಯಾಗೋಣ. ಮಕ್ಕಳು ರಜೆಯನ್ನು ಪಠ್ಯಗಳ ಅಧ್ಯಯನ ಹಾಗೂ ಏನನ್ನಾದರೂ ಹೊಸದನ್ನು ಕಲಿಯಲು ಸದುಪಯೋಗ ಪಡಿಸಿಕೊಳ್ಳುವುದು ಒಳ್ಳೆಯದು.

ಶ್ರವಣ್ ಉಪಾಧ್ಯಾಯ, ಧರ್ಮಸ್ಥಳ

ಬೆಳೆ ವಿಮೆ: ವೈಯಕ್ತಿಕ ಸಾಕ್ಷ್ಯ ಪರಿಗಣಿಸುವರೇ?

'ಬೆಳೆ ವಿಮೆಗೆ ಮಧ್ಯವರ್ತಿಗಳ ಕನ್ನ' (ಪ್ರ.ವಾ., ಜುಲೈ 10) ಓದಿ, ವರ್ಷಗಳ ಹಿಂದೆ ಎಂ.ಎಸ್.ಕೆ.ಪ್ರಭು ಅವರು ಪ್ರಸ್ತಾಪಿಸಿದ್ದ 'ಒಂದೇ ಎಮ್ಮೆಯನ್ನು ಬ್ಯಾಂಕ್ ಸಾಲದಿಂದ 28 ಜನ ಕೊಂಡ ಗುಂಡಮಾರನಹಳ್ಳಿ ಕತೆ'ಯ ('ವಿರೋಧ ವಿಲಾಸ', 1999) ನೆನಪಾಯಿತು. ಅಲ್ಲಿಯ ದಲ್ಲಾಳಿ ₹ 3,000 ಸಾಲ ಕೊಡಿಸಲು ₹ 1,000 ಪಡೆಯುವುದಲ್ಲದೆ, ಎಮ್ಮೆ ಸತ್ತಿದೆ ಎಂದು ಸರ್ಟಿಫಿಕೇಟ್ ಮಾಡಿಸಿ ಕ್ಲೈಮ್‌ನಲ್ಲೂ ಪಾಲು ಸ್ವೀಕರಿಸುವ ಚಾಣಾಕ್ಷ. ಈಗ 'ಮೌಲ್ಯ'ಗಳು ಹೆಚ್ಚಿವೆ, ಒಂದೇ ಪ್ರಕರಣದಲ್ಲಿ ಐದು ಲಕ್ಷ ರೂಪಾಯಿ ಸಿಗುವ ಸ್ಥಿತಿ!

ರೋಗ ಬಾರದೆ, ಫಸಲು ನಾಶವಾಗದೆ ಪರಿಹಾರ ಮೊತ್ತ ಸಿಗುವ ಹಾಗೂ ಕಷ್ಟಪಟ್ಟು ಪ್ರೀಮಿಯಂ ಕಟ್ಟಿ- ನಿಜಕ್ಕೂ ಬೆಳೆ ನಷ್ಟವಾದಾಗಲೂ- ಕ್ಲೈಮ್ ಸಿಗದ ಪ್ರಕರಣಗಳನ್ನು ಪತ್ರಿಕಾ ವರದಿಗಳು ಪ್ರಸ್ತಾಪಿಸಿವೆ (ಜಿಲ್ಲೆ, ಬೆಳೆ, ವಿಮಾ ಯೋಜನೆ ಬೇರೆ ಇರಬಹುದು). ನಷ್ಟ ಅಂದಾಜಿನ ಘಟಕ ಗ್ರಾಮ ಆದರೂ ಎರಡು ಜಮೀನುಗಳ ಬೆಳೆ ನಷ್ಟ ಬೇರೆ ಇರಲು ಸಾಧ್ಯ. ಹಿಡುವಳಿ, ಬೆಳೆ ಇಟ್ಟ ಕ್ಷೇತ್ರ ದಾಖಲಿಸಲು 'ಆ್ಯಪ್' ಬಳಸಲಾಗುತ್ತಿದೆ. ಆದರೆ ಒಬ್ಬ ರೈತ ವಿಫಲ ಅಥವಾ ನಷ್ಟ ಆದ ಬೆಳೆಯ ವಿಡಿಯೊ ಸಿದ್ಧಪಡಿಸಿ ಸರ್ಕಾರಿ ಅಧಿಕಾರಿಗಳಿಗೆ ಸತ್ಯಾಪನ ಮಾಡಲು ಕೇಳಿದರೆ ಅವರು ಒಪ್ಪುವರೇ? ವಿಮಾ ಕಂಪನಿ ಈ ಬಗೆಯ ವೈಯಕ್ತಿಕ ಸಾಕ್ಷ್ಯವನ್ನು ದಾವೆ ನಿರ್ಧರಿಸಲು ಬಳಸುವುದೇ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸರ್ಕಾರಿ ಆಸ್ಪತ್ರೆ: ಬೇಕು ಹಣ್ಣಿನ ಮಳಿಗೆ

ರಾಜ್ಯದ ಬಹುತೇಕ ಕಡೆ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಹಣ್ಣು ಹಂಪಲುಗಳ ಮಾರಾಟ ಮಳಿಗೆ ಹಾಗೂ ಸೂಕ್ತ ಕ್ಯಾಂಟೀನ್ ವ್ಯವಸ್ಥೆ ಇಲ್ಲ. ಇದರಿಂದ ರೋಗಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ರೋಗಿಗಳ ಸಂಬಂಧಿಕರು ದೂರದ ಸ್ಥಳಗಳಿಗೆ ಹೋಗಿ, ದುಬಾರಿ ಬೆಲೆ ತೆತ್ತು ಹಣ್ಣು ಹಂಪಲುಗಳನ್ನು ಕೊಂಡುಕೊಳ್ಳಬೇಕಾದ ಪರಿಸ್ಥಿತಿ ಇದೆ. ಇದು ತಪ್ಪಬೇಕು. ಹಾಪ್‌ಕಾಮ್ಸ್ ಮೂಲಕ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಹಣ್ಣು ಹಂಪಲುಗಳ ಮಾರಾಟ ವ್ಯವಸ್ಥೆ ಮಾಡಬೇಕಿದೆ. ಇದರ ಜೊತೆಗೆ ಕಡಿಮೆ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರ ವ್ಯವಸ್ಥೆಯನ್ನು ಕೂಡ ಆಸ್ಪತ್ರೆಯ ಆವರಣದಲ್ಲಿ ಸರ್ಕಾರ ಒದಗಿಸಿದರೆ, ದಿನನಿತ್ಯ ಸಾವಿರಾರು ಮಂದಿಗೆ ಪ್ರಯೋಜನವಾಗುತ್ತದೆ.

ಹರಳಹಳ್ಳಿಪುಟ್ಟರಾಜು, ಪಾಂಡವಪುರ

ನೆರವು ನೀಡಿ

ನನ್ನ ಪತಿ, 40 ವರ್ಷದ ರವಿ ಅವರ ಮೆದುಳಿಗೆ ಪಾರ್ಶ್ವವಾಯು (ಬ್ರೇನ್ ಸ್ಟ್ರೋಕ್) ಆಗಿದೆ. ಅವರ ಚಿಕಿತ್ಸೆಗೆ ಈವರೆಗೆ 18 ಲಕ್ಷ ರೂಪಾಯಿ ಖರ್ಚಾಗಿದೆ. ನಮಗೆ ಇಬ್ಬರು ಪುಟ್ಟ ಮಕ್ಕಳಿದ್ದು ನಾನು ಗೃಹಿಣಿಯಾಗಿದ್ದೇನೆ. ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ನನ್ನ ಪತಿ ಈಗ ಹಾಸಿಗೆ ಹಿಡಿದಿರುವುದರಿಂದ, ಕುಟುಂಬದ ಆದಾಯ ಸ್ಥಗಿತಗೊಂಡಿದೆ. ಅವರ ಚಿಕಿತ್ಸೆಗೆ ಇನ್ನೂ 8 ಲಕ್ಷ ರೂಪಾಯಿಯ ಅಗತ್ಯ ಇರುವುದಾಗಿ ವೈದ್ಯರು ತಿಳಿಸಿದ್ದಾರೆ. ದಾನಿಗಳು ದಯಮಾಡಿ ನೆರವು ನೀಡಿ. ಬ್ಯಾಂಕ್ ಖಾತೆ ವಿವರ: ಪಿ.ಪ್ರಶಾಂತಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಖಾತೆ ಸಂಖ್ಯೆ: 32054964908, ಸಿ.ವಿ.ರಾಮನ್ ನಗರ ಶಾಖೆ, ಬೆಂಗಳೂರು, IFSC- SBIN0003994. ಸಂಪರ್ಕ ಸಂಖ್ಯೆ– 8861461793

ಪಿ.ಪ್ರಶಾಂತಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗೊಡಚಿನಮಲ್ಕಿ ಜಲಪಾತ

ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಗೊಡಚಿನಮಲ್ಕಿ ಜಲಪಾತದಲ್ಲಿ ನೀರು ಭೋರ್ಗರೆಯುತ್ತಿದೆ. ಮೆಟ್ಟಿಲುಗಳ ಮೇಲೆ ಇಳಿಬಿಟ್ಟ ಬಿಳಿಸೀರೆಯಂತೆ ಕಾಣಿಸುವ ಈ ಜಲಪಾತ ನಯನ ಮನೋಹರವಾಗಿದೆ. ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡ ಕಾಡಿನಲ್ಲಿ ಹುಟ್ಟುವ ಮಾರ್ಕಂಡೇಯ ನದಿ ನೀರು ಈ ಜಲಪಾತ ಸೃಷ್ಟಿಸಿದೆ

ಮುಂಗಾರು ಮಳೆಯ ಸಿಂಚನದಿಂದ ಊರೆಲ್ಲ ಮುದಗೊಂಡಿದೆ. ಹೊಳೆ, ಹಳ್ಳ, ಕೊಳ್ಳಗಳು ಮೈದುಂಬಿಕೊಂಡಿವೆ. ಬೆಟ್ಟ, ಗುಡ್ಡಗಳಿಂದ ಧುಮುಕುವ ಜಲಧಾರೆಗಳು ಕಣ್ಮನ ಸೆಳೆಯುತ್ತಿವೆ. ನಾಡಿನ ಸಣ್ಣ ದೊಡ್ಡ ಜಲಪಾತಗಳು ದೃಶ್ಯಕಾವ್ಯಗಳನ್ನು ಬರೆದು ಪ್ರಕೃತಿಪ್ರಿಯರನ್ನು ಕೈಬೀಸಿ ಕರೆಯುತ್ತಿವೆ

ಜಲಧಾರೆಗಳ ವಯ್ಯಾರ...



ಉಂಚಳ್ಳಿ ಜಲಪಾತ

ಸಿದ್ದಾಪುರ ತಾಲ್ಲೂಕಿನ ಹೆಗ್ಗರಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ದಟ್ಟ ಕಾನನದ ನಡುವೆ ಇರುವ ಉಂಚಳ್ಳಿ ಜಲಪಾತ ಪ್ರಸಿದ್ಧವಾಗಿದೆ. ಸ್ಥಳೀಯವಾಗಿ 'ಮಾಣಿ ಹೊಳೆ' ಎಂದು ಕರೆಯುವ ಅಘನಾಶಿನಿ ನದಿ 116 ಮೀಟರ್ ಎತ್ತರದಿಂದ ಧುಮುಕಿ, ಈ ಜಲಪಾತ ನಿರ್ಮಾಣವಾಗಿದೆ. ಶಿರಸಿ ಮತ್ತು ಸಿದ್ದಾಪುರದಿಂದ ಸುಮಾರು 35 ಕಿ.ಮೀ ದೂರವಿದೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ದೇಶದ ಎರಡನೇ ಅತಿ ದೊಡ್ಡ ಜಲಪಾತ ಖ್ಯಾತಿಯ ಜೋಗ ಜಲಪಾತವನ್ನು ವೀಕ್ಷಿಸುವ ತಾಣ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನಲ್ಲಿದೆ. ಇಲ್ಲಿ ಶರಾವತಿ ನದಿ 253 ಮೀಟರ್ (830 ಅಡಿ) ಎತ್ತರದಿಂದ ನಾಲ್ಕು ಕವಲುಗಳಾಗಿ ಧುಮ್ಮಿಕ್ಕುತ್ತದೆ. ಜಲಪಾತ ಶಿವಮೊಗ್ಗದಿಂದ 102 ಕಿ.ಮೀ ದೂರದಲ್ಲಿದೆ

ಜೋಗ ಜಲಪಾತ

ಭರಚುಕ್ಕಿ

ಕೆಆರ್‌ಎಸ್, ಕಬಿನಿ ಜಲಾಶಯಗಳಿಂದ ಹೆಚ್ಚುವರಿ ನೀರನ್ನು ನದಿಗಳಿಗೆ ಬಿಟ್ಟಿರುವುದರಿಂದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಶಿವನಸಮುದ್ರದ ಭರಚುಕ್ಕಿ ಜಲಪಾತಕ್ಕೆ ಜೀವಕಳೆ ಬಂದಿದೆ

ರಮಣೀಯ ಗೋಕಾಕ ಜಲಪಾತ

ಬೆಳಗಾವಿ ಜಿಲ್ಲೆಯ ಗೋಕಾಕ ಜಲಪಾತ ಈಗ ಕಳೆಗಟ್ಟಿದೆ. ಘಟಪ್ರಭಾ ನದಿಯ ಅಚ್ಚುಕಟ್ಟು ಪ್ರದೇಶದಲ್ಲಿ ಬಿದ್ದ ಮಳೆ ನೀರು ಹಾಗೂ ಹಿಡಕಲ್‌ನ ರಾಜಾ ಲಖಮಗೌಡ ಜಲಾಶಯದಿಂದ ಹೊರಬಿಡುತ್ತಿರುವ ನೀರಿನಿಂದಾಗಿ ಜಲಪಾತಕ್ಕೆ ಜೀವಕಳೆ ಬಂದಿದೆ. 186 ಅಡಿ ಎತ್ತರ ಹಾಗೂ 209 ಮೀಟರ್ ವಿಸ್ತಾರವಿದೆ. ಸದ್ಯ ಹಿಡಕಲ್ ಜಲಾಶಯದಿಂದ 110 ಕ್ಯುಸೆಕ್ ನೀರು ಮಾತ್ರ ಹೊರಬಿಡಲಾಗುತ್ತಿದೆ. ಅಣೆಕಟ್ಟೆಯಿಂದ ಹೆಚ್ಚು ನೀರು ಹೊರಬಿಟ್ಟಷ್ಟು ಜಲಪಾತ ರಮಣೀಯವಾಗಿ ಕಾಣಿಸುತ್ತದೆ. ಜಲಪಾತ ವೀಕ್ಷಣೆಗಾಗಿ ಬೃಹತ್ ತೂಗುಸೇತುವೆ ಕೂಡ ಇದೆ. ಆದರೆ, ಅಪಾಯಕಾರಿ ಸ್ಥಳವಾದ್ದರಿಂದ ಸೇತುವೆ ಮೇಲಿನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಪ್ರಜಾವಾಣಿ ಚಿತ್ರಗಳು



ಸಾತೊಡ್ಡಿ ಜಲಪಾತ

ಯಲ್ಲಾಪುರದಿಂದ ಈ ಜಲಪಾತ 28 ಕಿ.ಮೀ ದೂರದಲ್ಲಿದೆ. ಇದು ದಟ್ಟ ಕಾನನದ ನಡುವೆ ಇದೆ. ಸುಮಾರು 15 ಮೀಟರ್ ಎತ್ತರದಿಂದ ಬೀಳುವ ನೀರು ಕೆಳಭಾಗದಲ್ಲಿ ಕಾಳಿ ನದಿಗೆ ಕಟ್ಟಲಾಗಿರುವ ಕೊಡಸಳ್ಳಿ ಜಲಾಶಯಕ್ಕೆ ಸೇರುತ್ತದೆ



ವಜ್ರ ಜಲಪಾತ

ಜೊಯಿಡಾ ತಾಲ್ಲೂಕಿನ ಅಣಶಿಯ ಬಳಿಯಿರುವ ವಜ್ರ ಜಲಪಾತವು, ಮಳೆಗಾಲದಲ್ಲಿ ಮಾತ್ರ ನೀರು ತುಂಬಿಕೊಂಡು ಮೋಹಕವಾಗಿ ಕಾಣುತ್ತದೆ. ಸದಾಶಿವಗಡ–ಬೆಳಗಾವಿ ರಾಜ್ಯ ಹೆದ್ದಾರಿಯ ಅಂಚಿನಲ್ಲೇ ಇದ್ದು, ಅಣಶಿ ಘಟ್ಟದಲ್ಲಿದೆ. ಕಾರವಾರದಿಂದ ಸುಮಾರು 40 ಕಿ.ಮೀ ದೂರದಲ್ಲಿದೆ

ಮಾಗೋಡು ಜಲಪಾತ

ಯಲ್ಲಾಪುರದಿಂದ 17 ಕಿ.ಮೀ ದೂರದಲ್ಲಿರುವ ಮಾಗೋಡು ಜಲಪಾತವು, ಬೇಡ್ತಿ (ಗಂಗಾವಳಿ) ನದಿಯಿಂದ ಉಂಟಾಗಿದೆ. ಸುಮಾರು 200 ಮೀಟರ್‌ಗಳಷ್ಟು ಎತ್ತರದಿಂದ ಎರಡು ಹಂತಗಳಲ್ಲಿ ನೀರು ಧುಮ್ಮಿಕ್ಕುತ್ತದೆ. ವಿವಿಧೆಡೆಗಳಿಂದ ಈ ಜಲಪಾತವನ್ನು ವೀಕ್ಷಿಸಬಹುದು

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 62%

ಇಲ್ಲ 38%

ರಾಜ್ಯದಲ್ಲಿ ಮಳೆಯಿಂದ ಆಗಿರುವ ಹಾನಿಗೆ ಸರ್ಕಾರ, ಜನಪ್ರತಿನಿಧಿಗಳು ತತ್‌ಕ್ಷಣವೇ ಸ್ಪಂದಿಸುತ್ತಿದ್ದಾರೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 170

ದಕ್ಷಬ್ರಹ್ಮನನ್ನು ಶಪಿಸಿದ ನಂದಿ

ದಕ್ಷಪ್ರಜಾಪತಿಯ ನಡವಳಿಕೆಯನ್ನ ಕಂಡು ಕುಪಿತನಾದ ನಂದಿಕೇಶ್ವರ 'ಎಲೈ ದಕ್ಷ, ಶಿವದ್ವೇಷಿಗಳಾದ ನೀವೆಲ್ಲರೂ ವೇದವಾದವನ್ನೇ ಮಾಡುವವರಾದರೂ ವೇದಕ್ಕೆ ವಿಪರೀತವಾದ ಅರ್ಥವನ್ನು ಮಾಡುತ್ತಾ ಇರಿ. ವೈದಿಕನಾಸ್ತಿಕರಾಗಿ ಜನಿಸಿರಿ. ಯಜ್ಞಾದಿಗಳನ್ನು ಮಾಡುತ್ತಾ ಕೇವಲ ಸ್ವರ್ಗದಲ್ಲಿ ಆಸಕ್ತರಾಗಿದ್ದು, ಮುಕ್ತಿಮಾರ್ಗಕ್ಕೆ ಬಾರದೆ, ಕೇವಲ ಕಾಮಪ್ರಧಾನರಾಗಿರಿ. ಕೋಪ, ಲೋಭ, ಮದಗಳುಳ್ಳ ಪಾಪಿಷ್ಠರಾಗಿ ಬದುಕಿ. ಸದಾ ದುರ್ದಾನಗಳನ್ನೇ ತೆಗೆದುಕೊಳ್ಳುತ್ತಾ ದರಿದ್ರರಾಗಿರಿ. ಶಿವನನ್ನು ದ್ವೇಷಿಸುವವರೆಲ್ಲರೂ ದುರಾಚಾರವನ್ನು ಮಾಡುತ್ತಾ ನರಕಕ್ಕೆ ಹೋಗುವರು. ಆ ದುಷ್ಟರಲ್ಲಿ ಕೆಲವರು ಬ್ರಹ್ಮರಾಕ್ಷಸರಾಗುವರು. ಶಿವನು ಸಾಮಾನ್ಯ ದೇವನೆಂದು ತಪ್ಪಾಗಿ ತಿಳಿದು, ಅವನನ್ನು ದ್ವೇಷಿಸುವ ನಿನಗೆ ಎಂದೆಂದಿಗೂ ಪರತತ್ತ್ವವು ಗೋಚರಿಸಲಾರದು. ದುಷ್ಟಮತಿಯಾದ ನೀನು ಸದಾ ಮೋಸಧರ್ಮದಲ್ಲಿಯೇ ಇದ್ದು, ಸಂಸಾರದಲ್ಲಿ ವ್ಯಾಪೃತನಾಗಿ ನೀಚವಾದ ಕಾಮಸುಖವನ್ನನುಭವಿಸುತ್ತಾ, ದುಷ್ಟಾಚಾರವುಳ್ಳವನಾಗುವೆ. ನೀನು ವೇದವಾದವನ್ನು ಹೇಳಿದರೂ, ಅದರಿಂದ ಲಭಿಸುವ ನಿತ್ಯಾತ್ಮಾನಂದವನ್ನು ಪಡೆಯಲಾರೆ. ಕೇವಲ ಪಶುವಿನಂತೆ ಗ್ರಾಮ್ಯಸುಖದಲ್ಲಿಯೇ ಪ್ರವರ್ತಿಸುವೆ. ಕೆಲವು ದಿನಗಳಲ್ಲಿಯೇ ಆಡಿನ ಮುಖವುಳ್ಳವನಾಗುವೆ' ಎಂದು ಅಲ್ಲಿದ್ದ ದಕ್ಷಬ್ರಹ್ಮ ಮತ್ತವನ ಶಿವದ್ವೇಷಿಗಳೆಲ್ಲರನ್ನೂ ಶಪಿಸಿದ.

ನಂದಿಯ ಶಾಪದಿಂದ ಅಲ್ಲಿದ್ದವರು ದುಃಖದಿಂದ ಹಾಹಾಕಾರ ಮಾಡಿದರು. ಆಗ ಬ್ರಹ್ಮ ವಿನಾ ಕಾರಣ ಶಿವಗಣಗಳಿಗೆ ಶಾಪಕೊಟ್ಟಿದ್ದಕ್ಕಾಗಿ ದಕ್ಷನನ್ನು ನಿಂದಿಸಿದ. ಶಿವತತ್ತ್ವವನ್ನು ಬಲ್ಲವನಾದ ಬ್ರಹ್ಮ, ಶಿವದ್ವೇಷಿಗಳಾದ ಭೃಗು ಮೊದಲಾದ ಮುನಿಗಳನ್ನೂ ನಿಂದಿಸಿದ. ಆದರೆ ಶಿವನು ಮಂದಹಾಸವನ್ನು ಬೀರುತ್ತಾ ಕುಳಿತಿದ್ದ. ದಕ್ಷನ ಮಾತು ತನ್ನ ಕಿವಿಗೆ ಕೇಳಲೇ ಇಲ್ಲವೇನೋ ಎಂಬಂತೆ ಮಂದಸ್ಮಿತನಾಗಿ, 'ಎಲೈ ಪ್ರಾಜ್ಞನಾದ ನಂದಿ, ಕೋಪವನ್ನು ಬಿಡು. ದಕ್ಷ ನನ್ನನ್ನು ಶಪಿಸಿದನೆಂಬ ಕಾರಣಕ್ಕಾಗಿ ನೀನು ಕುಪಿತನಾಗಿ ಬ್ರಾಹ್ಮಣರನ್ನೆಲ್ಲಾ ಶಪಿಸಿರುವೆ, ಇದು ಸರಿಯಲ್ಲ. ವೇದಸೂಕ್ತಗಳಲ್ಲಿ ಪರಮಾತ್ಮನು ನೆಲಸಿರುವನು. ಇವನ್ನು ಅಧ್ಯಯನ ಮಾಡಿ ಇವರೆಲ್ಲ ಆತ್ಮವಿತ್ತುಗಳಾಗಿರುವರು. ಇವರನ್ನು ಶಪಿಸಿದರೆ ಆ ವೇದಗಳನ್ನೇ ಶಪಿಸಿದಂತಾಗುವುದು. ಆದ್ದರಿಂದ ನೀನು ಶಪಿಸಿದ್ದು ಸರಿಯಲ್ಲ. ವೇದಗಳನ್ನು ಶಪಿಸಬಾರದು. ವಸ್ತುತಃ ನಾನು ಶಪ್ತನಾಗಿಲ್ಲ. ನನ್ನನ್ನು ಶಪಿಸಲು ಯಾರಿಗೂ ಸಾಧ್ಯವಿಲ್ಲ. ಶಾಂತನಾಗು. ಸನಕ ಮೊದಲಾದ ಮಹಾಮುನಿಗಳಿಗೆ ಉಪದೇಶಿಸುವ ನೀನು ಹೀಗೆ ಕೋಪಗೊಳ್ಳುವುದು ಸರಿಯಲ್ಲ. ನಾನೇ ಯಜ್ಞವು. ಕರ್ಮಗಳೂ ನಾನೇ. ಯಜ್ಞಸಾಧನಗಳೂ ನಾನೇ. ಯಜ್ಞಸ್ವರೂಪಿಯು ನಾನೆ. ನನ್ನ ಹೊರತು ಬೇರೆ ಯಾವುದೂ ಇಲ್ಲ. ಈ ದೇವತೆಗಳು, ಮುನಿಗಳು ಯಾರೆಂದು ತಿಳಿದಿರುವೆ? ಎಲ್ಲವೂ ನಾನೇ ಆಗಿರುವೆ. ನನ್ನ ಹೊರತು ಬೇರೆ ಯಾರೂ ಇಲ್ಲ. ಇದನ್ನು ಅರ್ಥಮಾಡಿಕೊಂಡು, ಕೋಪವನ್ನು ತ್ಯಜಿಸಿ ಸ್ವಸ್ಥನಾಗು. ತತ್ತ್ವಜ್ಞಾನದಿಂದ ಚೆನ್ನಾಗಿ ವಿಮರ್ಶಿಸು' ಎಂದು ಸಮಾಧಾನ ಮಾಡಿದ.

ನಂದಿಯು ಕೋಪವನ್ನು ತ್ಯಜಿಸಿ ಶಾಂತನಾದ. ಶಿವನು ತನ್ನ ಪ್ರೀತಿಪಾತ್ರನಾದ ನಂದಿಕೇಶ್ವರನನ್ನು ಸಮಾಧಾನಗೊಳಿಸಿದ ನಂತರ ತನ್ನ ಗಣಗಳೊಡನೆ ಕೈಲಾಸಕ್ಕೆ ತೆರಳಿದ. ಇತ್ತ ದಕ್ಷಬ್ರಹ್ಮನೂ ಶಿವನ ಮೇಲೆ ಕೋಪಗೊಂಡು ಶಿವನಿಗೆ ದ್ರೋಹ ಮಾಡಬೇಕೆಂಬ ದುರಾಲೋಚನೆಯಲ್ಲಿಯೇ ತೆರಳಿದ. ತನಗೆ ರುದ್ರ ನಮಸ್ಕಾರ ಮಾಡದಿರುವುದನ್ನು ನೆನೆಸಿಕೊಂಡಷ್ಟು ದಕ್ಷಬ್ರಹ್ಮ ಕ್ರೋಧಗೊಳ್ಳುತ್ತಿದ್ದ.

'ಎಲೈ ನಾರದ, ಮೂರ್ಖನಾದ ದಕ್ಷಪ್ರಜಾಪತಿಗೆ ಮುಂದೆ ಶಿವನಿಂದಾದ ಶಿಕ್ಷೆಯನ್ನು ಹೇಳುವೆನು ಕೇಳು' ಎಂದು ಬ್ರಹ್ಮ ಹೇಳುವಲ್ಲಿಗೆ ಸತೀಖಂಡದ ಇಪ್ಪತ್ತಾರನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮುಗಿವಿನ ಸಂತಸ

ಹಾಗೆಯೋ ಹೀಗೆಯೋ ಹೇಗೆ ಹೇಗೆಯೊ ಜನುಮ|
ಸಾಗಿ ಮುಗಿವುದು; ಮುಗಿದು ಮರೆವುದದೆ ಸುಕೃತ||
ಈಗಲೋ ಆಗಲೋ ಎಂದೊ ಮುಗಿವುಂಟೆಂಬ |
ಭಾಗ್ಯವನು ನೆನೆದು ನಲಿ - ಮಂಕುತಿಮ್ಮ || 669 ||

ಪದ-ಅರ್ಥ: ಮರೆವುದದೆ = ಮರೆವುದು + ಅದೆ, ಸುಕೃತ = ಪುಣ್ಯ, ಮುಗಿವುಂಟೆಂಬ = ಮುಗಿವು- + ಉಂಟು + ಎಂಬ

ವಾಚ್ಯಾರ್ಥ: ಹಾಗೋ, ಹೀಗೋ, ಹೇಗೆಯೋ ಈ ಜನ್ಮ ನಡೆದು ಮುಗಿವುದು. ಅದು ಮುಗಿದು ಮರೆತು ಹೋಗುತ್ತದೆಂಬುದೇ ಪುಣ್ಯ. ಎಂದೋ ಒಮ್ಮೆ ಇದು ಮುಗಿದು ಹೋಗುತ್ತದಲ್ಲ ಎಂಬ ಭಾಗ್ಯವನ್ನು ನೆನೆದು ಸಂತೋಷಪಡು.

ವಿವರಣೆ: ಅದಾವ ಕಾರಣಕ್ಕೋ, ಅದಾವ ಸಿದ್ಧಿಗೋ ಈ ದೇಹ ಭೂಮಿಗೆ ಬಂದಾಗಿದೆ. ಅದಕ್ಕೆ ಸಿಕ್ಕ ಪರಿಸರ, ಪ್ರೋತ್ಸಾಹ, ಅವಕಾಶಗಳಿಂದ ಅದು ಬೆಳೆಯುತ್ತ ಹೋಗುತ್ತದೆ.

ಜೀವಪಥ ಹೀಗೆಯೇ ಸಾಗೀತೆಂದು ಯಾರೂ ಹೇಳಲು ಸಾಧ್ಯವಿಲ್ಲ. ಚೆನ್ನಾಗಿ ನಡೆಯುತ್ತಿದೆ ಎನ್ನಿಸಿದ ಜೀವ ಥಟ್ಟನೇ ನಿಂತು ಹೋಗಬಹುದು. ಸಾಕು ಇನ್ನು ಎನ್ನಿಸಿದ ಬದುಕು ದೀರ್ಘ ಕಾಲ ಎಳೆಯಬಹುದು. ಹುಟ್ಟಿನಿಂದ ಸಾವಿನವರೆಗೆ ಪ್ರತಿಕ್ಷಣವೂ ಹೋರಾಟವೇ. ಮನೆಯಲ್ಲಿ ಮದುವೆಯೋ, ಮುಂಜಿಯೋ, ಸೀಮಂತವೋ ಎಂಬ ಒಂದು ಕಾರ್ಯಕ್ರಮವಿದ್ದರೆ, ಅದನ್ನು ಆಯೋಜಿಸಿ, ನಿರ್ವಹಿಸುವುದು ಶ್ರಮದಾಯಕ. ಅಪ್ಪಾ, ಈ ಕೆಲಸ ಸುಸೂತ್ರವಾಗಿ ಮುಗಿದರೆ ಸಾಕು ಎನ್ನಿಸುವುದಿಲ್ಲವೆ? ಬದುಕೊಂದು ಇಂತಹ ಸಹಸ್ರ ಸಹಸ್ರ ಕರ್ತವ್ಯಗಳ ಸರಮಾಲೆ.

ಅದೂ ಸಾಕು ಎನ್ನಿಸುವುದಿಲ್ಲವೆ? ಬದುಕಿದ ಮೇಲೆ ಅನಿವಾರ್ಯವಾಗಿ ಬರುವ ನೋವು, ನಲಿವು, ಸಂಕಟ, ಆತಂಕ, ಭರವಸೆಗಳು ಜೀವವನ್ನು ಕುಟ್ಟಿ ಹಣ್ಣು ಮಾಡುತ್ತವೆ. ಭವಬಂಧನ ದಾರಿ ತಪ್ಪಿಸಿ ಬಿಡುತ್ತದೆ. ಅದನ್ನು ರಾಘವೇಂದ್ರಸ್ವಾಮಿಗಳು ತಮ್ಮ ಒಂದೇ ಕೀರ್ತನೆಯಲ್ಲಿ ತೋಡಿಕೊಂಡಿದ್ದಾರೆ.

ನೊಂದೆನಯ್ಯ ಭವಬಂಧನದೊಳು ಸಿಲುಕಿ
ಮುಂದೆ ದಾರಿ ಕಾಣದೆ ಕುಂದಿದೆ ಜಗದೊಳು
ಕಂದನು ಎಂದೆನ್ನ ಕುಂದುಗಳೆಣಿಸದೆ
ತಂದೆ ಕಾಯೋ ಕೃಷ್ಣ ಕಂದರ್ಪ ಜನಕನೆ
ಧಾರುಣಿಯೊಳು ಭೂಭಾರ ಜೀವ ನಾನಾಗಿ
ದಾರಿತಪ್ಪಿ ನಡೆದೆ ಸೇರಿದೆ ಕುಜನರ
ಆರೂ ಕಾಯುವರಿಲ್ಲ ಸೇರಿದೆ ನಿನಗಯ್ಯ
ಧೀರವೇಣುಗೋಪಾಲ ಪಾರಗಾಣಿಸೊ ಹರಿಯೆ

ಭವಬಂಧನದಿಂದ ಪಾರುಗಾಣಿಸು ಎಂದು ಬೇಡುತ್ತಾರೆ. ಜೀವದ ಒಂದು ಸೊಗಸೆಂದರೆ ಬೇಡವೆಂದರೂ ಅದು ಮುಗಿಯುತ್ತದೆ. ಅದೇ ಒಂದು ಭಾಗ್ಯ. ನಾವೆಷ್ಟೇ ಕಾಪಿಟ್ಟು ಆರೈಕೆ ಮಾಡಿದರೂ ಈ ದೇಹಕ್ಕೆ ವೃದ್ಧಾಪ್ಯ, ಸಾವು ತಪ್ಪದು. ಅದು ಹಾಗೆ ಮುಗಿಯುತ್ತದಲ್ಲ, ಮುಗಿದ ಮೇಲೆ ಯಾವ ನೆನಪಿನ ನೆರಳೂ ಇಲ್ಲದಂತೆ ಮರೆತು ಹೋಗುತ್ತದೆಂಬುದೇ ಸಂತೋಷ.

ಈ ಮಾತನ್ನು ಕಗ್ಗ ಹೇಳುತ್ತದೆ. ಭೂಮಿಗೆ ಬಂದ ಈ ಜೀವ ಹೇಗೊ, ಹೇಗೆ ಹೇಗೆಯೋ ನಡೆದು ಮುಗಿಯುತ್ತದೆ. ಮುಗಿಯುವುದೇ ಒಂದು ಸಂತೋಷ.

ಅದರಲ್ಲೂ ಮುಗಿದ ಮೇಲೆ ಯಾವುದೂ ಸ್ಮರಣೆಯಲ್ಲಿರುವುದಿಲ್ಲವೆಂಬುದು ಪುಣ್ಯ ವಿಶೇಷ. ಈ ಜನ್ಮದ ನೆನಪುಗಳೇ ಭಾರ. ಇನ್ನು ಜನ್ಮಾಂತರದ ನೆನಪುಗಳು ನುಗ್ಗಿ ಬಂದರೆ ಅದನ್ನು ಹೊರುವುದು ಕಲ್ಪನಾತೀತವಾದ ಹೊರೆ. ಅದಾವುದೂ ಉಳಿಯುವುದಿಲ್ಲ ಎಂಬ ಭಾಗ್ಯವನ್ನು ನೆನೆದು ಸಂತೋಷಪಡಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜುಲೈ 12, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ತ್ರಯೋದಶಿ ಗಂ. 07-47, ಚತುರ್ದಶಿ ಗಂ. 28-01 ನಕ್ಷತ್ರ: ಮೂಲಾ ಗಂ. 26-22 ಯೋಗ: ಬ್ರಹ್ಮ ಗಂ. 16-59, ಕರಣ: ತೈತಿಲ ಗಂ. 07-47, ಮಿಥುನ ಮಾಸದ 27 ನೇ ದಿನ.
ರಾಹುಕಾಲ : ಮಧ್ಯಾಹ್ನ 03:00 – 04:30 ಸೂರ್ಯೋದಯ : 06-14 ಸೂರ್ಯಾಸ್ತ : 06-58 ಮುಸ್ಲಿಂ ದಿನಾಂಕ : 12 ಜುಲ್‌ಹಿಜಾನ್
ದಿನ ವಿಶೇಷ : ಮೇಳಾ ಜ್ವಾಲಾಮುಖಿ (ಕಾಶ್ಮೀರ)
ಅದೃಷ್ಟ ಸಂಖ್ಯೆ : 10, 11

ಮೇಷ : ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ. ಶ್ರಮ ಜಾಸ್ತಿಯಾದರೂ ಆದಾಯ ಉತ್ತಮ. ಹಲವಾರು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಸಮಸ್ಯೆಗಳು ಪರಿಹಾರವಾಗುವುದು.

ವೃಷಭ : ಕಾರ್ಯಕ್ಷೇತ್ರದಲ್ಲಿ ಶತ್ರುಗಳು ಹಿನ್ನಡೆ ಅನುಭವಿಸಿ ಮನಸ್ಸಿಗೆ ಸಮಾಧಾನ. ಈ ಮಧ್ಯ ವಿವಿಧ ರೀತಿಯಲ್ಲಿ ಧನಾದಾಯದ ಮಾರ್ಗ ಗೋಚರ. ವಿಷ್ಣುಸಹಸ್ರನಾಮದ ಪಠನೆಯಿಂದ ಮನಸ್ಸಿಗೆ ನೆಮ್ಮದಿ.

ಮಿಥುನ: ಎಲ್ಲರೊಂದಿಗೆ ಸಹಕಾರ ಭಾವನೆಯಿಂದ ಮುಂದುವರಿಯಿರಿ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಪರಿಶ್ರಮಕ್ಕೆ ತಕ್ಕಂತೆ ಯಶಸ್ಸು ಸಾಧಿಸಲು ಕಷ್ಟವಾಗುವುದು.

ಕರ್ಕಾಟಕ : ಕುಟುಂಬದ ಸದಸ್ಯರಲ್ಲಿ ಆದಷ್ಟು ತಾಳ್ಮೆ-ಸಮಾಧಾನದಿಂದ ವರ್ತಿಸಬೇಕಾದೀತು. ಹೊಸ ಕಾರ್ಯಗಳ ಚಾಲನೆಗೆ ಸೂಕ್ತ ಸಮಯವಲ್ಲ. ಸಂಶೋಧನಾ ಕಾರ್ಯಗಳಲ್ಲಿ ಆಸಕ್ತಿ ವೃದ್ಧಿಯಾಗುವುದು

ಸಿಂಹ : ಮನೆಯಲ್ಲಿ ನಡೆದ ಅಹಿತಕರ ಘಟನೆಯಿಂದಾಗಿ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯಕ್ಕೆ ಹಾನಿ. ಅಭಿರುಚಿಗೆ ತಕ್ಕಂಥ ಮನಸ್ಥಿತಿಯನ್ನು ಹೊಂದಿದ ವ್ಯಕ್ತಿಗಳೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ.

ಕನ್ಯಾ : ದುಂದುವೆಚ್ಚ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಆಲೋಚನೆ. ಮಗಳ ಮದುವೆಯ ಖರ್ಚಿನ ಬಗ್ಗೆ ಇರಲಿ. ಸಕ್ರಿಯತೆ ಹಾಗೂ ಕಾರ್ಯ ಮಗ್ನತೆಯ ದಿನವು ಇದಾಗಿದೆ. ಸಂಜೆ ನಿಮ್ಮ ಸ್ನೇಹಿತರ ಜೊತೆ ಕಾಲ ಕಳೆಯುವಿರಿ.

ತುಲಾ : ಪುಸ್ತಕ ವ್ಯಾಪಾರಿಗಳಿಗೆ ಅದರಲ್ಲೂ ಮುಖ್ಯವಾಗಿ ಇತಿಹಾಸಕ್ಕೆ ಸಂಬಂಧಿಸಿದ ಪುಸ್ತಕ ವ್ಯಾಪಾರದಲ್ಲಿ ಉತ್ತಮ ಲಾಭ. ನಿಮ್ಮ ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಸಿಗಲಿದೆ.

ವೃಶ್ಚಿಕ : ಕೆಲಸದತ್ತ ಹೆಚ್ಚಿನ ಗಮನ ಹರಿಸಿ ಮತ್ತು ದಿನಕ್ಕಿಂತ ಹೆಚ್ಚಿನ ಸಮಯ ನೀಡಿ. ಯಶಸ್ಸು ನಿಮ್ಮನ್ನು ಹುಡುಕಿಕೊಂಡು ಬರುವುದರಿಂದ ಹೆಚ್ಚಿನ ಸಂತಸ ಸಿಗಲಿದೆ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಇದು ಸಕಾಲವಾಗಿದೆ.

ಧನು : ಭೂ ಸಂಬಂಧ ಕೆಲಸ ಕಾರ್ಯಗಳು ಹಾಗೂ ಸರ್ಕಾರದ ಕೆಲಸಗಳು ನಿಧಾನವಾದರೂ ಮೇಲಧಿಕಾರಿಗಳ ಸಹಾಯದಿಂದ ಸಂಪನ್ನಗೊಳ್ಳುವುದು. ನಿರುದ್ಯೋಗಿಗಳಿಗೆ ಲೆಕ್ಕಪತ್ರಗಳ ಜವಾಬ್ದಾರಿ ನೋಡುವ ಉದ್ಯೋಗ ಪ್ರಾಪ್ತಿ.

ಮಕರ : ಮೋಜು-ಮಸ್ತಿನ ಜೀವನದತ್ತ ಮನಸ್ಸು ಸೆಳೆಯುವುದು. ದೇಹಾರೋಗ್ಯ ಉತ್ತಮವಾಗಿ ಮಕ್ಕಳೊಡನೆ ಆಟ ಪಾಠಗಳಲ್ಲಿ ಪಾಲ್ಗೊಳ್ಳುವಿರಿ. ಮಕ್ಕಳಿಂದ ಸುಖ ನೆಮ್ಮದಿ ದೊರೆಯಲಿದೆ.

ಕುಂಭ : ನೂತನ ಅಧಿಕಾರಿಗಳ ಆಗಮನದಿಂದಾಗಿ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ತೋರಿಬರಲಿದೆ. ನ್ಯಾಯವಾದಿಗಳಿಗೆ ಸುಲಭದಲ್ಲಿ ಜಯ ಪ್ರಾಪ್ತಿಯಾಗಲು ಸತ್ಯ ಮಾರ್ಗದಲ್ಲಿದ್ದರಷ್ಟೇ ಸಾಧ್ಯ. ಕೃಷಿ ಕಾರ್ಯದಲ್ಲಿ ಹಿನ್ನಡೆ.

ಮೀನ : ರಾಜಕೀಯ ವ್ಯಕ್ತಿಗಳಿಗೆ ಸೂಕ್ತವಾದ ಸ್ಥಾನಮಾನ ಲಭ್ಯವಾಗಲಿದೆ. ಕಂಟ್ರಾಕ್ಟರುಗಳು ಮತ್ತು ಬಿಲ್ಡರ್ಸ್‌ರುಗಳಿಗೆ ಅನುಕೂಲಕರ ದಿನ. ಶ್ರೀ ವೀರಾಂಜನೇಯ ಸ್ತೋತ್ರ ಪಠಿಸಿದರೆ ಮಾನಸಿಕ ಧೈರ್ಯ ವೃದ್ಧಿ.

ಪದಬಂಧ 5016

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಾಳಿಕೆಯಿರಿಸಿದಾಗ ವಿಚಾರ ಮಾರ್ಗಗೊತ್ತಾಗುದೇ? (4)
2.ಓಂಕಾರವೆಂಬ ಮಂತ್ರ (3)
4.ಹಾಡಿನ ಆರಂಭದ ಸಾಲು (3)
6.ಪ್ರಶ್ನೆಗೆ ಪೂರಕವಾಗಿ ಹೇಳಿದ ಮಾತು (3)
7.ಎಲ್ಲರೂ ಒಟ್ಟಾಗಿಯೇ ಹಾಡುವಿಕೆ (5)
10.ಬಣವೆ ಹಾಕುವಾಗ ಅನುಭವಿಸಿದ ತೊಂದರೆ (3)
11.ರಂಗನ್ನು ಹಚ್ಚಿಕೊಂಡವನ ವರ್ಣನೆ (3)
13.ಪರವಾಗಿಯೇ ಪಡೆದುಕೊಂಡ ಸಂಬಳ (3)
14.ರತ್ನ ಖಚಿತ ವಸ್ತು (4)

ಮೇಲಿಂದ ಕೆಳಕ್ಕೆ
1.ತಾಪವಿದ್ದಾಗ ತೋರಿದ ಶೌರ್ಯ (3)
2.ಅತೀ ತೀಕ್ಷ್ಣವಾದುದು (3)
3.ಸಧ್ಯದ ಕಾಲಕ್ಕೆ ಸಂಬಂಧಿಸಿದ್ದು (4)
5.ಲಾಸಾಗಿದ್ದರೂ ತೋರಿದ ಬೆಡಗು! (3)
6.ದಾಹವಿದ್ದಾಗ ನೀಡಿದ ದೃಷ್ಟಾಂತ! (5)
8.ಈತ ಮುಸಲ್ಮಾನ ದೊರೆ (3)
9.ತಪ್ಪು ಕೆಲಸಕ್ಕಾಗಿ ವಿಷಾದಿಸುವಿಕೆ (4)
10.ಬರದೊಳಗಿರುವ ಅನಾಗರೀಕ ಕಾಣುವನೇ? (3)
12.ನೆಗೆದಾಡಿದಾಗ ತಲೆದೋರಿದ ಶೀತ



5015ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಾವಕಾಶ 3.ಆರಾಧಕ
5.ಕರಡು 6.ಕುಲಾವಿ
8.ಸ್ವಹಸ್ತಾಕ್ಷರ 11.ಪರಾತ
12.ಭಾರತ 14.ನಟ್ಟಡವಿ
15.ರುಗ್ಣಾಲಯ

ಮೇಲಿಂದ ಕೆಳಕ್ಕೆ:
1.ಸಾಮರಸ್ಯ 2.ಶಕ
3.ಆಡು 4.ಕಲಾವಿದ
6.ಕುಟೀರ 7.ಪ್ರಸ್ತಾಪ
8.ಸ್ವಗತ 9.ಉಪಮಾನ
10.ಅಡಿಪಾಯ 12.ಭಾವಿ
13.ತರು

ಸುಡೊಕು 5402

	9			5			2	1
3		5	2		1	7		
	1			9			3	5
5		7				1		
	6			2			8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5401 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಇಬ್ಭಾಗದತ್ತ ವಿರೋಧಪಕ್ಷ ಎಐಎಡಿಎಂಕೆ, ಪಳನಿಸ್ವಾಮಿ ಕೈಮೇಲು, ಪನ್ನೀರಸೆಲ್ವಂಗೆ ಭಾರಿ ಹಿನ್ನಡೆ

ರಾಜಕೀಯ ಚತುರ ಇಪಿಎಸ್

ಪ್ರಜಾವಾಣಿ ವಾರ್ತೆ

ಚೆನ್ನೈ: ಎಐಎಡಿಎಂಕೆಯ ಪಕ್ಷದ ಸಾಮಾನ್ಯ ಶಾಸಕನಾಗಿದ್ದ ಇ.ಪಳನಿಸ್ವಾಮಿ ಅವರು ತಮಿಳುನಾಡು ಮುಖ್ಯಮಂತ್ರಿಯ ಹುದ್ದೆಗೆ ಏರಿದ್ದು ಅಚ್ಚರಿಯ ಬೆಳವಣಿಗೆಯಾಗಿತ್ತು. ಈಗ ಪಕ್ಷದ ಹಂಗಾಮಿ ಪ್ರಧಾನ ಕಾರ್ಯದರ್ಶಿ ಹುದ್ದೆಗೂ ಏರಿದ್ದಾರೆ. ಈ ಮೂಲಕ, ಜೆ.ಜಯಲಲಿತಾ ಅವರ ಉತ್ತರಾಧಿಕಾರಿ ತಾವು ಎಂಬಂತಹ ಸ್ಥಿತಿಯನ್ನು ಅವರು ನಿರ್ಮಿಸಿಕೊಂಡಿದ್ದಾರೆ.

ಪಳನಿಸ್ವಾಮಿ ಅವರ ಇಲ್ಲಿಯವರೆಗಿನ ಹಾದಿ ಬಹಳ ದೀರ್ಘವಾದುದ್ದಾಗಿತ್ತು. ಈ ಪ್ರಯಾಣದಲ್ಲಿ ಪಳನಿಸ್ವಾಮಿ ಅವರು ಪಕ್ಷದಿಂದ ಹೊರಗಟ್ಟಿದ್ದು ತಮ್ಮ ಎದುರಾಳಿ ಒ.ಪನ್ನೀರಸೆಲ್ವಂ ಅವರನ್ನು ಮಾತ್ರವಲ್ಲ. ಎಐಎಡಿಎಂಕೆಯ ಅತ್ಯಂತ ಪ್ರಬಲ ನಾಯಕಿಯಾಗಿದ್ದ ವಿ.ಕೆ.ಶಶಿಕಲಾ ಅವರನ್ನೂ ತಮ್ಮ ರಾಜಕೀಯ ಭವಿಷ್ಯದ ಹಾದಿಯಿಂದ ಪಳನಿಸ್ವಾಮಿ ಅವರು ಬದಿಗೆ ಸರಿಸಿದ್ದಾರೆ.

2016ರಲ್ಲಿ ಜಯಲಲಿತಾ ಅವರು ಸರ್ಕಾರ ರಚಿಸಿದಾಗ, ಪಳನಿಸ್ವಾಮಿ ಅಂದಿನ ಸಂಪುಟದ ನಾಲ್ಕನೇ ಸ್ಥಾನದಲ್ಲಿದ್ದರು. ಜಯಲಲಿತಾ ಅವರ ಅನುಪಸ್ಥಿತಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಪನ್ನೀರಸೆಲ್ವಂ ಅವರು, ಶಶಿಕಲಾ ಅವರ ವಿರುದ್ಧ ಬಂಡಾಯ ಎದ್ದಿದ್ದರು. ಪನ್ನೀರಸೆಲ್ವಂ ಅವರನ್ನು ಮೂಲೆಗುಂಪು ಮಾಡಲು ಶಶಿಕಲಾ ಅವರು, ಪಳನಿಸ್ವಾಮಿ ಅವರನ್ನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸಿದರು. ಬಹುಶಃ ಶಶಿಕಲಾ ಅವರು ತಮ್ಮ ಆ ನಿರ್ಧಾರದ ಬಗ್ಗೆ ಈಗ ಪರಿತಪಿಸುತ್ತಿರಬಹುದು.

ಶಶಿಕಲಾ ಜೈಲಿಗೆ ಹೋದನಂತರ, ಅವರ ಸಂಬಂಧಿಗಳು ಮತ್ತು ಬೆಂಬಲಿಗರನ್ನು ಪಳನಿಸ್ವಾಮಿ ಅವರು ಅಧಿಕಾರ ಕೇಂದ್ರದಿಂದ ದೂರವಿಟ್ಟರು. ಶಶಿಕಲಾ ಮತ್ತು ಪನ್ನೀರಸೆಲ್ವಂ ಅವರು ಪ್ರತಿನಿಧಿಸುವ ತೇವರ್ ಸಮುದಾಯದ ನಾಯಕರನ್ನು ತಮ್ಮತ್ತ ಸೆಳೆದುಕೊಂಡರು. 2021ರಲ್ಲಿ ಶಶಿಕಲಾ ಜೈಲಿನಿಂದ ಬಿಡುಗಡೆಯಾದಾಗ, ತೇವರ್ ಸಮುದಾಯದ ಯಾವ ನಾಯಕರೂ ಅವರತ್ತ ಸುಳಿಯದಂತೆ ನೋಡಿಕೊಂಡರು. ಈ ಮೂಲಕ ಶಶಿಕಲಾ ಅವರನ್ನು ರಾಜಕೀಯವಾಗಿ ದುರ್ಬಲವಾಗಿಸಿದರು.

2017ರಲ್ಲಿ ಪಕ್ಷದಲ್ಲಿ ತೆರೆಮರೆಯ ನಾಯಕನಂತಿದ್ದ ಪಳನಿಸ್ವಾಮಿ ಅವರು ಐದೇ ವರ್ಷದಲ್ಲಿ, 2022ರಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ತಮ್ಮನ್ನು ತಾವೇ ಚುನಾಯಿಸಿಕೊಂಡಿದ್ದಾರೆ. ಪಕ್ಷದ ಸಂಸ್ಥಾಪಕ ಎಂಜಿಆರ್ ಅವರ ನಿಧನದ ನಂತರ ದೀರ್ಘಾವಧಿಯವರೆಗೆ ಆ ಹುದ್ದೆಯಲ್ಲಿ ಇದ್ದದ್ದು ಜಯಲಲಿತಾ ಮಾತ್ರ.

ಜಯಲಲಿತಾ ಪರಮಾಪ್ತನ ಬಂಡಾಯ

ಪ್ರಜಾವಾಣಿ ವಾರ್ತೆ

ಚೆನ್ನೈ: 2002ರ ಫೆಬ್ರುವರಿಯಲ್ಲಿ ಜಯಲಲಿತಾ ಅವರಿಂದ ದೊರೆತ ಮುಖ್ಯಮಂತ್ರಿ ಪಟ್ಟವನ್ನು ಐದು ತಿಂಗಳು ನಿರ್ವಹಿಸಿ, ಅದನ್ನು ಹಾಗೆಯೇ ಅವರಿಗೆ ಹಿಂದಿರುಗಿಸಿದ್ದ ಒ.ಪನ್ನೀರಸೆಲ್ವಂ ಅವರು ನಂಬಿಕಸ್ಥ ಎನಿಸಿಕೊಂಡು, ಪಕ್ಷದಲ್ಲಿ ಜಯಲಲಿತಾ ನಂತರದ ಸ್ಥಾನಕ್ಕೆ ಅರ್ಹತೆ ಪಡೆದುಕೊಂಡಿದ್ದರು. ಮತ್ತೆ 2014ರಲ್ಲಿ, ಆದಾಯಕ್ಕಿಂತ ಅಧಿಕ ಆಸ್ತಿ ಸಂಪಾದನೆ ಪ್ರಕರಣದಲ್ಲಿ ಜಯಲಲಿತಾ ಅವರು ಜೈಲಿಗೆ ಹೋಗುವ ಸಂದರ್ಭ ಎದುರಾದಾಗಲೂ ಮುಖ್ಯಮಂತ್ರಿ ಹುದ್ದೆಗೆ ಪನ್ನೀರಸೆಲ್ವಂ ಹೊರತು ಬೇರೆ ಆಯ್ಕೆ ಇರಲಿಲ್ಲ. 2016ರ ಡಿಸೆಂಬರ್ 5ರಂದು ಜಯಲಲಿತಾ ಅವರು ನಿಧನರಾಗುವ ಮುನ್ನ 75 ದಿನಗಳ ಕಾಲ ಆಸ್ಪತ್ರೆಯಲ್ಲಿದ್ದಾಗ ಅವರ ಸ್ಥಾನವನ್ನು ನಿರ್ವಹಿಸಿದ್ದವರು ಇದೇ ಪನ್ನೀರಸೆಲ್ವಂ. ಜಯಲಲಿತಾ ಅವರ ಪರಮಾಪ್ತ ಎಂದು ವ್ಯಾಪಕವಾಗಿ ಪರಿಗಣಿತವಾಗಿದ್ದರೂ, ಪನ್ನೀರಸೆಲ್ವಂ ಅವರು ಅಧಿಕಾರದಲ್ಲಿದ್ದಾಗ ಎಂದೂ ತಮ್ಮ ಪ್ರಭಾವ ಬಳಸಿಕೊಳ್ಳಲಿಲ್ಲ ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬುವಲ್ಲಿ ವಿಫಲರಾದರು.

2017ರ ಫೆಬ್ರುವರಿ 7ರಂದು ಮರೀನಾ ಕಡಲ ಕಿನಾರೆಯಲ್ಲಿ ಮೊಟ್ಟಮೊದಲ ಬಾರಿಗೆ ಮೌನ ಮುರಿದ ಅವರು, ಶಶಿಕಲಾ ವಿರುದ್ಧ ಬಂಡಾಯದ ಕಹಳೆ ಊದಿದರು. ಪನ್ನೀರಸೆಲ್ವಂ ಅವರು ಕೊನೆಗೂ ನಾಯಕರಾಗಿ ಹೊರಹೊಮ್ಮಿದರು ಎಂದು ಈ ಘಟನೆಯನ್ನು ವಿಶ್ಲೇಷಿಸಲಾಗಿತ್ತು. ಬಿಜೆಪಿ ಬೆನ್ನಿಗಿದ್ದರೂ, ಪನ್ನೀರಸೆಲ್ವಂ ಅವರಿಗೆ ಪಕ್ಷದ ಮೇಲೆ ಶಶಿಕಲಾ ಹೊಂದಿದ್ದ ಹಿಡಿತತಪ್ಪಿಸಲು ಸಾಧ್ಯವಾಗಲಿಲ್ಲ. 134 ಶಾಸಕರ ಪೈಕಿ 11 ಶಾಸಕರು ಮಾತ್ರ ಪನ್ನೀರಸೆಲ್ವಂ ಪಾಳಯದಲ್ಲಿ ಗುರುತಿಸಿಕೊಂಡರು.

ವಿಶ್ವಾಸಮತಯಾಚನೆಯಲ್ಲಿ ಪನ್ನೀರಸೆಲ್ವಂ ಬಣವು ಪಳನಿಸ್ವಾಮಿ ಸರ್ಕಾರದ ವಿರುದ್ಧ ಮತ ಚಲಾಯಿಸಿತು. ಉಳಿದ 122 ಶಾಸಕರ ಬೆಂಬಲದೊಂದಿಗೆ ಪಳನಿಸ್ವಾಮಿ ಸರ್ಕಾರ ವಿಶ್ವಾಸಮತ ಗೆದ್ದುಕೊಂಡಿತು. ಸೋಮವಾರ ನಡೆದ ಜನರಲ್ ಕೌನ್ಸಿಲ್ ಸಭೆಯಲ್ಲಿ ಪನ್ನೀರಸೆಲ್ವಂ ಅವರನ್ನು ಸಂಚಾಲಕ ಹುದ್ದೆಯಿಂದ ತೆಗೆದುಹಾಕಿದ್ದಲ್ಲದೇ ಪಕ್ಷದಿಂದಲೇ ಉಚ್ಚಾಟಿಸುವಲ್ಲಿ ಪಳನಿಸ್ವಾಮಿ ಬಣ ಯಶಸ್ವಿಯಾಗಿದೆ.

ಚೆನ್ನೈ ಎಐಎಡಿಎಂಕೆ ಕಚೇರಿಗೆ ಕಂದಾಯ ಅಧಿಕಾರಿಗಳು ಸೋಮವಾರ ಬೀಗ ಹಾಕಿದರು–ಪಿಟಿಐ ಚಿತ್ರ

ತಮಿಳುನಾಡು: ಪಳನಿಗೆ ಮಣೆ, ಪನ್ನೀರ ಉಚ್ಚಾಟನೆ

ಒಂದನೇ ಪುಟದಿಂದ...

ಹಾಗಾಗಿ, ಕಂದಾಯ ಅಧಿಕಾರಿಗಳು ಅಪರಾಧ ಪ್ರಕ್ರಿಯಾ ಸಂಹಿತೆಯ 145ನೇ ಸೆಕ್ಷನ್ ಅಡಿಯಲ್ಲಿ (ವಿವಾದಾತ್ಮಕ ಆಸ್ತಿ) ಕಚೇರಿಗೆ ಬೀಗ ಜಡಿದಿದ್ದಾರೆ. ಎರಡೂ ಬಣಗಳಿಗೂ ಕಚೇರಿ ಸದ್ಯಕ್ಕೆ ಕೈಗೆ ಸಿಗದಂತಾಗಿದೆ.

ಜಿ.ಸಿ ಸಭೆಯಲ್ಲಿ ಮಾತನಾಡಿದ ಎಲ್ಲರೂ ಪಳನಿಸ್ವಾಮಿ ಅವರನ್ನು ಹೊಗಳಿದರು. ಜಯಲಲಿತಾ ಅವರ ಸಹಜ ಉತ್ತರಾಧಿಕಾರಿ ಇವರೇ ಎಂದರು. ಪನ್ನೀರಸೆಲ್ವಂ ಅವರು ಡಿಎಂಕೆ ಜತೆ ಸೇರಿ ಎಐಎಡಿಎಂಕೆಯನ್ನು ದುರ್ಬಲಗೊಳಿಸಲು ಯತ್ನಿಸಿದ್ದಾರೆ ಎಂದು ಆರೋಪಿಸಲಾಯಿತು. ಪನ್ನೀರಸೆಲ್ವಂ ಜತೆಗೆ ಅವರ ಮೂವರು ಬೆಂಬಲಿಗರನ್ನೂ ಉಚ್ಚಾಟಿಸಲಾಗಿದೆ. ಅವರಲ್ಲಿ ಇಬ್ಬರು ಶಾಸಕರು. ಆದರೆ, ಪನ್ನೀರಸೆಲ್ವಂ ಅವರ ಮಗ, ಸಂಸದ ಒ.ಪಿ. ರವೀಂದ್ರನಾಥ್ ಅವರು ಎಐಎಡಿಎಂಕೆ ಪಕ್ಷದಲ್ಲಿಯೇ ಉಳಿದಿದ್ದಾರೆ.

ಎಐಎಡಿಎಂಕೆಯಿಂದ ತಮ್ಮನ್ನು ಯಾರೂ ಉಚ್ಚಾಟಿಸಲಾಗದು ಎಂದು ಪನ್ನೀರಸೆಲ್ವಂ ಹೇಳಿದ್ದಾರೆ. ಪಳನಿಸ್ವಾಮಿ, ಕೆ.ಪಿ.ಮುನುಸ್ವಾಮಿ ಅವರನ್ನು ತಾವು ಪಕ್ಷದಿಂದ ಉಚ್ಚಾಟಿಸಿದ್ದಾಗಿ ಹೇಳಿಕೊಂಡಿದ್ದಾರೆ. ಈ ಬೆಳವಣಿಗೆಗಳಿಂದಾಗಿ ಎಐಎಡಿಎಂಕೆ ತಮ್ಮದು ಎಂದು ಹೇಳಿಕೊಳ್ಳುತ್ತಿರುವ ವಿ.ಕೆ. ಶಶಿಕಲಾ, ಟಿ.ಟಿ.ವಿ.ದಿನಕರನ್ ಸಾಲಿಗೆ ಪನ್ನೀರಸೆಲ್ವಂ ಅವರೂ ಸೇರಿದಂತಾಗಿದೆ.

ತಮ್ಮ ಉಚ್ಚಾಟನೆಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಹೋಗಲಾಗುವುದು ಎಂದು ಪನ್ನೀರಸೆಲ್ವಂ ಹೇಳಿದ್ದಾರೆ. ಆದರೆ, ಇದು ತಕ್ಷಣಕ್ಕೆ ಇತ್ಯರ್ಥವಾಗುವ ಸಾಧ್ಯತೆ ಇಲ್ಲ.

ಪಳನಿಸ್ವಾಮಿ ಬಣವು ತ್ವರಿತವಾಗಿ ಕ್ರಮಗಳನ್ನು ಕೈಗೊಂಡಿದೆ. ದಿಂಡಿಗಲ್ ಸಿ. ಶ್ರೀನಿವಾಸನ್ ಅವರನ್ನು ಪಕ್ಷದ ಖಜಾಂಚಿಯಾಗಿ ನೇಮಿಸಲಾಗಿದೆ. ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ತರಲಾಗಿದೆ. ಇದಕ್ಕೆ ಸಂಬಂಧಿಸಿದ ಪತ್ರಗಳನ್ನು ಚುನಾವಣಾ ಆಯೋಗಕ್ಕೂ ಸಲ್ಲಿಸಲಾಗಿದೆ.

2017ರಲ್ಲಿ ಪಳನಿಸ್ವಾಮಿ ಮತ್ತು ಪನ್ನೀರಸೆಲ್ವಂ ಬಣಗಳ ನಡುವೆ ಸಂಧಾನ ಏರ್ಪಡಿಸಲಾಗಿತ್ತು. ಅದರ ಪ್ರಕಾರ, ಪಳನಿಸ್ವಾಮಿ ಅವರನ್ನು ಸಂಯೋಜಕ ಮತ್ತು ಪನ್ನೀರಸೆಲ್ವಂ ಅವರನ್ನು ಜಂಟಿ ಸಂಯೋಜಕ ಎಂದು ನೇಮಿಸಿ, ದ್ವಿನಾಯಕತ್ವ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು. ಈಗ, ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಮರಳಿ ತರಲಾಗಿದೆ.

ಅದಕ್ಕೆ ಜನರಲ್ ಕೌನ್ಸಿಲ್ ಸಭೆಯು ಒಪ್ಪಿಗೆ ಕೊಟ್ಟಿದೆ. ಪಳನಿಸ್ವಾಮಿ ಅವರು ಈ ಹುದ್ದೆಗೆ ಆಯ್ಕೆಯಾಗುವ ಸಾಧ್ಯತೆ ದಟ್ಟವಾಗಿದೆ.

ಬಿಜೆಪಿ ತಟಸ್ಥ?

ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಪಳನಿಸ್ವಾಮಿ ಅವರಿಗೆ ಕರೆ ಮಾಡಿ ಶುಭಾಶಯ ಹೇಳಿದ್ದಾರೆ. ಬಿಜೆಪಿ ಸದ್ಯಕ್ಕೆ ತಟಸ್ಥವಾಗಿ ಉಳಿಯಬಹುದು ಎಂಬುದರ ಸುಳಿವು ಇದು ಎಂದು ವಿಶ್ಲೇಷಿಸಲಾಗಿದೆ. ಪಳನಿಸ್ವಾಮಿ ಬಣವನ್ನು ತಕ್ಷಣಕ್ಕೆ ಎದುರು ಹಾಕಿಕೊಳ್ಳುವ ಇಚ್ಛೆ ಬಿಜೆಪಿಗೆ ಇಲ್ಲ. ಏಕೆಂದರೆ, ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆಯಲ್ಲಿ ಎಐಎಡಿಎಂಕೆ ಬೆಂಬಲ ಬಿಜೆಪಿಗೆ ಬೇಕಾಗಿದೆ. ಅದಲ್ಲದೆ, ಲೋಕಸಭಾ ಚುನಾವಣೆಯಲ್ಲಿ, ತಮಿಳುನಾಡಿನಲ್ಲಿ ಡಿಎಂಕೆ–ಕಾಂಗ್ರೆಸ್ ಮೈತ್ರಿಕೂಟಕ್ಕೆ ಸ್ಪರ್ಧೆ ಒಡ್ಡಬೇಕಾದರೆ ಎಐಎಡಿಎಂಕೆ ಬೆಂಬಲ ಅನಿವಾರ್ಯ.

ಪಳನಿಸ್ವಾಮಿ ಅವರು ಜನರಲ್ ಕೌನ್ಸಿಲ್ ಸಭೆಯಲ್ಲಿ ಮಾತನಾಡಿ ಡಿಎಂಕೆ ಮತ್ತು ಪನ್ನೀರಸೆಲ್ವಂ ವಿರುದ್ಧ ಹರಿಹಾಯ್ದಿದ್ದಾರೆ. ತಮಿಳುನಾಡಿನಲ್ಲಿ ಡಿಎಂಕೆಯ ಪ್ರತಿಸ್ಪರ್ಧಿ ಎಐಎಡಿಎಂಕೆ ಮಾತ್ರ ಎಂಬ ಸಂದೇಶವನ್ನು ಬಿಜೆಪಿಗೆ ರವಾನಿಸುವ ಉದ್ದೇಶವೂ ಈ ಭಾಷಣದಲ್ಲಿ ಇತ್ತು. ಎಐಎಡಿಎಂಕೆ ಏಕ ನಾಯಕತ್ವಕ್ಕೆ ಹೊರಳಿಕೊಂಡಿರುವುದು ಬಿಜೆಪಿಗೆ ಅನುಕೂಲಕರ ಅಲ್ಲ ಎಂದು ಹೇಳಲಾಗಿದೆ.

ಸುದ್ದಿ 2 ನಿಮಿಷ

21ರಂದು ವಿಚಾರಣೆಗೆ ಹಾಜರಾಗಲು ಸೋನಿಯಾಗೆ ಇ.ಡಿ ಸೂಚನೆ

ನವದೆಹಲಿ: ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿ ಜುಲೈ 21ರಂದು ವಿಚಾರಣೆಗೆ ಹಾಜರಾಗುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಸೂಚಿಸಿದೆ.

ಸೋನಿಯಾ ಅವರಿಗೆ ಜೂನ್ 23 ರಂದು ಇ.ಡಿ ಎರಡನೇ ಸಮನ್ಸ್ ಜಾರಿ ಮಾಡಿತ್ತು.

ಕೋವಿಡ್ ಹಾಗೂ ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿರುವ ಕಾರಣ ವಿಚಾರಣೆಯಿಂದ ವಿನಾಯಿತಿ ನೀಡಬೇಕೆಂದು ಅವರು ಕೋರಿದ್ದರು. ಜೂನ್ 7ರಂದು ಅವರಿಗೆ ಮೊದಲ ಸಮನ್ಸ್ ಜಾರಿ ಮಾಡಲಾಗಿತ್ತು.

ಇದೇ ಪ್ರಕರಣಕ್ಕೆ ಸಂಬಂಧಿಸಿ ಅವರ ಪುತ್ರ ರಾಹುಲ್ ಗಾಂಧಿ ಅವರನ್ನು ಜೂನ್ 13ರಿಂದ ಐದು ದಿನಗಳ ಕಾಲ ಇ.ಡಿ ವಿಚಾರಣೆ ನಡೆಸಿತ್ತು.

75 ವರ್ಷದ ಸೋನಿಯಾ ಅವರಿಗೆ ಜೂನ್ 2ರಂದು ಕೋವಿಡ್ ದೃಢಪಟ್ಟಿತ್ತು. ಬಳಿಕ ಅವರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರು. ಅವರು ಶ್ವಾಸಕೋಶದ ಸೋಂಕಿನಿಂದ ಬಳಲುತ್ತಿದ್ದಾರೆ ಎಂದು ಕಳೆದ ವಾರ ಕಾಂಗ್ರೆಸ್ ಹೇಳಿಕೆಯಲ್ಲಿ ತಿಳಿಸಿತ್ತು.

ಜುಬೈರ್‌ಗೆ 14 ದಿನಗಳ ನ್ಯಾಯಾಂಗ ಬಂಧನ

ಲಖನೌ: ‘ಫ್ಯಾಕ್ಟ್ ಚೆಕ್’ ವೆಬ್‌ಸೈಟ್ ಆಲ್ಟ್ ನ್ಯೂಸ್‌ನ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್‌ಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ ಉತ್ತರ ಪ್ರದೇಶದ ಸೆಷನ್ಸ್ ನ್ಯಾಯಾಲಯವೊಂದು ಸೋಮವಾರ ಆದೇಶಿಸಿದೆ.

ಸೀತಾಪುರ ಜೈಲಿನಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಜುಬೈರ್ ಅವರನ್ನು ನ್ಯಾಯಾಲಯದ ವಿಚಾರಣೆಗೆ ಹಾಜರುಪಡಿಸಲಾಯಿತು. ಅವರ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ಗೆ ಸೆಕ್ಷನ್ 153ಬಿ, 505(1) (ಬಿ), 505(2) ಸೇರ್ಪಡೆಗೊಳಿಸಲಾಗಿದೆ.

ದ್ವೇಷ ಹರಡಿದ ಆರೋಪದಲ್ಲಿ ಕಳೆದ ವರ್ಷ ನವೆಂಬರ್‌ನಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ನ್ಯಾಯಾಲಯ ಜುಬೈರ್‌ಗೆ ಸಮನ್ಸ್ ನೀಡಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೀತಾಪುರದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಶುಕ್ರವಾರ ಜುಬೈರ್‌ಗೆ ಐದು ದಿನಗಳ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಅದರ ಬೆನ್ನಲ್ಲೇ ಲಖಿಂಪುರ ಖೇರಿ ಪೊಲೀಸರು ಜುಬೈರ್‌ಗೆ ವಾರಂಟ್ ಜಾರಿ ಮಾಡಿದ್ದರು.

ಸೀತಾಪುರದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದ ಮಧ್ಯಂತರ ಜಾಮೀನು ಪಡೆದಿದ್ದರೂ ದೆಹಲಿಯಲ್ಲಿ ಮತ್ತೊಂದು ಪ್ರಕರಣದ ವಿಚಾರಣೆ ಎದುರಿಸುತ್ತಿರುವ ಕಾರಣ ಜುಬೈರ್ ಪೊಲೀಸರ ವಶದಲ್ಲೇ ಇದ್ದಾರೆ.

ಜೆಇಇ ಮೇನ್ಸ್ ಪರೀಕ್ಷೆ: 14 ಅಭ್ಯರ್ಥಿಗಳಿಗೆ ಪೂರ್ಣ ಅಂಕ

ನವದೆಹಲಿ (ಪಿಟಿಐ): ಜೆಇಇ ಮುಖ್ಯ ಪರೀಕ್ಷೆಯ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಬೆಂಗಳೂರಿನಲ್ಲಿ ವ್ಯಾಸಂಗ ಮಾಡಿದ ಬೊಯಾ ಹರೇನ್ ಸಾತ್ವಿಕ್ ಸೇರಿ ದೇಶದ 14 ವಿದ್ಯಾರ್ಥಿಗಳು ಪತ್ರಿಕೆ–1ರಲ್ಲಿ 100 ಪರ್ಸಂಟೈಲ್ ಅಂಕ ಗಳಿಸಿ ಸಾಧನೆ ಮಾಡಿದ್ದಾರೆ.

2022ರ ಸಾಲಿನ ಜೆಇಇ ಮುಖ್ಯ ಪರೀಕ್ಷೆಯ ಮೊದಲ ಆವೃತ್ತಿಯ ಫಲಿತಾಂಶದಲ್ಲಿ 100 ಪರ್ಸಂಟೈಲ್ ಅಂಕ ಪಡೆದ ವಿದ್ಯಾರ್ಥಿಗಳಲ್ಲಿ ನಾಲ್ವರು ತೆಲಂಗಾಣ ರಾಜ್ಯದವರಾದರೆ, ಮೂವರು ಆಂಧ್ರಪ್ರದೇಶದವರು. ಕರ್ನಾಟಕ, ಹರಿಯಾಣ, ಪಂಜಾಬ್, ಉತ್ತರಪ್ರದೇಶ, ಜಾರ್ಖಂಡ್, ರಾಜಸ್ಥಾನ ಹಾಗೂ ಅಸ್ಸಾಂ ರಾಜ್ಯಗಳಿಂದ ತಲಾ ಒಬ್ಬರು ಗರಿಷ್ಠ ಅಂಕ ಗಳಿಸಿದ್ದಾರೆ. ಈಗ ಅಭ್ಯರ್ಥಿಗಳು ಗಳಿಸಿದ ಅಂಕಗಳು ಶೇಕಡವಾರು ಅಂಕಗಳಿಗೆ ಸಮನಾಗಿರುವುದಿಲ್ಲ ಎಂದು ರಾಷ್ಟ್ರೀಯ ಪರೀಕ್ಷೆ ಏಜೆನ್ಸಿ (ಎನ್‌ಟಿಎ) ಅಧಿಕಾರಿಗಳು ತಿಳಿಸಿದ್ದಾರೆ.

ಮೂಲತಃ ಆಂಧ್ರಪ್ರದೇಶದ ಹಿಂದೂಪುರದ ಬೊಯಾ ಹರೇನ್ ಸಾತ್ವಿಕ್, ಬೆಂಗಳೂರಿನ ಶಂಕರನಗರದ ನಾರಾಯಣ ಕೋ ಸಿಂಧೂಭವನ್ ಶಾಲೆಯ ವಿದ್ಯಾರ್ಥಿ. ಬಾಂಬೆ ಐಐಟಿ ಸೇರಲು ಇಚ್ಛಿಸಿರುವ ಸಾತ್ವಿಕ್ ‘ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಓದಲು ನಿರ್ಧರಿಸಿದ್ದೇನೆ. ಪರೀಕ್ಷೆ ತಯಾರಿಗೆ ಕೋವಿಡ್ ಲಾಕ್ ಡೌನ್ ನೆರವಾಯಿತು. ಶೇಕಡವಾರು ಅಂಕ ಇನ್ನಷ್ಟು ಉತ್ತಮಪಡಿಸಿಕೊಳ್ಳಲು ಎರಡನೇ ಆವೃತ್ತಿಯ ಪರೀಕ್ಷೆ ಬರೆಯುತ್ತೇನೆ’ ಎಂದು ತಿಳಿಸಿದರು.

8.72 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿದ್ದರು. ಇದರಲ್ಲಿ 7.69 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಕನ್ನಡ, ಹಿಂದಿ, ತಮಿಳು, ತೆಲುಗು, ಇಂಗ್ಲಿಷ್ ಸೇರಿ 13 ಭಾಷೆಗಳಲ್ಲಿ ಪರೀಕ್ಷೆ ನಡೆದಿತ್ತು.

ಎರಡನೇ ಆವೃತ್ತಿಯ ಜೆಇಇ ಮುಖ್ಯ ಪರೀಕ್ಷೆಗೆ ನೋಂದಣಿ ಆರಂಭವಾಗಿದ್ದು, ಜುಲೈ 21ರಿಂದ 30ರವರೆಗೆ ಪರೀಕ್ಷೆ ನಡೆಯಲಿದೆ.

ಗೋವಾ: ಸ್ಪೀಕರ್‌ಗೆ ಕಾಂಗ್ರೆಸ್ ಅರ್ಜಿ

‘ಲೋಬೊ, ಕಾಮತ್ ಅನರ್ಹಗೊಳಿಸಿ’

ಪ್ರಜಾವಾಣಿ ವಾರ್ತೆ

ಪಣಜಿ: ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿರುವ ಮೈಕಲ್ ಲೋಬೊ ಮತ್ತು ದಿಗಂಬರ ಕಾಮತ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆ ಗೋವಾ ಕಾಂಗ್ರೆಸ್, ವಿಧಾನಸಭಾ ಸ್ಪೀಕರ್‌ಗೆ ಸೋಮವಾರ ಅರ್ಜಿ ಸಲ್ಲಿಸಿದೆ.

‘ಲೋಬೊ ಹಾಗೂ ಕಾಮತ್ ಅವರು ಆಡಳಿತಾರೂಢ ಬಿಜೆಪಿ ಜೊತೆ ಸೇರಿಕೊಂಡು ಕಾಂಗ್ರೆಸ್ ಪಕ್ಷ ಇಬ್ಭಾಗ ಮಾಡುವ ಹುನ್ನಾರ ನಡೆಸಿದ್ದಾರೆ’ ಎಂದು ಕಾಂಗ್ರೆಸ್ ದೂರಿದೆ.

‘ಲೋಬೊ ಹಾಗೂ ಕಾಮತ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆ ಸ್ಪೀಕರ್‌ಗೆ ಅರ್ಜಿ ಸಲ್ಲಿಸಿದ್ದೇವೆ. ಲೋಬೊ ಅವರನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸ್ಥಾನದಿಂದ ವಜಾಗೊಳಿಸಿರುವ ವಿಚಾರವನ್ನೂ ಸ್ಪೀಕರ್ ಗಮನಕ್ಕೆ ತಂದಿದ್ದೇವೆ’ ಎಂದು ಗೋವಾ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಮಿತ್ ಪಾಟ್ಕರ್ ತಿಳಿಸಿದ್ದಾರೆ.

‘ಅಗತ್ಯವಿರುವಷ್ಟು ಶಾಸಕರನ್ನು ಸೆಳೆಯಲು ಬಿಜೆಪಿಗೆ ಸಾಧ್ಯವಾಗಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಒಡೆಯುವ ಅದರ ತಂತ್ರಗಾರಿಕೆಯನ್ನು ನಾವು ವಿಫಲಗೊಳಿಸಿದ್ದೇವೆ. ಹಣ ಹಾಗೂ ತೋಳ್ಬಲದ ಮೂಲಕ ಮಹಾರಾಷ್ಟ್ರದಂತೆ ರಾಜ್ಯದಲ್ಲೂ ಪ್ರತಿಪಕ್ಷದ ಶಾಸಕರನ್ನು ಸೆಳೆಯಲು ಬಿಜೆಪಿ ಮುಂದಾಗಿತ್ತು. ತಾನು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ವಿರೋಧಪಕ್ಷಗಳ ಅಸ್ತಿತ್ವವೇ ಇಲ್ಲದಂತೆ ಮಾಡುವುದು ಆ ಪಕ್ಷದ ಉದ್ದೇಶ’ ಎಂದು ಆರೋಪಿಸಿದ್ದಾರೆ.

ಪಕ್ಷಕ್ಕೆ ಆಗುತ್ತಿರುವ ಹಾನಿ ತಪ್ಪಿಸುವ ಉದ್ದೇಶದಿಂದ ಮುಕುಲ್ ವಾಸ್ನಿಕ್ ಅವರನ್ನು ಕಾಂಗ್ರೆಸ್ ವರಿಷ್ಠರು ಗೋವಾಕ್ಕೆ ಕಳುಹಿಸಿದ್ದರು. ಅವರು ಶಾಸಕರ ಮನವೊಲಿಸಿದ್ದಾರೆ ಎಂದು ಹೇಳಲಾಗಿದೆ.

‘ಕಾಂಗ್ರೆಸ್‌ನಲ್ಲಿ ಆಗುತ್ತಿರುವ ಬೆಳವಣಿಗೆಗಳಿಗೆ ನಮ್ಮ ಪಕ್ಷ ಹೊಣೆಯಲ್ಲ. ಆ ಪಕ್ಷವನ್ನು ಒಡೆಯುವ ಕೆಲಸಕ್ಕೆ ನಾವು ಕೈಹಾಕಿಲ್ಲ. ಇದುವರೆಗೂ ಆ ಪಕ್ಷದ ಯಾರೊಬ್ಬರೂ ನನ್ನನ್ನು ಸಂಪರ್ಕಿಸಿಲ್ಲ’ ಎಂದು ಗೋವಾ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸದಾನಂದ ಶೇಟ್ ತನವಾಡೆ ತಿಳಿಸಿದ್ದಾರೆ.

ಅಧಿವೇಶನಕ್ಕೆ ಹಾಜರಾದ ಶಾಸಕರು: ಪಕ್ಷದ ಸಭೆಗಳಿಂದ ದೂರ ಉಳಿದಿದ್ದ ಕಾಂಗ್ರೆಸ್ ಶಾಸಕರಾದ ಮೈಕಲ್ ಲೋಬೊ, ದಿಗಂಬರ ಕಾಮತ್, ಡೆಲಿಲಾ ಲೋಬೊ, ಕೇದಾರ್ ನಾಯ್ಕ ಹಾಗೂ ರಾಜೇಶ್ ಫಾಲ್‌ದೇಸಾಯಿ ಸೋಮವಾರ ಅಧಿವೇಶನಕ್ಕೆ ಹಾಜರಾದರು. ಸುದ್ದಿಗಾರರ ಜೊತೆ ಮಾತನಾಡಿದ ಲೋಬೊ, ‘ನಾನು ಕಾಂಗ್ರೆಸ್ ಪಕ್ಷದಲ್ಲೇ ಇದ್ದೇನೆ. ಅಧಿವೇಶನದಲ್ಲೂ ಭಾಗವಹಿಸುತ್ತಿದ್ದೇನೆ’ ಎಂದು ತಿಳಿಸಿದ್ದಾರೆ.

ನಮ್ಮೊಂದಿಗೆ 7 ಶಾಸಕರು ಇದ್ದಾರೆ: ‘ನಮ್ಮೊಂದಿಗೆ ಸದ್ಯ ಏಳು ಮಂದಿ ಶಾಸಕರು ಇದ್ದಾರೆ’ ಎಂದು ಅಮಿತ್ ಪಾಟ್ಕರ್ ಹೇಳಿದ್ದಾರೆ.

ರಹಸ್ಯ ಸ್ಥಳಕ್ಕೆ ಶಾಸಕರು: ಪಕ್ಷದ ಮತ್ತಷ್ಟು ಶಾಸಕರು ಲೋಬೊ ಹಾಗೂ ದಿಗಂಬರ ಕಾಮತ್ ಅವರ ಬಣ ಸೇರುವುದನ್ನು ತಪ್ಪಿಸುವ ಸಲುವಾಗಿ ಕಾಂಗ್ರೆಸ್ ನಾಯಕರು ತಮ್ಮ ಸಂಪರ್ಕದಲ್ಲಿದ್ದ ಐವರು ಶಾಸಕರನ್ನು ಭಾನುವಾರ ರಹಸ್ಯ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು.



ಮಲ್ಯಗೆ 4 ತಿಂಗಳು ಸಜೆ, ₹ 2,000 ದಂಡ

ನವದೆಹಲಿ (ಪಿಟಿಐ): ನ್ಯಾಯಾಂಗ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೋಮವಾರ ಉದ್ಯಮಿ ವಿಜಯ್ ಮಲ್ಯಗೆ ನಾಲ್ಕು ತಿಂಗಳು ಸಜೆ ಹಾಗೂ ₹ 2 ಸಾವಿರ ದಂಡವನ್ನು ವಿಧಿಸಿ ಆದೇಶಿಸಿತು.

‘ಕಾನೂನಿನ ಸಾರ್ವಭೌಮತ್ವ ರಕ್ಷಿಸಲು ಶಿಕ್ಷೆ ವಿಧಿಸುವುದು ಅಗತ್ಯ. ತಮ್ಮ ವರ್ತನೆಗೆ ಆರೋಪಿ ಕ್ಷಮೆ ಕೋರಿಲ್ಲ ಅಥವಾ ವಿಷಾದಿಸಿಲ್ಲ ಎಂಬುದನ್ನು ಪರಿಗಣಿಸಿ ಈ ಶಿಕ್ಷೆ ವಿಧಿಸಲಾಗುತ್ತಿದೆ’ ಎಂದು ನ್ಯಾಯಮೂರ್ತಿ ಯು.ಯು.ಲಲಿತ್ ನೇತೃತ್ವದ ಪೀಠ ಅಭಿಪ್ರಾಯಪಟ್ಟಿತು. ತಮ್ಮ ಮಾಲೀಕತ್ವದ ಕಿಂಗ್‌ಫಿಶರ್ ಏರ್‌ಲೈನ್ಸ್‌ಗಾಗಿ ಬ್ಯಾಂಕ್‌ನಿಂದ ಪಡೆದಿದ್ದ ₹ 9,000ಕ್ಕೂ ಅಧಿಕ ಕೋಟಿ ಸಾಲದ ಸುಸ್ತಿದಾರರಾದ ಪ್ರಕರಣದಲ್ಲಿ ಮಲ್ಯ ಆರೋಪಿಯಾಗಿದ್ದಾರೆ.

ಕೋರ್ಟ್ ಆದೇಶ ಮೀರಿ ಮಕ್ಕಳ ಹೆಸರಿಗೆ ₹ 4 ಕೋಟಿ ವರ್ಗಾಯಿಸುವ ಮೂಲಕ ಆರೋಪಿ ನ್ಯಾಯಾಂಗ ನಿಂದನೆ ಮಾಡಿದ್ದಾರೆ ಎಂದು ಮೇ 2017ರಲ್ಲಿ ನೀಡಿದ್ದ ತೀರ್ಪು ಪರಿಶೀಲನೆ ಕೋರಿ ಮಲ್ಯ ಸಲ್ಲಿಸಿದ್ದ ಅರ್ಜಿಯನ್ನು ಕೋರ್ಟ್ 2020ರಲ್ಲಿಯೇ ವಜಾ ಮಾಡಿತ್ತು.

4 ತಿಂಗಳ ಸಜೆ ವಿಧಿಸಿ ಸೋಮವಾರ ತೀರ್ಪು ನೀಡಿದ ಸುಪ್ರೀಂ ಕೋರ್ಟ್‌ನ ಪೀಠವು, ‘ಆರೋಪಿ ಮತ್ತು ಹಣ ಸ್ವೀಕರಿಸಿದ ಫಲಾನುಭವಿಗಳು ಉಲ್ಲೇಖಿತ ಮೊತ್ತವನ್ನು ಶೇ 8ರ ಬಡ್ಡಿಯೊಂದಿಗೆ ನಾಲ್ಕು ವಾರಗಳಲ್ಲಿ ವಸೂಲಾತಿ ಅಧಿಕಾರಿ ಬಳಿ ಠೇವಣಿ ಇಡಬೇಕು’ ಎಂದು ಆದೇಶಿಸಿತು.

ಜನಸಂಖ್ಯೆ: 2023ರಲ್ಲಿ ಚೀನಾ ಹಿಂದಿಕ್ಕಲಿರುವ ಭಾರತ

ವಿಶ್ವಸಂಸ್ಥೆ (ಪಿಟಿಐ): ‘ಭಾರತವು ಮುಂದಿನ ವರ್ಷ (2023) ವಿಶ್ವದ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಲಿದೆ. ಈ ಹಾದಿಯಲ್ಲಿ ಚೀನಾವನ್ನು ಹಿಂದಿಕ್ಕಲಿದೆ’ ಎಂದು ವಿಶ್ವಸಂಸ್ಥೆಯ ವರದಿ ತಿಳಿಸಿದೆ.

‘2022ರಲ್ಲಿ ಚೀನಾವು 142 ಕೋಟಿ ಜನಸಂಖ್ಯೆ ಹೊಂದಿದ್ದರೆ, ಭಾರತದ ಜನಸಂಖ್ಯೆ 141 ಕೋಟಿ ಇರಲಿದೆ. 2050ರ ವೇಳೆಗೆ ದೇಶದ ಜನಸಂಖ್ಯೆಯು 166 ಕೋಟಿಗೆ ಹೆಚ್ಚಲಿದೆ’ ಎಂದು ವಿಶ್ವಸಂಸ್ಥೆಯ ಅರ್ಥಶಾಸ್ತ್ರ ಮತ್ತು ಸಾಮಾಜಿಕ ವ್ಯವಹಾರಗಳ ವಿಭಾಗ ಹಾಗೂ ಜನಸಂಖ್ಯಾ ಘಟಕ ಹೊರತಂದಿರುವ ‘ದಿ ವರ್ಲ್ಡ್ ಪಾಪ್ಯುಲೇಷನ್ ಪ್ರಾಸ್ಪೆಕ್ಟ್ಸ್–2022’ ವರದಿಯಲ್ಲಿ ಹೇಳಲಾಗಿದೆ. ‘2022ರ ನವೆಂಬರ್ 15ರ ವೇಳೆಗೆ ವಿಶ್ವದ ಜನಸಂಖ್ಯೆಯು 800 ಕೋಟಿಗೆ ಏರಿಕೆಯಾಗಲಿದೆ. 2030ರ ವೇಳೆಗೆ ಇದು ಸುಮಾರು 850 ಕೋಟಿಗೆ ಹೆಚ್ಚಳವಾಗಬಹುದೆಂದು ಅಂದಾಜಿಸಲಾಗಿದ್ದು, 2050ಕ್ಕೆ ಈ ಪ್ರಮಾಣವು 970 ಕೋಟಿಗೆ ಏರಲಿದೆ. 2080ರ ವೇಳೆಗೆ ಜಗತ್ತಿನ ಜನಸಂಖ್ಯೆಯು ಗರಿಷ್ಠಮಟ್ಟ ಅಂದಾಜು 1,040 ಕೋಟಿ ತಲುಪುವ ನಿರೀಕ್ಷೆ ಇದ್ದು, 2100ರವರೆಗೂ ಇದರಲ್ಲಿ ಸ್ಥಿರತೆ ಕಾಣಬಹುದು’ ಎಂದು ವಿವರಿಸಲಾಗಿದೆ.

‘2050ರ ವೇಳೆಗೆ ಹೆಚ್ಚಳವಾಗಬಹುದಾದ ವಿಶ್ವದ ಜನಸಂಖ್ಯೆಯಲ್ಲಿ ಕಾಂಗೊ ಗಣರಾಜ್ಯ, ಈಜಿಪ್ಟ್, ಇಥಿಯೋಪಿಯಾ, ಭಾರತ, ನೈಜೀರಿಯಾ, ಪಾಕಿಸ್ತಾನ, ಫಿಲಿಪ್ಪೀನ್ಸ್ ಹಾಗೂ ತಾಂಜೇನಿಯಾದ ಕೊಡುಗೆಯೇ ಅರ್ಧಕ್ಕಿಂತ ಹೆಚ್ಚು ಇರಬಹುದು ಎಂದು ಊಹಿಸಲಾಗಿದೆ’ ಎಂದು ವರದಿ ವಿವರಿಸಿದೆ.

2010ರಿಂದ 2021ರ ಅವಧಿಯಲ್ಲಿ ಒಟ್ಟು 10 ರಾಷ್ಟ್ರಗಳಲ್ಲಿ 10 ಲಕ್ಷಕ್ಕೂ ಅಧಿಕ ವಲಸಿಗರ ಸಂಖ್ಯೆ ದಾಖಲಾಗಿರಬಹುದೆಂದು ಅಂದಾಜಿಸಲಾಗಿದೆ.

ಉಕ್ರೇನ್ ನಾಗರಿಕರಿಗೂ ರಷ್ಯಾ ಪೌರತ್ವ: ಪುಟಿನ್

ಹಾರ್ಕಿವ್ (ಎಪಿ): ಉಕ್ರೇನಿನ ಎಲ್ಲ ಪ್ರಜೆಗಳಿಗೆ ರಷ್ಯಾದ ಪೌರತ್ವ ನೀಡುವ ತ್ವರಿತಗತಿಯ ಪ್ರಕ್ರಿಯೆಯ ಆದೇಶವನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸೋಮವಾರ ಹೊರಡಿಸಿದ್ದಾರೆ.

ಉಕ್ರೇನ್ ಯುದ್ಧದಲ್ಲಿ ರಷ್ಯಾದ ಪ್ರಭಾವ ವಿಸ್ತರಿಸುವ ಸಲುವಾಗಿ ಪುಟಿನ್ ಈ ನಿರ್ಧಾರಕ್ಕೆ ಬಂದಿದ್ದಾರೆ. ಇಲ್ಲಿಯವರೆಗೆ ಡೊನೆಟ್ಸ್ಕ್, ಲುಹಾನ್ಸ್ಕ್, ದಕ್ಷಿಣ ಝುಪೋರಿಝಿಯಾ, ಕೆರ್ಸನ್ ಪ್ರದೇಶ ಹಾಗೂ ರಷ್ಯಾ ಪ್ರಭಾವಿತ ಪ್ರದೇಶಗಳ ನಾಗರಿಕರಿಗೆ ಮಾತ್ರ ರಷ್ಯಾದ ಪೌರತ್ವ ನೀಡಲಾಗುತ್ತಿತ್ತು. ಈಗ ಪೌರತ್ವ ಪ್ರಕ್ರಿಯೆ ಸರಳಗೊಳಿಸಿ, ಉಕ್ರೇನಿನ ಎಲ್ಲ ಪ್ರಜೆಗಳಿಗೆ ರಷ್ಯಾದ ಪೌರತ್ವ ನೀಡುವುದಾಗಿ ಪುಟಿನ್ ಘೋಷಿಸಿದ್ದಾರೆ. ಇದಕ್ಕೆ ಉಕ್ರೇನ್ ಪ್ರತಿಕ್ರಿಯಿಸಿಲ್ಲ.

ಪ್ರಧಾನಿ ಹುದ್ದೆ ಸ್ಪರ್ಧೆಯಲ್ಲಿ ಲಿಜ್ ಟ್ರಸ್

ಲಂಡನ್ (ಪಿಟಿಐ): ಬೋರಿಸ್ ಜಾನ್ಸನ್ ರಾಜೀನಾಮೆಯಿಂದ ತೆರವಾಗಲಿರುವ ಬ್ರಿಟನ್ ಪ್ರಧಾನಿ ಹುದ್ದೆ ಮತ್ತು ಕನ್ಸರ್ವೇಟಿವ್ ಪಕ್ಷದ ನಾಯಕತ್ವದ ಚುಕ್ಕಾಣಿಯ ಸ್ಪರ್ಧೆಯ ಆಕಾಂಕ್ಷಿಗಳ ಪಟ್ಟಿಗೆ ಸೋಮವಾರ ಮತ್ತೆರಡು ಹೆಸರು ಸೇರಿವೆ. ವಿದೇಶಾಂಗ ಸಚಿವೆ ಲಿಜ್ ಟ್ರಸ್ ಅವರೂ ಆಕಾಂಕ್ಷಿಯಾಗಿದ್ದು, ಅಭ್ಯರ್ಥಿಗಳ ಸಂಖ್ಯೆ 11ಕ್ಕೆ ತಲುಪಿದೆ.

ಜಾಮೀನು: ‘ಹೊಸ ಕಾಯ್ದೆ ರೂಪಿಸಿ’

ನವದೆಹಲಿ (ಪಿಟಿಐ): ‘ಕ್ರಿಮಿನಲ್ ಪ್ರಕರಣಗಳ ಆರೋಪಿಗಳ ಬಿಡುಗಡೆ ಪ್ರಕ್ರಿಯೆಯನ್ನು ಸರಳಗೊಳಿಸಲು, ಅವರಿಗೆ ಜಾಮೀನು ನೀಡುವ ಸಂಬಂಧ ಹೊಸದಾಗಿ ಕಾಯ್ದೆ ರೂಪಿಸಬೇಕು’ ಎಂದು ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿತು.

ಈ ಸಂಬಂಧ ಕೆಲ ಸೂಚನೆಗಳನ್ನೂ ನೀಡಿದ ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಎಂ.ಎಂ. ಸುಂದರೇಶ್ ಅವರಿಂದ ಪೀಠವು, ‘ತನಿಖಾ ಸಂಸ್ಥೆಗಳು, ಅದರ ಅಧಿಕಾರಿಗಳು ಅಪರಾಧ ದಂಡ ಸಂಹಿತೆಯ ಸೆಕ್ಷನ್ 41–ಎಗೆ ಬದ್ಧರಾಗಿರಬೇಕು’ ಎಂದು ತಿಳಿಸಿತು.

ಜಾಮೀನು ಪಡೆಯಲು ಇರುವ ನಿಬಂಧನೆಗಳನ್ನು ಈಡೇರಿಸಲು ಶಕ್ತರಲ್ಲದ ವಿಚಾರಣಾಧೀನ ಕೈದಿಗಳನ್ನು ಗುರುತಿಸಿ, ಅವರ ಬಿಡುಗಡೆಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಪೀಠ ಇದೇ ಸಂದರ್ಭದಲ್ಲಿ ಎಲ್ಲ ಹೈಕೋರ್ಟ್‌ಗಳಿಗೆ ನಿರ್ದೇಶಿಸಿತು.

ಈ ವಿಷಯಕ್ಕೆ ಸಂಬಂಧಿಸಿದಂತೆ ವಸ್ತುಸ್ಥಿತಿ ವರದಿಯನ್ನು ನಾಲ್ಕು ತಿಂಗಳಲ್ಲಿ ಸಲ್ಲಿಸಬೇಕು ಎಂದು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೂ ಪೀಠವು ನಿರ್ದೇಶನ ನೀಡಿತು. ಪ್ರಕರಣವೊಂದರ ಸಂಬಂಧ ಸಿಬಿಐ ವ್ಯಕ್ತಿಯೊಬ್ಬರನ್ನು ಬಂಧಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ನೀಡುವಾಗ ಸುಪ್ರೀಂ ಕೋರ್ಟ್ ಈ ನಿರ್ದೇಶನಗಳನ್ನು ನೀಡಿತು.

ಶ್ರೀಲಂಕಾ: ಸರ್ವಪಕ್ಷಗಳ ಸಭೆಯಲ್ಲಿ ನಿರ್ಧಾರ

20ರಂದು ಹೊಸ ಅಧ್ಯಕ್ಷರ ಆಯ್ಕೆ

ಕೊಲಂಬೊ (ಪಿಟಿಐ): ಶ್ರೀಲಂಕಾ ಸಂಸತ್ತು ಮುಂದಿನ ವಾರ ಇದೇ 20ರಂದು ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲಿದೆ ಎಂದು ಸ್ಪೀಕರ್ ಮಹಿಂದ ಯಾಪಾ ಅಬೆವರ್ಧನ ಸೋಮವಾರ ಪ್ರಕಟಿಸಿದ್ದಾರೆ.

ಸೋಮವಾರ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ತಮ್ಮ ಸ್ಥಾನಕ್ಕೆ ಈ ತಿಂಗಳ 13ರಂದು ರಾಜೀನಾಮೆ ನೀಡುವುದಾಗಿ ಅಧ್ಯಕ್ಷ ಗೊಟಬಯ ರಾಜಪಕ್ಸ ಸೋಮವಾರ ಅಧಿಕೃತವಾಗಿ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರಿಗೆ ತಿಳಿಸಿದ್ದಾರೆ. ವಿಕ್ರಮಸಿಂಘೆ ಅವರು ಕೂಡಾ ರಾಜೀನಾಮೆ ನೀಡಲು ಸಿದ್ಧವಿರುವುದಾಗಿ ಹಾಗೂ ಸರ್ವಪಕ್ಷ ಸರ್ಕಾರ ಅಧಿಕಾರಕ್ಕೆ ಬರಲು ಅನುವು ಮಾಡಿಕೊಡುವುದಾಗಿ ಹೇಳಿದ್ದಾರೆ.

ರಾಜಪಕ್ಸ ರಾಜೀನಾಮೆ ನೀಡಿದ ಬಳಿಕ ಈ ತಿಂಗಳ 15ರಂದು ಸಂಸತ್ ಅಧಿವೇಶನ ನಡೆಯಲಿದೆ. ಮತ್ತೆ 19ರಂದು ಅಧ್ಯಕ್ಷ ಹುದ್ದೆಗೆ ನಾಮಪತ್ರಗಳನ್ನು ಸ್ವೀಕರಿಸಲಾಗುವುದು. ಇದೇ 20ರಂದು ಹೊಸ ಅಧ್ಯಕ್ಷರ ಆಯ್ಕೆಗೆ ಮತದಾನ ನಡೆಯಲಿದೆ ಎಂದು ಸ್ಪೀಕರ್ ವಿವರಿಸಿದರು.

ಹೊಸ ಸರ್ಕಾರ ರಚನೆಯಾಗುತ್ತಿದ್ದಂತೆ ತಮ್ಮ ಜವಾಬ್ದಾರಿಯನ್ನು ಹಸ್ತಾಂತರಿಸಲು ಸಂಪುಟ ಸಚಿವರ ಜತೆ ನಡೆಸಿದ ಸಭೆಯಲ್ಲಿ ಸಂಪುಟದ ಎಲ್ಲಾ ಸದಸ್ಯರು ಒಪ್ಪಿಕೊಂಡಿದ್ದಾರೆ ಎಂದು ಪ್ರಧಾನಿ ಕಾರ್ಯಾಲಯ ಹೇಳಿದೆ.

ವಾಯುನೆಲೆಗೆ ತೆರಳಿದ ಗೊಟಬಯ?

ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ವಾಯುನೆಲೆಗೆ ಸೋಮವಾರ ತೆರಳಿದ್ದಾರೆ ಎಂದು ವದಂತಿ ಹಬ್ಬಿದೆ.

ಗೊಟಬಯ ಅವರು ವಿದೇಶಕ್ಕೆ ಗಡೀಪಾರು ಹೊಂದಬಹುದು ಎಂದ ಶಂಕೆಗಳಿಗೆ ಇದು ಮತ್ತಷ್ಟು ಪುಷ್ಟಿ ನೀಡಿದೆ. ಆದರೆ ಅವರು ದೇಶ ತೊರೆದು ಹೋಗಿಲ್ಲ ಎಂದು ಸ್ಪೀಕರ್ ಕಚೇರಿ ಸ್ಪಷ್ಟಪಡಿಸಿದೆ.

ಸೈನ್ಯ ರವಾನೆ: ವರದಿ ಅಲ್ಲಗಳೆದ ಭಾರತ ಹೈಕಮಿಷನ್

ಶ್ರೀಲಂಕಾದಲ್ಲಿ ಪ್ರತಿಭಟನಾಕಾರರು ಅಧ್ಯಕ್ಷರು ಮತ್ತು ಪ್ರಧಾನಿಗಳ ಅಧಿಕೃತ ನಿವಾಸಕ್ಕೆ ನುಗ್ಗಿ ದಾಂದಲೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಶ್ರೀಲಂಕಾಕ್ಕೆ ಭಾರತ ಸೇನಾಪಡೆಯನ್ನು ಕಳುಹಿಸಲಿದೆ ಎಂಬ ಮಾಧ್ಯಮ ವರದಿಗಳನ್ನು ಶ್ರೀಲಂಕಾದಲ್ಲಿರುವ ಭಾರತೀಯ ಹೈಕಮಿಷನ್ ಅಲ್ಲಗಳೆದಿದೆ.

‘ಸಭಾಪತಿ ಮೂಲಕ ಮಾತ್ರ ರಾಜಪಕ್ಸ ಸಂವಹನ’: ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಸಂಸತ್ ಸಭಾಪತಿ ಮೂಲಕ ಮಾತ್ರವೇ ಸಂವಹನ ನಡೆಸಲಿದ್ದಾರೆ ಎಂದು ಅಧ್ಯಕ್ಷೀಯ ಸಚಿವಾಲಯ ಸೋಮವಾರ ತಿಳಿಸಿದೆ.

ಈ ಮಧ್ಯೆ ಶ್ರೀಲಂಕಾವನ್ನು ಸ್ಥಿರ ಸ್ಥಿತಿಗೆ ತರಲು ಮುಂದಿನ ಸರ್ಕಾರವನ್ನು ಮುನ್ನಡೆಸಲು ಸಿದ್ಧವಿರುವುದಾಗಿ ಅಲ್ಲಿನ ಪ್ರಮುಖ ವಿರೋಧಪಕ್ಷ ಸಮಗಿ ಜನ ಬಲವೇಗಯಾ (ಎಸ್‌ಜೆಬಿ) ಸೋಮವಾರ ಹೇಳಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಬಿಡುಗಡೆ ಮಾಡಿರುವ ಎಸ್‌ಜೆಬಿಯ ನಾಯಕ ಸಜಿತ್ ಪ್ರೇಮದಾಸ ಅವರು, ‘ತಮ್ಮ ಪಕ್ಷವು ಅಧ್ಯಕ್ಷ ಮತ್ತು ಪ್ರಧಾನಿ ಮಟ್ಟದಲ್ಲಿ ದೇಶವನ್ನು ಮುನ್ನಡೆಸಲು ಹಾಗೂ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಲು ಸಿದ್ಧವಾಗಿದೆ’ ಎಂದು ಹೇಳಿದ್ದಾರೆ ಎಂದು ‘ಎಕಾನಮಿ ನೆಕ್ಸ್ಟ್’ ನ್ಯೂಸ್ ಪೋರ್ಟಲ್ ವರದಿ ಮಾಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ_ಪರಿಹಾರ. 9535088827"

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು-ಶ್ರೀಕ್ಷೇತ್ರಧರ್ಮಸ್ಥಳ: 7022443071

ಪ್ರೇಮ-ವಿಚಾರ, ವಶೀಕರಣ, ಮಾಟ-ಮಂತ್ರ, ಇನ್ನು ಮುಂತಾದ ಸಮಸ್ಯೆಗಳಿಗೆ ಚಿಂತಿಸುವ ಅವಶ್ಯಕತೆ ಇಲ್ಲ,ನಿಮ್ಮ ಸಮಸ್ಯೆ ಏನೇ ಇರಲಿ ಪರಿಹಾರ ಶತಸಿದ್ಧ: 9513707409

ಉದ್ಯೋಗಾವಕಾಶ
General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ / ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-. 9513330916, 9513330914.

ಕೆಲಸಕ್ಕೆ ಬೇಕಾಗಿದ್ದಾರೆ:ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರು ಹಾಗೂ ಗೃಹಿಣಿಯರು,30 ವರ್ಷ ಮೇಲ್ಪಟ್ಟವರು, SSLC ಹಾಗೂ DEGREE ಪಾಸಾದವರು ಬೇಕಾಗಿದ್ದಾರೆ. ಸಂಬಳ, E.S.I., P.F.ಸೌಲಭ್ಯವಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿರಿ:9663987757.

HONDA Spare Parts Distributor Hiring For Spares Incharge, Billing Executive, Office Staff, Driver. Contact autohousehubballi@gmail.com -9448283767-08362210855

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

25 ವರ್ಷಗಳಲ್ಲಿ ಮೊದಲ ಬಾರಿ ಹೊರಕ್ಕೆ

ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ ಫ್ರೆಂಚ್ ಓಪನ್ ಚಾಂಪಿಯನ್ ಇಗಾ ಸ್ವಟೆಕ್ ಅವರ ಅಗ್ರಸ್ಥಾನ ಅಬಾಧಿತವಾಗಿದೆ.

ರ‍್ಯಾಂಕಿಂಗ್: ಫೆಡರರ್ ಔಟ್

ವಿಂಬಲ್ಡನ್ (ಎಪಿ): ಟೆನಿಸ್‌ನ ದಿಗ್ಗಜ ಆಟಗಾರ ರೋಜರ್ ಫೆಡರರ್ ಅವರು 25 ವರ್ಷಗಳಲ್ಲಿ ಇದೇ ಮೊದಲ ಬಾರಿ ಎಟಿಪಿ ರ‍್ಯಾಂಕಿಂಗ್ ಪಟ್ಟಿಯಿಂದ ಹೊರಬಿದ್ದಿದ್ದಾರೆ.

ಸ್ವಿಟ್ಜರ್ಲೆಂಡ್‌ನ ಫೆಡರರ್ 1997ರಲ್ಲಿ ತಮ್ಮ 16ನೇ ವರ್ಷದಲ್ಲಿ ಚೊಚ್ಚಲ ಸಲ ಎಟಿಪಿ ರ‍್ಯಾಂಕಿಂಗ್ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದರು. ಅವರು ಜಂಟಿ 803ನೇ ಸ್ಥಾನದಲ್ಲಿದ್ದರು. ಅಂದಿನಿಂದ ಇದುವರೆಗೆ ಎಟಿಪಿ ಪ್ರತಿ ವಾರ ಬಿಡುಗಡೆ ಮಾಡುವ ರ‍್ಯಾಂಕಿಂಗ್‌ನಲ್ಲೂ ಸ್ಥಾನ ಪಡೆದು ಕಾಣಿಸಿಕೊಳ್ಳುತ್ತಿದ್ದರು. ತಮ್ಮ ಫಾರ್ಮ್‌ನ ಉತ್ತುಂಗದಲ್ಲಿದ್ದಾಗ ಹಲವು ವಾರ ಅಗ್ರ ಸ್ಥಾನ ಅಲಂಕರಿಸಿದ್ದರು. ಕಾಲು ಶಸ್ತ್ರಚಿಕಿತ್ಸೆ ಬಳಿಕ ಅವರ ಹೆಸರು ಇಳಿದ ಪಟ್ಟಿ ಹೊರಬಿದ್ದಿದೆ.



ರೋಜರ್ ಫೆಡರರ್

ಆಟಗಾರರು ಹಿಂದಿನ 52 ವಾರಗಳಲ್ಲಿ ನೀಡಿದ ಪ್ರದರ್ಶನ ಆಧರಿಸಿ ರ‍್ಯಾಂಕಿಂಗ್ ನಿರ್ಧರಿಸಲಾಗುತ್ತದೆ. ಸ್ವಿಸ್ ಆಟಗಾರ ಕಳೆದ ವರ್ಷ ವಿಂಬಲ್ಡನ್ ಬಳಿಕ ಯಾವುದೇ ಟೂರ್ನಿಯಲ್ಲಿ ಪಾಲ್ಗೊಂಡಿಲ್ಲ. ಅವರ ರ‍್ಯಾಂಕಿಂಗ್ ಪಾಯಿಂಟ್ ಶೂನ್ಯಕ್ಕೆ ಇಳಿಕೆಯಾಗಿರುವುದರಿಂದ ಪಟ್ಟಿಯಲ್ಲಿ ಕಾಣಿಸಿಕೊಂಡಿಲ್ಲ.

ಏಳನೇ ಸ್ಥಾನಕ್ಕೆ ಕುಸಿದ ನೊವಾಕ್: ಸರ್ಬಿಯದ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಟೂರ್ನಿಯಲ್ಲಿ ಚಾಂಪಿಯನ್ ಆದರೂ, ರ‍್ಯಾಂಕಿಂಗ್‌ನಲ್ಲಿ ನಾಲ್ಕು ಕ್ರಮಾಂಕ ಕುಸಿತ ಕಂಡಿದ್ದು ಏಳನೇ ಸ್ಥಾನ ಪಡೆದಿದ್ದಾರೆ. ವಿಂಬಲ್ಡನ್ ಟೂರ್ನಿಯಲ್ಲಿ ರ‍್ಯಾಂಕಿಂಗ್ ಪಾಯಿಂಟ್ ನೀಡದಿರಲು ಎಟಿಪಿ ನಿರ್ಧರಿಸಿದ್ದು ಇದಕ್ಕೆ ಕಾರಣ.

ರಷ್ಯಾ ಮತ್ತು ಬೆಲಾರಸ್‌ನ ಸ್ಪರ್ಧಿಗಳು ವಿಂಬಲ್ಡನ್‌ನಲ್ಲಿ ಪಾಲ್ಗೊಳ್ಳುವುದಕ್ಕೆ ಸಂಘಟಕರು ನಿರ್ಬಂಧ ವಿಧಿಸಿದ್ದರು. ಅದಕ್ಕೆ ಪ್ರತಿಕ್ರಿಯೆಯಾಗಿ ಎಟಿಪಿಯು ರ‍್ಯಾಂಕಿಂಗ್ ಪಾಯಿಂಟ್ ನೀಡದಿರಲು ತೀರ್ಮಾನಿಸಿತ್ತು.

ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್, ಸ್ಪೇನ್‌ನ ರಫೆಲ್ ನಡಾಲ್, ಗ್ರೀಸ್‌ನ ಸ್ಟೆಫಾನೊಸ್ ಸಿಸಿಪಸ್, ನಾರ್ವೆಯ ಕ್ಯಾಸ್ಪರ್ ರೂಡ್ ಬಳಿಕದ ಸ್ಥಾನಗಳಲ್ಲಿದ್ದಾರೆ.

ಚಿನ್ನಕ್ಕೆ ಗುರಿಯಿಟ್ಟ ಅರ್ಜುನ್

ವಿಶ್ವಕಪ್ ಶೂಟಿಂಗ್: 10 ಮೀ. ಏರ್ ರೈಫಲ್‌ನಲ್ಲಿ ಭಾರತದ ಸ್ಪರ್ಧಿಯ ಸಾಧನೆ

ಚಾಂಗ್ವನ್, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ಅರ್ಜುನ್ ಬಬೂಟಾ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಚಿನ್ನಕ್ಕೆ ಗುರಿಯಿಟ್ಟರು.

ಸೋಮವಾರ ನಡೆದ ಪುರುಷರ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಅವರು ಟೋಕಿಯೊ ಒಲಿಂಪಿಕ್ ಬೆಳ್ಳಿ ಪದಕ ವಿಜೇತ ಸ್ಪರ್ಧಿ ಅಮೆರಿಕದ ಲೂಕಸ್ ಕೊಜೆನಿಸ್ಕಿ ವಿರುದ್ಧ 17–9 ಪಾಯಿಂಟ್ಸ್‌ನಿಂದ ಗೆದ್ದರು.

ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ದೊರೆತ ಮೊದಲ ಪದಕ ಇದು. ಪಂಜಾಬ್‌ನ 23 ವರ್ಷದ ಅರ್ಜುನ್ ಅವರು ಸೀನಿಯರ್

ಅರ್ಜುನ್ ಬಬೂತಾ

ವಿಭಾಗದಲ್ಲಿ ಗೆದ್ದ ಮೊದಲ ಚಿನ್ನ ಇದಾಗಿದೆ. 2016 ರಲ್ಲಿ ನಡೆದಿದ್ದ ಜೂನಿಯರ್ ವಿಶ್ವಕಪ್‌ನಲ್ಲಿ ಅವರು ಚಿನ್ನ ಜಯಿಸಿದ್ದರು.

ಮುಖ್ಯಾಂಶಗಳು

- ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೊದಲ ಪದಕ
- ಲೂಕಸ್ ಕೊಜೆನಿಸ್ಕಿ ವಿರುದ್ಧ 17–9 ರಲ್ಲಿ ಜಯ

ರ‍್ಯಾಂಕಿಂಗ್ ರೌಂಡ್‌ನಲ್ಲಿ 261.1 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದು ಅವರು ಚಿನ್ನದ ಪದಕದ ಪೈಪೋಟಿಗೆ ಅರ್ಹತೆ ಗಿಟ್ಟಿಸಿಕೊಂಡಿದ್ದರು. ಇಸ್ರೇಲ್‌ನ ಸೆರ್ಗಿ ರಿಕ್ಟೆರ್ ಕಂಚು ಜಯಿಸಿದರು.

ಕಣದಲ್ಲಿದ್ದ ಭಾರತದ ಇನ್ನೊಬ್ಬ ಶೂಟರ್ ಪಾರ್ಥ ಮಖೀಜಾ ನಾಲ್ಕನೇ ಸ್ಥಾನ ಪಡೆದುಕೊಂಡರು.

ಫೈನಲ್‌ನಲ್ಲಿ ನಿಖರ ಗುರಿ ಹಿಡಿದ ಅರ್ಜುನ್ ಮೊದಲ ಏಳು ಅವಕಾಶಗಳ ಬಳಿಕ 10-4 ರಲ್ಲಿ ಮುನ್ನಡೆಯಲ್ಲಿದ್ದರು. ಆ ಬಳಿಕವೂ ಉತ್ತಮ ಪ್ರದರ್ಶನ ಮುಂದುವರಿಸಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದರು.

ಅನುಭವಿ ಥಾಮಸ್ ಫಾರ್ನಿಕ್ ಅವರು ಭಾರತ ರಾಷ್ಟ್ರೀಯ ಶೂಟಿಂಗ್ ತಂಡದ ಕೋಚ್ ಆಗಿ ನೇಮಕಗೊಂಡ ಬಳಿಕ ದೊರೆತ ಮೊದಲ ಅಂತರರಾಷ್ಟ್ರೀಯ ಪದಕ ಇದು. ವಿಶ್ವಕಪ್ ಆರಂಭಕ್ಕೆ ಕೆಲವೇ ದಿನಗಳಿರುವಾಗ ಅವರ ನೇಮಕ ನಡೆದಿತ್ತು.

ಕ್ರಿಕೆಟ್: ಶಹೀನ್ ಶಾ ಸ್ಥಾನಕ್ಕೆ ಉಮೇಶ್

ಲಂಡನ್ (ಪಿಟಿಐ): ಭಾರತದ ವೇಗದ ಬೌಲರ್ ಉಮೇಶ್ ಯಾದವ್ ಅವರು ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಮಿಡ್ಲ್‌ಸೆಕ್ಸ್ ಪರ ಕಣಕ್ಕಿಳಿಯಲಿದ್ದಾರೆ. ಪಾಕಿಸ್ತಾನ ವೇಗಿ ಶಹೀನ್ ಶಾ ಅಫ್ರಿದಿ ಸ್ಥಾನದಲ್ಲಿ ಅವರು ಆಡಲಿದ್ದಾರೆ.

ಉಮೇಶ್ 52 ಟೆಸ್ಟ್, 77 ಏಕದಿನ ಮತ್ತು ಏಳು ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದು, ಒಟ್ಟಾರೆ 273 ವಿಕೆಟ್ ಗಳಿಸಿದ್ದಾರೆ. ಶ್ರೀಲಂಕಾ ಪ್ರವಾಸಕ್ಕಾಗಿ ಶಹೀನ್, ರಾಷ್ಟ್ರೀಯ ತಂಡದೊಂದಿಗೆ ತೆರಳಿರುವುದರಿಂದ ಉಮೇಶ್‌ಗೆ ಈ ಅವಕಾಶ ಲಭಿಸಿದೆ.

ಮಹಿಳಾ ಹಾಕಿ: ಸ್ಪೇನ್ ತಂಡದ ಎದುರು ಸೋಲು

ಭಾರತದ ವಿಶ್ವಕಪ್ ಕನಸು ಭಗ್ನ

ಟೆರಸ್ಸಾ, ಸ್ಪೇನ್ (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ವಿಶ್ವಕಪ್ ಪ್ರಶಸ್ತಿ ರೇಸ್‌ನಿಂದ ಹೊರಬಿದ್ದಿದೆ. ನಾಕೌಟ್ ಅರ್ಹತೆಗಾಗಿ ಸೋಮವಾರ ನಡೆದ ಹಣಾಹಣಿಯಲ್ಲಿ ಸವಿತಾ ಪೂನಿಯಾ ಬಳಗವು 0–1ರಿಂದ ಆತಿಥೇಯ ಸ್ಪೇನ್ ಎದುರು ಎಡವಿತು.

ಜಿದ್ದಾಜಿದ್ದಿನಿಂದ ಕೂಡಿದ್ದ ಪಂದ್ಯದಲ್ಲಿ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಉಭಯ ತಂಡಗಳಿಂದ ಯಾವುದೇ ಗೋಲು ದಾಖಲಾಗಲಿಲ್ಲ. ಆದರೆ ಪಂದ್ಯ ಮುಕ್ತಾಯಗೊಳ್ಳಲು ಕೇವಲ ಮೂರು ನಿಮಿಷಗಳಿರುವಾಗ ಭಾರತ ತಂಡ ಗೋಲು ಬಿಟ್ಟುಕೊಟ್ಟು ಮರುಗಿತು. ಸ್ಪೇನ್‌ನ ಮಾರ್ಟಾ ಸೆಗು ಗೋಲು ದಾಖಲಿಸಿ ತಮ್ಮ ತಂಡದ ಗೆಲುವಿನ ಸಂಭ್ರಮಕ್ಕೆ ಕಾರಣರಾದರು.

ಸ್ಪೇನ್ ಎದುರಿನ ಪಂದ್ಯದಲ್ಲಿ 4 ಅವಕಾಶಗಳು ದೊರೆತರೂ ಯಶಸ್ಸು ಸಾಧಿಸಲು ಸವಿತಾ ಪಡೆಗೆ ಸಾಧ್ಯವಾಗಲಿಲ್ಲ. ಮೊದಲ ಕ್ವಾರ್ಟರ್‌ನಲ್ಲಿ ಉಭಯ ತಂಡಗಳು ರಕ್ಷಣಾತ್ಮಕ

ಸವಿತಾ ಪೂನಿಯಾ– ಪಿಟಿಐ ಚಿತ್ರ

ಆಟಕ್ಕೆ ಮೊರೆಹೋದವು. ಸ್ವಯಂಕೃತ ತಪ್ಪುಗಳನ್ನೂ ಮಾಡಿದವು. ಹೀಗಾಗಿ ಗೋಲು ಗಳಿಕೆಯ ಅವಕಾಶಗಳು ಸೃಷ್ಟಿಯಾಗಲಿಲ್ಲ. ಎರಡನೇ ಕ್ವಾರ್ಟರ್‌ನಲ್ಲಿ ಸ್ಪೇನ್ ಆಕ್ರಮಣಕ್ಕೆ ಒತ್ತುಕೊಟ್ಟಿತು. ಆದರೆ ಭಾರತದ ನಾಯಕಿ, ಗೋಲ್‌ಕೀಪರ್ ಸವಿತಾ ಅವರ ಭದ್ರಕೋಟೆಯನ್ನು ಭೇದಿಸಲಾಗಲಿಲ್ಲ.

ಇದೇ ಅವಧಿಯಲ್ಲಿ ಸಲಿಮಾ ಟೆಟೆ ನೀಡಿದ ಪಾಸ್‌ನಲ್ಲಿ ವಂದನಾ ಕಟಾರಿಯಾ ಗೋಲು ಗಳಿಸುವ ಅವಕಾಶವೊಂದು ಕೈತಪ್ಪಿತು. ಚೆಂಡು ಕ್ರಾಸ್‌ಬಾರ್‌ಗೆ ತಾಗಿ ಹಿಂದೆ ಬಂದಿತು.

ಮೂರನೇ ಕ್ವಾರ್ಟರ್‌ನಲ್ಲಿ ಉಭಯ ತಂಡಗಳು ತೀವ್ರ ಪೈಪೋಟಿಗೆ ಮುಂದಾದರೂ ಖಾತೆ ತೆರೆಯಲಾಗಲಿಲ್ಲ. ನಾಲ್ಕನೇ ಕ್ವಾರ್ಟರ್‌ನಲ್ಲಿ ಎರಡೂ ತಂಡಕ್ಕೆ ಹಲವು ಅವಕಾಶಗಳು ಲಭಿಸಿದವು. 57ನೇ ನಿಮಿಷದಲ್ಲಿ ಮಾರ್ಟಾ ಯಶಸ್ಸು ಕಂಡರು.

ಒಂಬತ್ತರಿಂದ 16ನೇ ಸ್ಥಾನಕ್ಕಾಗಿ ಮಂಗಳವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡವು ಕೆನಡಾಗೆ ಮುಖಾಮುಖಿಯಾಗಲಿದೆ. ಮಧ್ಯರಾತ್ರಿ 1 ಗಂಟೆಗೆ ಈ ಪಂದ್ಯ ನಡೆಯಲಿದೆ.

ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ನ್ಯೂಜಿಲೆಂಡ್–ಜರ್ಮನಿ, ನೆದರ್ಲೆಂಡ್ಸ್–ಬೆಲ್ಜಿಯಂ, ಆಸ್ಟ್ರೇಲಿಯಾ–ಸ್ಪೇನ್, ಇಂಗ್ಲೆಂಡ್– ಅರ್ಜೆಂಟೀನಾ ಮುಖಾಮುಖಿಯಾಗಲಿವೆ.

ಶಾಸಕರ ಅನರ್ಹತೆ: ಶಿವಸೇನಾ ಅರ್ಜಿ

ಕ್ರಮ ಬೇಡ: ಸ್ಪೀಕರ್‌ಗೆ ‘ಸುಪ್ರೀಂ’ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಂಡಾಯ ನಾಯಕ ಏಕನಾಥ್ ಶಿಂಧೆ ಮತ್ತು ಇತರ ಶಾಸಕರ ಅನರ್ಹತೆ ಕೋರಿ ಶಿವಸೇನಾ ಸಲ್ಲಿಸಿರುವ ಅರ್ಜಿಯ ಸಂಬಂಧ ಲೋಪದೋಷ ಪರಿಶೀಲಿಸುವವರೆಗೂ ಮುಂದಿನ ಪ್ರಕ್ರಿಯೆ ನಡೆಸಬಾರದು ಎಂದು ಸುಪ್ರೀಂ ಕೋರ್ಟ್ ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್‌ಗೆ ಸೋಮವಾರ ಸೂಚಿಸಿದೆ.

ಶಿವಸೇನಾ ಬಂಡಾಯ ಶಾಸಕರ ವಿರುದ್ಧದ ಅನರ್ಹತೆ ಮತ್ತು ಮುಖ್ಯ ಸಚೇತಕ ಹಾಗೂ ಶಾಸಕಾಂಗ ಪಕ್ಷದ ನಾಯಕನ ನೇಮಕ ಪ್ರಶ್ನಿಸಿರುವ ಎರಡು ಅರ್ಜಿಗಳ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಪರ ಹಾಜರಾಗಿದ್ದ ಹಿರಿಯ ವಕೀಲ ಕಪಿಲ್ ಸಿಬಲ್, ಶಾಸಕರ ಅನರ್ಹತೆ ಕೋರಿರುವ ಅರ್ಜಿಯು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠದ ಮುಂದೆ ಮಂಗಳವಾರ ವಿಚಾರಣೆಗೆ ಪಟ್ಟಿ ಮಾಡಲಾಗಿದೆ. ಹಾಗಾಗಿ ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುವವರೆಗೆ, ಸ್ಪೀಕರ್ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು ಎಂದು ಮನವಿ ಮಾಡಿದರು.

ಮುಖ್ಯ ನ್ಯಾಯಮೂರ್ತಿಗಳು, ‘ಯಾವುದೇ ನಿರ್ಧಾರ ತೆಗೆದುಕೊಳ್ಳದಂತೆ ಸ್ಪೀಕರ್‌ಗೆ ತಿಳಿಸಿ. ನಾವು ಅರ್ಜಿ ವಿಚಾರಣೆ ನಡೆಸುತ್ತೇವೆ’ ಎಂದು ರಾಜ್ಯಪಾಲರ ಪ್ರತಿನಿಧಿಯಾಗಿ ಹಾಜರಿದ್ದ ತುಷಾರ್ ಮೆಹ್ತಾ ಅವರಿಗೆ ತಿಳಿಸಿದರು.

ಸೇನಾದ ಬಂಡಾಯ ಶಾಸಕರಿಗೆ ಅನರ್ಹತೆಯ ನೋಟಿಸ್‌ಗೆ ಉತ್ತರಿಸಲು ಉಪ ಸ್ಪೀಕರ್ ನೀಡಿದ್ದ ಕಾಲಾವಕಾಶವನ್ನು ಸುಪ್ರೀಂ ಕೋರ್ಟ್ ಈ ಮೊದಲು ಜುಲೈ 12ರವರೆಗೆ ವಿಸ್ತರಿಸಿತ್ತು.

ಜಾರ್ಖಂಡ್ ಮೈತ್ರಿಯಲ್ಲೂ ಬಿರುಕು?

ನವದೆಹಲಿ: ಮಹಾರಾಷ್ಟ್ರದ ‘ಮಹಾ ವಿಕಾಸ ಆಘಾಡಿ’ ಸರ್ಕಾರದ ಪತನ ಮತ್ತು ಗೋವಾ ಕಾಂಗ್ರೆಸ್‌ನಲ್ಲಿನ ಬಿಕ್ಕಟ್ಟಿನ ನಂತರ ಎಲ್ಲರ ಕಣ್ಣುಗಳು ಜಾರ್ಖಂಡ್ ಕಡೆಗೆ ನೆಟ್ಟಿವೆ. ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ), ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ), ಕಾಂಗ್ರೆಸ್ ಮೈತ್ರಿಕೂಟದ ಜಾರ್ಖಂಡ್ ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲದಿರುವುದು ಮತ್ತು ತನ್ನ ತೆಕ್ಕೆಗೆ ಮತ್ತಷ್ಟು ರಾಜ್ಯಗಳನ್ನು ಸೇರಿಸಿಕೊಳ್ಳಲು ಬಿಜೆಪಿಯು ತೆರೆದ ಬಾಹುಗಳಿಂದ ಕಾದು ಕುಳಿತಿರುವುದೇ ಎಲ್ಲರೂ ಜಾರ್ಖಂಡ್‌ನತ್ತ ಚಿತ್ತ ಹರಿಸಲು ಕಾರಣ.

ರಾಷ್ಟ್ರಪತಿ ಅಭ್ಯರ್ಥಿ ಆಯ್ಕೆಗಾಗಿ ವಿರೋಧ ಪಕ್ಷಗಳು ನಡೆಸಿದ್ದ ಸಭೆಯಲ್ಲಿ ಜೆಎಂಎಂ ಪಾಲ್ಗೊಂಡಿದ್ದರೂ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ರಾಷ್ಟ್ರಪತಿ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಬೆಂಬಲಿಸುವುದಾಗಿ ಇತ್ತೀಚೆಗೆ ಘೋಷಿಸಿದೆ. ದ್ರೌಪದಿ ಅವರು ಬುಡಕಟ್ಟು ಜನಾಂಗಕ್ಕೆ ಸೇರಿದವರು. ಹಾಗಾಗಿ ಅವರನ್ನು ಬೆಂಬಲಿಸದಿರಲು ಆಗದು ಎಂದು ಜೆಎಂಎಂ ನಾಯಕ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಹೇಳಿದ್ದಾರೆ.

ಜೊತೆಗೆ, ಜಾರಿ ನಿರ್ದೇಶನಾಲಯ ಸೇರಿ ಕೇಂದ್ರೀಯ ತನಿಖಾ ಸಂಸ್ಥೆಗಳ ತನಿಖೆಗಳ ಬಿಸಿಯೂ ಹೇಮಂತ್ ಸೊರೇನ್ ಅವರಿಗೆ ತಗುಲಿದೆ. ಹೇಮಂತ್ ಅವರು ಗಣಿಗಾರಿಕೆಯ ಪರವಾನಗಿ ಸ್ವತಃ ಪಡೆದಿದ್ದಾರೆ. ಹೀಗಾಗಿ ಅವರನ್ನು ಅನರ್ಹಗೊಳಿಸಲು ಕೋರಿ ಅವರ ವಿರುದ್ಧ ಅರ್ಜಿಯನ್ನೂ ಸಲ್ಲಿಸಲಾಗಿದೆ. ಜಾರ್ಖಂಡ್ ಸರ್ಕಾರ ಸಂಕಷ್ಟದಲ್ಲಿ ಇದೆ ಎಂಬುದಕ್ಕೆ ಈ ಎಲ್ಲಾ ಅಂಶಗಳೂ ಕಾರಣವಾಗಿವೆ.

ಇದನ್ನು ಒಪ್ಪದ ಕಾಂಗ್ರೆಸ್, ಇಲ್ಲಿನ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ.

ರಾಷ್ಟ್ರೀಯ ಲಾಂಛನ ಅನಾವರಣ

ನವದೆಹಲಿ (ಪಿಟಿಐ): ಸಂಸತ್ತಿನ ನೂತನ ಸಂಕೀರ್ಣದ ಬಳಿ ರಾಷ್ಟ್ರೀಯ ಲಾಂಛನವನ್ನು (ನಾಲ್ಕು ಸಿಂಹಗಳ ಮುಖ ಒಳಗೊಂಡ) ಪ್ರಧಾನಿ ನರೇಂದ್ರ ಮೋದಿ ಸೋಮವಾರ ಅನಾವರಣಗೊಳಿಸಿದರು.

ಕಂಚಿನಲ್ಲಿ ರೂಪಿಸಿರುವ ಈ ಲಾಂಛನ 9,500 ಕೆ.ಜಿ ತೂಕ ಹಾಗೂ 6.5 ಮೀಟರ್ ಎತ್ತರವಿದೆ. ಈ ವರ್ಷಾಂತ್ಯಕ್ಕೆ ಉದ್ಘಾಟನೆ ಆಗಲಿದೆ ಎನ್ನಲಾದ ಸಂಸತ್ತಿನ ನೂತನ ಸಂಕೀರ್ಣದ ಬಳಿ ಅನಾವರಣಗೊಂಡಿರುವ ಮೊದಲ ಹೆಗ್ಗುರುತು ಇದು.

ಸಂಸತ್ತಿನ ಚಳಿಗಾಲದ ಅಧಿವೇಶನ ನೂತನ ಸಂಕೀರ್ಣದಲ್ಲಿಯೇ ನಡೆಯುವ ವಿಶ್ವಾಸ ಅಧಿಕಾರಿಗಳದು.

ಹಾಕಿ: ನಿತಿನ್ ತಿಮ್ಮಯ್ಯ ಹ್ಯಾಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿತಿನ್ ತಿಮ್ಮಯ್ಯ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಅಕೌಂಟೆಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್ (ಎಜಿಒಆರ್‌ಸಿ) ತಂಡವು ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಎಜಿಒಆರ್‌ಸಿ 6–1ರಿಂದ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ತಂಡಕ್ಕೆ ಸೋಲುಣಿಸಿತು. ನಿತಿನ್ ಎಂಟು, 23 ಮತ್ತು 54ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ವಿಜೇತ ತಂಡಕ್ಕಾಗಿ ಜಯಪ್ರಕಾಶ್ (17ನೇ ನಿಮಿಷ), ಚಂಗಪ್ಪ (20ನೇ ನಿ.) ಮತ್ತು ಶಂಕರ್ ಪಾಟೀಲ್ (38ನೇ ನಿ.) ಗೋಲು ಗಳಿಸಿದರು. ಸಾಯ್ ಪರ ಚೇತನ್ ಎಂ.ಕೆ. (35ನೇ ನಿ.) ಗೋಲು

ಪೋಸ್ಟಲ್ ತಂಡದ ಉತ್ತಪ್ಪ (ಎಡ) ಮತ್ತು ಕಸ್ಟಮ್ಸ್ ಮತ್ತು ಜಿಎಸ್‌ಟಿ ತಂಡದ ನಾಗಸೀನ (ಬಲ) ನಡುವೆ ಪೈಪೋಟಿ –ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಪೋಸ್ಟಲ್ ತಂಡವು 3–3ರಿಂದ ಕಸ್ಟಮ್ಸ್ ಮತ್ತು ಜಿಎಸ್‌ಟಿ ತಂಡದೊಂದಿಗೆ ಡ್ರಾ ಸಾಧಿಸಿತು. ಪೋಸ್ಟಲ್ ಪರ ಪೂವಣ್ಣ ಐ.ಎ. (ಏಳು ಮತ್ತು 21ನೇ ನಿ.), ಚೇತನ್ ಚಿನ್ನಪ್ಪ (43ನೇ ನಿ.) ಮಿಂಚಿದರು. ಕಸ್ಟಮ್ಸ್ ಮತ್ತು ಜಿಎಸ್‌ಟಿ ತಂಡದ ತಿಮ್ಮಣ್ಣ ಪಿ.ಎಲ್. (27ನೇ ನಿ.), ವಿನಯ್ ವಿ.ಎಸ್. (45ನೇ ನಿ.) ಮತ್ತು ಚೆಲ್ಸಿ ಮೇದಪ್ಪ (49ನೇ ನಿ.) ಗೋಲು ಹೊಡೆದರು.

ಬ್ಯಾಸ್ಕೆಟ್‌ಬಾಲ್: ಭಾರತ್ ಎಸ್‌ಯುಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿತಿನ್ ಗಳಿಸಿದ 17 ಪಾಯಿಂಟ್ಸ್ ನೆರವಿನಿಂದ ಭಾರತ್ ಎಸ್‌ಯು ತಂಡವು ಎಂ.ಸಿ. ಶ್ರೀನಿವಾಸ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಬಿ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಸೋಮವಾರ ಭಾರತ್ ಎಸ್‌ಯು 83–56ರಿಂದ ಪ್ರೊಟೆಕ್ ಅಸೋಸಿಯೇಷನ್ ಮೈಸೂರು ತಂಡದ ಎದುರು ಗೆದ್ದಿತು. ಪಂದ್ಯದ ಆರಂಭದಿಂದಲೇ ಉತ್ತಮ ಆಟವಾಡಿದ ಭಾರತ್ ಮೊದಲಾರ್ಧದ ವೇಳೆಗೆ 49–25ರಿಂದ ಮುಂದಿತ್ತು. ವಿಜೇತ ತಂಡದ ಅಕ್ಷಯ್ 13 ಪಾಯಿಂಟ್ಸ್ ಕಲೆಹಾಕಿದರು.

ಪ್ರೊಟೆಕ್ ಪರ ಹರಿಹರನ್ (30 ಪಾಯಿಂಟ್ಸ್) ಮತ್ತು ಲೋಕೇಶ್ (16) ಆಟ ವ್ಯರ್ಥವಾಯಿತು. ಇನ್ನುಳಿದ ಪಂದ್ಯಗಳಲ್ಲಿ ಕೋರಮಂಗಲ ಎಸ್‌ಸಿ 65–54ರಿಂದ ದೇವಾಂಗ ಯೂನಿಯನ್ ಎಸ್‌ಸಿ ಎದುರು, ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) 81–61ರಿಂದ ಜೆಎಸ್‌ಸಿ ವಿರುದ್ಧ, ರೈಸಿಂಗ್ ಸ್ಟಾರ್ ಮೈಸೂರು 81–63ರಿಂದ ಬಾಷ್ ಎದುರು ಜಯ ಗಳಿಸಿ ಮುನ್ನಡೆದವು.

ಷೇರುಪೇಟೆ ವಹಿವಾಟು 86



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,221
ಇಂದಿನ ಅಂತ್ಯ	16,216
▼	5
ದಿನದ ಕನಿಷ್ಠ	16,115

ವಿನಿಮಯ ದರ

$ ಡಾಲರ್	79.45
£ ಪೌಂಡ್	95.15
€ ಯುರೊ	80.58
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1590)
ಸೋಯಾ (ರಿಫೈನ್ಡ್)	₹1275 (1270)
ಸೂರ್ಯಕಾಂತಿ (ರಿಫೈನ್ಡ್)	₹1600 (1610)
ಪಾಮೋಲಿನ್	₹1210 (1205)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹111-439
ದ್ವಿತಳಿ (ಬಿ.ವಿ)	₹222-752

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹173.50
ಆರ್‌ಎಸ್‌ಎಸ್-5	₹164.50
ಗುಡ್ ಲಾಟ್	₹158

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ಟಿಸಿಎಸ್ ಮಾರುಕಟ್ಟೆ ಮೌಲ್ಯ ₹ 55,471 ಕೋಟಿ ಇಳಿಕೆ

ನವದೆಹಲಿ (ಪಿಟಿಐ): ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯ ಷೇರು ಮೌಲ್ಯವು ಸೋಮವಾರ ಶೇಕಡ 5ರವರೆಗೆ ಇಳಿಕೆ ಕಂಡಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ₹ 55,471 ಕೋಟಿಯಷ್ಟು ಕಡಿಮೆಯಾಗಿ, ಒಟ್ಟಾರೆ ಮೌಲ್ಯವು ₹ 11.39 ಲಕ್ಷ ಕೋಟಿಗೆ ಇಳಿದಿದೆ.

ಕಂಪನಿಯ ಜೂನ್ ತ್ರೈಮಾಸಿಕದ ಫಲಿತಾಂಶವು ಮಾರುಕಟ್ಟೆ ನಿರೀಕ್ಷೆಗಳಿಗೆ ತಕ್ಕಂತೆ ಇಲ್ಲದ ಕಾರಣ ಷೇರುಗಳ ಮೌಲ್ಯ ಇಳಿಕೆ ಕಂಡಿದೆ ಎಂದು ತಜ್ಞರು ಹೇಳಿದ್ದಾರೆ.

ಬಿಎಸ್‌ಇನಲ್ಲಿ ಷೇರು ಮೌಲ್ಯವು ಶೇ 4.64ರಷ್ಟು ಇಳಿಕೆ ಆಗಿ ಪ್ರತಿ ಷೇರಿನ ಬೆಲೆ ₹ 3,113ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಶೇ 4.70ರಷ್ಟು ಕಡಿಮೆ ಆಗಿ ₹ 3,112ರಂತೆ ಮಾರಾಟ ಆಯಿತು.

ಐ.ಟಿ. ಸೇವೆಗಳನ್ನು ಒದಗಿಸುವ ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೊಸಿಸ್, ವಿಪ್ರೊ, ಟೆಕ್ ಮಹೀಂದ್ರ ಕಂಪನಿಗಳ ಷೇರು ಮೌಲ್ಯವು ಕೂಡ ಇಳಿಕೆ ಕಂಡಿದೆ. ಬಿಎಸ್‌ಇ ಐ.ಟಿ. ಸೂಚ್ಯಂಕ ಶೇ 2.70ರಷ್ಟು ಇಳಿಕೆ ಆಗಿದ್ದು, 28,020ಕ್ಕೆ ತಲುಪಿತು.

ವಹಿವಾಟು ಇಳಿಕೆ: ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 86 ಅಂಶ ಇಳಿಕೆ ಆಗಿ 54,395 ಅಂಶಗಳಿಗೆ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 5 ಅಂಶ ಇಳಿಕೆ ಕಂಡು 16,216 ಅಂಶಗಳಿಗೆ ತಲುಪಿತು.

‘ಕಾರ್ಪೊರೇಟ್ ವಲಯದ ಗಳಿಕೆಯ ಮೇಲೆ ಷೇರುಪೇಟೆ ಗಮನ ಹರಿಸಿದ್ದು, ಟಿಸಿಎಸ್ ಗಳಿಕೆಯು ನಿರೀಕ್ಷಿತ ಮಟ್ಟವನ್ನು ತಲುಪದೇ ಇರುವುದು ವಹಿವಾಟಿನ ಮೇಲೆ ಪರಿಣಾಮ ಬೀರಿತು. ಬ್ಯಾಂಕಿಂಗ್, ಲೋಹ ಮತ್ತು ಇಂಧನ ವಲಯದ ಷೇರುಗಳ ಗಳಿಕೆಯಿಂದಾಗಿ ಮಾರುಕಟ್ಟೆಗೆ ಹೆಚ್ಚಿನ ನಷ್ಟ ಆಗುವುದು ತಪ್ಪಿತು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	470

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಕಾರ್ಕಳ	
ಹೊಸತು	40000-45000
ಕುಮಟ	
ಚಿಪ್ಪು	27209-30369
ಕೋಕ	18089-29989
ಫ್ಯಾಕ್ಟರಿ	10509-19699
ಹೊಸಚಾಲಿ	35799-39009
ಹಳೆಚಾಲಿ	46019-47299
ಸಾಗರ	
ಬಿಳಿಗೋಟು	22299-29100
ಚಾಲಿ	23219-37299
ಕೋಕ	20029-33100
ಕೆಂಪುಗೋಟು	27619-37199
ರಾಶಿ	32399-49819
ಸಿಪ್ಪೆಗೋಟು	14501-20650
ಶಿವಮೊಗ್ಗ	
ಬೆಟ್ಟೆ	52519-53719
ಗೊರಬಲು	18009-38009
ರಾಶಿ	43869-49909
ಸರಕು	60000-79100
ಸಿದ್ದಾಪುರ	
ಬಿಳಿಗೋಟು	25312-31282
ಚಾಲಿ	34809-38709
ಕೋಕ	23112-32112
ಕೆಂಪುಗೋಟು	31012-32312
ರಾಶಿ	45299-48799
ತಟ್ಟಿಬೆಟ್ಟೆ	37819-45399
ಶಿರಸಿ	
ಬೆಟ್ಟೆ	26000-46991
ಬಿಳಿಗೋಟು	23896-32899
ಚಾಲಿ	33000-39399
ರಾಶಿ	45099-48601
ಯಲ್ಲಾಪುರ	
ಬಿಳಿಗೋಟು	25199-31319
ಚಾಲಿ	34920-38590
ಕೆಂಪುಗೋಟು	29899-34266
ರಾಶಿ	47148-52865
ತಟ್ಟಿಬೆಟ್ಟೆ	38820-45495

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---0	15600	15700	220.45 ಸೆಂಟ್ಸ್
ಎಸಿ	---	8500	8550	
ಆರ್‌ಪಿ	---	9400	9500	ಲಂಡನ್
ಆರ್‌ಸಿ	---	4500	4550	1981ಡಾಲರ್ಸ್

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕ: ಐಸಿಐಸಿಐ ಸೆಕ್ಯುರಿಟೀಸ್ ವರದಿ

ತೈಲ ಕಂಪನಿಗಳಿಗೆ ₹10,700 ಕೋಟಿ ನಷ್ಟ?

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಕಂಪನಿಗಳು ಜೂನ್ ತ್ರೈಮಾಸಿಕದಲ್ಲಿ ಒಟ್ಟು ₹ 10,700 ಕೋಟಿ ನಷ್ಟ ಅನುಭವಿಸಬಹುದು ಎಂದು ಐಸಿಐಸಿಐ ಸೆಕ್ಯುರಿಟೀಸ್ ಹೇಳಿದೆ.

ಸಂಸ್ಕರಣಾ ವೆಚ್ಚಕ್ಕಿಂತಲೂ ಕಡಿಮೆ ಬೆಲೆಗೆ ಪೆಟ್ರೋಲ್, ಡೀಸೆಲ್ ಮಾರಾಟ ಮಾಡುತ್ತಿರುವುದರಿಂದ ಈ ಕಂಪನಿಗಳಿಗೆ ನಷ್ಟವಾಗಲಿದೆ ಎಂದು ವರದಿಯಲ್ಲಿ ತಿಳಿಸಿದೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಕಚ್ಚಾ ತೈಲ ದರ ಏರಿಕೆ ಆಗಿದ್ದರೂ, ಪೆಟ್ರೋಲ್ ಮತ್ತು ಡೀಸೆಲ್ ದರ ಪರಿಷ್ಕರಣೆ ಮಾಡಿಲ್ಲ. ಇದರಿಂದಾಗಿ ಕಂಪನಿಗಳು ನಷ್ಟ ಅನುಭವಿಸುತ್ತಿದ್ದು, ಕಂಪನಿಗಳ ಗಳಿಕೆಯ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ವಿವರಿಸಿದೆ.

ದೇಶದಲ್ಲಿನ ಪೆಟ್ರೋಲ್, ಡೀಸೆಲ್ ರಿಟೇಲ್ ಮಾರಾಟದ ಶೇಕಡ 90ರಷ್ಟನ್ನು ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಕಂಪನಿಗಳು ಪೂರೈಸುತ್ತಿವೆ. ಕಚ್ಚಾ ತೈಲ ಸಂಸ್ಕರಿಸಿ

ಪೆಟ್ರೋಲ್, ಡೀಸೆಲ್ ಉತ್ಪಾದಿಸುವ ಘಟಕಗಳನ್ನೂ ಇವು ಹೊಂದಿವೆ. ಕಂಪನಿಗಳಿಗೆ ಪ್ರತಿ ಲೀಟರ್ ಡೀಸೆಲ್ ಮತ್ತು ಪೆಟ್ರೋಲ್‌ಗೆ ₹ 12ರಿಂದ 14ರವರೆಗೆ ನಷ್ಟವಾಗುತ್ತಿದೆ ಎಂದು ಐಸಿಐಸಿಐ ಸೆಕ್ಯುರಿಟೀಸ್ ಹೇಳಿದೆ.

ಮುಖ್ಯಾಂಶಗಳು

- ಸಂಸ್ಕರಣಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಇಂಧನ ಮಾರಾಟ
- ಲೀಟರಿಗೆ ₹ 12–14ರವರೆಗೆ ನಷ್ಟ ಆಗಿರುವ ಅಂದಾಜು

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಕಾರ್ಯಾಚರಣೆ ಮತ್ತು ಹಣಕಾಸು ಸ್ಥಿತಿಯು ಉತ್ತಮವಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ವರದಿಯ ಅಂದಾಜಿನ ಪ್ರಕಾರ, ಜೂನ್ ತ್ರೈಮಾಸಿಕದಲ್ಲಿ ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ನಂತರದ ಆದಾಯವು ₹ 38,900 ಕೋಟಿ ಆಗಲಿದ್ದು, (ವರ್ಷದಿಂದ ವರ್ಷಕ್ಕೆ) ಶೇ 67ರಷ್ಟು ಬೆಳವಣಿಗೆ ಆಗಲಿದೆ. ತೆರಿಗೆ ನಂತರದ ಲಾಭವು ₹ 24,400 ಕೋಟಿ ಆಗಲಿದ್ದು, ಶೇ 77ರಷ್ಟು ಏರಿಕೆ (ವರ್ಷದಿಂದ ವರ್ಷಕ್ಕೆ) ಆಗಲಿದೆ. ಈವರೆಗಿನ ಅತ್ಯಂತ ಹೆಚ್ಚಿನ ಗಳಿಕೆ ಇದಾಗಲಿದೆ ಎಂದು ಹೇಳಿದೆ.

₹ 11 ಸಾವಿರಕ್ಕೆ ಮಾರುತಿ ಗ್ರ್ಯಾಂಡ್ ವಿಟಾರಾ ಬುಕಿಂಗ್

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಮಧ್ಯಮ ಗಾತ್ರದ ‘ಗ್ರ್ಯಾಂಡ್ ವಿಟಾರಾ’ ಎಸ್‌ಯುವಿಯ ಮುಂಗಡ ಬುಕಿಂಗ್ ಆರಂಭಿಸಿದೆ. ₹ 11 ಸಾವಿರ ಪಾವತಿಸಿ ಎಸ್‌ಯುವಿ ಅನ್ನು ಕಾಯ್ದಿರಿಸಬಹುದು ಎಂದು ತಿಳಿಸಿದೆ.

ಟೊಯೋಟ ಮತ್ತು ಸುಜುಕಿ ಮಧ್ಯೆ ಆಗಿರುವ ಒಪ್ಪಂದದ ಪ್ರಕಾರ, ಟೊಯೋಟ ಕಿರ್ಲೋಸ್ಕರ್ ಕಂಪನಿಯ ಕರ್ನಾಟಕದ ಬಿಡದಿ ಘಟಕದಲ್ಲಿ ಈ ಮಾದರಿ ತಯಾರಾಗಲಿದೆ.

ಹೈಬ್ರಿಡ್ ತಂತ್ರಜ್ಞಾನದೊಂದಿಗೆ ಉತ್ತಮ ಇಂಧನ ದಕ್ಷತೆಯನ್ನು ನೀಡಲಿದೆ ಎಂದು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

ಸ್ವತಂತ್ರವಾದ ಮಾಹಿತಿಯ ಕೊರತೆ: ಅಧಿಕಾರಿ

ಸೆಬಿಯಿಂದ ಹೂಡಿಕೆ ಮಾಹಿತಿ

ನವದೆಹಲಿ (ಪಿಟಿಐ): ಹೂಡಿಕೆದಾರರಿಗೆ ಸೂಕ್ತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವಂತೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಆಲೋಚನೆಯನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಹೊಂದಿದೆ.

ಈ ವಿಚಾರವಾಗಿ ಪ್ರಾಥಮಿಕ ಚರ್ಚೆಗಳು ಮಾತ್ರ ನಡೆದಿವೆ. ಇದು ಕಾರ್ಯರೂಪಕ್ಕೆ ಬಂದರೆ, ಹೂಡಿಕೆದಾರರು ಗುಂಪಿನಲ್ಲಿ ಗೋವಿಂದ ಎಂಬಂತೆ ವರ್ತಿಸುವುದನ್ನು ತಡೆಯಲು ಸಾಧ್ಯವಾಗುತ್ತದೆ ಎಂಬ ಲೆಕ್ಕಾಚಾರವನ್ನು ಸೆಬಿ ಹೊಂದಿದೆ.

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಇಂತಹ ವರ್ತನೆಯು ಹೂಡಿಕೆದಾರರಲ್ಲಿ ಕಂಡುಬಂದಿದೆ. 2020ರಲ್ಲಿ ಕೋವಿಡ್ ಸಾಂಕ್ರಾಮಿಕ ಅಪ್ಪಳಿಸಿದಾಗ ಹೂಡಿಕೆದಾರರು ಷೇರುಗಳನ್ನು ಭಾರಿ ಪ್ರಮಾಣದಲ್ಲಿ ಮಾರಾಟ ಮಾಡಿದರು. ನಂತರದಲ್ಲಿ, ಮೂಲಭೂತ ಅಂಶಗಳನ್ನು ಅರ್ಥ ಮಾಡಿಕೊಳ್ಳದೆ, ಯಾರೋ ಒಬ್ಬರು ತಕ್ಷಣಕ್ಕೆ ಶ್ರೀಮಂತರಾದ ಕಥೆಗಳನ್ನು ಕೇಳಿ ಷೇರುಗಳನ್ನು ಭಾರಿ ಪ್ರಮಾಣದಲ್ಲಿ ಖರೀದಿಸಿದರು.

ಈಚಿನ ದಿನಗಳಲ್ಲಿ ಕೆಲವು ಆರಂಭಿಕ ಸಾರ್ವಜನಿಕ ಕೊಡುಗೆಗಳಲ್ಲಿ (ಐಪಿಒ) ಹೂಡಿಕೆ ಮಾಡಿದ್ದವರು ನಷ್ಟ

ಅನುಭವಿಸಿದ್ದಾರೆ. ತೀರಾ ಸಂಕೀರ್ಣವಾಗಿರುವ ಫ್ಯೂಚರ್ಸ್ ಆ್ಯಂಡ್ ಆಪ್ಷನ್ಸ್ ವಹಿವಾಟಿನಲ್ಲಿ ಹಣ ತೊಡಗಿಸಿ ನಷ್ಟ ಕಂಡವರೂ ಇದ್ದಾರೆ.

‘ಎಲ್ಲವೂ ಚೆನ್ನಾಗಿ ನಡೆಯುತ್ತಿದ್ದಾಗ ಎಲ್ಲರೂ ಷೇರು ಖರೀದಿಗೆ ಮುಂದಾಗುತ್ತಾರೆ. ಆದರೆ, ಬಿಕ್ಕಟ್ಟು ಎದುರಾದಾಗ ಭೀತಿಗೆ ಒಳಗಾಗಿ ಷೇರುಗಳ ಮಾರಾಟಕ್ಕೆ ತೊಡಗುತ್ತಾರೆ. ಬಂಡವಾಳ ಮಾರುಕಟ್ಟೆಯ ಮೂಲಭೂತ ಅಂಶಗಳನ್ನು ಅವರು ಮರೆತುಬಿಡುತ್ತಾರೆ. ಇದಕ್ಕೆ ಒಂದು ಪ್ರಮುಖ ಕಾರಣ, ಸ್ವತಂತ್ರವಾದ ಮಾಹಿತಿಯ ಕೊರತೆ’ ಎಂದು ಸೆಬಿಯ ಹಿರಿಯ ಅಧಿಕಾರಿಯೊಬ್ಬರು ವಿವರಿಸಿದರು.

ಮುಖ್ಯಾಂಶಗಳು

- ಕೋವಿಡ್ ಅವಧಿಯಲ್ಲಿ ಭಾರಿ ಪ್ರಮಾಣದಲ್ಲಿ ಷೇರುಗಳ ಮಾರಾಟ
- ಹೂಡಿಕೆದಾರರಿಗೆ ಮೂಲಭೂತ ಮಾಹಿತಿ ಕೊರತೆ
- ‘ಹೂಡಿಕೆದಾರರಿಗೆ ‘ಸೆಬಿ’ಯಿಂದಲೇ ದತ್ತಾಂಶ ಲಭ್ಯತೆ ಅಗತ್ಯ’

ಷೇರು ಮಾರುಕಟ್ಟೆಯಲ್ಲಿ ಸಿಗುವ ಕೆಲವು ಸಂಶೋಧನಾ ವರದಿಗಳನ್ನು ಸಿದ್ಧಪಡಿಸಿದವರು ತಮ್ಮದೇ ಆದ ವಾಣಿಜ್ಯಿಕ ಹಿತಾಸಕ್ತಿಗಳನ್ನು ಹೊಂದಿರುವುದಿದೆ. ಹೀಗಾಗಿ, ಸೆಬಿ ಕಡೆಯಿಂದಲೇ ವಿವರ ಸಿಗುವಂತಾದರೆ ಉತ್ತಮ ಎಂಬ ಅಭಿಪ್ರಾಯ ಇದೆ.

‘ಕೆಲವು ಹೂಡಿಕೆಗಳು ಮಾರುಕಟ್ಟೆ ಅಪಾಯ ಒಳಗೊಂಡಿವೆ ಎಂಬ ಮಾತುಗಳು ತೀರಾ ಕ್ಲಿಷೆಯಂತೆ ಆಗಿವೆ. ಈ ಮಾತು ಹೆಚ್ಚು ಪ್ರಯೋಜನಕ್ಕೆ ಬರುವುದಿಲ್ಲ. ಹೂಡಿಕೆದಾರರಿಗೆ ಒಂದಿಷ್ಟು ದತ್ತಾಂಶ ಸಿಗಬೇಕು. ಅದು ಕೂಡ ಮಾರುಕಟ್ಟೆ ನಿಯಂತ್ರಕ ಸೆಬಿ ಕಡೆಯಿಂದ ಸಿಗುವಂತೆ ಆಗಬೇಕು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ರೂಪಾಯಿಯ ಮೂಲಕ ಅಂತರರಾಷ್ಟ್ರೀಯ ವಹಿವಾಟು

ಮುಂಬೈ (ಪಿಟಿಐ): ಆಮದು ಮತ್ತು ರಫ್ತು ವಹಿವಾಟುಗಳನ್ನು ರೂಪಾಯಿ ಮೂಲಕ ನಡೆಸಲು ಹೆಚ್ಚುವರಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಂತೆ ಆರ್‌ಬಿಐ, ಬ್ಯಾಂಕ್‌ಗಳಿಗೆ ಸೋಮವಾರ ಸೂಚಿಸಿದೆ.

ರೂಪಾಯಿಯಲ್ಲಿ ವಹಿವಾಟು ನಡೆಸಲು ಜಾಗತಿಕ ಮಟ್ಟದಲ್ಲಿ ವರ್ತಕರು ಹೆಚ್ಚಿನ ಆಸಕ್ತಿ ತೋರಿಸುತ್ತಿರುವ ಕಾರಣ ಈ ಕ್ರಮ ಎಂದು ಆರ್‌ಬಿಐ ಹೇಳಿದೆ.

ಆರ್‌ಬಿಐ ಇರಿಸಿರುವ ಈ ಹೆಜ್ಜೆಯ ಪರಿಣಾಮವಾಗಿ, ಆಮದು ಮತ್ತು ರಫ್ತು ವಹಿವಾಟನ್ನು ರೂಪಾಯಿ ಮೂಲಕ ನಡೆಸಲು ಅವಕಾಶ ಆಗಲಿದೆ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎ. ಶಕ್ತಿವೇಲ್ ಹೇಳಿದ್ದಾರೆ.

‘ಈ ನಡೆಯಿಂದಾಗಿ ಭಾರತದ ಕರೆನ್ಸಿಯನ್ನು ಅಂತರರಾಷ್ಟ್ರೀಯ ಕರೆನ್ಸಿಯನ್ನಾಗಿ ಗುರುತಿಸಿದಂತೆ ಆಗಿದೆ’ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ವಾಣಿಜ್ಯ ವಹಿವಾಟುಗಳನ್ನು ಪೂರ್ಣಗೊಳಿಸಲು ಬ್ಯಾಂಕ್‌ಗಳು, ವಹಿವಾಟು ನಡೆಸುವ ದೇಶದ ಬ್ಯಾಂಕ್‌ನ ವಿಶೇಷ ರೂಪಾಯಿ ಖಾತೆಯನ್ನು ತಮ್ಮಲ್ಲಿ ಆರಂಭಿಸಬೇಕು ಎಂದು ಆರ್‌ಬಿಐ ಹೇಳಿದೆ. ಹೊಸ ವ್ಯವಸ್ಥೆಯು ಭಾರತದ ರಫ್ತು ವಹಿವಾಟುದಾರರಿಗೆ ಮುಂಚಿತವಾಗಿ ರೂಪಾಯಿಯಲ್ಲಿ ಪಾವತಿ ಸ್ವೀಕರಿಸಲು ನೆರವಾಗಬಹುದು ಎನ್ನಲಾಗಿದೆ.

19 ಪೈಸೆ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರ 19 ಪೈಸೆಯಷ್ಟು ಕುಸಿಯಿತು. ಹೀಗಾಗಿ, ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವಾದ 79.45ಕ್ಕೆ ತಲುಪಿದೆ.

ಡಾಲರ್ ಮೌಲ್ಯವರ್ಧನೆ ಹಾಗೂ ವಿದೇಶಿ ಬಂಡವಾಳ ಹೊರಹರಿವಿನ ಕಾರಣದಿಂದಾಗಿ ರೂಪಾಯಿ ಮೌಲ್ಯ ಕುಸಿದಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜೂನ್ ತಿಂಗಳಲ್ಲಿ ವ್ಯಾಪಾರ ಕೊರತೆಯು ದಾಖಲೆಯ ಮಟ್ಟವನ್ನು ತಲುಪಿದೆ. ಇದು ರೂಪಾಯಿ ಮೌಲ್ಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತಿದೆ ಎಂದು ರೆಲಿಗೇರ್ ಬ್ರೋಕಿಂಗ್ ಕಂಪನಿಯ ಸರಕು ಮತ್ತು ಕರೆನ್ಸಿ ಸಂಶೋಧನಾ ವಿಭಾಗದ ಉಪಾಧ್ಯಕ್ಷೆ ಸುಗಂಧಾ ಸಚದೇವ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ 11-7-2022

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	10800-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1600)
ಒಂದು ವಾರದ ಡೆಲಿವರಿ	1610 (1595)
ಸೋಯಾ ಕಚ್ಚಾ	1260 (1230)
ಪಾಮ್ ವಾರದ ಡೆಲಿವರಿ	1208 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1540 (1560)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,675 (50,790)
ಬೆಳ್ಳಿ ಕೆ.ಜಿ 56,745 (56,650)

ಆವರಣದಲ್ಲಿ ಶನಿವಾರದ ಧಾರಣೆ

ಪುರುಷರ ಗುಪ್ತ ಸಮಸ್ಯೆ
ಮನ್ಸೂನ್ ಆಫರ್!
50% ಡಿಸ್ಕೌಂಟ್



ಸೆಕ್ಸ್ ಸಮಯ ಸಣ್ಣ ಇಂದ್ರಿಯ?, ಸ್ವಪ್ನದೋಷ?, ನಪುಂಸಕತೆಗೆ? ಗ್ಯಾರಂಟೀಡ್ ಆಯುರ್ವೇದಿಕ್ ಸಲಹೆ, ಲಕ್ಷಾಂತರ ಮಂದಿ ಸಂತುಷ್ಟಗೊಂಡಿದ್ದಾರೆ.
8006973372

ಕ್ರಿಕೆಟ್: ಇಂಗ್ಲೆಂಡ್ ಎದುರಿನ ಮೊದಲ ಏಕದಿನ ಪಂದ್ಯ ಇಂದು

ರೋಹಿತ್ ಪಡೆಗೆ ಶುಭಾರಂಭದ ನಿರೀಕ್ಷೆ

ಲಂಡನ್ (ಪಿಟಿಐ): ಟಿ20 ಸರಣಿ ಗೆದ್ದ ಆತ್ಮವಿಶ್ವಾಸದಲ್ಲಿರುವ ಭಾರತ ತಂಡ, ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಮಂಗಳವಾರ ಇಂಗ್ಲೆಂಡ್ ವಿರುದ್ಧ ಸೆಣಸಾಡಲಿದೆ.

ಯುವ ಹಾಗೂ ಅನುಭವಿ ಆಟಗಾರರನ್ನು ಒಳಗೊಂಡ ರೋಹಿತ್ ಶರ್ಮ ಬಳಗ ಟಿ20 ಸರಣಿಯನ್ನು 2–1 ರಲ್ಲಿ ಗೆದ್ದಿತ್ತು. ಅಂತಿಮ ಪಂದ್ಯದಲ್ಲಿ ಸೋಲು ಎದುರಾಗಿದ್ದರೂ, ಕೊನೆಯವರೆಗೆ ಕೆಚ್ಚೆದೆಯಿಂದ ಹೋರಾಡಿತ್ತು. ತಂಡದ ಬ್ಯಾಟರ್‌ಗಳು, ತಮ್ಮ ಆಕ್ರಮಣಕಾರಿ ಮನೋಭಾವವನ್ನು ಏಕದಿನ ಸರಣಿಗೂ ವಿಸ್ತರಿಸುವ ವಿಶ್ವಾಸದಲ್ಲಿದ್ದಾರೆ.

ಟಿ20 ವಿಶ್ವಕಪ್‌ಗೆ ಮುನ್ನ ಭಾರತ ಆಡಲಿರುವ ಕೊನೆಯ ಏಕದಿನ ಸರಣಿ ಇದಾಗಿದೆ. ‘ಮೂರು ಪಂದ್ಯಗಳ ಸರಣಿ ನಮಗೆ ಮಹತ್ವದ್ದಾಗಿದೆ’ ಎಂದು ನಾಯಕ ರೋಹಿತ್ ಶರ್ಮ ಹೇಳಿದ್ದಾರೆ.

‘ಪ್ರತಿ ಪಂದ್ಯವೂ ನಮಗೆ ಮುಖ್ಯವಾದುದು. ಟಿ20 ವಿಶ್ವಕಪ್‌ಗೆ ಕೆಲವೇ ದಿನಗಳಿರುವಾಗ ಏಕದಿನ ಪಂದ್ಯಗಳಲ್ಲಿ ಆಡುವುದು ಮುಖ್ಯವಲ್ಲ ಎಂಬ ಭಾವನೆ ಸರಿಯಲ್ಲ. ಏಕದಿನ ಮತ್ತು ಟಿ20 ಪಂದ್ಯಗಳಿಗೆ ತಂಡದಲ್ಲಿ ಬದಲಾವಣೆ ಮಾಡುತ್ತಿರುತ್ತೇವೆ. ಆದರೆ ನಮ್ಮ ಅಂತಿಮ ಗುರಿ ಗೆಲುವು ಪಡೆಯುವುದೇ ಆಗಿದೆ’ ಎಂದು ನುಡಿದಿದ್ದಾರೆ.

‘50 ಓವರ್‌ಗಳ ಪಂದ್ಯವು, ಟಿ20 ಪಂದ್ಯದ ವಿಸ್ತೃತ ರೂಪ. ಟಿ20 ಪಂದ್ಯಕ್ಕೆ ಹೋಲಿಸಿದರೆ, ಆಟಗಾರರು ಏಕದಿನ ಪಂದ್ಯದಲ್ಲಿ ಕಡಿಮೆ ‘ರಿಸ್ಕ್’ ತೆಗೆದುಕೊಳ್ಳುವರು. ಆದರೆ ರಿಸ್ಕ್‌ಅನ್ನು ತೆಗೆದುಕೊಳ್ಳಲೇಬೇಕಾಗುತ್ತದೆ’ ಎಂದಿದ್ದಾರೆ.

ಏಕದಿನ ಮಾದರಿಯಲ್ಲಿ ಮಾತ್ರ ಆಡುವ ಶಿಖರ್ ಧವನ್ ಸೇರಿದಂತೆ ಕೆಲವು ಆಟಗಾರರಿಗೆ ಈ ಸರಣಿ ಸವಾಲಾಗಿ ಪರಿಣಮಿಸಿದೆ. ತಂಡದಲ್ಲಿ ಸ್ಥಾನ ಗಟ್ಟಿಗೊಳಿಸಲು ಉತ್ತಮ ಆಟವಾಡುವುದು ಅನಿವಾರ್ಯ.

ಕೊಹ್ಲಿ ಅನುಮಾನ: ಟಿ20 ಪಂದ್ಯದಲ್ಲಿ ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದ ಕೊಹ್ಲಿ, ಈ ಪಂದ್ಯದಲ್ಲಿ ಕಣಕ್ಕಿಳಿಯುವರೇ ಎಂಬುದು ಖಚಿತವಾಗಿಲ್ಲ.

ಆತ್ಮವಿಶ್ವಾಸದಲ್ಲಿ ಇಂಗ್ಲೆಂಡ್: ಏಯಾನ್ ಮಾರ್ಗನ್ ಅವರಿಂದ ಇಂಗ್ಲೆಂಡ್ ತಂಡದ ನಾಯಕತ್ವದ ಜವಾಬ್ದಾರಿ ಪಡೆದ ಬಳಿಕ ಜೋಸ್ ಬಟ್ಲರ್‌ಗೆ ಮೊದಲ ಏಕದಿನ ಸರಣಿ ಇದಾಗಿದೆ. ಆದ್ದರಿಂದ ಯಶಸ್ಸಿನ ಆರಂಭ ಪಡೆಯುವ ಉದ್ದೇಶ ಅವರದ್ದು.

ಬೆನ್ ಸ್ಟೋಕ್ಸ್, ಜೋ ರೂಟ್ ಮತ್ತು ಜಾನಿ ಬೆಸ್ಟೋ ವಾಪಸಾಗಿರುವುದು ತಂಡದ ಆತ್ಮವಿಶ್ವಾಸ ಹೆಚ್ಚಿಸಿದೆ. ಬರ್ಮಿಂಗ್‌ಹ್ಯಾಂ ಟೆಸ್ಟ್ ಗೆಲುವಿನಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಸ್ಟೋಕ್ಸ್ ಮತ್ತು ಬೆಸ್ಟೋ ಅವರಿಗೆ ಟಿ20 ಸರಣಿಗೆ ವಿಶ್ರಾಂತಿ ನೀಡಲಾಗಿತ್ತು.

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಶಿಖರ್ ಧವನ್, ಇಶಾನ್ ಕಿಶನ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿಕೆಟ್ ಕೀಪರ್), ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಪ್ರಸಿದ್ಧ ಕೃಷ್ಣ, ಶಮಿ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್.

ಇಂಗ್ಲೆಂಡ್: ಜೋಸ್ ಬಟ್ಲರ್ (ನಾಯಕ), ಮೋಯಿನ್ ಅಲಿ, ಜಾನಿ ಬೆಸ್ಟೋ, ಹ್ಯಾರಿ ಬ್ರೂಕ್, ಬ್ರೈಡನ್ ಕಾರ್ಸ್, ಸ್ಯಾಮ್ ಕರನ್, ಲಿಯಾಮ್ ಲಿವಿಂಗ್‌ಸ್ಟೋನ್, ಕ್ರೆಗ್ ಅವರ್ಟನ್, ಪಾರ್ಕಿನ್ಸನ್, ಜೋ ರೂಟ್, ಜೇಸನ್ ರಾಯ್, ಫಿಲ್ ಸಾಲ್ಟ್, ಸ್ಟೋಕ್ಸ್, ರೀಸ್ ಟಾಪ್ಲಿ, ಡೇವಿಡ್ ವಿಲಿ.



ಬಲಾಬಲ	
ಒಟ್ಟು ಪಂದ್ಯಗಳು	103
ಭಾರತ ಗೆಲುವು	55
ಇಂಗ್ಲೆಂಡ್ ಗೆಲುವು	43
ಫಲಿತಾಂಶವಿಲ್ಲ	3
ಟೈ	2

ಸೂರ್ಯಕುಮಾರ್ ಯಾದವ್ –ಎಎಫ್‌ಪಿ ಚಿತ್ರ

ವಿರಾಟ್ ಬೆಂಬಲಕ್ಕೆ ರೋಹಿತ್

ಸತತ ವೈಫಲ್ಯದಿಂದ ಹೊರಬರುವ ಪ್ರಯತ್ನದಲ್ಲಿರುವ ವಿರಾಟ್ ಕೊಹ್ಲಿ ಮೇಲೆ ಎಲ್ಲರ ಚಿತ್ತ ನೆಟ್ಟಿದೆ. ಬರ್ಮಿಂಗ್‌ಹ್ಯಾಂ ಟೆಸ್ಟ್ ಹಾಗೂ ಟಿ20 ಸರಣಿಯ ಎರಡು ಪಂದ್ಯಗಳಲ್ಲಿ ಕೊಹ್ಲಿ ಚೆನ್ನಾಗಿ ಆಡಿಲ್ಲ. ಇದರಿಂದ ಅವರ ಮೇಲಿನ ಟೀಕೆ ಹೆಚ್ಚಿದೆ.

ಆದರೆ ನಾಯಕ ರೋಹಿತ್ ಅವರು ಕೊಹ್ಲಿ ಬೆಂಬಲಕ್ಕೆ ನಿಂತಿದ್ದಾರೆ. ‘ಕೊಹ್ಲಿಯ ಸಾಮರ್ಥ್ಯದ ಬಗ್ಗೆ ಅನುಮಾನಪಡಬೇಕಿಲ್ಲ. ತಂಡದ ಆಡಳಿತ ಅವರಿಗೆ ಪೂರ್ಣ ಬೆಂಬಲ ನೀಡುತ್ತದೆ. ಸುದೀರ್ಘ ಅವಧಿಯವರೆಗೆ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿರುವ ಆಟಗಾರನ ಬಗ್ಗೆ 2–3 ಸರಣಿಗಳಲ್ಲಿ ತೋರಿದ ಪ್ರದರ್ಶನವನ್ನು ಮುಂದಿಟ್ಟು ಯಾವುದೇ ತೀರ್ಮಾನ ತೆಗೆದುಕೊಳ್ಳಬಾರದು’ ಎಂದಿದ್ದಾರೆ. ‘ತಂಡದೊಳಗೆ ಏನು ನಡೆಯುತ್ತಿದೆ ಎಂಬುದು ಹೊರಗಿನ ವ್ಯಕ್ತಿಗಳಿಗೆ ಗೊತ್ತಿಲ್ಲ. ಕೆಲವರು ‘ತಜ್ಞ’ರಂತೆ ಅಭಿಪ್ರಾಯ ತಿಳಿಸುತ್ತಾರೆ. ಹೊರಗಿನವರ ಮಾತನ್ನು ನಾವು ಗಂಭೀರವಾಗಿ ಪರಿಗಣಿಸುವುದಿಲ್ಲ’ ಎಂದು ಟೀಕಾಕಾರರಿಗೆ ತಿರುಗೇಟು ನೀಡಿದ್ದಾರೆ.

‘ವಿಶ್ವದ ನಂ.2ನೇ ಬೌಲರ್ ಆರ್.ಅಶ್ವಿನ್ ಅವರನ್ನು ಟೆಸ್ಟ್ ತಂಡದಿಂದ ಕೈಬಿಡಬಹುದು ಎಂದಾದರೆ, ನಿಮ್ಮ ನಂ.1 ಬ್ಯಾಟರ್‌ಅನ್ನೂ ಕೈಬಿಡಬಹುದು. ವಿರಾಟ್ ಕೊಹ್ಲಿ ಹಿಂದಿನ ಫಾರ್ಮ್‌ನಲ್ಲಿ ಆಡುತ್ತಿಲ್ಲ. ಕೊಹ್ಲಿಗೆ ಸ್ಥಾನ ಕಲ್ಪಿಸಲಿಕ್ಕಾಗಿ, ಉತ್ತಮವಾಗಿ ಆಡುತ್ತಿರುವ ಇತರ ಯುವ ಬ್ಯಾಟರ್‌ಗಳನ್ನು ತಂಡದಿಂದ ಹೊರಗಿಡಲು ಸಾಧ್ಯವಿಲ್ಲ’ ಎಂದು ಕಪಿಲ್‌ದೇವ್ ಇತ್ತೀಚೆಗೆ ಹೇಳಿದ್ದರು.

ಲಂಕಾಕ್ಕೆ ಇನಿಂಗ್ಸ್ ಗೆಲುವು

ಕ್ರಿಕೆಟ್: ಚಾಂಡಿಮಲ್ ದ್ವಿಶತಕ, ಜಯಸೂರ್ಯ ಕೈಚಳಕ

ಗಾಲ್ (ಪಿಟಿಐ): ದಿನೇಶ್ ಚಾಂಡಿಮಲ್ ಅವರ ಅಜೇಯ ದ್ವಿಶತಕ (206) ಮತ್ತು ಎಡಗೈ ಸ್ಪಿನ್ನರ್ ಪ್ರಭತ್ ಜಯಸೂರ್ಯ (177ಕ್ಕೆ 12) ಕೈಚಳಕದ ನೆರವಿನಿಂದ ಶ್ರೀಲಂಕಾ ತಂಡ, ಆಸ್ಟ್ರೇಲಿಯಾ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್‌ನಲ್ಲಿ ಇನಿಂಗ್ಸ್ ಹಾಗೂ 39 ರನ್‌ಗಳಿಂದ ಗೆದ್ದುಬೀಗಿತು.

ಈ ಮೂಲಕ ಎರಡು ಪಂದ್ಯಗಳ ಸರಣಿಯನ್ನು 1–1 ರಲ್ಲಿ ಸಮಬಲ ಮಾಡಿಕೊಂಡಿತು.

ಮೊದಲ ಇನಿಂಗ್ಸ್‌ನಲ್ಲಿ 364 ರನ್ ಗಳಿಸಿದ್ದ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ 151 ರನ್‌ಗಳಿಗೆ ಆಲೌಟಾಯಿತು. ಜಯಸೂರ್ಯ 59 ರನ್ ನೀಡಿ 6 ವಿಕೆಟ್ ಪಡೆದರು. ಮೊದಲ ಇನಿಂಗ್ಸ್‌ನಲ್ಲೂ ಆರು ವಿಕೆಟ್ ಗಳಿಸಿದ್ದ ಅವರು ಪಂದ್ಯದಲ್ಲಿ ಒಟ್ಟಾರೆಯಾಗಿ 177 ರನ್‌ಗಳಿಗೆ 12 ವಿಕೆಟ್ ಕಬಳಿಸಿದರು.

ಪದಾರ್ಪಣೆ ಟೆಸ್ಟ್‌ನಲ್ಲಿ ಲಂಕಾದ ಬೌಲರ್‌ವೊಬ್ಬನ ಅತ್ಯುತ್ತಮ ಸಾಧನೆ ಇದು. ಪ್ರವೀಣ ಜಯವಿಕ್ರಮ ಕಳೆದ ವರ್ಷ ನಡೆದಿದ್ದ ಟೆಸ್ಟ್‌ನಲ್ಲಿ 11 ವಿಕೆಟ್ ಪಡೆದದ್ದು ಇದುವರೆಗಿನ ಸಾಧನೆಯಾಗಿತ್ತು.

ಪ್ರಭತ್ ಜಯಸೂರ್ಯ –ಎಎಫ್‌ಪಿ ಚಿತ್ರ

ಚಾಂಡಿಮಲ್ ದ್ವಿಶತಕ: 118 ರನ್‌ಗಳಿಂದ ಆಟ ಮುಂದುವರಿಸಿದ ಚಾಂಡಿಮಲ್ ದ್ವಿಶತಕ ಪೂರೈಸಿದರು. ಇದರಿಂದ ಲಂಕಾ, ಮೊದಲ ಇನಿಂಗ್ಸ್‌ನಲ್ಲಿ 554 ರನ್ ಪೇರಿಸಿತು.

326 ಎಸೆತಗಳನ್ನು ಎದುರಿಸಿದ ಅವರು 16 ಬೌಂಡರಿ ಮತ್ತು ಐದು ಸಿಕ್ಸರ್ ಹೊಡೆದರು. ಮಿಚೆಲ್ ಸ್ಟಾರ್ಕ್ ಬೌಲಿಂಗ್‌ನಲ್ಲಿ ಒಂದು ಬೌಂಡರಿ ಮತ್ತು ಸತತ ಎರಡು ಸಿಕ್ಸರ್ ಸಿಡಿಸಿ ದ್ವಿಶತಕದ ಗಡಿ ದಾಟಿದರು. ಕೊನೆಯ 47 ರನ್‌ಗಳನ್ನು ಕೇವಲ 28 ಎಸೆತಗಳಲ್ಲಿ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 110 ಓವರ್‌ಗಳಲ್ಲಿ 364, ಶ್ರೀಲಂಕಾ:181 ಓವರ್‌ಗಳಲ್ಲಿ 554 (ದಿನೇಶ್ ಚಾಂಡಿಮಲ್ 206, ರಮೇಶ್ ಮೆಂಡಿಸ್ 29, ಮಿಚೆಲ್ ಸ್ಟಾರ್ಕ್ 80ಕ್ಕೆ 4). ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 41 ಓವರ್‌ಗಳಲ್ಲಿ 151 (ಡೇವಿಡ್ ವಾರ್ನರ್ 24, ಉಸ್ಮಾನ್ ಖವಾಜ 29, ಮಾರ್ನಸ್ ಲಾಬುಶೇನ್ 32, ಪ್ರಭತ್ ಜಯಸೂರ್ಯ 59ಕ್ಕೆ 6, ಮಹೀಶ್ ತೀಕ್ಷಣ 28ಕ್ಕೆ 2, ರಮೇಶ್ ಮೆಂಡಿಸ್ 47ಕ್ಕೆ 2)

ಫಲಿತಾಂಶ: ಶ್ರೀಲಂಕಾಕ್ಕೆ ಇನಿಂಗ್ಸ್ ಹಾಗೂ 39 ರನ್ ಗೆಲುವು; ಸರಣಿ 1–1 ರಲ್ಲಿ ಸಮಬಲ

ಅಂಧರ ಕ್ರಿಕೆಟ್: ತರಬೇತಿ ಶಿಬಿರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮರ್ಥನಂ ಟ್ರಸ್ಟ್ ಹಾಗೂ ಭಾರತ ಅಂಧರ ಕ್ರಿಕೆಟ್ ಸಂಸ್ಥೆ (ಸಿಎಬಿಐ) ವತಿಯಿಂದ ಇಲ್ಲಿಯ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ತಂಡದ ತರಬೇತಿ ಶಿಬಿರವು ಸೋಮವಾರ ಆರಂಭವಾಯಿತು.

12 ದಿನಗಳ ಶಿಬಿರವನ್ನು ಗ್ಲೋಬಲ್ ಸಿಎಸ್‌ಆರ್ ಹಾಗೂ ಇಂಡಿಯಾ ಮಾರ್ಕೆಂಟಿಂಗ್, ಎನ್‌ಟಿಟಿ ಡೇಟಾ ಸರ್ವೀಸಸ್‌ನ ಉಪಾಧ್ಯಕ್ಷ ಅಂಕೂರ್ ದಾಸ್‌ಗುಪ್ತಾ ಉದ್ಘಾಟಿಸಿದರು. ಎನ್‌ಟಿಟಿ ಡೇಟಾ ಸರ್ವೀಸಸ್ ಈ ಶಿಬಿರದ ಪ್ರಾಯೋಜಕತ್ವ ವಹಿಸಿಕೊಂಡಿದೆ.

ಕಾಮನ್‌ವೆಲ್ತ್ ಗೇಮ್ಸ್: ರಾಜೇಶ್ವರಿ, ತಾನಿಯಾಗೆ ಸ್ಥಾನ

ನವದೆಹಲಿ (ಪಿಟಿಐ): ಮುಂಬರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಆಡಲಿರುವ ಭಾರತ ಮಹಿಳಾ ಕ್ರಿಕೆಟ್ ತಂಡವನ್ನು ಪ್ರಕಟಿಸಲಾಗಿದ್ದು, ಕರ್ನಾಟಕದ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ ಸ್ಥಾನ ಗಿಟ್ಟಿಸಿದ್ದಾರೆ.

ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ನ ಮೊದಲ ಪಂದ್ಯದಲ್ಲಿ ಜುಲೈ 29ರಂದು ಭಾರತ ತಂಡವು ಆಸ್ಟ್ರೇಲಿಯಾವನ್ನು ಎದುರಿಸಲಿದೆ.

ಭಾರತ ತಂಡ ಇಂತಿದೆ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಎಸ್. ಮೇಘನಾ, ತಾನಿಯಾ ಭಾಟಿಯಾ, ಯಷ್ಟಿಕಾ ಭಾಟಿಯಾ (ಇಬ್ಬರೂ ವಿಕೆಟ್ ಕೀಪರ್‌ಗಳು), ದೀಪ್ತಿ ಶರ್ಮಾ, ರಾಜೇಶ್ವರಿ ಗಾಯಕವಾಡ, ಪೂಜಾ ವಸ್ತ್ರಕರ್, ಮೇಘನಾ ಸಿಂಗ್, ರೇಣುಕಾ ಠಾಕೂರ್, ಜೆಮಿಮಾ ರಾಡ್ರಿಗಸ್, ರಾಧಾ ಯಾದವ್, ಹರ್ಲೀನ್ ಡಿಯೋಲ್, ಸ್ನೇಹ್ ರಾಣಾ.

ಕಾಯ್ದಿರಿಸಿದ ಆಟಗಾರ್ತಿಯರು: ಸಿಮ್ರಾನ್ ದಿಲ್ ಬಹದ್ದೂರ್, ರಿಚಾ ಘೋಷ್, ಪೂನಂ ಯಾದವ್.

ರಾಜೇಶ್ವರಿ ಗಾಯಕವಾಡ

ಸಿಂಗಪುರ ಬ್ಯಾಡ್ಮಿಂಟನ್ ಟೂರ್ನಿ: ಪ್ರಣಯ್ ಕಣಕ್ಕೆ

ಕಾಮನ್‌ವೆಲ್ತ್ ಗೇಮ್ಸ್‌ಗೆ ‘ಸಿದ್ಧತೆ’

ಸಿಂಗಪುರ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಎಚ್.ಎಸ್. ಪ್ರಣಯ್ ಅವರು ಮಂಗಳವಾರ ಇಲ್ಲಿ ಆರಂಭವಾಗುವ ಸಿಂಗಪುರ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದು, ಪ್ರಶಸ್ತಿ ನಿರೀಕ್ಷೆಯಲ್ಲಿದ್ದಾರೆ.

ಇದೇ 28ರಿಂದ ಬರ್ಮಿಂಗ್‌ಹ್ಯಾಮ್‌ನಲ್ಲಿ ಆರಂಭವಾಗಲಿರುವ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಸಿದ್ಧತೆಯಾಗಿ ಈ ಟೂರ್ನಿಯನ್ನು ಭಾರತದ ಆಟಗಾರರು ಬಳಸಿಕೊಳ್ಳಲಿದ್ದಾರೆ.

ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಮೂರನೇ ಶ್ರೇಯಾಂಕ ಪಡೆದಿರುವ ಸಿಂಧು, ಮೊದಲ ಪಂದ್ಯದಲ್ಲಿ ಬೆಲ್ಜಿಯಂನ ಲಿಯೆನ್ ಟ್ಯಾನ್ ಅವರನ್ನು ಎದುರಿಸುವರು. ಪ್ರಣಯ್ ಅವರು ಥಾಯ್ಲೆಂಡ್‌ನ ಸಿತ್ತಿಕೊಮ್ ಥಮಾಸಿನ್ ವಿರುದ್ಧ ಆಡುವರು.

ಸೈನಾ ನೆಹ್ವಾಲ್ ಅವರು ಭಾರತದವರೇ ಆದ ಮಾಳವಿಕಾ ಬನ್ಸೋದ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಕಿದಂಬಿ ಶ್ರೀಕಾಂತ್ ಅವರು ಬಿ.ಸಾಯಿ ಪ್ರಣೀತ್ ಎದುರು ಆಡುವರು.

ಪುರುಷರ ಸಿಂಗಲ್ಸ್‌ನಲ್ಲಿ ಪರುಪಳ್ಳಿ ಕಶ್ಯಪ್, ಸಮೀರ್ ವರ್ಮಾ, ಡಬಲ್ಸ್‌ನಲ್ಲಿ ಕೃಷ್ಣಪ್ರಸಾದ್ ಗರಗ–ವಿಷ್ಣುವರ್ಧನ ಗೌಡ್ ಪಂಜಾಲ, ಧ್ರುವ ಕಪಿಲ–ಎಂ.ಆರ್.ಅರ್ಜುನ್ ಕಣಕ್ಕಿಳಿಯುವರು. ಮಹಿಳಾ ಡಬಲ್ಸ್‌ನಲ್ಲಿ ಪೂಜಾ ದಂಡು–ಆರತಿ ಸಾರಾ, ಸಿಮ್ರಾನ್ ಸಿಂಘಿ– ರಿತಿಕಾ ಥಾಕರ್, ಮಿಶ್ರ ಡಬಲ್ಸ್‌ನಲ್ಲಿ ನಿತಿನ್ ಎಚ್.ವಿ. – ಪೂರ್ವಿಶಾ ರಾಮ್, ವೆಂಕಟ ಗೌರವ್ ಪ್ರಸಾದ್– ಜೂಹಿ ದೇವಾಂಗನ್ ಆಡುವರು.

ಎಚ್. ಎಸ್. ಪ್ರಣಯ್

ಕ್ರಿಕೆಟ್: ಮೋಹಿತ್, ಪ್ರವೀಣ್ ಶತಕದ ಆಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋಹಿತ್ ಬಿ.ಎ.(130, 139ಎ, 4X9, 6X6) ಗಳಿಸಿದ ಅಮೋಘ ಶತಕದ ಬಲದಿಂದ ಸರ್ ಸಯ್ಯದ್ ಕ್ರಿಕೆಟರ್ಸ್ ತಂಡವು ಸರ್ ಮಿರ್ಜಾ ಇಸ್ಮಾಯಿಲ್ ಟ್ರೋಫಿಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಗುಂಪು ಒಂದು ಡಿವಿಷನ್ ಒಂದರ ಲೀಗ್ ಟೂರ್ನಿಯಲ್ಲಿ ಮಾಡರ್ನ್ ಕ್ರಿಕೆಟ್ ಕ್ಲಬ್ ತಂಡದೊಂದಿಗೆ ಡ್ರಾ ಸಾಧಿಸಿತು.

ಇನ್ನೊಂದು ಪಂದ್ಯದಲ್ಲಿ ಪ್ರವೀಣ್ ದುಬೆ (119, 114ಎ, 4X6, 6X7) ಅವರ ಶತಕದ ನೆರವಿನಿಂದ ವಲ್ಚರ್ಸ್ ಕ್ರಿಕೆಟ್ ತಂಡವು ಕೆಂಬ್ರಿಡ್ಜ್ ಕ್ರಿಕೆಟ್ ಕ್ಲಬ್‌ನೊಂದಿಗೆ ಡ್ರಾ ಸಾಧಿಸಿತು.

ಸಂಕ್ಷಿಪ್ತ ಸ್ಕೋರುಗಳು: ಮಾಡರ್ನ್ ಕ್ರಿಕೆಟ್ ಕ್ಲಬ್: 75 ಓವರ್‌ಗಳಲ್ಲಿ 289 (ಮೊಹಮ್ಮದ್ ಅಕೀಬ್ ಜವಾದ್ 60, ಜಸ್ವಂತ್ ಆಚಾರ್ಯ 60, ಧೀರಜ್ ಆರ್. ಗೌಡ 69; ವಿದ್ವತ್ ಕಾವೇರಪ್ಪ 61ಕ್ಕೆ 3, ಕುಮಾರ್ ಎಲ್.ಆರ್. 41ಕ್ಕೆ 2, ಕುಶಾಲ್ ವಧ್ವಾನಿ 72ಕ್ಕೆ 2, ಎಸ್. ಸೂರಜ್ 61ಕ್ಕೆ 3). ಸರ್ ಸಯ್ಯದ್ ಕ್ರಿಕೆಟರ್ಸ್: 79 ಓವರ್‌ಗಳಲ್ಲಿ 7ಕ್ಕೆ 477 (ನಿಕಿನ್ ಜೋಸ್ 48, ಲುವನೀತ್ ಸಿಸೋಡಿಯಾ 80, ಮೋಹಿತ್ ಬಿ.ಎ. 130, ತನಯ್ ವಾಲ್ಮೀಕ್ 87, ಎಂ.ಎಸ್. ಭಾಂಡಗೆ 94; ತಾಹಾ ಖಾನ್ 54ಕ್ಕೆ 2, ರೋಹಿತ್ ಎಸ್‌ಎಸ್‌ಜಿ 111ಕ್ಕೆ 3). ಫಲಿತಾಂಶ: ಪಂದ್ಯ ಡ್ರಾ. ಸರ್ ಸಯ್ಯದ್ ಕ್ರಿಕೆಟರ್ಸ್‌ಗೆ ಮೂರು ಪಾಯಿಂಟ್ಸ್

ವಲ್ಚರ್ಸ್ ಸಿಸಿ: 86.3 ಓವರ್‌ಗಳಲ್ಲಿ 409 (ಸ್ಮರಣ್ ಆರ್. 79, ಅನಿರುದ್ಧ ಜೋಶಿ 30, ಕೃತಿಕ್ ಕೃಷ್ಣ 108, ಪ್ರವೀಣ್ ದುಬೆ 119; ಕೆ.ಆದಿತ್ಯನ್ 61ಕ್ಕೆ 4, ಮ್ಯಾಕ್ನಿಲ್ ನೊರೊನ್ಹಾ 67ಕ್ಕೆ 3). ಕೆಂಬ್ರಿಡ್ಜ್ ಸಿಸಿ: 57.3 ಓವರ್‌ಗಳಲ್ಲಿ 220 (ಲೋಚನ್ ಅಪ್ಪಣ್ಣ 46, ವಿನಯ್ ಸಾಗರ್ 68; ದರ್ಶನ್ ಎಂ.ಬಿ. 30ಕ್ಕೆ 3, ಜೆ.ಸುಚಿತ್ 84ಕ್ಕೆ 3, ಪ್ರವೀಣ್ ದುಬೆ 35ಕ್ಕೆ 2) ಎರಡನೇ ಇನಿಂಗ್ಸ್: 18.3 ಓವರ್‌ಗಳಲ್ಲಿ 5ಕ್ಕೆ 41 (ಜೆ. ಸುಚಿತ್ 17ಕ್ಕೆ 3). ಫಲಿತಾಂಶ: ಪಂದ್ಯ ಡ್ರಾ. ವಲ್ಚರ್ಸ್ ಸಿಸಿಗೆ ಮೂರು ಪಾಯಿಂಟ್ಸ್.

ಬೆಟ್ಟಿಂಗ್‌ಗೆ ಟಿ20 ನಕಲಿ ಲೀಗ್!

ಮೆಹ್ಸಾನಾ, ಗುಜರಾತ್ (ಪಿಟಿಐ): ರಷ್ಯಾದ ಬುಕ್ಕಿಗಳಿಂದ ಬೆಟ್ಟಿಂಗ್ ಮಾಡಿಸಿ ಹಣ ಗಳಿಸುವ ಉದ್ದೇಶದಿಂದ ಟಿ20 ಕ್ರಿಕೆಟ್ ನಕಲಿ ಲೀಗ್ ಆಯೋಜಿಸಿದ ಆರೋಪದಲ್ಲಿ ಗುಜರಾತ್ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ಐಪಿಎಲ್ ಮಾದರಿಯಲ್ಲೇ ಟೂರ್ನಿ ನಡೆಯುತ್ತಿದೆ ಎಂದು ರಷ್ಯಾದ ಬುಕ್ಕಿಗಳನ್ನು ನಂಬಿಸಲು ಪ್ರಮುಖ ಆರೋಪಿ ಶೋಯೆಬ್ ದಾವ್ಡ ಎಂಬಾತ ಮೆಹ್ಸಾನದ ಹೊರವಲಯದಲ್ಲಿ ಕೃಷಿ ಭೂಮಿ ಭೋಗ್ಯಕ್ಕೆ ಪಡೆದು ಕ್ರಿಕೆಟ್ ಮೈದಾನ ಸಜ್ಜುಗಳಿಸಿದ್ದ. ಕೃಷಿ ಕಾರ್ಮಿಕರು, 20 ಯುವಕರನ್ನು ಸೇರಿಸಿ ತಂಡ ಕಟ್ಟಿದ್ದ. ಯೂಟ್ಯೂಬ್ ಚಾನೆಲ್‌ನಲ್ಲಿ ಪಂದ್ಯಗಳ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಿದ್ದ ಎಂದು ಪೊಲೀಸರು ಹೇಳಿದ್ದಾರೆ.

‘ರಷ್ಯಾದಲ್ಲಿ ಉದ್ಯೋಗದಲ್ಲಿದ್ದ ಶೋಯೆಬ್ ಊರಿಗೆ ವಾಪಸಾಗಿದ್ದ. ರಷ್ಯಾದಲ್ಲಿ ಬುಕ್ಕಿಗಳು ಕ್ರಿಕೆಟ್ ಪಂದ್ಯಕ್ಕೂ ಬೆಟ್ಟಿಂಗ್ ನಡೆಸುವುದು ತಿಳಿದಿದ್ದ ಆತ ಈ ಕೆಲಸಕ್ಕೆ ಇಳಿದಿದ್ದಾನೆ. ಶೋಯೆಬ್ ಜತೆ ಕೊಲು ಮಹಮ್ಮದ್, ಸಾದಿಕ್ ದಾವ್ಡ ಮತ್ತು ಮೊಹಮ್ಮದ್ ಸಾಕಿಬ್ ಅವರನ್ನು ಬಂಧಿಸಲಾಗಿದೆ. ಇವರಿಗೆ ರಷ್ಯಾದಲ್ಲಿರುವ ಆಸಿಫ್ ಮೊಹಮ್ಮದ್ ನೆರವು ನೀಡುತ್ತಿದ್ದ’ ಎಂದು ಮಾಹಿತಿ ನೀಡಿದ್ದಾರೆ.

ಆರೋಪಿಗಳು ಮೈದಾನಕ್ಕೆ ಹೊನಲು ಬೆಳಕಿನ ವ್ಯವಸ್ಥೆಯನ್ನೂ ಮಾಡಿದ್ದಾರೆ. ಕ್ರಿಕೆಟ್ ಕಿಟ್, ವಿಡಿಯೊ ಕ್ಯಾಮೆರಾ, ಎಲ್‌ಇಡಿ ಟಿ.ವಿ, ಲ್ಯಾಪ್‌ಟಾಪ್, ವಾಕಿಟಾಕಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.